ಬೆಳಗಾವಿ ಜಿಲ್ಲೆಯ ಕೈಗಾರಿಕೆಗಳು : ಅಭಿವೃದ್ಧಿ ಅಧ್ಯಯನ

ಅಭಿವೃದ್ಧಿ ಅಧ್ಯಯನ ವಿಭಾಗದಲ್ಲಿ ಪಿಎಚ್.ಡಿ ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಸಂಶೋಧನಾ

ಮಹಾಪ್ರಬಂಧ

ನೋಂದಣಿ ಸಂಖ್ಯೆ : BRDSH-00108

ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೦೧೨

ಬೆಳಗಾವಿ ಜಿಲ್ಲೆಯ ಕೈಗಾರಿಕೆಗಳು : ಅಭಿವೃದ್ಧಿ ಅಧ್ಯಯನ

ಅಭಿವೃದ್ಧಿ ಅಧ್ಯಯನ ವಿಭಾಗದಲ್ಲಿ ಪಿಎಚ್.ಡಿ ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಸಂಶೋಧನಾ

ಮಹಾಪ್ರಬಂಧ

ನೋಂದಣಿ ಸಂಖ್ಯೆ : BRDSH-00108

ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೦೧೨

ಪರಿವಿಡಿ

ಅಧ್ಯಾಯ : ಒಂದು

ಪ್ರವೇಶ

೧.೧ ಪ್ರಸ್ತಾವನೆ

೧.೨ ಅಧ್ಯಯನ ವಿಷಯದ ಸಮಸ್ಯೀಕರಣ ಮತ್ತು ಸಂಶೋಧನಾ ಪ್ರಶ್ನೆಗಳು

೧.೩ ಅಧ್ಯಯನದ ಉದ್ದೇಶಗಳು

೧.೪ ಅಧ್ಯಯನದ ವಿಧಾನ

೧.೫ ಅಧ್ಯಯನದ ವ್ಯಾಪ್ತಿ, ಮಹತ್ವ ಮತ್ತು ಮಿತಿಗಳು

೧.೬ ಅಧ್ಯಾಯನ ವಿನ್ಯಾಸ

ಅಧ್ಯಾಯ : ಒಂದು

ಪ್ರವೇಶ

೧.೧ ಪ್ರಸ್ತಾವನೆ :

ಒಂದು ದೇಶದ ಸರ್ವಾಂಗೀಣ ಪ್ರಗತಿಗೆ ಅಡಿಪಾಯವಾಗಿ ಕಂಡುಬರುವುದು ಆ ಪ್ರದೇಶದಲ್ಲಿನ ಕೈಗಾರಿಕಾ ಬೆಳವಣಿಗೆ. ಪ್ರಾದೇಶಿಕ ಆರ್ಥಿಕ ಸುಧಾರಣೆ ಮಟ್ಟವನ್ನು ನಿರ್ಧರಿಸುವ ಹಲವಾರು ಅಂಶಗಳಲ್ಲಿ ಕೈಗಾರಿಕೀಕರಣವೂ ಒಂದು. ಕೈಗಾರಿಕೆಗಳು ಆರ್ಥಿಕ ಪ್ರಗತಿಗೆ ಬೆನ್ನೆಲುಬಾಗಿರುವುದರಿಂದ ಅವುಗಳ ಅಧ್ಯಯನವು ಮಹತ್ವ ಪಡೆದುಕೊಂಡಿದೆ. ಕೈಗಾರಿಕೆಗಳಲ್ಲಿಯ ವಿವಿಧ ಪ್ರಕಾರಗಳು ಅವುಗಳನ್ನಾವರಿಸಿರುವ ಪರಿಸರ, ಅವಶ್ಯಕ ಮೂಲ ಸೌಕರ್ಯಗಳ ಲಭ್ಯತೆ, ಉದ್ದಿಮೆದಾರರ ಅನುಭವಗಳೂ ಕೈಗಾರಿಕೀಕರಣಕ್ಕಿರುವ ಸಮಸ್ಯೆಗಳನ್ನು ವಿಶ್ಲೇಷಿಸಿ ಪರಿಹಾರ ಕಂಡುಕೊಳ್ಳುವುದು ಒಂದು ನಿರಂತರ ಪ್ರಕ್ರಿಯೆ. ಬೆಳಗಾವಿ ಜಿಲ್ಲೆಯಿಂದ ರಾಜ್ಯ, ರಾಜ್ಯದಿಂದ ದೇಶದ ಪ್ರಗತಿಯು ಚರ್ಚೆಗೆ ಸಾಧ್ಯವಾಗುತ್ತದೆ. ಜಿಲ್ಲೆಯ ಕೈಗಾರಿಕಾ ಅಭಿವೃದ್ಧಿ ಅಧ್ಯಯನ ಮಾಡುವುದರ ಮೂಲಕ ಕರ್ನಾಟಕ ವಿಶೇಷವಾಗಿ ಉತ್ತರ ಕರ್ನಾಟಕದ ಕೈಗಾರಿಕೀಕರಣವನ್ನು ಅರ್ಥ ಮಾಡಿಕೊಳ್ಳಲು ಇಲ್ಲಿ ಪ್ರಯತ್ನಿಸಲಾಗಿದೆ.

೧.೨ ಅಧ್ಯಯನ ವಿಷಯದ ಸಮಸ್ಯೀಕರಣ ಮತ್ತು ಸಂಶೋಧನಾ ಪ್ರಶ್ನೆಗಳು :

ಒಂದು ದೇಶದ ವಿವಿಧ ಆರ್ಥಿಕ ರಂಗಗಳ ಅಭಿವೃದ್ಧಿ ಪ್ರಕ್ರಿಯೆಗಳನ್ನು ಆರ್ಥಿಕ ಅಭಿವೃದ್ಧಿ ಎಂದು ಕರೆಯುತ್ತಾರೆ. ಸ್ವಾತಂತ್ರ್ಯ ನಂತರದ ಭಾರತವು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರವಾಗಿದೆ. ಜಗತ್ತಿನ ಜನಸಂಖ್ಯೆಯ ಶೇಕಡಾ ೧೭ ರಷ್ಟು[೧] ಜನ ಸಂಖ್ಯೆಯನ್ನು ಭಾರತವು ಹೊಂದಿದ್ದು, ಜಾಗತಿಕ ಉತ್ಪನ್ನದ ಶೇಕಡಾ ೧೬ ರಷ್ಟು ಉತ್ಪನ್ನವನ್ನು ಉತ್ಪಾದಿಸುತ್ತದೆ.[೨] ಭಾರತವು ವಿಪುಲ ಸಂಪತ್ತನ್ನು ಹೊಂದಿದ್ದರೂ ಬಹು ಸಂಖ್ಯಾತ ಭಾರತೀಯರು ಬಡತನದ ರೇಖೆಯ ಕೆಳಗೆ ಜೀವನ ನಡೆಸುತ್ತಾರೆ.

ಕೈಗಾರಿಕೀಕರಣವು ಹಿಂದುಳಿದ ರಾಷ್ಟ್ರಗಳ ಆರ್ಥಿಕ ಪ್ರಗತಿಯಲ್ಲಿ ಅತ್ಯಂತ ಪ್ರಮುಖ ಪಾತ್ರವನ್ನು ವಹಿಸುತ್ತದೆ. ತಲಾ ವರಮಾನದಲ್ಲಿನ ವ್ಯತ್ಯಾಸದ ಆಧಾರದಿಂದ ಪ್ರಪಂಚದ ರಾಷ್ಟ್ರಗಳನ್ನು ಅಭಿವೃದ್ಧಿ ಹೊಂದಿದ ಮತ್ತು ಹೊಂದದ ರಾಷ್ಟ್ರಗಳೆಂದು ವಿಂಗಡಿಸಲಾಗುತ್ತದೆ. ಪ್ರತಿ ರಾಷ್ಟ್ರದ ಆರ್ಥಿಕತೆಯ ರಚನೆಯ ಬಗ್ಗೆಯೂ ಇದು ಬೆಳಕು ಚೆಲ್ಲುತ್ತದೆ. ಸಾಮಾನ್ಯವಾಗಿ ಕೈಗಾರಿಕೀಕರಣವು

ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಪ್ರಮುಖ ಲಕ್ಷಣ. ನೈಸರ್ಗಿಕ ಸಂಪನ್ಮೂಲಗಳ ಅಪಾರ ಕೊಡುಗೆಯಿಂದ ಕೆಲವು ದೇಶಗಳು ಶ್ರೀಮಂತಿಕೆಯನ್ನು ಸಾಧಿಸಿವೆ.

ಕೈಗಾರಿಕಾ ಕ್ಷೇತ್ರ ಉಳಿತಾಯ ಮತ್ತು ಹೂಡಿಕೆ ಚಟುವಟಿಕೆಗಳ ಪ್ರೇರಕ ಶಕ್ತಿಯಾಗಿದ್ದು, ಒಂದು ಸ್ವಾವಲಂಬಿ ಆರ್ಥಿಕ ವ್ಯವಸ್ಥೆಯು ನಿರಂತರ ಬೆಳವಣಿಗೆಗೆ ಸಾಧನವಾಗಿದೆ. ತತ್ಪರಿಣಾಮದಿಂದ ಕೈಗಾರಿಕಾ- ಉದ್ಯೋಗ, ಹೆಚ್ಚಾಗಿ ತನ್ಮೂಲಕ ಆದಾಯ ಹಾಗೂ ಹೂಡಿಕೆಗಳು ಮೇಲ್ಮುಖವಾಗುತ್ತವೆ. ಇದರೊಂದಿಗೆ, ಕೈಗಾರಿಕೀಕರಣದ ಪ್ರಕ್ರಿಯೆಯು ತಾಂತ್ರಿಕ ಜ್ಞಾನ, ಕೈಗಾರಿಕಾ ಕಾರ್ಯದಲ್ಲಿನ ನೈಪುಣ್ಯತೆ, ಕೈಗಾರಿಕೆ ವ್ಯವಸ್ಥಾಪನದ ಅನುಭವ, ಅರಿವಿನ ಹರವನ್ನು ಹೆಚ್ಚಿಸಿ ಆಧುನಿಕ ಸಮಾಜದ ರಚನೆಗೆ ವೇಗ ಬರುತ್ತದೆ. ಇದು ಕೃಷಿ, ವಾಣಿಜ್ಯ, ವ್ಯಾಪಾರ, ಹಂಚಿಕೆ, ಸೇವಾಕ್ಷೇತ್ರಗಳ ಉತ್ಪಾದಕತೆಯ ಮೇಲೆ ನೇರ ಪ್ರಭಾವ ಬೀರುತ್ತದೆ. ಇದರ ತಕ್ಷಣ ಫಲಿತಾಂಶವು ಕೃಷಿ ಕಾರ್ಮಿಕರು ಕೈಗಾರಿಕೆಗಳಲ್ಲಿ ವರ್ಗಾವಣೆಗೊಳ್ಳುವುದರಲ್ಲಿ ಕಂಡು ಬರುತ್ತದೆ. ಕೃಷಿ ಮೇಲಿನ ಅತ್ಯಾವಲಂಬನೆ ಕಡಿಮೆಯಾಗಿ ಆದಾಯದ ವಿಭಜನೆಯಾಗುವುದೂ ನಿಯಂತ್ರಣವಾಗುತ್ತದೆ.

ಜನರ ಆದಾಯದಲ್ಲಿನ ಹೆಚ್ಚಳವು ಉತ್ಪಾದಕ ವಸ್ತುಗಳ ಬೇಡಿಕೆಯನ್ನು ಹೆಚ್ಚಿಸುತ್ತದೆ. ಆದಾಯದ ಹೆಚ್ಚಳ ಧನ ವ್ಯತ್ಯಾಸದ ಸ್ಥಿತಿಸ್ಥಾಪಕವು ಉತ್ಪಾದನೆಯಲ್ಲಿ ತೊಡಗಿಕೊಂಡಿರುವ ದೇಶಗಳಿಗೆ ಪೂರಕವಾಗಿ ಕೃಷಿಯಲ್ಲಿನ ಅಧಿಕ ಕೃಷಿ ಕಾರ್ಮಿಕರನ್ನು ತನ್ನೆಡೆಗೆ ಸೆಳೆದು ಮಾರುಕಟ್ಟೆಯ ವಿಸ್ತರೀಕರಣಕ್ಕೆ ಮುನ್ನಡಿಯಾಗುತ್ತದೆ. ಒಂದು ಪ್ರದೇಶದ ಆರ್ಥಿಕ ಅಭಿವೃದ್ಧಿಗೆ ಇದು ಅತ್ಯವಶ್ಯ.

ನಗರ ಪ್ರದೇಶಗಳಲ್ಲಿನ ಉದ್ದಿಮೆಗಳ ಬೆಳವಣಿಗೆಯು ಗ್ರಾಮೀಣ ಪ್ರದೇಶದಲ್ಲಿನ ಅರೆ-ನಿರುದ್ಯೋಗಿಗಳನ್ನು ಆಕರ್ಷಿಸಿ, ಉದ್ದಿಮೆಗಳಿಗೆ ಕಾರ್ಮಿಕರನ್ನು ಒದಗಿಸುವುದಲ್ಲದೆ ಕೃಷಿ ಉತ್ಪಾದನೆಗೆ ಆಧಾರವಾಗುತ್ತದೆ. ಒಂದೆಡೆ ಉತ್ಪಾದಿತ ವಸ್ತುಗಳಿಗೆ ನೂತನ ಮಾರುಕಟ್ಟೆ ನಿರ್ಮಿಸಿದರೆ, ಇನ್ನೊಂದೆಡೆ ಪ್ರಾದೇಶಿಕ ಅಭಿವೃದ್ಧಿಗೆ ಹಿನ್ನೆಲೆ ಒದಗಿಸುತ್ತದೆ. ಕೈಗಾರಿಕೆಗಳ ಬೆಳವಣಿಗೆಯಿಂದ ಜನಸಾಮಾನ್ಯರ ದೃಷ್ಟಿಕೋನದಲ್ಲಿಯೂ ಗಮನಾರ್ಹ ಬದಲಾವಣೆ ಕಂಡುಬರುತ್ತದೆ. ಗ್ರಾಮೀಣ ಜೀವನ ಶೈಲಿಯಲ್ಲಿ ಪರಿವರ್ತನೆಯಾಗುತ್ತದೆ. ಸಂಕುಚಿತ ಭಾವನೆಗಳು ಅಳಿದು ವಿಶಾಲ ಮನೋಭಾವನೆಗೆ ಎಡೆಮಾಡುತ್ತದೆ. ಪ್ರಗತಿಪರ ವಿಚಾರಗಳೊಂದಿಗೆ ಕಾರ್ಮಿಕ ಸಮುದಾಯವೊಂದು ಉಗಮಗೊಳ್ಳುತ್ತದೆ. ನೂತನ ಉದ್ಯಮಶೀಲರ ವರ್ಗದಿಂದ ಬಂಡವಾಳ ಸಂಗ್ರಹ ಹೆಚ್ಚುತ್ತದೆ. ತಾಂತ್ರಿಕ ಅವಿಷ್ಕಾರಗಳು ಸಂಭವಿಸುತ್ತವೆ. ಇದರಿಂದ ಒಂದು ದೇಶ/ಪ್ರಾಂತ ಸ್ವಾವಲಂಬನೆಯತ್ತ ಸಾಗುತ್ತದೆಯೆಂದು ಲೆಕ್ಕಾಚಾರ.

ಭಾರತವು ಸ್ವಾತಂತ್ರ್ಯ ನಂತರದ ಕೈಗಾರಿಕೀಕರಣಕ್ಕೆ ಪ್ರಾಮುಖ್ಯತೆ ನೀಡಿದ್ದನ್ನು ಕಾಣುತ್ತೇವೆ. ಭಾರತ ಸರಕಾರ ವಿಶೇಷ ಕೈಗಾರಿಕಾ ನೀತಿ ಅನುಸರಿಸುವ ಮೂಲಕ ಕೈಗಾರಿಕೆಗಳ ಅಭಿವೃದ್ಧಿಗೆ ಶ್ರಮಿಸಿದ್ದು ಸ್ಪಷ್ಟವಾಗಿ ಗೋಚರಿಸುತ್ತದೆ. ಆಧುನಿಕ ಉತ್ಪಾದನಾ ಪದ್ಧತಿಯು ಪ್ರಾರಂಭವಾಗುವದಕ್ಕಿಂತ ಮುಂಚೆ ಭಾರತದಿಂದ ಕರಕುಶಲ ಸರಕುಗಳು ಪ್ರಪಂಚದ ಮಾರುಕಟ್ಟೆಯಲ್ಲಿ ಪ್ರಚಲಿತವಾಗಿದ್ದವು. ಭಾರತದ ರೇಷ್ಮೆ ಬಟ್ಟೆ, ಹತ್ತಿಬಟ್ಟೆ, ಕಲಾತ್ಮಕ ವಸ್ತುಗಳು, ಮಸ್ಲಿನ್, ಕ್ಯಾಲಿಕೋದಂತಹ ವಸ್ತುಗಳು

ವಿದೇಶಿಯರ ಪ್ರೀತಿಗೆ ಪಾತ್ರವಾಗಿದ್ದವು. ಆದರೆ ಬ್ರಿಟೀಷರ ಆಗಮನದಿಂದ ಭಾರತವು ವಿದೇಶಿ ಸಿದ್ಧವಸ್ತುಗಳಿಗೆ ಉತ್ಕೃಷ್ಟ ಮಾರುಕಟ್ಟೆಯಾಗಿ ಮಾರ್ಪಟ್ಟಿತು. ಕೆಳಮಟ್ಟದ ಸ್ಪರ್ಧಾತ್ಮಕ ಗುಣದ ದೇಶೀಯ ವಸ್ತುಗಳು ವಿದೇಶಿ ವಸ್ತುಗಳೊಂದಿಗೆ ಎದುರು ನಿಲ್ಲಲು ಅಸಹಾಯಕವಾದುವು. ರಾಜಾಶ್ರಯದಲ್ಲಿ ಬೆಳೆದ ಸಣ್ಣ ಕೈಗಾರಿಕೆಗಳು ಅವನತಿಯತ್ತ ಮುಖ ಮಾಡಿದವು.

ವಸಾಹತು ಆಡಳಿತ, ಇಂಗ್ಲಂಡದಲ್ಲಿನ ಕೈಗಾರಿಕಾ ಕ್ರಾಂತಿ, ಪ್ರಥಮ ಜಾಗತಿಕ ಯುದ್ಧದಿಂದ ಉದ್ದಿಮೆಗಳ ವಿಕಾಸಕ್ಕೆ ಅಧಿಕ ಪ್ರೋತ್ಸಾಹ ದೊರೆಯಿತು. ಭಾರತದಲ್ಲಿನ ಉದ್ದಿಮೆಗಳ ಅಭಿವೃದ್ಧಿಗೆ ೧೯೧೮ರಲ್ಲಿ ಭಾರತೀಯ ಔದ್ಯೋಗಿಕ ಆಯೋಗವನ್ನು ಸರಕಾರವು ನೇಮಿಸಿತು. ಉದ್ದಿಮೆಗಳು ಇದರಿಂದ ಪ್ರೋತ್ಸಾಹಿಸಲ್ಪಟ್ಟವು. ಕೈಗಾರಿಕೆಗಳಿಗೆ ಸೂಕ್ತ ರಚನೆ ನೀಡಲು ೧೯೧೨ರಲ್ಲಿ ನೇಮಿಸಿದ ಭಾರತೀಯ ಖಜಾನೆ ಆಯೋಗ ಶಿಫಾರಸ್ಸಿನಂತೆ ಉಕ್ಕು, ಸಕ್ಕರೆ, ಸಿಮೆಂಟು, ಹತ್ತಿ ಮತ್ತು ಉಕ್ಕಿನ ಉದ್ದಿಮೆಗಳೂ ಬೆಳೆದುಬಂದವು.

೧೯೫೧ರಿಂದ ಪ್ರಾರಂಭಿಸಿದ ಪಂಚವಾರ್ಷಿಕ ಯೋಜನೆಯಿಂದ ಕೈಗಾರಿಕೀಕರಣದ ಯುಗಾರಂಭಗೊಂಡು, ಎರಡನೇ ಪಂಚವಾರ್ಷಿಕ ಯೋಜನೆಯ ಮುಖ್ಯ ಗುರಿಯೇ ಕೈಗಾರಿಕಾ ಅಭಿವೃದ್ಧಿಯಾಗಿತ್ತು. ಇದಕ್ಕೆ ಪೂರಕವೆಂಬಂತೆ ೧೯೪೮ ಮತ್ತು ೧೯೫೬ರ ಕೈಗಾರಿಕಾ ನೀತಿಗಳು ಭದ್ರ ಬುನಾದಿಯನ್ನೊದಗಿಸಿದವು. ದೇಶದ ವಿವಿಧ ಪ್ರದೇಶಗಳಲ್ಲಿ ವಿಭಿನ್ನ ಪ್ರಕಾರದ ಉದ್ದಿಮೆಗಳು ಬೆಳಕುಕಂಡವು.

ಭಾರತದಲ್ಲಿ ಕರ್ನಾಟಕ ರಾಜ್ಯವು ಕೈಗಾರಿಕಾ ಕೇಂದ್ರವಾಗಲು ಸೂಕ್ತ ಪ್ರದೇಶವೆಂದು ಗುರುತಿಸಿಕೊಂಡಿದೆ. ದೇಶದ ನಕಾಶೆಯಲ್ಲಿ ಗುರುತಿಸಬಹುದಾದ ಹಲವಾರು ಬೃಹತ್ ಉದ್ದಿಮೆಗಳು ಇಲ್ಲಿ ಕಾರ್ಯನಿರ್ವಹಿಸುತ್ತಿವೆ.

೨೦೧೦-೧೧ನೇ ಸಾಲಿನ ರಾಜ್ಯದ ಉತ್ಪಾದನೆ ದರ ಶೇ. ೮.೨ ಇದ್ದು[೩] ಅದರ ಮೌಲ್ಯ ೨೭೧೯.೫೬ ಬಿಲಿಯನ್ ರೂಪಾಯಿಯಷ್ಟಿದೆ.[೪] ತಲಾ ವರಮಾನವು ೨೦೦೮-೦೯ರಂತೆ ೧೦೩೪.೯ ಅಮೇರಿಕಾ ಡಾಲರಷ್ಟಿದೆ.[೫] ಈ ಎಲ್ಲ ಅಂಕಿ-ಅಂಶಗಳ ಹಿನ್ನೆಲೆಯಲ್ಲಿ ಬೆಳಗಾವಿ ಜಿಲ್ಲೆಯ ಕೈಗಾರಿಕೆಗಳು ಬೆಳವಣಿಗೆಯ ಸಾಧ್ಯಾಸಾಧ್ಯತೆಗಳನ್ನು ಅರಿಯುವುದು ಇಲ್ಲಿಯ ಸಮಸೀಕರಣ.

೧.೩ ಅಧ್ಯಯನದ ಉದ್ದೇಶಗಳು :

ಆರ್ಥಿಕ ವ್ಯವಸ್ಥೆಯಲ್ಲಿ ಪ್ರಾದೇಶಿಕ ವ್ಯತ್ಯಾಸಗಳು ಕಂಡುಬರುತ್ತವೆ. ಕೈಗಾರಿಕೆಗಳಿಂದ ಆವೃತ್ತವಾದ ಪ್ರದೇಶಗಳು ತೀವ್ರತರ ಅಭಿವೃದ್ಧಿಯನ್ನು ಸಾಧಿಸಿದರೆ ಅದಕ್ಕೆ ವ್ಯತಿರಿಕ್ತವಾಗಿ ಹಿಂದುಳಿದ ಪ್ರದೇಶಗಳಲ್ಲಿ ಕೃಷಿ ಪ್ರಾಧಾನ್ಯತೆ ಹಾಗೂ ಕೈಗಾರಿಕೆಗಳ ಕೊರತೆಯಿರುತ್ತದೆ. ಕೈಗಾರಿಕೆ ಹಿಂದುಳಿದ ಪ್ರದೇಶಗಳಲ್ಲಿ ಉದ್ಯಮಶೀಲತೆಯ ಸಾಮರ್ಥ್ಯದ ಬಗೆಗೆ ಚಿಂತನೆಗಳು ಅತ್ಯಲ್ಪ ಪ್ರಮಾಣದಲ್ಲಿರುತ್ತದೆ.

ಪ್ರಾದೇಶಿಕ ಅಸಮಾನತೆ ಹಾಗೂ ಬೆಳಗಾವಿ ಜಿಲ್ಲೆಯ ಉದ್ದಿಮೆಗಳ ಅಭಿವೃದ್ಧಿಯನ್ನು ಗಮನದಲ್ಲಿರಿಸಿಕೊಂಡು ಈ ಕೆಳಕಂಡ ನಿರ್ದಿಷ್ಟ ಉದ್ದೇಶಗಳನ್ನು ಹೊಂದಲಾಗಿದೆ.

೧. ರಾಜ್ಯದ ಕೈಗಾರಿಕೆಗಳ ಅಭಿವೃದ್ಧಿ ಹಿನ್ನೆಲೆಯಲ್ಲಿ ಜಿಲ್ಲೆಯ ಕೈಗಾರಿಕೆಗಳ ಅಭಿವೃದ್ಧಿಯನ್ನು ಅಧ್ಯಯನ ಮಾಡುವದು.

೨. ಬೆಳಗಾವಿ ಜಿಲ್ಲೆಯ ಇತಿಹಾಸ, ಆಡಳಿತ, ಭೂಗೋಳ, ಸಂಪನ್ಮೂಲಗಳ ಲಭ್ಯತೆ ಮೊದಲಾದ ಅಂಶಗಳ ಪರಿಗಣನೆಯ ಹಿನ್ನೆಲೆಯಲ್ಲಿ ಜಿಲ್ಲೆಯ ಕೈಗಾರಿಕೆಗಳ ಒಟ್ಟು ಅಭಿವೃದ್ಧಿಯ ಸ್ವರೂಪ ಹಾಗೂ ಬೆಳವಣಿಗೆಯ ಸಾಧ್ಯತೆಗಳನ್ನು ಗುರುತಿಸುವದು.

೩. ಜಿಲ್ಲೆಯ ಕೈಗಾರಿಕೆಗಳ ಬೆಳವಣಿಗೆ ಮತ್ತು ಬೆಳವಣಿಗೆಯಲ್ಲಿಯ ಪ್ರಾದೇಶಿಕ ಅಸಮಾನತೆಯನ್ನು ಅಭ್ಯಸಿಸುವದು.

೪. ಬೆಳಗಾವಿ ಜಿಲ್ಲೆಯ ವಿವಿಧ ಗಾತ್ರದ(ಬೃಹತ, ಮಧ್ಯಮ, ಚಿಕ್ಕ ಮತ್ತು ಅತಿ ಚಿಕ್ಕ) ಉದ್ದಿಮೆಗಳ ಕ್ಷೇತ್ರ ಅಧ್ಯಯನದ ಮೂಲಕ ಕಾರ್ಯಾತ್ಮಕ ಚಟುವಟಿಕೆಗಳನ್ನು ಮತ್ತು ಸಮಸ್ಯೆಗಳನ್ನು ವಿಶ್ಲೇಷಿಸುವದು.

೫. ಅಧ್ಯಯನದಿಂದ ಹೊರಹೊಮ್ಮುವ ಅಂಶಗಳ ಮೇಲೆ ಬೆಳಕು ಚೆಲ್ಲುತ್ತಾ, ಫಲಿತಗಳನ್ನು ಯಾದೀಕರಿಸುವದು ಮತ್ತು ಸಲಹೆಗಳನ್ನು ನೀಡುವದು.

೧.೪ ಅಧ್ಯಯನ ವಿಧಾನ :

ಅಧ್ಯಯನ ವಿಧಾನವನ್ನು ಅಧ್ಯಯನ ವಿಷಯದ ಉದ್ದೇಶ ಹಾಗೂ ಸಮಸ್ಯೆಗಳಿಗೆ ಅನುಗುಣವಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ. ಇದು ಕ್ಷೇತ್ರ ಸಮೀಕ್ಷೆ ಆಧರಿತ ಅಧ್ಯಯನವಾಗಿದೆ. ಅವಶ್ಯಕವಾದ ತಾತ್ವಿಕ ಹಾಗೂ ಸೈದ್ಧಾಂತಿಕ ನಿಲುವುಗಳನ್ನು ಚರ್ಚಿಸಲಾಗಿದೆ. ಅಧ್ಯಯನಕ್ಕೆ ಅಗತ್ಯವಾದ ಮಾಹಿತಿಯನ್ನು ಪ್ರಾಥಮಿಕ ಸಮೀಕ್ಷೆ, ಪ್ರಕಟಿತ ದಾಖಲೆಗಳು ಹಾಗೂ ಸರಕಾರದ ಪ್ರಕಟಣೆಗಳಿಂದ ಪಡೆಯಲಾಗಿದೆ.

ಅಧ್ಯಯನದ ಉದ್ದೇಶಗಳಲ್ಲೊಂದಾದ ಉದ್ದಿಮೆಗಳಲ್ಲಿನ ಪ್ರಾದೇಶಿಕ ಅಸಮಾನತೆಗೆ ಸಂಬಂಧಿಸಿದಂತೆ ಸರಕಾರದ ನೀತಿಯನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಲು ಕರ್ನಾಟಕ ಸರಕಾರವು ಕಾಲಕಾಲಕ್ಕೆ ಪ್ರಕಟಿಸುವ ಕೈಗಾರಿಕಾ ನೀತಿಯನ್ನು ಗಮನಿಸಿಕೊಳ್ಳಲಾಗಿದೆ. ಕರ್ನಾಟಕ ಸರಕಾರದ ಯೋಜನಾ ಆಯೋಗದ ವಾರ್ಷಿಕ ಕೈಗಾರಿಕಾ ಪ್ರಗತಿ ಹಾಗೂ ಪಕ್ಷಿನೋಟದಿಂದ ಪಡೆಯಲಾಗಿದೆ. ಕೈಗಾರಿಕಾ ಹಣಕಾಸು ಸಂಸ್ಥೆಗಳು ಪ್ರಕಟಿಸುವ ಉದ್ದಿಮೆಗಳ ಪ್ರಗತಿ ಹಾಗೂ ಬದಲಾವಣೆಗಳ ವರದಿಗಳನ್ನು ಪಡೆಯಲಾಗಿದೆ.

ಬೆಳಗಾವಿ ಜಿಲ್ಲೆಯ ವಿವಿಧ ಪ್ರಮಾಣದ ಉದ್ದಿಮೆಗಳ ವಿವರವಾದ ಅಧ್ಯಯನಕ್ಕೆ ಭಾರತ ಸರಕಾರದ ಬೆಳಗಾವಿ ಗೆಝೆಟೀಯರಗಳ ನೆರವು ಪಡೆಯಲಾಗಿದೆ. ಜೊತೆಗೆ ಕರ್ನಾಟಕ ಸರಕಾರದ ವಿವಿಧ ಇಲಾಖೆಗಳಿಂದ ಅಂಕಿ-ಅಂಶಗಳನ್ನು ಪಡೆಯಲಾಗಿದೆ.

ಅಧ್ಯಯನದ ಮುಖ್ಯ ಉದ್ದೇಶ ಬೆಳಗಾವಿ ಜಿಲ್ಲೆಯ ಉದ್ದಿಮೆಗಳ ಅಭಿವೃದ್ಧಿಯನ್ನು ಅಭ್ಯಸಿಸುವುದಾಗಿದ್ದರಿಂದ ಇಲ್ಲಿಯ ಉದ್ದಿಮೆಗಳ ಹಾಗೂ ಉದ್ದಿಮೆದಾರರ ಪ್ರಾಥಮಿಕ ಸಂದರ್ಶನ ಅಗತ್ಯವಾಗಿದೆ. ಈ ಹಿನ್ನೆಲೆಯಲ್ಲಿ ಜಿಲ್ಲೆಯ ಕೈಗಾರಿಕೆಗಳನ್ನು ಸಣ್ಣ ಪ್ರಮಾಣದ, ಮಧ್ಯಮ ಪ್ರಮಾಣದ ಹಾಗೂ ಬೃಹತ್ ಪ್ರಮಾಣದ ಉದ್ದಿಮೆಗಳೆಂದು ಮೂರು ಭಾಗಗಳಲ್ಲಿ ವಿಂಗಡಿಸಲಾಗಿದೆ. ವಿವಿಧ ಉದ್ದಿಮೆಗಳ ಅಧ್ಯಯನಕ್ಕೆ ಪ್ರಶ್ನಾವಳಿಯನ್ನು ಆಧರಿಸಿ, ನೇರ ಸಂದರ್ಶನದ ಮೂಲಕ ಉದ್ದಿಮೆಗಳ ಸಮಗ್ರ ಪ್ರಾಥಮಿಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಈ ಅಧ್ಯಯನಕ್ಕೆ ಬೆಳಗಾವಿ ಜಿಲ್ಲೆಯ ಎಲ್ಲ ಹತ್ತು ತಾಲ್ಲೂಕುಗಳಲ್ಲಿಯ ಉದ್ದಿಮೆಗಳನ್ನು ಆಯ್ದುಕೊಂಡು ಅಭ್ಯಸಿಸಲಾಗಿದೆ.

ಉದ್ದಿಮೆಗಳ ಪ್ರವರ್ತನೆಗೆ ಸಂಬಂಧಿಸಿದ ಸಮಸ್ಯೆಗಳನ್ನು ಅರಿತುಕೊಳ್ಳಲು ಪ್ರಶ್ನಾವಳಿಯ ಮೂಲಕ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿದೆ. ಜಿಲ್ಲೆಯಲ್ಲಿ ಒಟ್ಟು ೫ ಬೃಹತ್ ಹಾಗೂ ೧೫ ದೊಡ್ಡ ಮತ್ತು ಮಧ್ಯಮ ಗಾತ್ರದ ಉದ್ದಿಮೆ ಘಟಕಗಳಿದ್ದು, ಅವುಗಳಲ್ಲಿ ಸಮೀಕ್ಷೆಗಾಗಿ ಹತ್ತು ಘಟಕಗಳನ್ನು ಯಾದೃಚ್ಛಿಕ ಮಾದರಿ (ರಾಂಡೆಮ್ ಸ್ಯಾಂಪ್ಲಿಂಗ್) ಯಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ. ಅವರಿಗಾಗಿ ಆಂಗ್ಲ ಭಾಷೆಯಲ್ಲಿ ರಚಿಸಲಾದ ಪ್ರಶ್ನಾವಳಿಗಳ ಮೂಲಕ ಅಭಿಪ್ರಾಯಗಳನ್ನು ಸಂಗ್ರಹಿಸಲು ಪ್ರಯತ್ನಿಸಲಾಗಿದೆ.

ಚಿಕ್ಕ ಮತ್ತು ಅತೀ ಚಿಕ್ಕ ಉದ್ದಿಮೆದಾರರನ್ನು ಮಾದರಿಯಾಧಾರದ ಮೇಲೆ ಆಯ್ದುಕೊಂಡು ಅಭಿಪ್ರಾಯ ಸಂಗ್ರಹಿಸಲು ಅವರಿಗಾಗಿಯೇ ರಚಿಸಲಾದ ಪ್ರಶ್ನಾವಳಿಗಳ ಮೂಲಕ ಪ್ರಯತ್ನಿಸಲಾಗಿದೆ. ಜಿಲ್ಲೆಯಲ್ಲಿ ಒಟ್ಟು ೧೦ ತಾಲೂಕುಗಳಲ್ಲಿ ಕಾರ್ಯಗೈಯ್ಯುತ್ತಿರುವ ಘಟಕಗಳಲ್ಲಿ ಅಂದಾಜು ಶೇ. ೨೫-೩೦ ರಷ್ಟು (ಪ್ರತಿ ವರ್ಷ ನೋಂದಾಯಿಸಲ್ಪಟ ಸಣ್ಣ ಕೈಗಾಕೆಗಳ ಸರಾಸರಿ ಸಂಖ್ಯೆಯನ್ನಾಧರಿಸಿ) ಮಾದರಿಗಳನ್ನು ಆಯ್ಕೆ ಮಾಡಲಾಗಿದೆ. ಅದರಲ್ಲಿ ಅಥಣಿ ತಾಲೂಕಿನ ೩೦, ಬೈಲಹೊಂಗಲ ೩೬, ಬೆಳಗಾವಿ ೭೨, ಚಿಕ್ಕೋಡಿ ೩೩, ಗೋಕಾಕ ೩೩, ಹುಕ್ಕೇರಿ ೩೯, ಖಾನಾಪೂರ ೩೬, ರಾಯಬಾಗ ೩೦, ರಾಮದುರ್ಗ ೩೬ ಮತ್ತು ಸವದತ್ತಿ ತಾಲೂಕಿನಿಂದ ೩೬- ಹೀಗೆ ಒಟ್ಟು ೩೮೧ ಘಟಕಗಳ ಮಾಲೀಕರು ಅಥವಾ ನಿರ್ವಹಣೆದಾರರು ಅಥವಾ ಸಂಸ್ಥಾಪಕರಿಂದ ನೇರ ಮಾಹಿತಿ ಸಂಗ್ರಹಿಸಲಾಗಿದೆ.

೧.೫ ಅಧ್ಯಯನದ ವ್ಯಾಪ್ತಿ, ಮಹತ್ವ ಹಾಗೂ ಇತಿಮಿತಿಗಳು :

(ಅ) ಅಧ್ಯಯನದ ವ್ಯಾಪ್ತಿ :

ಪ್ರಸ್ತುತ ಅಧ್ಯಯನಕ್ಕೆ ಬೆಳಗಾವಿ ಜಿಲ್ಲೆಯ ಎಲ್ಲ ಹತ್ತು ತಾಲ್ಲೂಕುಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಇಲ್ಲಿನ ನೈಸರ್ಗಿಕ ಸಂಪನ್ಮೂಲಗಳು ಹೇರಳವಾಗಿದ್ದು, ಕೈಗಾರಿಕೀಕರಣಕ್ಕೆ

ಪೂರಕ ವಾತಾವರಣವನ್ನು ಕಲ್ಪಿಸಿವೆ. ಭೌಗೋಳಿಕ ವ್ಯಾಪ್ತಿಯಲ್ಲಿ (೧೩೪೧೫ ಚ.ಕಿ.ಮೀ) ಬೆಳಗಾವಿ ಕರ್ನಾಟಕದ ಅತಿ ದೊಡ್ಡ ಜಿಲ್ಲೆ. ಜನಸಂಖ್ಯೆ ಮತ್ತು ರಾಜ್ಯದ ಒಟ್ಟಾರೆ ರಫ್ತು ವ್ಯವಹಾರದಲ್ಲಿ ೨ನೆಯ ದೊಡ್ಡ ಜಿಲ್ಲೆಯಾದ ಬೆಳಗಾವಿ ಉದ್ದಿಮೆಗಳ ಸ್ಥಾಪನೆಯಲ್ಲಿ ಗಮನಾರ್ಹ ಪ್ರಗತಿ ಸಾಧಿಸದಿರುವುದು ಕಂಡು ಬರುತ್ತದೆ. ನೆರೆ ರಾಜ್ಯಗಳಾದ ಗೋವಾ, ಮಹಾರಾಷ್ಟ್ರದ ಗಡಿಗಳಿಗೆ ಚಾಚಿಕೊಂಡಿರುವ ಜಿಲ್ಲೆ ಉತ್ಪಾದನಾ ರಂಗದಲ್ಲಿ ಛಾಪು ಮೂಡಿಸದಿರುವುದು ಸ್ಪಷ್ಟವಾಗಿದೆ. ಸಂಪನ್ಮೂಲಗಳ ಲಭ್ಯತೆಯನ್ನು ಉದ್ದಿಮೆದಾರರು ಸಮರ್ಪಕವಾಗಿ ಬಳಸಿಕೊಳ್ಳದಿರುವ ಸಾಧ್ಯತೆಯಿದೆ. ಹಾಗೆಯೇ ರಾಜ್ಯದ ಗಡಿ ಜಿಲ್ಲೆಯಾಗಿ ಸರಕಾರದ ದೂರದೃಷ್ಟಿಯ ಕೊರತೆಯೂ ಇರಬಹುದಾಗಿದೆ. ಕೃಷಿಯ ಕಚ್ಚಾ ವಸ್ತುಗಳು ಹೇರಳವಾಗಿದ್ದು, ಕೃಷಿ ಆಧಾರಿತ ಉದ್ದಿಮೆಗಳು ಬೃಹತ್ ಪ್ರಮಾಣದಲ್ಲಿ ರೂಪಗೊಂಡಿವೆ. ಪ್ರಾದೇಶಿಕ ಅಸಮಾನತೆ ನಿವಾರಣಾ ಸಮಿತಿ ಗುರುತಿಸಿರುವ ಬಿಜಾಪೂರ ಜಿಲ್ಲೆಗೆ ಹೊಂದಿಕೊಂಡು ಔದ್ಯೋಗಿಕವಾಗಿ ತೀವ್ರ ಹಿನ್ನಡೆಯನ್ನು ಅನುಭವಿಸುತ್ತಿದೆ.

ಇಡೀ ಬೆಳಗಾವಿ ಜಿಲ್ಲೆಯಲ್ಲಿ ೫ ಬೃಹತ್, ೧೫ ದೊಡ್ಡ ಮತ್ತು ಮಧ್ಯಮ, ೨೨ ಸಕ್ಕರೆ ಘಟಕಗಳು ಹಾಗೂ ಒಟ್ಟು ೩೨,೨೦೧ ಚಿಕ್ಕ ಕೈಗಾರಿಕೆಗಳ ದಾಖಲೆ ಇದೆ.[೨]

(ಬ) ಅಧ್ಯಯನದ ಅವಧಿ :

ಪ್ರಸ್ತುತ ಸಂಶೋಧನೆಗೆ ೨೦೦೧ ರಿಂದ ೨೦೧೧ರ ವರೆಗಿನ ಒಂದು ದಶಕದ ಅವಧಿಯನ್ನು ಆಯ್ಕೆಮಾಡಿಕೊಂಡಿದೆ. ಈ ದಶಕದಲ್ಲಿ ಬೆಳಗಾವಿ ಜಿಲ್ಲೆಯ ಸಂಪನ್ಮೂಲಗಳು ಹಾಗೂ ಉದ್ದಿಮೆಗಳಲ್ಲಿ ಆಗಿರುವ ಬದಲಾವಣೆಗಳನ್ನು ಗುರುತಿಸಲಾಗಿದೆ. ಉದ್ದಿಮೆಗಳ ಪ್ರವರ್ತನೆ ಹಾಗೂ ನಿರ್ವಹಣೆಯಲ್ಲಿ ಕಂಡುಬಂದ ಅಭಿವೃದ್ಧಿ ಪಥಗಳನ್ನು ಹಾಗೂ ಸಮಸ್ಯೆಗಳನ್ನು ವಸ್ತುನಿಷ್ಠವಾಗಿ ವಿಶ್ಲೇಷಿಸಲಾಗಿದೆ.

(ಕ) ಅಧ್ಯಯನದ ಮಹತ್ವ :

ಈ ಅಧ್ಯಯನವು ಪ್ರಾದೇಶಿಕ ಮಟ್ಟದಲ್ಲಿ ಉದ್ದಿಮೆಗಳ ಅಭಿವೃದ್ಧಿಗೆ ಪೂರಕ ಅಂಶಗಳು ಹಾಗೂ ಅಭಿವೃದ್ಧಿ ಪಥದಲ್ಲಿನ ಸಮಸ್ಯೆಗಳನ್ನು ವಿಶ್ಲೇಷಿಸುತ್ತದೆ. ಒಂದು ಪ್ರದೇಶದ ಜೀವನ ಮಟ್ಟದ ಮೇಲೆ ಉದ್ದಿಮೆಗಳು ಬೀರುವ ಪ್ರಭಾವದ ಬಗ್ಗೆ ಬೆಳಕು ಚೆಲ್ಲುತ್ತದೆ. ನೈಸರ್ಗಿಕ ಸಂಪನ್ಮೂಲಗಳ ಸೂಕ್ತ ಬಳಕೆಯಿಂದ ಆರ್ಥಿಕ ಜೀವನಮಟ್ಟದ ಸುಧಾರಣಾ ಕ್ರಮದ ಬಗ್ಗೆ ನಿರ್ಣಯಿಸಲು ದಾರಿ ಮಾಡಿಕೊಡುತ್ತದೆ. ಉದ್ದಿಮೆದಾರರು ಎದುರಿಸುವ ಸಮಸ್ಯೆಗಳ ಅಧ್ಯಯನದಿಂದ ಉದ್ದಿಮೆಗಳ ಪ್ರಗತಿ ಪರಿಶೀಲನೆಗೆ ಸಹಾಯವಾಗುತ್ತದೆ.

ಅಧ್ಯಯನದ ಆಧಾರದಿಂದ, ರಾಷ್ಟ್ರಮಟ್ಟದ ಉದ್ದಿಮೆಗಳು, ಉದ್ದಿಮೆದಾರರು, ಔದ್ಯೋಗಿಕ ನೀತಿ ತಿಳಿಯಲು ಸಾಧ್ಯವಾಗದಿರಬಹುದು, ಆದರೆ ಒಂದು ಪ್ರದೇಶದ ಉದ್ದಿಮೆಗಳ ಅಭಿವೃದ್ಧಿ ಅಧ್ಯಯನ ಕೈಗೊಳ್ಳುವ ಪದ್ಧತಿಗೆ ನಿದರ್ಶನವಾಗುತ್ತದೆ. ಅಧ್ಯಯನ ಕ್ಷೇತ್ರದಲ್ಲಿಯೇ ಉದ್ದಿಮೆಗಳ

ಪ್ರಗತಿಯಲ್ಲಿನ ತಾರತಮ್ಯವನ್ನು ಗುರುತಿಸುವ ಪ್ರಯತ್ನ ಮಾಡಿದ್ದರಿಂದ ಸಮತೋಲನ ಪ್ರಗತಿ ಸಾಧಿಸುವ ನೀತಿ ನಿರೂಪಿಸಲು ಮಾರ್ಗದರ್ಶನ ನೀಡುತ್ತದೆ.

ಉದ್ದಿಮೆದಾರರ ಸಂದರ್ಶನ ಹಾಗೂ ಪ್ರಶ್ನಾವಳಿಗಳಿಂದ ಸಂಗ್ರಹಿಸಿದ ಪ್ರಾಥಮಿಕ ವರದಿ ಇರುವುದರಿಂದ ಸರಕಾರವು ಔದ್ಯೋಗಿಕ ಯೋಜನೆ ಅಥವಾ ಉದ್ದಿಮೆದಾರರಿಗೆ ಯೋಜನೆ ರೂಪಿಸುವಲ್ಲಿ ಸಹಕಾರಿಯಾಗಬಲ್ಲದು. ಗಡಿ ಜಿಲ್ಲೆಗಳಿಗಾಗಿ ವಿಶೇಷ ಪ್ರೋತ್ಸಾಹ ನೀಡುವಾಗ ಅನುಸರಿಸಬಹುದಾದ ಮೂಲಭೂತ ನೀತಿ, ನಿಲುವುಗಳ ನೆಲೆಗಟ್ಟನ್ನು ವ್ಯವಸ್ಥಿತವಾಗಿ ವಿಷದೀಕರಿಸಲು ಸಾಧ್ಯವಾಗುತ್ತದೆ. ಮುಂದುವರೆದ ಇತರ ಪ್ರದೇಶಗಳಲ್ಲಿನ ಉದ್ದಿಮೆಗಳ ಅಭಿವೃದ್ಧಿ ಅಧ್ಯಯನ ನಡೆಸುವ ಸಂಶೋಧಕರಿಗೆ ಇದು ಆಕರ ಗ್ರಂಥವಾಗಬಹುದು. ಔದ್ಯೋಗಿಕ ನೀತಿ ಮತ್ತು ಕಾರ್ಯಕ್ರಮಗಳ ಬಗ್ಗೆ ಜನರ ತಿಳುವಳಿಕೆ ಮಟ್ಟವನ್ನು ಹೆಚ್ಚಿಸಲೂ ಸಹ ನೆರವಾಗುತ್ತದೆ. ಪ್ರಾಥಮಿಕ ನೀತಿಯನ್ನು ರೂಪಿಸಲು ಸಹ ನೆರವಾಗಬಹುದಾಗಿದೆ.

(ಡ) ಅಧ್ಯಯನದ ಮಿತಿಗಳು :

ಒಂದು ಜಿಲ್ಲೆಯ ಕೈಗಾರಿಕಾ ರಂಗದ ಅಧ್ಯಯನವಾಗಿದ್ದರಿಂದ ಕೆಲವೊಂದು ಇತಿಮಿತಿಗಳು ಸಹಜವಾಗುತ್ತವೆ. ಅದರಂತೆ ಈ ಅಧ್ಯಯನದಲ್ಲಿ ಕೆಳಗಿನ ಇತಿಮಿತಿಗಳಿವೆ.

೧) ಒಂದು ಪ್ರದೇಶದ ಕೈಗಾರಿಕೆಗಳ ಅಭಿವೃದ್ಧಿಯ ಅಧ್ಯಯನವಾದ್ದರಿಂದ, ಇಲ್ಲಿ ಕೈಗಾರಿಕೆಗಳ ವಿಷಯಕ್ಕೆ ಪ್ರಾಧಾನ್ಯತೆ ನೀಡಲಾಗಿದೆ. ಕೈಗಾರಿಕೆಯ ಪ್ರಗತಿಯ ಮೇಲೆ ಪ್ರಭಾವ ಬೀರುವ ಅಂಶಗಳನ್ನು ಪರಿಶೀಲಿಸಲಾಗಿದೆ.

೨) ಈ ಅಧ್ಯಯನವು ಒಂದು ನಿರ್ಧಿಷ್ಟ ಕಾಲದ ಬೆಳಗಾವಿ ಜಿಲ್ಲೆಯ ಅಭಿವೃದ್ಧಿಯನ್ನು ಪರಿಶೀಲಿಸುತ್ತದೆ. ಕಾರಣ ಕಾಲಾಂತರದಲ್ಲಿ ಆಗಿರುವ ಬದಲಾವಣೆಗಳನ್ನು ಕೈಗಾರಿಕೆಗಳಿಗೆ ಮಾತ್ರ ಅನ್ವಯಿಸಿ ಅಧ್ಯಯನ ಮಾಡುತ್ತದೆ.

೩) ಸೀಮಿತ ಅವಧಿ ಮತ್ತು ಸಂಪನ್ಮೂಲಗಳ ಹಿನ್ನೆಲೆಯಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಕೈಗಾರಿಕಾ ಕೇಂದ್ರೀಕೃತ ಪ್ರದೇಶಗಳನ್ನು ಆಯ್ಕೆ ಮಾಡಿ ಅಧ್ಯಯನ ಮಾಡಲಾಗಿದೆ. ಇದರಲ್ಲಿ ಬೃಹತ್ ಕೈಗಾರಿಕೆಗಳು ಮಧ್ಯಮ ಮತ್ತು ಚಿಕ್ಕ ಕೈಗಾರಿಕೆಗಳು ಹಾಗೂ ೧೦ ತಾಲ್ಲೂಕುಗಳನ್ನು ಸೇರಿಸಲಾಗಿದೆ.

೪) ಅಧ್ಯಯನದ ಫಲಿತಗಳು, ಕ್ಷೇತ್ರದಲ್ಲಿ ಲಭ್ಯವಾದ ಮಾಹಿತಿ, ದಾಖಲೆ ಹಾಗೂ ಅಭಿಪ್ರಾಯಗಳ ಮೇಲೆ ಅವಲಂಬಿಸಿವೆ. ಮಾಹಿತಿಯ ನಿಖರತೆ ಮಾಹಿತಿದಾರರನ್ನು ಅವಲಂಬಿಸಿದೆ. ಉದ್ದಿಮೆದಾರರು ವಿಷಯಗಳನ್ನು ಮರೆಮಾಚುವ ಸಾಧ್ಯತೆಯೂ ಇದೆ. ಇದು ಅಧ್ಯಯನದ ಮಹತ್ವದ ಇತಿಮಿತಿಯಾಗಿದೆ.

೫) ಅಧ್ಯಯನದ ಫಲಿತಗಳನ್ನು ಇತರ ಜಿಲ್ಲೆಗಳಿಗೆ ನೇರವಾಗಿ ಅನ್ವಯಿಸಲು ಸಾಧ್ಯವಾಗದು. ಆದರೆ ತೌಲನಿಕವಾಗಿ ನೋಡಬಹುದಾಗಿದೆ.

೧.೬ ಅಧ್ಯಯನ ವಿನ್ಯಾಸ :

ಸಂಶೋಧನಾ ಪ್ರಬಂಧವು ಒಟ್ಟು ಏಳು ಅಧ್ಯಾಯಗಳನ್ನು ಒಳಗೊಂಡಿದೆ. ಅವುಗಳನ್ನು ಈ ಕೆಳಗಿನಂತೆ ರಚಿಸಲಾಗಿದೆ.

ಪ್ರಸ್ತುತ **ಮೊದಲ ಅಧ್ಯಾಯದಲ್ಲಿ** ಅಧ್ಯಯನದ ರೂಪ ರೇಷೆಯನ್ನು ವಿವರಿಸಲಾಗಿದೆ. ಇದು ಅಧ್ಯಯನಕ್ಕೆ ಪ್ರವೇಶಿಕೆ. ಸಮಸ್ಯೀಕರಣ ಮತ್ತು ಸಂಶೋಧನಾ ಪ್ರಶ್ನೆಗಳ ಸ್ವರೂಪವನ್ನು ಚರ್ಚಿಸಲಾಗಿದೆ. ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ, ಮಹತ್ವ ಮತ್ತು ಮಿತಿಗಳ ವಿವರಗಳು ಇಲ್ಲಿವೆ.

ಎರಡನೆಯ ಅಧ್ಯಾಯವು ಪೂರ್ವಾಧ್ಯಯನಗಳ ಅವಲೋಕನ. ಇಲ್ಲಿ ಬೆಳಗಾವಿ ಜಿಲ್ಲೆಗೆ ಸಂಬಂಧಿಸಿದಂತೆ ಈವರೆಗೆ ನಡೆದಿರುವ ಪ್ರಮುಖ ಅಧ್ಯಯನಗಳನ್ನು ಅವಲೋಕಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಅಧ್ಯಯನದ ಕ್ಷೇತ್ರವನ್ನು ಪರಿಚಯಿಸಲಾಗಿದೆ. ಬೆಳಗಾವಿ ಜಿಲ್ಲೆಗೆ ಸಂಬಂಧಿಸಿದ ಭೌಗೋಳಿಕ ವಿವರ, ಸಂಪನ್ಮೂಲಗಳ ಲಭ್ಯತೆ, ಕೈಗಾರಿಕೆಗಳ ಸ್ಥಿತಿಗತಿ, ಉದ್ಯಮಶೀಲತೆಯ ಪ್ರಗತಿಗಳ ಸ್ಥೂಲ ಚಿತ್ರಣ ನೀಡಲಾಗಿದೆ. ಹಾಗೂ ಬೆಳಗಾವಿಯ ಕೈಗಾರಿಕಾ ಇತಿಹಾಸ, ಇದುವರೆಗಿನ ಕೈಗಾರಿಕಾ ಅಭಿವೃದ್ಧಿಯ ವಿವರಗಳನ್ನು ನೀಡಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಬೆಳಗಾವಿ ಜಿಲ್ಲೆಯಲ್ಲಿನ ಬೃಹತ್, ಮಧ್ಯಮ, ಚಿಕ್ಕ ಕೈಗಾರಿಕೆಗಳು ಹಾಗೂ ಇತರ ಜಿಲ್ಲೆಗಳಿಗೆ ಹೋಲಿಸಿ ಅಭಿವೃದ್ಧಿಯ ಸ್ಥಾನಮಾನವನ್ನು ಚರ್ಚಿಸಲಾಗಿದೆ. ಬೆಳಗಾವಿ ಜಿಲ್ಲೆಗೆ ಸಂಬಂಧಿಸಿದಂತೆ ಕೈಗಾರಿಕೆಗಳ ಅಭಿವೃದ್ಧಿಗಾಗಿ ಸರಕಾರದ ಕ್ರಮಗಳನ್ನು ಪರಿಶೀಲಿಸಿ ಚರ್ಚಿಸಲಾಗಿದೆ.

ಅಧ್ಯಾಯ ಐದರಲ್ಲಿ ಬೆಳಗಾವಿ ಜಿಲ್ಲೆಯ ಉದ್ದಿಮೆಗಳ ಪ್ರವರ್ತನದ ಅಧ್ಯಯನವಿದೆ. ಇದು ಬೃಹತ್ ಮತ್ತು ಮಧ್ಯಮ ಉದ್ದಿಮೆಗಳನ್ನು ಆಧರಿಸಿದೆ. ಇದರಲ್ಲಿ ಬೃಹತ್ ಮತ್ತು ಮಧ್ಯಮ ಉದ್ದಿಮೆಗಳಿಗಾಗಿ ಪ್ರತ್ಯೇಕ ಪ್ರಶ್ನಾವಳಿಯನ್ನು ರಚಿಸಿ, ಸಂಗ್ರಹಿಸಿದ ಅಭಿಪ್ರಾಯಗಳ ಸ್ಥೂಲ ವಿವರಣೆ ಮತ್ತು ವಿಶ್ಲೇಷಣೆ ಇದೆ. ಚರ್ಚೆಯೊಂದಿಗೆ ಕೊರತೆ ಹಾಗೂ ಸಮಸ್ಯೆಗಳನ್ನು ದಾಖಲಿಸಲಾಗಿದೆ.

ಚಿಕ್ಕ ಮತ್ತು ಅತೀ ಚಿಕ್ಕ ಉದ್ದಿಮೆಗಳಿಗಾಗಿ ಪ್ರತ್ಯೇಕ ಪ್ರಶ್ನಾವಳಿಯನ್ನು ರಚಿಸಿ ಸಂಗ್ರಹಿಸಿದ ಅಭಿಪ್ರಾಯಗಳ ಸ್ಥೂಲ ವಿವರಣೆ ಮತ್ತು ವಿಶ್ಲೇಷಣೆ **ಆರನೆಯ ಅಧ್ಯಾಯದಲ್ಲಿದೆ.**

ಕೊನೆಯ ಅಧ್ಯಾಯ ಸಮಾರೋಪ. ಇದರಲ್ಲಿ ಅಧ್ಯಯನದ ಫಲಿತಗಳು ಹಾಗೂ ಅದಕ್ಕೆ ಸಮಂಜಸವಾದ ಸಲಹೆ-ಸೂಚನೆ-ಮಾರ್ಗಸೂತ್ರಗಳನ್ನು ನೀಡಲಾಗಿದೆ. ಈ ಅಧ್ಯಯನ ಮುಂದುವರಿಕೆಯ ಹಲವು ಕ್ಷೇತ್ರಗಳನ್ನು ಸೂಚಿಸಲಾಗಿದೆ.

ಟಿಪ್ಪಣಿಗಳು :

೧. ಸೆನ್ಸ್‌ಸ ಆಫ್ ಇಂಡಿಯಾ ೨೦೦೧; ಗವರ್ನಮೆಂಟ ಪಬ್ಲಿಕೇಶಷನ್ ಮಿನಿಷ್ಟ್ರಿ ಆಫ್ ಪ್ಲ್ಯಾನಿಂಗ್ ಸ್ಪೇಷಲ್ ಅಬ್ಬರವೇಷನ್, ಪುಟ: ೨೫

೨. ಸೆನ್ಸ್‌ಸ ಆಫ್ ಇಂಡಿಯಾ ೨೦೦೧; ಗವರ್ನಮೆಂಟ ಪಬ್ಲಿಕೇಶಷನ್ ಮಿನಿಷ್ಟ್ರಿ ಆಫ್ ಪ್ಲ್ಯಾನಿಂಗ್ ಸ್ಪೇಷಲ್ ಅಬ್ಬರವೇಷನ್, ಪುಟ: ೩೮

೩. ದಿ. ಹಿಂದು: ೨೦೧೧-೦೨-೦೨.

೪. ಮಿನಿಸ್ಟ್ರೀ ಆಫ್ ಕಾಮರ್ಸ: ೨೦೧೧-೦೪-೦೬ ಪ್ರಕಟಣೆ (ಪತ್ರಿಕಾ)

೫. ದಿ. ಹಿಂದು ೨೦೦೫-೦೬-೦೯

೬. www.karnatakaindustry.gov.in ಮತ್ತು www.kumbangalore.com

೭. ಬೆಳಗಾವಿ ಜಿಲ್ಲೆಯ ಅಂಕಿ-ಅಂಶಗಳ ನೋಟ ೨೦೧೦-೨೦೧೧ ನಂ. ಜಿಸಬೆ/ ೪/೨೦೧೦. ಪುಟ : ೧೦೯.

****

ಅಧ್ಯಾಯ : ಎರಡು

ಪೂರ್ವ ಅಧ್ಯಯನಗಳ ಅವಲೋಕನ

ಅಧ್ಯಾಯ : ಎರಡು

ಪೂರ್ವ ಅಧ್ಯಯನಗಳ ಅವಲೋಕನ

ಒಂದು ಜಿಲ್ಲೆಯ ಕೈಗಾರಿಕೆಗೆ ಸಂಬಂಧಿಸಿದಂತೆ ಅಧ್ಯಯನಕ್ಕಾಗಿ ಒಳಪಡಿಸಬೇಕಾದ ವಿಷಯ ವ್ಯಾಪ್ತಿಯನ್ನು ನಿರ್ಧರಿಸಲು, ಅದಕ್ಕಾಗಿ ಅಳವಡಿಸಬೇಕಾದ ವಿಧಾನ ಮತ್ತು ಸಮಸ್ಯೀಕರಣಕ್ಕಾಗಿ ಈಗಾಗಲೇ ಲಭ್ಯವಿರುವ ಮತ್ತು ಇದೇ ಕ್ಷೇತ್ರಕ್ಕೆ ಸಂಬಂಧಿಸಿದಂತೆ ನಡೆದ ಸಂಶೋಧನೆಯ ಸಾಹಿತ್ಯ ಅವಲೋಕನವು ಅವಶ್ಯವೆನಿಸುತ್ತದೆ.ಈ ರೀತಿಯ ಸಾಹಿತ್ಯ ಅವಲೋಕನದಿಂದ ಪ್ರಸ್ತುತ ಅಧ್ಯಯನದ ದಿಶೆಯನ್ನು ನಿರ್ಧರಿಸಲು ಸಾಧ್ಯವಾಗುತ್ತದೆ. ಆದ್ದರಿಂದ ಹಲವು ಗ್ರಂಥಗಳನ್ನು ಅವಲೋಕಿಸಿದ್ದು, ಅವುಗಳನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ.

ರಾಷ್ಟ್ರ, ರಾಜ್ಯ ಮತ್ತು ಜಿಲ್ಲೆಯ ಕೈಗಾರಿಕಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸಾಕಷ್ಟು ಅಧ್ಯಯನ-ಗಳು ಕಾಲಕಾಲಕ್ಕೆ ನಡೆದಿರುವುದು ಕಂಡುಬರುತ್ತದೆ. ಸಮೃದ್ಧವಾದ ಸಾಹಿತ್ಯ ಲಭ್ಯವಿದೆ. ಅವು ಆಂಗ್ಲ ಮತ್ತು ಕನ್ನಡ ಭಾಷೆಯಲ್ಲಿ ರಚಿತಗೊಂಡಿವೆ.

ಡಾ. ಮನಮೋಹನ ಸಿಂಗ್ ಅವರ ``ಟು ದ ನೇಶನ್, ಫಾರ್ ದ ನೇಶನ್`` ಲೇಖನ (ರಾಜ್ ಕಪಾಡಿಯಾ ಅವರು ಸಂಪಾದಿಸಿದ ಗ್ರಂಥ), ದಿಲೀಪ ಮುಖರ್ಜಿಯವರು ಸಂಪಾದಿಸಿದ ``ಸ್ಮಾಲ್ ಫರ್ಮ್ಸ್ ಇನ್ ಇಂಡಿಯಾ`` ಆರ್. ಆರ್. ಸುರೇಶರವರ ``ಎಕನಾಮಿ ಆ್ಯಂಡ್ ಸೊಸಾಯಿಟಿ``, ಎಚ್ಚಾರ್ಕೆ ರಚಿತ ``ಎಕನಾಮಿಕ್ ಡೆವಲಪಮೆಂಟ್ ಆಫ್ ಇಂಡಿಯಾ``, ಅಲಕ್ ಘೋಷರವರ ``ಇಂಡಿಯನ್ ಎಕನಾಮಿ- ಇಟ್ಸ್ ನೇಚರ್ ಆಂಡ್ ಪ್ರಾಬ್ಲೆಮ್ಸ್``, ಎಸ್. ಕೆ. ಗೋಯಲ್ ಸಹ ಲೇಖಕರೊಂದಿಗೆ ಪ್ರಕಟಿಸಿದ ``ಇಂಡಿಯನ್ ಇಂಡಸ್ಟ್ರಿಯಲ್ ಡೆವಲಪಮೆಂಟ್ ಆ್ಯಂಡ್ ಗ್ಲೋಬಲೈಜೇಷನ್``, ಎಸ್. ಸಾಧಕ್ ಅವರ ``ಇಂಡಸ್ಟ್ರಿಯಲ್ ಡೆವಲಪಮೆಂಟ್ ಇನ್ ಬ್ಯಾಕವರ್ಡ್ ರೀಜಿನ್ಸ್ ಇನ್ ಇಂಡಿಯಾ`` ಮತ್ತು ಪಿ. ಚೌಧರಿ ಅವರ ``ದಿ ಇಂಡಿಯನ್ ಎಕನಾಮಿ ಆಂಡ್ ಡೆವಲೆಪಮೆಂಟ್`` ಗ್ರಂಥಗಳನ್ನು ಗಮನಿಸಿ, ಈ ಅಧ್ಯಯನವನ್ನು ವಿನ್ಯಾಸಗೊಳಿಸಲಾಗಿದೆ.

ಅದರಂತೆ, ಎಚ್ಚಾರ್ಕೆ ಅವರ ಭಾರತದ ಆರ್ಥಿಕ ಅಭಿವೃದ್ಧಿ, ಆರ್. ಎಮ್. ಕದಮ ಮತ್ತು ಓ. ಡಿ. ಹೆಗಡೆ ಅವರ ``ಜಾಗತೀಕರಣದ ಸಮಗ್ರ ಪರಿಣಾಮಗಳು ಮತ್ತು ವಿಶ್ಲೇಷಣೆಗಳು``, ಎಮ್. ಎನ್. ಸುರೇಶಕುಮಾರ ಮತ್ತು ಪೂರ್ಣಿಮಾ ಅವರ ``ಭಾರತದ ಆರ್ಥಿಕ ಅಭಿವೃದ್ಧಿ``, ಕೆ. ಅನಂತರಾಮರಾವ್ ಸಂಪಾದಿಸಿದ ``ಸುವರ್ಣ ಕರ್ನಾಟಕ ದರ್ಶನ-೫೦ ಸಂವತ್ಸರಗಳು`` ಸೇರಿಸಿಕೊಳ್ಳಲಾಗಿದೆ.

ಇವುಗಳೊಂದಿಗೆ ಕನ್ನಡ ನಿಯತಕಾಲಿಕೆಗಳಲ್ಲಿ ಪ್ರಕಟಗೊಂಡ ಕೆಲವು ಉಪಯುಕ್ತ ಲೇಖನಗಳನ್ನು ಅವಲೋಕಿಸಲಾಗಿದೆ. ಅವುಗಳಲ್ಲಿ ಎಂ. ಭಾರದ್ವಾಜ ಅವರ "ಕರ್ನಾಟಕದಲ್ಲಿ ಕೈಗಾರಿಕೆ", ಶೈಲೇಂದ್ರ ಸಿನ್ಹಾ ಅವರ "ಬಿದಿರು -ಜೀವನದ ಉಸಿರು", ಆರ್. ಎಮ್. ಮಲ್ಲರವರ "ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ಆರ್ಥಿಕ ನೆರವು", ಎಂ. ಚಂದ್ರ ಪೂಜಾರಿ ಅವರ "ಉತ್ತರ ಕರ್ನಾಟಕದ ಸಮಸ್ಯೆಗಳು ಮತ್ತು ಪರಿಹಾರಗಳು", ಅಶ್ವಿನಿ ಸಕ್ಸೇನಾ ಅವರ "ಸಣ್ಣ-ಮಧ್ಯಮ ಕೈಗಾರಿಕೆ -ಮಾರುಕಟ್ಟೆ ಸವಾಲು-ಅವಕಾಶ", ಟಿ. ಆರ್. ಚಂದ್ರಶೇಖರ ಅವರ "ಈಶಾನ್ಯ ಕರ್ನಾಟಕ ಅಭಿವೃದ್ಧಿಯಲ್ಲೂ ಅಸಮಾನತೆ", ಮಾಧವರವರ "ಕರ್ನಾಟಕ ಕೈಗಾರಿಕಾ ಬೆಳವಣಿಗೆಯ ಬೆಳಕು" ಮುಖ್ಯವಾದವು.

ಆಂಗ್ಲ ನಿಯತಕಾಲಿಕೆಗಳಲ್ಲಿ ಪ್ರಕಟವಾದ ಕೆ. ಎಸ್. ಕೃಷ್ಣಸ್ವಾಮಿಯವರ "ಪಬ್ಲಿಕ್ ಸೆಕ್ಟರ್ ಅಂಡರ್‌ಟೇಕಿಂಗ್ಸ್", ಸಿ. ಪಿ. ಚಂದ್ರಶೇಖರ ಅವರ ಎಕ್ಸಪ್ಲೇನಿಂಗ್ ಪೋಸ್ಟ್-ರೀಫಾರ್ಮ್ಸ್ ಇಂಡಸ್ಟ್ರೀಯಲ್ ಗ್ರೋಥ್", ಜೆ. ಸಿ. ಸಂದೇಸಾರಾ ಅವರ "ನ್ಯೂ ಸ್ಮಾಲ್ ಎಂಟರ್‌ಪ್ರಾಯಿಸಸ್ ಪಾಲಿಸಿ-ಇಂಪ್ಲಿಕೇಶನ್ಸ್ ಆಂಡ್ ಪ್ರಾಸ್ಪೆಕ್ಟ್ಸ್", ಕೆ. ಎನ್. ರಾಜ್ ಅವರ "ನ್ಯೂ ಎಕನಾಮಿಕ್ ಪಾಲಿಸಿ-ಎಂಜಿನ್ ಆಫ್ ಗ್ರೋಥ್", ಜಿ. ಶ್ರೀನಿವಾಸನ್ ಅವರ "ಸರ್ವಿಸ್ ಸೆಕ್ಟರ್ ಆಂಡ್ ಇಟ್ಸ್ ಕಾಂಟ್ರಿಬ್ಯೂಷನ್ ಟೂ ಇಂಡಿಯನ್ ಎಕನಾಮಿ" ಮತ್ತು ಪಿ. ಶ್ರೀವಾಸ್ತವ ಅವರ ಡೆವಲಪಮೆಂಟ್ ಆಫ್ ಇನಫ್ರಾಸ್ಟ್ರಕ್ಚರ್" ಲೇಖನಗಳು ಸೇರಿವೆ.

ಇಷ್ಟಲ್ಲದೆ, ಮೂರು ಮಹತ್ವದ ವರದಿಗಳಾದ ಸಿ. ರಂಗರಾಜನ್ ಅವರ "ರಿಪೋರ್ಟ್ ಆಫ್ ಕಮೀಟಿ ಆನ್ ಫೈನಾನ್ಸಿಯಲ್ ಇನಕ್ಲ್ಯುಜನ್", ಎಸ್.ಐ.ಡಿ.ಬಿ.ಐ ಸಂಸ್ಥೆಯ "ರೀಪೋರ್ಟ್ ಆನ್ ಎಸ್.ಎಸ್.ಐ ಸೆಕ್ಟರ್" ಮತ್ತು "ದಿ ಹೈ ಪಾವರ್ಡ್ ಕಮೀಟಿ ಫಾರ್ ರಿಡ್ರೆಸಲ್ ಆಫ್ ರಿಸನಲ್ ಇನಬ್ಯಾಲೆನ್ಸಸ್ ಇನ್ ಕರ್ನಾಟಕ" ಕುರಿತು ಡಾ. ಡಿ. ಎಂ. ನಂಜುಡಪ್ಪ ಅವರು ಕರ್ನಾಟಕ ಸರ್ಕಾರಕ್ಕೆ ಸಲ್ಲಿಸಿದ ವರದಿ ಮತ್ತು ಇದರ ಕನ್ನಡ ಆವೃತ್ತಿ "ಕರ್ನಾಟಕದಲ್ಲಿ ಪ್ರಾದೇಶಿಕ ಅಸಮಾನತೆ ಸರಿಪಡಿಸುವ ಉನ್ನತಾಧಿಕಾರದ ಸಮಿತಿ" ವರದಿಯನ್ನು ಪರಿಗಣಿಸಲಾಗಿದೆ.

ಜಿಲ್ಲೆಯ ಇಡೀ ಕೈಗಾರಿಕೆಯ ಸಮಗ್ರವಾದ ಅಧ್ಯಯನಗಳಾಗಿಲ್ಲ. ಆದರೆ ಕೆಲವು ನಿರ್ದಿಷ್ಟ ಉದ್ದಿಮೆಯ ಘಟಕ, ಕೈಗಾರಿಕೆಗಳಿಗೆ ಪೂರಕ ಸೇವೆ ನೀಡುವ ಬ್ಯಾಂಕುಗಳ ಕುರಿತಾಗಿ ಸಂಶೋಧನೆಗಳು ನಡೆದಿವೆ. ಇವುಗಳಲ್ಲಿ ಜಿಲ್ಲೆಯ ವ್ಯಾಪ್ತಿಯನ್ನೊಳಗೊಂಡು ನಡೆದ ಸಂಶೋಧನಾ ಪ್ರಬಂಧಗಳನ್ನು ದೀರ್ಘವಾಗಿ ಅವಲೋಕನಗೊಳಿಸಿ ಸಾರಾಂಶ ರೂಪದಲ್ಲಿ ನೀಡಲಾಗಿದೆ.

ಪ್ರಸ್ತುತ ಅಧ್ಯಯನವು ಬೆಳಗಾವಿ ಜಿಲ್ಲೆಯ ಕೈಗಾರಿಕೆಗಳ ಅಭಿವೃದ್ಧಿಯ ಪರಿಶೀಲನೆಯಾಗಿದ್ದು, ಜಿಲ್ಲೆಯಲ್ಲಿನ ಉದ್ದಿಮೆಗೆ ಮತ್ತು ಅದಕ್ಕೆ ಪೂರಕವಾದ ಇತರ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ವಿದ್ವಾಂಸರಿಂದ ರೂಪಿತವಾದ ಅಧ್ಯಯನಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಅಲ್ಲದೆ ಈ ವಿಷಯಕ್ಕೆ ಸಂಬಂಧಿಸಿದ ಪ್ರಕಟಿತ ಹಾಗೂ ಅಪ್ರಕಟಿತ ಲೇಖನಗಳನ್ನು ಗಮನಿಸಲಾಗಿದ್ದು, ಅವುಗಳ ಸಂಕ್ಷಿಪ್ತ ವಿವರಗಳು ಇಲ್ಲವೆ.

ಎಮ್. ಆರ್. ಸೊಲ್ಲಾಪೂರ ಇವರು ೧೯೯೨ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಮಂಡಿಸಿದ ಪಿಎಚ್.ಡಿ ಮಹಾಪ್ರಬಂಧವು ಬೆಳಗಾವಿ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಕುರಿತದ್ದಾಗಿದೆ. **"ಕ್ರೆಡಿಟ್ ಮ್ಯಾನೇಜಮೆಂಟ್ ಇನ್ ಸೆಂಟ್ರಲ್ ಕೋ-ಆಪರೇಟಿವ್ ಬ್ಯಾಂಕ್ - ಎ ಕೇಸ್ ಸ್ಟಡಿ ಆಫ್ ಬಿಡಿಸಿಸಿ ಬ್ಯಾಂಕ್ ಇನ್ ಕರ್ನಾಟಕ."**

ಇವರು ಬೆಳಗಾವಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬಿಡಿಸಿಸಿ ಬ್ಯಾಂಕು ಮತ್ತು ಅದರ ಶಾಖೆಗಳ ಬಗ್ಗೆ ಅಧ್ಯಯನ ಮಾಡಿದ್ದಾರೆ. ಅಧ್ಯಯನವು ೬ ಮುಖ್ಯ ಉದ್ದೇಶಗಳನ್ನು ಹೊಂದಿದ್ದು, ಅದರಲ್ಲಿ ಬಿಡಿಸಿಸಿ ಬ್ಯಾಂಕಿನ ಪ್ರಗತಿ, ಕಾರ್ಯನಿರ್ವಹಣೆ, ಹಣಕಾಸು ಸ್ಥಿತಿ ಹಾಗೂ ಗ್ರಾಹಕರ ಅಭಿಪ್ರಾಯಗಳು ಅಧ್ಯಯನದ ಪ್ರಮುಖ ವಿಷಯವಾಗಿದೆ. ಈ ಉದ್ದೇಶ ಸಾಧನೆಗೆ ಆರು ಪ್ರಕಲ್ಪಗಳನ್ನು ನಿಯೋಜಿಸಿದ್ದಾರೆ.

ಬಿಡಿಸಿಸಿ ಬ್ಯಾಂಕಿನ ಬಗ್ಗೆ ಅಭ್ಯಸಿಸಲು ಬ್ಯಾಂಕಿನ ಅಧಿಕಾರಿಗಳು, ಆಡಳಿತ ಮಂಡಳಿ, ಸಿಬ್ಬಂದಿಯವರಿಂದ ಮಾಹಿತಿ ಪಡೆದಿದ್ದಲ್ಲದೇ ಬ್ಯಾಂಕಿನಲ್ಲಿ ಖಾತೆ ಹೊಂದಿದ ೩೫೦ ಗ್ರಾಹಕರನ್ನು ಹಾಗೂ ೩೫೦ ಸಾಲುದಾರರಿಂದ ಪ್ರಾಥಮಿಕ ಮಾಹಿತಿ ಪಡೆದುಕೊಂಡಿದ್ದಾರೆ.

ಅಧ್ಯಯನದ ಪ್ರಮುಖ ಅಂಶಗಳು :

ಬ್ಯಾಂಕಿನ ಬಂಡವಾಳ ಮಧ್ಯಮ ಕ್ರಮದಲ್ಲಿ ಹೆಚ್ಚಾಗುತ್ತಿದೆ, ಬ್ಯಾಂಕಿನಲ್ಲಿ ಕೂಡಿಟ್ಟ ನಿಧಿಯ ಬಂಡವಾಳದ ಅರ್ಧದಷ್ಟಿದೆ, ದುಡಿಯುವ ಬಂಡವಾಳವು ಪ್ರಗತಿಯ ಹಂತದಲ್ಲಿದೆ, ಅಧ್ಯಯನದ ಅವಧಿಯಲ್ಲಿ ಬ್ಯಾಂಕಿನ ಚಟುವಟಿಕೆಗಳಲ್ಲಿ ವೈವಿಧ್ಯತೆ ಕಂಡುಬಂದಿವೆ. ಸಂಗ್ರಹಿತ ಠೇವಣಿಗಳು ಶೇ. ೭೫.೨೧ರಷ್ಟಿವೆ ಎಂಬಂತಹ ಧನಾತ್ಮಕ ಅಂಶಗಳಿವೆ. ಸಂಶೋಧಕರು ಕಂಡುಕೊಂಡಂತೆ ಬ್ಯಾಂಕಿನ ಲಾಭ ಕಡಿಮೆಯಾಗಲು ಪ್ರಮುಖ ಕಾರಣ ವಾಣಿಜ್ಯ ಬ್ಯಾಂಕುಗಳು ನೀಡುತ್ತಿರುವ ಆಧುನಿಕ ಸೇವೆಗಳ ಪೈಪೋಟಿ. ಕೇಂದ್ರಬ್ಯಾಂಕಿನಿಂದ ಅಧಿಕ ಪ್ರಮಾಣದ ಸಾಲದ ಮೊತ್ತ, ಕಡಿಮೆ ಬಡ್ಡಿದರದ ಅಲ್ಪಾವಧಿ ಸಾಲಗಳು, ಕೃಷಿಯೇತರ ಕ್ಷೇತ್ರಕ್ಕೆ ನೀಡಿದ ಹೆಚ್ಚಿನ ಆದ್ಯತೆ, ವಸೂಲಾಗದೆ ಉಳಿದಿರುವ ಸಾಲದ ಪ್ರಮಾಣ, ನ್ಯಾಯಾಲಯದ ವಿಳಂಬ ವಿಲೇವಾರಿಗಳು ಅಭಿವೃದ್ಧಿಯ ಹಿನ್ನೆಡೆಗೆ ಕಾರಣಗಳು.

ಬಿಡಿಸಿಸಿ ಬ್ಯಾಂಕಿನ ಸಮಗ್ರ ನಿರ್ವಹಣೆಗೆ ಮತ್ತು ಲಾಭಕ್ಕೆ ನೀಡಿರುವ ಸಲಹೆಗಳಲ್ಲಿ ಸೂಕ್ತ ಪ್ರಮಾಣದ ಠೇವಣಿ ಸಂಗ್ರಹ, ಬ್ಯಾಂಕಿನ ಸೇವೆಗಳಲ್ಲಿ ಅಳವಡಿಸಬೇಕಾದ ಆಧುನಿಕತೆಯ ಸೂತ್ರಗಳು, ತಾಂತ್ರಿಕತೆ, ವಿಶೇಷ ಠೇವಣಿ ಯೋಜನೆ, ಅಭಿವೃದ್ಧಿ ನಿಧಿ ಸ್ಥಾಪನೆ, ಮೀಸಲು ನಿಧಿಗಳ ವರ್ಗೀಕರಣದಂತಹವುಗಳು ಮುಖ್ಯವಾಗಿವೆ. ಒಟ್ಟಾರೆ ಬೆಳಗಾವಿ ಜಿಲ್ಲೆಯ ಕೇಂದ್ರ ಸಹಕಾರಿ ಬ್ಯಾಂಕಿನ ಪರಿಪೂರ್ಣ ಚಿತ್ರದೊಂದಿದೆ ವಿಶ್ಲೇಷಣಾ ಪದ್ಧತಿಯ ಬಗ್ಗೆ ಸಂಶೋಧನೆಯು ಬೆಳಕು ಚೆಲ್ಲುತ್ತದೆ. ಆದರೆ ಇದು ಕೈಗಾರಿಕೆಗೆ ಪೂರಕವಾದ ಒಂದು ಅಂಗದ ಅಧ್ಯಯನವಾಗಿದೆ.

" ಗ್ರೋಥ್ ಆ್ಯಂಡ್ ಪ್ರಾಸ್ಪೆಕ್ಟ್ಸ್ ಆಫ್ ಸ್ಮಾಲ್ ಇಂಡಸ್ಟ್ರೀಜ್ - ಎ ಸ್ಟಡಿ ಆಫ್ ಬೆಳಗಾಂವ ಡಿಸ್ಟ್ರಿಕ್ಟ್ " ಎಂಬ ವಿಷಯದ ಮೇಲೆ ೧೯೯೪ರಲ್ಲಿ ಎಚ್. ವೈ. ಕಾಂಬಳೆ ಇವರು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಪ್ರಬಂಧವನ್ನು ಮಂಡಿಸಿದ್ದಾರೆ. ಇದರಲ್ಲಿ ಅವರು ಬೆಳಗಾವಿ ಜಿಲ್ಲೆಯ ಚಿಕ್ಕ

ಉದ್ದಿಮೆಯ ಕುರಿತು ಅಧ್ಯಯನ ಮಾಡಿದ್ದಾರೆ. ಪ್ರಮುಖವಾಗಿ ಆರು ಉದ್ದೇಶಗಳನ್ನು ಹೊಂದಿದ ಈ ಮಹಾಪ್ರಬಂಧವು ಚಿಕ್ಕ ಉದ್ದಿಮೆಯ ರಂಗವು ನೀಡಿದ ಉದ್ಯೋಗ, ಹೊಂದಿದ ಹೂಡಿಕೆ ಮತ್ತು ಅವುಗಳ ಪರಿಮಾಣದ ಪ್ರಗತಿಯ ವಿಶ್ಲೇಷಣೆಯನ್ನು ಹೊಂದಿದೆ. ಜೊತೆಗೆ, ಬೆಳಗಾವಿ ಜಿಲ್ಲೆಯ ಪ್ರಗತಿಯನ್ನು ಇತರ ಜಿಲ್ಲೆ, ರಾಜ್ಯ ಹಾಗೂ ರಾಷ್ಟ್ರದೊಂದಿಗೆ ಜಾಗತಿಕ ಮಟ್ಟದ ಹೋಲಿಕೆಯ ಅಧ್ಯಯನವನ್ನು ಸಹ ಒಳಗೊಂಡಿದೆ. ಇನ್ನೊಂದು ಘನ ಉದ್ದೇಶವೆಂದರೆ, ಈ ಚಿಕ್ಕ ಉದ್ದಿಮೆಯು ಪ್ರಾದೇಶಿಕ ಅಸಮಾನತೆಯನ್ನು ಕಡಿಮೆಗೊಳಿಸುವ ಆಶಯವಿದ್ದು, ಅದು ಯಶಸ್ವಿಯಾಗಿದೆಯೇ? ಎಂಬುದನ್ನು ಪರೀಕ್ಷಿಸುವದಾಗಿತ್ತು. ಅಲ್ಲದೇ, ಈ ರಂಗದಲ್ಲಿ ಹಿಂದುಳಿದ ಮತ್ತು ಅಭಿವೃದ್ಧಿ ಹೊಂದಿದ ಜಿಲ್ಲೆಗಳನ್ನು ಅಧ್ಯಯನ ಮಾಡಿದ್ದಾರೆ.

ಅವರ ಅಧ್ಯಯನವು ೧೨೦ ಘಟಕಗಳ ವ್ಯಾಪ್ತಿಯನ್ನು ಹೊಂದಿದ್ದು, ಅವುಗಳಲ್ಲಿ ಹಲವು ಕಾರಣಗಳಿಂದ ೨೦ ಘಟಕಗಳ ವಿವರಗಳು ಲಭ್ಯವಾಗಿರುವುದಿಲ್ಲ. ಹಲವು ಪ್ರಾಥಮಿಕ ಹಾಗೂ ಅನುಷಂಗಿಕ ಮಾಹಿತಿಗಳನ್ನು ಸಂಗ್ರಹಿಸಿ, ಸಂಖ್ಯಾಶಾಸ್ತ್ರದ ತಂತ್ರಗಳನ್ನು ಅಳವಡಿಸಿ ವಿಶ್ಲೇಷಣೆಗೊಳಿಸಿದ್ದು ವಿಶೇಷ.

ಇವರ ಅಧ್ಯಯನದಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರಗಳ ಸ್ಥಾಪನೆಗೆ ಮುಂಚೆ ಮತ್ತು ನಂತರದ ಪ್ರಗತಿಯ ಚಿತ್ರಣ ಲಭ್ಯವಾಗುತ್ತದೆ. ಅವರ ಪೂರ್ವಗ್ರಹಿತದ ಪ್ರಕಾರ ಜಿಲ್ಲಾ ಕೈಗಾರಿಕಾ ಕೇಂದ್ರಗಳ ಸ್ಥಾಪನೆ ನಂತರ ಚಿಕ್ಕ ಉದ್ದಿಮೆರಂಗದಲ್ಲಿ ಸಾಕಷ್ಟು ಪ್ರಗತಿಯಾಗಿದೆಯೆಂಬುದನ್ನು ಸಿದ್ಧಗೊಳಿಸಿದ್ದಾರೆ. ಹಲವಾರು ಫಲಿತಗಳನ್ನು ನೀಡುತ್ತಾ, ಘಟಕಗಳ ಸಂಖ್ಯೆಯಲ್ಲಿ ಉದ್ಯೋಗ ಸೃಷ್ಟಿಯಲ್ಲಿ ಮತ್ತು ಹೂಡಿಕೆಯ ಮೊತ್ತದಲ್ಲಿ ಬೆಳಗಾವಿ ಜಿಲ್ಲೆಯು ರಾಜ್ಯದ ಸರಾಸರಿಗಿಂತ ಮಿಗಿಲಾಗಿದೆಯೆಂದು, ಉಳಿದ ಜಿಲ್ಲೆಗಳಲ್ಲಿಯೇ. ಬೆಳಗಾವಿಯು ಪ್ರಗತಿಯಲ್ಲಿ ಪ್ರಥಮ ಸ್ಥಾನದಲ್ಲಿದ್ದುದು ಪ್ರಶಂಸನೀಯವೆಂದು, ಉದ್ಯೋಗ ನೀಡಿಕೆಯಲ್ಲಿ ದ್ವಿತಿಯ ಮತ್ತು ಹೂಡಿಕೆಯ ಗಾತ್ರದಲ್ಲಿ ಆರನೆಯ ಸ್ಥಾನದಲ್ಲಿತ್ತೆಂದು ದಾಖಲಿಸುತ್ತಾರೆ. ಒಟ್ಟು ೪೫ ಫಲಿತಗಳನ್ನು ಕಂಡುಕೊಂಡಿದ್ದಾರೆ.

ಈ ಫಲಿತಗಳನ್ನಾಧರಿಸಿ ಉತ್ಪಾದನೆ ಯೋಜನೆ ಹಾಗೂ ನಿಯಂತ್ರಣ ಮತ್ತು ಇನ್ನಿತರ ಚಟುವಟಿಕೆಗಳ ಕುರಿತಂತೆ ಸಲಹೆಗಳನ್ನು ನೀಡುತ್ತಾ, ಇವುಗಳನ್ನು ಕಾರ್ಯಗತಗೊಳಿಸಿದರೆ ಚಿಕ್ಕ ಉದ್ದಿಮೆ ರಂಗದ ಮೂಲಕ ಇನ್ನೂ ಗಣನೀಯ ಪ್ರಗತಿಯನ್ನು ಸಾಧಿಸಲು ಸಾಧ್ಯವಾಗುತ್ತದೆಯೆಂದು ತಮ್ಮ ಕ್ಷೇತ್ರ ಅಧ್ಯಯನದ ಮಾಹಿತಿಯು ಸಿದ್ಧಗೊಳಿಸುತ್ತದೆಯೆಂದು ಸಂಶೋಧಕರು ಪ್ರತಿಪಾದಿಸಿದ್ದಾರೆ.

ಈ ಅಧ್ಯಯನವು ಸಹ ಇಡಿ ಕೈಗಾರಿಕಾರಂಗದ ಒಂದು ಭಾಗವಾದ ಚಿಕ್ಕ ಘಟಕಗಳನ್ನು ಒಳಗೊಂಡಿದೆಯೆಂಬುದನ್ನು ಗಮನಿಸಬೇಕು.

ಜೆ. ಜಿ. ನಾಯಕ್ ಅವರು ೧೯೯೫ರಲ್ಲಿ **"ಪ್ರೊಡಕ್ಟಿವಿಟಿ ಆ್ಯಂಡ್ ಕಾಸ್ಟ ಇಫೆಕ್ಟಿವ್‌ನೆಸ್ ಇನ್ ಫೌಂಡ್ರಿ ಇಂಡಸ್ಟ್ರಿ ಇನ್ ಬೆಳಗಾಂವ ಡಿಸ್ಟ್ರಿಕ್ಟ್"** ಎಂಬ ಶೀರ್ಷಿಕೆಯಲ್ಲಿ, ಜಿಲ್ಲೆಯ ಪ್ರಮುಖ

ಉದ್ದಿಮೆಯಾದ ಫೌಂಡ್ರಿ ಉದ್ದಿಮೆಯಲ್ಲಿ ಉತ್ಪಾದಕತೆ ಮತ್ತು ವೆಚ್ಚದ ಪರಿಣಾಮ ಕುರಿತು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಮಹಾ ಪ್ರಬಂಧವನ್ನು ಮಂಡಿಸಿದ್ದಾರೆ.

ಅವರು ಬೆಳಗಾವಿ ಜಿಲ್ಲೆಯಲ್ಲಿನ ಫೌಂಡ್ರಿ ಉದ್ದಿಮೆಯ ಉತ್ಪಾದಕತೆ ಮತ್ತು ಪರಿಣಾಮಕಾರಿ ವೆಚ್ಚದ ಕುರಿತು ಸಮಗ್ರವಾಗಿ ಅಧ್ಯಯನ ಮಾಡಿರುವರು. ಮುಖ್ಯವಾಗಿ ಬೆಳಗಾವಿ ಜಿಲ್ಲೆಯ ಫೌಂಡ್ರಿ ಉದ್ದಿಮೆಯ ಉತ್ಪಾದಕ ಎರಡು ಘಟಕಗಳನ್ನು ಬಳಸಿಕೊಂಡು ಉತ್ಪಾದಕ ಸೂಚ್ಯಂಕ ಕಂಡು ಹಿಡಿಯುವುದು, ಉದ್ದಿಮೆಯ ಪ್ರಗತಿಗೆ ಹಿನ್ನಡೆ ಉಂಟು ಮಾಡುವ ವಿಷಯಗಳನ್ನು ಅರಿಯುವುದು, ಕಾರ್ಮಿಕರ ಬಳಕೆಯಲ್ಲಿನ ಉತ್ಪಾದಕತೆ ಕಂಡುಹಿಡಿಯುವುದು, ವೆಚ್ಚ ಕಡಿತ ವಿಧಾನ ಗುರುತಿಸುವುದು ಮುಂತಾದವು ಅವರ ಉದ್ದೇಶಗಳು.

ಈ ಉದ್ದೇಶ ಸಾಧನೆಗೆ, ಒಟ್ಟು ೯೨ ಘಟಕಗಳನ್ನು ಗುರುತಿಸಿ, ಅದರಲ್ಲಿ ೩೦ ಘಟಕಗಳಿಂದ ಸಂಪೂರ್ಣ ಮಾಹಿತಿ ಪಡೆದಿದ್ದಾರೆ. ೧೯೮೧ರಿಂದ ೧೯೯೦ ರವರೆಗೆ ಸಂಗ್ರಹಿತ ಮಾಹಿತಿಯನ್ನು ಕ್ರೋಢೀಕರಿಸಿ ವಿಶ್ಲೇಷಿಸಿದ್ದಾರೆ. ಅಧ್ಯಯನದ ಪ್ರಮುಖ ಫಲಿತಗಳಲ್ಲಿ ಮುಖ್ಯವಾದವುಗಳೆಂದರೆ, ಬೆಳಗಾವಿ ಜಿಲ್ಲೆಯ ಫೌಂಡ್ರಿ ಉದ್ದಿಮೆಯು ತನ್ನ ಉತ್ಪಾದನಾ ಸಾಮರ್ಥ್ಯದ ಶೇ ೬೧ ರಷ್ಟನ್ನು ಮಾತ್ರ ಬಳಸಿಕೊಳ್ಳಲು ಸಾಧ್ಯವಾಗಿದೆ. ಏಕೆಂದರೆ ಉತ್ಪಾದನಾ ಅಂಗವಾದ ಕಚ್ಚಾವಸ್ತುವಿನ ಉಪಯುಕ್ತತೆ ಕಡಿಮೆ ಮಟ್ಟದಲ್ಲಿದೆ. ಮಾರುಕಟ್ಟೆಯ ಹಿತಕರ ವಾತಾವರಣದಿಂದ ಹೆಚ್ಚಿನ ಬೆಲೆಯು ಸಿಗುವಂತೆ ಆಗಲು ಸಾಧ್ಯವಾಗಿದೆ. ಅಲ್ಲದೆ ವೆಚ್ಚ ಕಡಿತಗೊಳಿಸುವ ಯಾವ ಕ್ರಮಗಳೂ ಗೋಚರಿಸುವುದಿಲ್ಲ. ಕಾರ್ಮಿಕರ ಉತ್ಪಾದಕತೆಯು ಹೆಚ್ಚಾಗಿರುವುದಕ್ಕೆ ಮೂಲ ಕಾರಣ ಬಂಡವಾಳದಲ್ಲಿನ ಉತ್ಪಾದಕತೆ ಹಂಚಿಹೋಗಿದೆ. ಏಕೆಂದರೆ ಬಂಡವಾಳದ ಉತ್ಪಾದಕತೆ ಕೇವಲ ಶೇ. ೪೬ಕ್ಕೆ ನಿಂತಿದೆ. ವಿದ್ಯುತ್‌ಶಕ್ತಿ ಬಳಕೆಯ ಉತ್ಪಾದಕತೆ ಅತ್ಯಂತ ಕೆಳಮಟ್ಟದಲ್ಲಿದ್ದು, ಉತ್ಪಾದನಾ ವೆಚ್ಚದ ಹೆಚ್ಚಳಕ್ಕೆ ಕಾರಣವಾಗಿದೆ. ಅಧ್ಯಯನ ಕಂಡುಕೊಂಡ ಸತ್ಯಗಳಲ್ಲಿ ಅಸಮರ್ಪಕ ವಿದ್ಯುತ್ ಪೂರೈಕೆ, ವೆಚ್ಚಗಳ ವಿಶ್ಲೇಷಣೆ, ಗಡಿ-ವಿವಾದಗಳು, ಮೂಲ ಸೌಕರ್ಯಗಳ ಕೊರತೆ ಕಡಿಮೆ ಗುಣಮಟ್ಟದ ಕಲ್ಲಿದ್ದಲು ಬಳಕೆ, ಈ ಉದ್ದಿಮೆಯ ಮೇಲೆ ಪರಿಣಾಮ ಬೀರಿವೆಯೆಂದು ಸಂಶೋಧಕರು ತಿಳಿಸಿರುವರು.

ಈ ಅಧ್ಯಯನವು ಸಹ ಕೈಗಾರಿಕೆ ಕ್ಷೇತ್ರದ ಒಂದು ವಲಯವನ್ನು ವಿಶ್ಲೇಷಿಸುತ್ತದೆ.

"ಫೈನಾನ್ಸಿಯಲ್ ಎನಾಲಿಸಿಸ್ ಆಫ್ ಕೋ-ಆಪರೇಟಿವ್ ಶುಗರ್ ಫ್ಯಾಕ್ಟರೀಜ್ ಇನ್ ಬೆಳಗಾಂವ ಡಿಸ್ಟ್ರಿಕ್ಟ್ ವಿಥ್ ಸ್ಪೇಶಲ್ ರೆಫರೆನ್ಸ್ ಟು ಮಲಪ್ರಭಾ ಕೋ-ಆಪರೇಟಿವ್ ಶುಗರ್ ಫ್ಯಾಕ್ಟರಿ-ಎಂ.ಕೆ.ಹುಬ್ಬಳ್ಳಿ" ಎಂಬ ಶೀರ್ಷಿಕೆಯಲ್ಲಿ, ೧೯೯೬ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಎಸ್.ಎನ್. ಹಂಚಿನಮನಿಯವರು ಮಹಾಪ್ರಬಂಧವನ್ನು ಸಲ್ಲಿಸಿದ್ದಾರೆ.

ಅವರ ಅಧ್ಯಯನದ ಸಮಯದಲ್ಲಿ ರಾಜ್ಯದಲ್ಲಿ ಒಟ್ಟು ೨೮ ಸಕ್ಕರೆ ಘಟಕಗಳಿದ್ದವು, ಅವುಗಳಲ್ಲಿ ೧೨ ಸಹಕಾರ ಸಕ್ಕರೆ ಕಾರ್ಖಾನೆಗಳು. ಇವುಗಳಲ್ಲಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ಎಂ.ಕೆ. ಹುಬ್ಬಳ್ಳಿಯ ಮಲಪ್ರಭಾ ಸಹಕಾರಿ ಸಕ್ಕರೆ ಘಟಕದ ಆಳವಾದ ಅಧ್ಯಯನವಿದು. ಒಟ್ಟು ೬

ಉದ್ದೇಶಗಳನ್ನು ಸಂಶೋಧಕರು ದೃಷ್ಟಿಯಲ್ಲಿಟ್ಟುಕೊಂಡಿದ್ದರು. ಇವುಗಳಲ್ಲಿ ಆಯ್ದ ಸಕ್ಕರೆ ಘಟಕದ ಕುರಿತು ಹಣಕಾಸಿನ ಅನುಪಾತಗಳನ್ನು ಅನ್ವಯಿಸಿ ಹಣಕಾಸು ಚಟುವಟಿಕೆಗಳ ಮತ್ತು ಹಣಕಾಸಿನ ಕಾರ್ಯಕ್ಷಮತೆಯನ್ನು ವಿಶ್ಲೇಷಿಸುವುದು, ಹಣಕಾಸಿನ ತಖ್ತೆಗಳಲ್ಲಿ ನೀಡಿದ ಹಲವಾರು ಅಂಶಗಳ ಮಧ್ಯದ ಸಂಬಂಧ ಅಭ್ಯಸಿಸುವ, ಬಂಡವಾಳ ಹೂಡಿಕೆಯ ಮೇಲಿನ ಗಳಿಕೆ, ಘಟಕದ ಲಾಭ ಮತ್ತು ಆರ್ಥಿಕ ಕಾರ್ಯಯೋಗ್ಯತೆಯನ್ನು ಕಂಡುಕೊಳ್ಳುವಂತಹ ಉದ್ದೇಶಗಳು ಮುಖ್ಯವಾಗಿದ್ದವು.

ಈ ಅಧ್ಯಯನವು ಒಂದೇ ಘಟಕದ ಆಳವಾದ ಅಧ್ಯಯನವಾಗಿದ್ದು, ಮುಖ್ಯವಾಗಿ ಹಣಕಾಸು ದಕ್ಷತೆ ಅಳೆಯುವ ೧೭ ಅನುಪಾತಗಳನ್ನು ಅನ್ವಯಿಸಲಾಗಿದೆ.

ಅಧ್ಯಯನದಿಂದ ಒಟ್ಟು ೬೨ ಫಲಿತಗಳನ್ನು ಕಂಡುಕೊಂಡಿದ್ದಾರೆ. ಅವುಗಳಲ್ಲಿ ಮುಖ್ಯವಾಗಿ ಜಿಲ್ಲೆಯು ಸಕ್ಕರೆ ಉದ್ದಿಮೆಗೆ ಪ್ರಶಸ್ತವಾಗಿದೆಯೆಂಬುದು ಜೊತೆಗೆ ಭಾರತದಲ್ಲಿಯ ಯೋಜನಾ ಅವಧಿಯಲ್ಲಿ ಗಣನೀಯ ಪ್ರಮಾಣದಲ್ಲಿ ಸಕ್ಕರೆ ಘಟಕಗಳು ಸ್ಥಾಪನೆಗೊಂಡಿದ್ದು, ಮಹಾರಾಷ್ಟ್ರ ರಾಜ್ಯವು ಸಹಕಾರ ಸಕ್ಕರೆ ಉದ್ದಿಮೆಯಲ್ಲಿ ಮುಂಚೂಣಿಯಲ್ಲಿದ್ದು, ಕರ್ನಾಟಕ ನಾಲ್ಕನೆಯ ಸ್ಥಾನ ಹೊಂದಿದೆ. ಈ ಕಾರ್ಖಾನೆಯಿಂದ ಆ ಪ್ರದೇಶದ ರೈತರಿಗೆ ಹೆಚ್ಚು ಅನುಕೂಲವಾಗಿದೆ. ಘಟಕದ ಕಾರ್ಯನಿರ್ವಹಣೆ ರೈತರಿಗೆ ತೃಪ್ತಿ ತಂದಿದೆ. ಆದರೆ, ಹಣಕಾಸಿನ ನಿರ್ವಹಣೆಯು ಅಷ್ಟೇನೂ ಆಶಾದಾಯಕವಾಗಿಲ್ಲವೆಂದು ತೋರಿಸಿದ್ದಾರೆ. ಅವರು ಸಹಕಾರಿ ಸಕ್ಕರೆ ಕಾರ್ಖಾನೆಗಳ ಬೆಳವಣಿಗೆಗೆ ಪೂರಕವಾಗಿರುವ ೧೪ ಸಲಹೆಗಳನ್ನು ಸೂಚಿಸಿದ್ದು, ಅವು ಇಂತಿವೆ-

೧) ವೆಚ್ಚ ಕಡಿತಗೊಳಿಸುವುದು ೨) ಸ್ವಯಂ ಹಣಕಾಸು ಸಬಲೀಕರಿಸುವುದು ೩) ವೈಜ್ಞಾನಿಕ ನಿರ್ವಹಣೆ ೪) ಶಾಸನೀಯ ಲೆಕ್ಕ ಪರಿಶೋಧನೆ ೫) ತಾಂತ್ರಿಕ ಪರಿಣಿತರ ಸೇವೆಯ ಬಳಕೆ ೬) ಸಕ್ಕರೆ ಮಾರಾಟಕ್ಕೆ ನಿಗಮ ಸ್ಥಾಪಿಸುವುದು ೭) ಸರ್ಕಾರ ವಸೂಲಿ ಮಾಡುವ ತೆರಿಗೆ ಹಣವನ್ನು ರಿಯಾಯಿತಿ ದರದಲ್ಲಿ ಸಾಲ ನೀಡುವುದು ೮) ಚಾರ್ಟರ್ಡ್ ಅಕೌಂಟಂಟ್ ಸಂಸ್ಥೆಯ ವಿಧಿಗಳ ಪ್ರಕಾರ ಲೆಕ್ಕವಿಡುವುದು ೯) ಸಕ್ಕರೆ ನೀತಿಯನ್ನು ರೂಪಿಸುವುದು ೧೦) ವೆಚ್ಚ ನಿರ್ಣಾಯಕ ಪರಿಣಿತರ ಸೇವೆ ಪಡೆಯುವುದು ೧೧) ವಿಶೇಷ ಅಧ್ಯಯನದ ಸಲಹಾ ಯೋಜನೆಗಳನ್ನು ಪ್ರಾಯೋಜಿಸುವುದು ೧೨) ಹಣಕಾಸಿನ ನಿರ್ವಹಣೆಯಲ್ಲಿ ವಿಶೇಷ ಪರಿಣಿತರ ಸೇವೆ ಪಡೆಯುವುದು ೧೩) ಕಬ್ಬು ನುರಿಸುವ ಅವಧಿ ವಿಸ್ತರಿಸುವುದು ೧೪) ಕಡಿಮೆ ಬಡ್ಡಿದರದಲ್ಲಿ ರೈತರಿಗೆ ಸಾಲ ನೀಡುವುದು. ಇಂತಹ ಹಲವಾರು ಸಲಹೆಗಳನ್ನು ನೀಡಿದ್ದಾರೆ. ಇವುಗಳಿಂದ ಸಹಕಾರ ಸಕ್ಕರೆ ಘಟಕಗಳು ಅಭಿವೃದ್ಧಿ ಹೊಂದುವದರಲ್ಲಿ ಸಂಶಯವಿಲ್ಲ.

ಎಸ್.ಕೆ.ನಾಶಿಯವರು **"ಫೈನಾನ್ಸಿಯಲ್ ಮ್ಯಾನೇಜಮೆಂಟ್ ಆಫ್ ಡಿ.ಸಿ.ಸಿ. ಬ್ಯಾಂಕ್-ಎ ಕೇಸ್ ಸ್ಟಡಿ ಆಫ್ ಬಿ.ಡಿ.ಸಿ.ಸಿ ಬ್ಯಾಂಕ್ ಬೆಳಗಾವಿ"** ಎಂಬ ಮಹಾಪ್ರಬಂಧವನ್ನು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ೨೦೦೧ರಲ್ಲಿ ಸಮರ್ಪಿಸಿದ್ದಾರೆ. ಒಟ್ಟು ೬ ಪೂರ್ವ ಗ್ರಹಿತ ಅಂಶಗಳನ್ನು ಗಮನ-ದಲ್ಲಿಟ್ಟುಕೊಂಡು ಅಧ್ಯಯನ ನಡೆಸಿದ್ದಾರೆ. ಅವು ಇಂತಿವೆ : ೧) ಸರಕಾರ, ಕೇಂದ್ರ ಬ್ಯಾಂಕು ಮತ್ತು ನಬಾರ್ಡ್‌ಗಳಿಂದ ಹಣಕಾಸು ಸೌಲಭ್ಯ ಹೆಚ್ಚಾಗಿದ್ದರಿಂದ ಕೇಂದ್ರ ಸಹಕಾರ ಬ್ಯಾಂಕುಗಳ ಚಟುವಟಿಕೆಗಳು ವೈವಿಧ್ಯಗೊಂಡಿವೆ. ೨) ಲಾಭಗಳಿಸುವಿಕೆ ಹೆಚ್ಚಾಗಿದೆ ೩) ದುಡಿಯುವ ಬಂಡವಾಳ

ಹೆಚ್ಚಿದ್ದರಿಂದ ಠೇವಣಿಯು ಸಹ ಹೆಚ್ಚಾಗಿದೆ ೪) ಕೃಷಿಗೆ ಮಹತ್ವ ನೀಡಿದ್ದರಿಂದ ಇತರ ಚಟುವಟಿಕೆಗಳು ಉತ್ತೇಜನಗೊಂಡಿವೆ ೫) ಬ್ಯಾಂಕು ಪ್ರಗತಿಯಂತೆ ಬ್ಯಾಂಕಿನ ವಸೂಲಿ, ದುಡಿಯುವ ಆಸ್ತಿಗಳು ಇಳಿಕೆಯಾಗುತ್ತಿವೆ. ೬) ವರ್ಷದುದ್ದಕ್ಕೂ ಅಲ್ಪಾವಧಿ ಮತು ದೀರ್ಘಾವಧಿ ಹಣಕಾಸಿನ ಸ್ಥಿತಿಗತಿ ಉತ್ತಮಗೊಂಡಿದೆ.

ಈ ಅಧ್ಯಯನಕ್ಕೆ ಇವರೂ ಸಹ ಪ್ರಾಥಮಿಕ ಮತ್ತು ಅನುಷಂಗಿಕ ಮಾಹಿತಿ ಸಂಗ್ರಹದ ಪದ್ಧತಿ ಅಳವಡಿಸಿಕೊಂಡಿದ್ದಾರೆ. ಅದಕ್ಕಾಗಿಯೇ ಸಿದ್ಧಪಡಿಸಿದ ಪ್ರಶ್ನಾವಳಿ, ಸಂದರ್ಶನ ಮತ್ತು ವೀಕ್ಷಿಸುವಂತಹ ಕ್ರಮಗಳನ್ನು ಬಳಸಿಕೊಂಡಿದ್ದಾರೆ. ಒಟ್ಟು ೫೦೦ ಗ್ರಾಹಕರನ್ನು ಸಂದರ್ಶನಕ್ಕೆ ಒಳಪಡಿಸಿದ್ದಾರೆ.

ಮೇಲೆ ನೀಡಿದ ೬ ಪೂರ್ವಕಲ್ಪನೆಗಳಲ್ಲಿ, ಮೊದಲಿನ ಎರಡು ಮಾತ್ರ ಸಿದ್ಧಗೊಂಡಿದ್ದಾಗಿ ಮತ್ತು ಇನ್ನುಳಿದ ೪ ಸಾಕಾರವಾಗಿಲ್ಲವೆಂದು ಸಮಾರೋಪದಲ್ಲಿ ಹೇಳಿದ್ದಾರೆ. ೨೨ಕ್ಕೂ ಮಿಕ್ಕಿ ಪ್ರಮುಖವಾದ ಫಲಿತಗಳನ್ನು ನೀಡಿ, ಅತ್ಯಂತ ಜರೂರಾಗಿ ಜಾರಿಗೊಳಿಸಬೇಕಾದ ೭ ಸಲಹೆಗಳನ್ನು ಸೂಚಿಸಿದ್ದಾರೆ. ೧) ಸಾಧ್ಯತಾ ಪ್ರಮಾಣದ ಠೇವಣಿ ಸಂಗ್ರಹಿಸುವದು ೨) ಅದಕ್ಕಾಗಿ ಶಾಖೆಗಳ ವಿಸ್ತರಣೆ ಮತ್ತು ಪ್ರಚಾರ ಕೈಕೊಳ್ಳುವದು ೩) ವಿಶೇಷ ಠೇವಣಿ ಯೋಜನೆಗಳನ್ನು ರೂಪಿಸುವದು ೪) ವಿಶೇಷ ಪ್ರಚಾರಾಂದೋಲನ ಏರ್ಪಡಿಸುವದು ೫) ಅಭಿವೃದ್ಧಿ ನಿಧಿಯನ್ನು ಸೃಷ್ಟಿಸುವದು ೬) ನಿರ್ದಿಷ್ಟ ಸಂಭಾವ್ಯ ಹೊಣೆಗಾರಿಕೆಗಳಿಗೆ ಸೃಷ್ಟಿಸಿದ ಗಳಿಕೆಯ-ಉಳಿಕೆ ನಿಧಿಗಳನ್ನು ಪ್ರತ್ಯೇಕಿಸುವದು ೭) ಮಧ್ಯಮಾವಧಿ ಉದ್ದೇಶಗಳಿಗೆ ಮಾತ್ರ ಬ್ಯಾಂಕು ಸಾಲಗಳನ್ನು ಪಡೆಯಬೇಕು ಮತ್ತು ತುರ್ತುಸ್ಥಿತಿಗಳಲ್ಲಿ ಮಾತ್ರ ಅಪೆಕ್ಸ್ ಬ್ಯಾಂಕಿನ ಮೀರೆಳೆತದ(ಓವ್ಹರ್ ಡ್ರಾಫ್ಟ್) ಮಿತಿಯನ್ನು ಬಳಸಿಕೊಳ್ಳಬೇಕು.

ನಾಶಿಯವರು ನೀಡಿದ ಸಲಹೆಗಳು ಸಹಕಾರ ಬ್ಯಾಂಕುಗಳ ಬೆಳವಣಿಗೆಗೆ ಅಗತ್ಯವಾಗಿವೆ.

ಎಸ್.ಬಿ. ಆಕಾಶ್ ಅವರು ೨೦೦೨ರಲ್ಲಿ **" ಆಂಥ್ರ್‌ಪ್ರ್‌ನರ್‌ಶಿಫ್ ಇನ್ ಎಸ್‌ಎಸ್‌ಐ ಯೂನಿಟ್ಸ್ ಆಫ್ ಬೆಳಗಾಂವ ಡಿಸ್ಟ್ರಿಕ್ಟ"** ಎಂಬ ಮಹಾಪ್ರಬಂಧವನ್ನು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಮಂಡಿಸಿರುತ್ತಾರೆ. ಮುಖ್ಯವಾಗಿ ಚಿಕ್ಕ ಗಾತ್ರದ ಉದ್ದಿಮೆ ಘಟಕಗಳ ಕ್ಷೇತ್ರದ ಉದ್ಯಮ ಶೀಲತೆಯ ಕುರಿತು ಹಲವಾರು ವಿಷಯಗಳನ್ನು ಪ್ರಚುರಪಡಿಸುತ್ತದೆ. ಆಕಾಶ ಅವರು ಈ ಅಧ್ಯಯನ ಕೈಕೊಳ್ಳಲು ಹಲವಾರು ಕಾರಣಗಳನ್ನು ಸಂಕ್ಷಿಪ್ತವಾಗಿ ನೀಡುತ್ತಾರೆ. ಉದ್ಯಮಶೀಲತೆ ಅಭಿವೃದ್ಧಿಗಾಗಿ ಕಳಕಳಿಯ ಕೊರತೆ, ಮೂಲ ಸೌಕರ್ಯಗಳ ಅಲಭ್ಯತೆ, ಖಾತ್ರಿ ಮಾರುಕಟ್ಟೆ, ನಷ್ಟಭೀತಿ, ಹಣಕಾಸು ಸಂಸ್ಥೆಗಳಿಂದ ನೆರವಿನ ಕೊರತೆ, ಸರ್ಕಾರದಿಂದ ತರಬೇತಿ-ಪ್ರೋತ್ಸಾಹ ಮತ್ತು ಪ್ರೇರಣೆ ಇಲ್ಲದಿರುವದು.

ಅಧ್ಯಯನದಲ್ಲಿ ಉದ್ಯಮಶೀಲರ ಹಿನ್ನೆಲೆ, ವ್ಯವಹಾರ ಸ್ಥಾಪನೆಗೆ ಕಾರಣಗಳು, ಘಟಕಗಳ ಸ್ಥಾಪನೆಯಲ್ಲಿ ಉದ್ಯಮಶೀಲತೆಯ ಪಾತ್ರ ಮತ್ತು ಬೆಳವಣಿಗೆ, ಅವರು ಎದುರಿಸುವ ಸಮಸ್ಯೆಗಳನ್ನು ಆಳವಾಗಿ ಅಭ್ಯಸಿಸಿ, ಸಲಹೆಗಳನ್ನು ನೀಡಿರುವರು.

ಪ್ರಬಂಧವು ೪ ಪೂರ್ವನಿರ್ಧಾರಿತ ಊಹೆಗಳೊಂದಿಗೆ ಪ್ರಾರಂಭವಾಗುತ್ತದೆ. ಒಟ್ಟು ೨೩೦೦ ನೋಂದಾಯಿತ ಘಟಕಗಳಿದ್ದು, ಅದರಲ್ಲಿ ೩೫೦ ಚಿಕ್ಕ-ಅತೀ ಚಿಕ್ಕ ಘಟಕಗಳಿವೆ. ಅವುಗಳಲ್ಲಿ ಶೇ. ೪೦ ರಷ್ಟನ್ನು ಆಳವಾದ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿದ್ದಾರೆ.

ಒಟ್ಟು ೧೧೮ ಫಲಿತಗಳಿದ್ದು, ೨೮ ಸಲಹೆಗಳಿವೆ. ೧) ಸರಕಾರವು ಬಡ ಕುಟುಂಬಳಿಗೆ ಆರ್ಥಿಕ ಸಹಾಯ ನೀಡುವುದರ ಮೂಲಕ ಉದ್ದಿಮೆದಾರರಿಗೆ ಪ್ರೋತ್ಸಾಹಿಸುವುದು, ಯುವ ಉದ್ದಿಮೆದಾರರ ಸಾಮರ್ಥ್ಯವನ್ನು ಗುರುತಿಸುವುದು, ಉದ್ದಿಮೆ ರಂಗದಲ್ಲಿನ ಭವಿತವ್ಯದ ಅವಕಾಶಗಳ ಬಗ್ಗೆ ಸಂಪೂರ್ಣ ಮಾಹಿತಿ ನೀಡುವುದು, ಸಮಗ್ರ ಗುಣಮಟ್ಟ ನಿರ್ವಹಣೆಯಂತಹ ವೈಜ್ಞಾನಿಕ ಪದ್ಧತಿಗಳ ಬಗ್ಗೆ ತರಬೇತಿ ನೀಡುವುದು ಪ್ರಮುಖ ಅಂಶಗಳಾಗಿವೆ. ಅದರೊಂದಿಗೆ ಹಣಕಾಸು ಸಂಸ್ಥೆಗಳು ಜಿಲ್ಲೆಯಲ್ಲಿಯ ಉದ್ದಿಮೆಗಳ ಸ್ಥಾಪನೆಯ ಸಾಧ್ಯತೆಗಳನ್ನು ಹುಡುಕಿ, ಕಾರ್ಯ ರೂಪದಲ್ಲಿ ಬರುವಂತಹ ಆಚರಣೆಗಳನ್ನು ರೂಢಿಸಿಕೊಳ್ಳಬೇಕೆಂದು ಅಭಿಪ್ರಾಯಪಡುತ್ತಾರೆ.

ಬಿ. ಬಿ. ಕಾಲತಿಪ್ಪಿಯವರು ೨೦೦೨ರಲ್ಲಿ **"ಆ್ಯನ್ ಅನ್ಯಾಲಿಸಿಸ್ ಆಫ್ ಕಾಸ್ಟ ಆ್ಯಂಡ ಇವ್ಯಾಲುವೇಶನ್ ಆಫ್ ಕಾಸ್ಟ ಮ್ಯಾನೇಜಮೆಂಟ ಪ್ರ್ಯಾಕ್ಟಿಸಿಸ್ ಆಫ್ ಸಿಲೆಕ್ಟೆಡ್ ಫೈವ ಕೋ-ಆಪರೇಟಿವ್ ಶುಗರ ಮಿಲ್ಸ್"** ಮಹಾಪ್ರಬಂಧವನ್ನು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುತ್ತಾರೆ. ಇದು ಪ್ರಮುಖವಾಗಿ ಬೆಳಗಾವಿ ಜಿಲ್ಲೆಯ ಸಹಕಾರಿ ಸಕ್ಕರೆ ಕಾರ್ಖಾನೆಗಳಲ್ಲಿನ ವೆಚ್ಚದ ನಿರ್ವಹಣೆ ಬಗ್ಗೆ ಬೆಳಕು ಚೆಲ್ಲುತ್ತದೆ. ವೆಚ್ಚ ವಿಶ್ಲೇಷಣೆಯು ವಿವಿಧ ಉತ್ಪನ್ನಗಳಿಗೆ ಸಂಬಂಧಿಸಿದ ಸಾಮಾನ್ಯ ವೆಚ್ಚಗಳನ್ನು ವಿಭಜಿಸುವ ವೈಜ್ಞಾನಿಕ ಕ್ರಮಗಳ ಬಗ್ಗೆ ಚರ್ಚಿಸುತ್ತದೆ.

ತಮ್ಮ ಅಧ್ಯಯನಕ್ಕೆ ಜಿಲ್ಲೆಯ ಐದು ಪ್ರಮುಖ ಸಹಕಾರಿ ಕ್ಷೇತ್ರದ ಸಕ್ಕರೆ ಕಾರ್ಖಾನೆಗಳನ್ನು ಆಯ್ಕೆ ಮಾಡಿಕೊಂಡು ವೆಚ್ಚಯೋಜನೆ, ವೆಚ್ಚ ನಿಯಂತ್ರಣದ ಪ್ರಸ್ತುತ ಆಚರಣೆಗಳನ್ನು ಆಳವಾಗಿ ಅಭ್ಯಸಿಸಿದ್ದಾರೆ. ಸಹಕಾರಿ ಕ್ಷೇತ್ರದಲ್ಲಿ ವೆಚ್ಚದ ಬಗ್ಗೆ ಕಾಳಜಿ ಇರುವುದರಿಂದ ಪ್ರಸಕ್ತ ಅಧ್ಯಯನಕ್ಕೆ ಹೆಚ್ಚಿನ ಮಹತ್ವ ಬಂದಿದೆ. ಭಾರತದಲ್ಲಿ ಸಕ್ಕರೆ ಉದ್ದಿಮೆಯ ಬೆಳವಣಿಗೆ, ಬೆಳಗಾವಿ ಜಿಲ್ಲೆಯ ಸಹಕಾರಿ ಸಕ್ಕರೆ ಕಾರ್ಖಾನೆಗಳ ಬೆಳವಣಿಗೆ ಹಾಗೂ ಅವುಗಳ ಸಂಯುಕ್ತ ವೆಚ್ಚ ಪ್ರಮಾಣದ ವಿಶ್ಲೇಷಣೆ, ವೆಚ್ಚ ನಿರ್ವಹಣೆಯ ಆಚರಣೆಗಳು ಹಾಗೂ ವೆಚ್ಚದ ಪ್ರಮುಖ ಅಂಶಗಳಾದ ಕಚ್ಚಾ ವಸ್ತು, ಕೂಲಿ ಹಾಗೂ ಇತರ ವೆಚ್ಚಗಳ ಬಗ್ಗೆ ಆಯ್ಕೆ ಮಾಡಿದ ಸಕ್ಕರೆ ಉದ್ಯಮದಲ್ಲಿ ಪರಿಶೀಲಿಸಲಾಗಿದೆ.

ಒಟ್ಟಾರೆ ಸಕ್ಕರೆ ಉದ್ದಿಮೆ ಅನುಸರಿಸಬೇಕಾದ ಆಧುನಿಕ ವೆಚ್ಚನಿರ್ವಹಣೆ ಪದ್ಧತಿಗಳಾದ ಎಬಿಸಿ, ಟಿಕ್ಯುಎಮ್, ಬಿಪಿಆರ್, ಜಿಐಮ್, ಹಾಗೂ ಟಿಸಿಗಳನ್ನು ಸಲಹೆಗಳಲ್ಲಿ ನೀಡಿದ್ದಾರೆ. ಅಸಾಂಪ್ರದಾಯಿಕ ಮತ್ತು ಪುರಾತನ ವೆಚ್ಚ ಪದ್ಧತಿಗಳ ಆಚರಣೆ ನಿಲ್ಲಿಸಿ, ವೆಚ್ಚ ಸಿದ್ಧಾಂತದ ಸೈದ್ಧಾಂತಿಕ ನಿಲುಗಳನ್ನು, ನೀತಿ ನಿಯಮಗಳನ್ನು ರೂಢಿಸಿಕೊಂಡರೆ ಲಾಭದಾಯಕವಾಗಿ ಪರಿವರ್ತಿನೆಗೊಂಡು ಉತ್ತಮ ಫಲ ನೀಡಬಲ್ಲವು ಎಂದು ಅಭಿಪ್ರಾಯಿಸಿದ್ದಾರೆ.

"ಬ್ಯಾಂಕ್ ಫೈನಾನ್ಸ ಟು ಶುಗರಕೇನ ಗ್ರೋವರ್ಸ್ ಇನ್ ಬೆಳಗಾವಿ ಡಿಸ್ಟ್ರಿಕ್ಟ್" ಎಂಬ ಮಹಾಪ್ರಬಂಧವನ್ನು ಆರ್. ಬಿ. ಹುರಕಡ್ಲಿಯವರು ೨೦೦೨ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಮಂಡಿಸಿದ್ದು, ಇದು ಪ್ರಮುಖವಾಗಿ ಬೆಳಗಾವಿ ಜಿಲ್ಲೆಯಲ್ಲಿನ ಕಬ್ಬು ಉತ್ಪಾದಕರಿಗೆ ಬ್ಯಾಂಕಿನವರು ನೀಡಿದ ಹಣಕಾಸಿನ ವ್ಯವಸ್ಥೆಯನ್ನು ಸೂಕ್ಷ್ಮವಾಗಿ ಪರಿಶೀಲಿಸುತ್ತದೆ. ಸೀಮಿತ ಬ್ಯಾಂಕಿಂಗದಿಂದ ಜನೋಪಯೋಗಿ ಬ್ಯಾಂಕಿಂಗ ವ್ಯವಸ್ಥೆಯಾಗಿ ಪರಿವರ್ತಿತ ಭಾರತದ ಬ್ಯಾಂಕೋದ್ದಿಮೆಯಿಂದ ಕೃಷಿ

ಸಾಲ, ಅದರಲ್ಲಿಯೂ ಕಬ್ಬು ಉತ್ಪಾದಕರಿಗೆ ಸಮರ್ಪಕವಾಗಿ ತಲುಪಿಲ್ಲ ಎಂಬುದರ ಸ್ಥೂಲ ವಿಶ್ಲೇಷಣೆ ಮಾಡುತ್ತದೆ.

ಪ್ರಬಂಧದಲ್ಲಿ ಮುಖ್ಯವಾಗಿ ವಿವಿಧ ಪ್ರಕಾರದ ಕೃಷಿಕರಿಗೆ ಬ್ಯಾಂಕುಗಳು ನೀಡಿದ ಸಾಲದ ಪ್ರಮಾಣ, ಕಬ್ಬು ಉತ್ಪಾದನೆಗೆ ಬೇಕಾದ ಹಣಕಾಸಿನ ಅವಶ್ಯಕತೆಯನ್ನು ಲೆಕ್ಕಹಾಕುವುದು, ಹಣಕಾಸು ಪಡೆಯುವಲ್ಲಿನ ಸಮಸ್ಯೆಗಳು, ಸಾಲ ಮರುಪಾವತಿಯಲ್ಲಿನ ಪ್ರಗತಿ, ಹಾಗೂ ಅವುಗಳ ಮೇಲೆ ಪ್ರಭಾವ ಬೀರುವ ಅಂಶಗಳು, ನಷ್ಟಭಯದ ವಿಶ್ಲೇಷಣೆ, ಮತ್ತು ಕಬ್ಬು ಬೆಳೆಗಾರರ ಆದಾಯ, ಉದ್ಯೋಗ, ಹಾಗೂ ಆಸ್ತಿಹೆಚ್ಚಳಿಕೆಯಲ್ಲಿ ಹಣಕಾಸಿನ ಪ್ರಭಾವವನ್ನು ಕೂಲಂಕಷವಾಗಿ ವಿಶ್ಲೇಷಿಸುವುದಾಗಿದೆ. ಅಧ್ಯಯನಕ್ಕೆ ಪೂರಕವಾಗಿ ಕೆಲವು ಪ್ರಕಲ್ಪನೆಗಳನ್ನು ರೂಪಿಸಲಾಗಿದೆ. ಅಧ್ಯಯನದ ವ್ಯಾಪ್ತಿಯಲ್ಲಿ ಐನಾಪೂರ ಗ್ರಾಮದ ವಾಣಿಜ್ಯ ಬ್ಯಾಂಕು, ಖಾನಾಪೂರ ತಾಲೂಕಿನ ಗಂದಿಗವಾಡದ ಮಲಪ್ರಭಾ ಗ್ರಾಮೀಣ ಬ್ಯಾಂಕು, ಮತ್ತು ಎಕ್ಸಂಬಾದ ಸಹಕಾರಿ ಬ್ಯಾಂಕುಗಳನ್ನು ಸೇರಿಸಲಾಗಿದೆ.

ಅಧ್ಯಯನವು ಬೆಳಗಾವಿ ಜಿಲ್ಲೆಯಾದ್ಯಂತ ಕಬ್ಬು ಬೆಳೆಗಾರಿಕೆಯಲ್ಲಿ ಉತ್ಪಾದಕತೆ ಪ್ರಮಾಣ ಹೆಚ್ಚಾಗಿರುವುದನ್ನು ಕಂಡುಕೊಂಡಿದೆ. ಬ್ಯಾಂಕಿನಿಂದ ವಿತರಿಸಲ್ಪಟ್ಟ ಸಾಲವು ಅಸಮರ್ಪಕವಾಗಿದೆ ಹಾಗೂ ಅಸಮತೆಯಿಂದ ಕೂಡಿದೆಯೆಂದು ಅಭಿಪ್ರಾಯಿಸಲಾಗಿದೆ. ಅಂತರ್- ಪ್ರಾದೇಶಕತೆಯಲ್ಲಿ ಹಾಗೂ ಕ್ಷೇತ್ರದಲ್ಲಿಯೂ ಕೂಡ ಅಸಮತೆಯು ಕಂಡುಬಂದಿದೆ. ಇದರಿಂದ ಕಬ್ಬು ಬೆಳೆಗಾರರ ಪ್ರಗತಿಯಲ್ಲಿ ಕುಂಠಿತಗೊಳ್ಳುತ್ತದೆ. ಐನಾಪೂರದ ಬ್ಯಾಂಕು ಹೆಚ್ಚು ಸಾಲ ನೀಡಿದೆ. ಮಲಪ್ರಭಾ ಗ್ರಾಮೀಣ ಬ್ಯಾಂಕು ಶೇ ೧೦೦ರಷ್ಟು ಕೃಷಿ ಸಾಲ ನೀಡಿದೆ. ಕೃಷಿಯಲ್ಲಿ ಸಾಲವನ್ನು ಅನುತ್ಪಾದಕ ಚಟುವಟಿಕೆಗಳಿಗೆ ಹೆಚ್ಚು ಬಳಸಿದ್ದು ಕಂಡುಬಂದಿದೆ. ಅದರೊಂದಿಗೆ ಐನಾಪೂರದಲ್ಲಿ ಸಾಲ ಮರುಪಾವತಿಯೂ ಅತ್ಯುತ್ತಮ ಪ್ರಮಾಣದಲ್ಲಿದೆ.

ಕೃಷಿ ಪ್ರಮಾಣ ಅಧಿಕಗೊಂಡಿರುವ ಬೆಳಗಾವಿ ಜಿಲ್ಲೆಯಲ್ಲಿ ಸಾಲವಿತರಣೆ ಕೂಡ ಸಮರ್ಪಕವಾಗಬೇಕಾಗಿದೆ. ಉತ್ಪಾದಕ ಚಟುವಟಿಕೆಗಳಲ್ಲಿ ಹಣಕಾಸನ್ನು ತೊಡಗಿಸುವ ಕ್ರಮವನ್ನು ಪ್ರೋತ್ಸಾಹಿಸಬೇಕು. ಇದು ಉತ್ಪಾದಕತೆಯ ಮೇಲೆ ನೇರ ಪ್ರಭಾವ ಬೀರುತ್ತದೆಯೆಂದು ಸಂಶೋಧಕರು ಹೇಳಿರುವರು.

"ಟ್ರೇನಿಂಗ್ ಆಂಡ ಅಂಥ್ರಪ್ರೆನರ್‌ಶಿಪ್ ಡೆವ್ಲಪ್‌ಮೆಂಟ್ ಇನ್ ಸೆರಿಕಲ್ಚರ್ ಇಂಡಸ್ಟ್ರಿ- ಎ ಕೇಸ್ ಸ್ಟಡಿ ಆಫ್ ಬೆಳಗಾಂವ ಡಿವ್ಹಿಜನ್" ಎಂಬ ಮಹಾಪ್ರಬಂಧವನ್ನು ಬಿ. ಕೃಷ್ಣಮೂರ್ತಿಯವರು ೨೦೦೬ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಮಂಡಿಸಿದ್ದಾರೆ.

ಸಂಶೋಧಕರು ಮುಖ್ಯವಾಗಿ ರೇಷ್ಮೆ ಉದ್ದಿಮೆಯ ಚಟುವಟಿಕೆಗಳು, ಬೆಳಗಾವಿ ವಿಭಾಗದ ರೇಷ್ಮೆ ಉದ್ದಿಮೆಯ ಚಟಿವಟಿಕೆಗಳ, ಸಾಮಾಜಿಕ-ಆರ್ಥಿಕ ಸ್ಥಿತಿಗತಿ, ರೇಷ್ಮೆ ಉತ್ಪಾದನೆಯಲ್ಲಿ ತೊಡಗಿದ ರೈತರ ಮತ್ತು ಈ ಅಧ್ಯಯನ ಕ್ಷೇತ್ರದಲ್ಲಿ ರೇಷ್ಮೆ ಉತ್ಪಾದನೆಯಲ್ಲಿ ತೊಡಗಿದ ರೈತರಲ್ಲಿರುವ ಉದ್ಯಮಶೀಲತಾ ಗುಣಗಳನ್ನು ವಿಶ್ಲೇಷಿಸುವ ಮತ್ತು ರೇಶ್ಮೆ ಉದ್ದಿಮೆಯಲ್ಲಿ ತೊಡಗಲು ಪ್ರೇರಣಾ ಅಂಶಗಳನ್ನು ಅಭ್ಯಸಿಸುತ್ತಾ, ಅವರು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಗಣಿಸಿ, ಸೂಕ್ತವಾದ ಸಲಹೆಗಳನ್ನು ನೀಡಬೇಕೆಂಬ ಉದ್ದೇಶದಿಂದ ಅಧ್ಯಯನ ಕೈಗೊಂಡಿದ್ದಾರೆ.

ಕೆಲವು ಮೂಲ ಸೌಕರ್ಯಗಳನ್ನು ನೀಡಿ, ವಿಶೇಷ ಕಾರ್ಯಗಳನ್ನು ರೂಪಿಸಿದರೂ ಸಹ, ರೇಷ್ಮೆ ಉದ್ದಿಮೆಯು ಬಯಸಿದ ಮಟ್ಟದಲ್ಲಿ ತೀವ್ರಗತಿಯ ಬೆಳವಣಿಗೆಯಾಗುತ್ತಿಲ್ಲವೆಂಬ ಅಂಶವನ್ನು ಕಂಡುಕೊಂಡು ರೇಷ್ಮೆ ಉದ್ದಿಮೆಯಲ್ಲಿನ ರೈತರಿಗೆ ತರಬೇತಿ ಮತ್ತು ಉದ್ಯಮಶೀಲತಾ ಗುಣಗಳನ್ನು ಅಭಿವೃದ್ಧಿಗೊಳಿಸುವದು ಜರೂರಾಗಿದೆಯೆಂದು ಈ ಅಧ್ಯಯನದ ಮೂಲಕ ಹೇಳಿದ್ದಾರೆ. ರೇಷ್ಮೆ ಉದ್ದಿಮೆಯ ಎಲ್ಲ ಹಂತದ ಚಟವಟಿಕೆಗಳನ್ನು ಕಾರ್ಯಗತಗೊಳಿಸುವಲ್ಲಿ ಸದ್ಯ ಇರುವ ಆಚರಣೆ ಮತ್ತು ಸ್ಥಿತಿಗತಿಯ ಸಂಪೂರ್ಣ ಅಧ್ಯಯನ ಇದರಲ್ಲಿದೆ.

ಮಾಹಿತಿಗಳನ್ನು ಕಲೆಹಾಕಲು ರೇಷ್ಮೆ ಇಲಾಖೆಯ ದಾಖಲೆಗಳನ್ನು ಮತ್ತು ಪ್ರಾಥಮಿಕ ಮೂಲಗಳನ್ನು ಬಳಸಿಕೊಂಡು ಶೇ. ೧೦ರಂತೆ ಮಾದರಿ ಆಯ್ಕೆ ಮಾಡಿ ಒಟ್ಟು ೩೨೦ ರೈತರನ್ನು ಸಂದರ್ಶಿಸಿದ್ದಾರೆ. ಇಡಿ ಪ್ರಬಂಧವನ್ನು ಒಟ್ಟು ೮ ಅಧ್ಯಾಯಗಳಲ್ಲಿ ವಿಂಗಡಿಸಿದ್ದಾರೆ. ಅಧ್ಯಯನದ ಒಟ್ಟು ೫೫ ಫಲಿತಗಳನ್ನು ಎರಡು ಗುಂಪುಗಳಲ್ಲಿ ವರ್ಗೀಕರಿಸಿರುವರು.

೧) ತರಬೇತಿ ಕಾರ್ಯಕ್ರಮಗಳು ಮತ್ತು ಅದರ ಪರಿಣಾಮಗಳು.

೨) ರೇಷ್ಮೆ ಉದ್ದಿಮೆಗೆ ಪ್ರೇರಕಗಳು ಮತ್ತು ಅದಕ್ಕೆ ಪೂರಕ ಅಂಶಗಳು.

೧) ಗುತ್ತಿಗೆ ಕೃಷಿ ಪದ್ಧತಿಯನ್ನು ಜಾರಿಗೊಳಿಸುವುದು ೨) ರೇಷ್ಮೆ ಉದ್ದಿಮೆಗೆ ಅವಶ್ಯವಿರುವ ಉಪಕರಣಗಳನ್ನು ಪ್ರಸಿದ್ಧಗೊಳಿಸುವುದು ೩) ಯುವಕರನ್ನು ಆಕರ್ಷಿಸುವ ಯೋಜನೆಗಳನ್ನು ಸಿದ್ಧಗೊಳಿಸುವುದು ೪) ಮಹಿಳಾ ಉದ್ದಿಮೆದಾರರಿಗೆ ಆದ್ಯತೆ ನೀಡವುದು.

"ಪ್ರಾಬ್ಲೆಮ್ಸ್ ಆಂಡ್ ಪ್ರಾಸ್ಪೆಕ್ಟ್ಸ್ ಆಫ್ ಪ್ರೊಡಕ್ಷನ್ ಆಂಡ್ ಮಾರ್ಕೆಟಿಂಗ್ ಆಫ್ ಶುಗರ್‌ಕೇನ್ ವಿಥ ರೆಫರೆನ್ಸ್ ಟು ಬೆಳಗಾಂವ ಡಿಸ್ಟ್ರಿಕ್ಟ್ ಆಫ್ ಕರ್ನಾಟಕ ಸ್ಟೇಟ್" ಎಂಬ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಸಿ. ಆಯ್. ಚಲವಾದಿಯವರು ೨೦೦೮ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದಾರೆ. ಈ ಅಧ್ಯಯನದಲ್ಲಿ ಅವರು ಪ್ರಮುಖವಾಗಿ ಕಬ್ಬು ಉತ್ಪಾದನೆ ಹಾಗೂ ಮಾರಾಟ ಸಂಬಂಧಿಸಿದ ಸಮಸ್ಯೆಗಳ ಕುರಿತು ಅಧ್ಯಯನ ಮಾಡಿದ್ದಾರೆ.

ಇದರಲ್ಲಿ ಒಟ್ಟು ಆರು ಉದ್ದೇಶಗಳಿವೆ. ೧) ಕಬ್ಬು ಉತ್ಪಾದಕತೆಯ ಅಧ್ಯಯನ ೨) ಕಬ್ಬು ಉತ್ಪಾದನೆಯ ಸಮಸ್ಯೆಗಳ ವಿಶ್ಲೇಷಣೆ ೩) ಜಿಲ್ಲೆಯಲ್ಲಿ ಕಬ್ಬು ಬೆಳೆಯುವ ವೆಚ್ಚದ ಅಭ್ಯಾಸ ೪) ಕಬ್ಬು ಮಾರಾಟದ ಹಂತದಲ್ಲಿ ಎದುರಾಗುವ ಸಮಸ್ಯೆಗಳನ್ನು ಪರೀಕ್ಷಿಸುವದು ೫) ಮಾರಾಟ ವೆಚ್ಚದ ಅಧ್ಯಯನ ೬) ಸರಕಾರದ ಧೋರಣೆಗಳನ್ನು ಅಭ್ಯಸಿಸುವುದು.

ಪ್ರಾಥಮಿಕ ಮೂಲವಾದ ಪ್ರಶ್ನಾವಳಿಯಿಂದ ಕ್ಷೇತ್ರ ಅಧ್ಯಯನ ಮತ್ತು ಆನುಷಂಗಿಕ ಮೂಲಗಳಾದ ವಿವಿಧ ಪ್ರಕಟಿತ ಸಾಹಿತ್ಯಗಳನ್ನು ಸಂಗ್ರಹಿಸಿ ಅಧ್ಯಯನ ಕೈಕೊಂಡಿದ್ದಾರೆ. ಇದಕ್ಕಾಗಿ ರೈತರ ಮಾದರಿ ಆಯ್ಕೆಯನ್ನು ಮಾಡಿ, ಅಶಿಕ್ಷಿತರಾದ ರೈತರು ತಮ್ಮ ಸ್ಮರಣೆಯಿಂದ ನೀಡಿದ ಮಾಹಿತಿಯನ್ನು ನಂಬಿದ್ದಾಗಿ ಮತ್ತು ದತ್ತಾಂಶಗಳಲ್ಲಿ ಏಕರೂಪತೆ ಇರಲಾರದ್ದೆಂಬುದನ್ನು ಇತಿಮಿತಿಯಲ್ಲಿ ಸೂಚಿಸಿದ್ದಾರೆ. ಒಟ್ಟಾರೆ ಫಲಿತಗಳನ್ನು ಮೂರು ಶೀರ್ಷಿಕೆಯಲ್ಲಿ ನೀಡಿದ್ದಾರೆ.

ಇವುಗಳಡಿಯಲ್ಲಿ ೪೭ ಫಲಿತಗಳನ್ನು ಕಂಡುಕೊಂಡಿದ್ದಾರೆ. ಇವುಗಳನ್ನಾಧರಿಸಿ ಒಟ್ಟು ೧೬ ಸಲಹೆ-ಸೂಚನೆಗಳನ್ನು ನೀಡಿದ್ದಾರೆ.

ಈ ಅಧ್ಯಯನವು ಜಿಲ್ಲೆಯ ಆರ್ಥಿಕ ಅಭಿವೃದ್ಧಿಯ ಹಲವಾರು ಅಂಶಗಳನ್ನು ಪರಿಶೀಲಿಸಿ ಕಬ್ಬುಬೆಳೆಗಾರರ ಸಮಸ್ಯೆಗಳನ್ನು ಅಭ್ಯಸಿಸಿ, ಸಲಹೆಗಳನ್ನು ನೀಡುವುದಕ್ಕೆ ಮಾತ್ರ ಸೀಮಿತವಾಗಿದೆ.

ಪಿ. ಎಲ್. ಹರಾಳೆ ಇವರು ೨೦೦೮ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಮಂಡಿಸಿದ **"ಮ್ಯಾನೇಜಮೆಂಟ ಆಫ್ ವರ್ಕಿಂಗ್ ಕ್ಯಾಪಿಟಲ್ ಇನ್ ಫೌಂಡ್ರಿ ಇಂಡಸ್ಟ್ರೀಸ್- ಎ ಕೇಸ್ ಸ್ಟಡಿ ಆಫ್ ಬೆಳಗಾವಿ ಡಿಸ್ಟ್ರಿಕ್ಟ"** ಎಂಬ ಮಹಾಪ್ರಬಂಧವವು, ಬೆಳಗಾವಿ ಜಿಲ್ಲೆಯಲ್ಲಿನ ಫೌಂಡ್ರಿ ಉದ್ದಿಮೆಯಲ್ಲಿ ದುಡಿಯುವ ಬಂಡವಾಳದ ನಿರ್ವಹಣೆಯನ್ನು ವಿಶ್ಲೇಷಿಸುತ್ತದೆ.

ಬೆಳಗಾವಿ ಜಿಲ್ಲೆಯಲ್ಲಿನ ೧೦೦ ಫೌಂಡ್ರಿ ಘಟಕಗಳನ್ನು ಅಧ್ಯಯನಕ್ಕೆ ಬಳಸಿಕೊಂಡ ಸಂಶೋಧನೆಯು ಪ್ರಮುಖವಾಗಿ ಕೆಳಗಿನ ಉದ್ದೇಶಗಳನ್ನು ಹಾಕಿಕೊಂಡಿದೆ.

೧. ದುಡಿಯುವ ಬಂಡವಾಳಕ್ಕೆ ಬಳಸಿದ ಹಣಕಾಸು ಪದ್ಧತಿಯ ಅಧ್ಯಯನ

೨. ದುಡಿಯುವ ಬಂಡವಾಳದ ಗಾತ್ರ ನಿರ್ಧರಿಸುವ ಅಂಶಗಳನ್ನು ಗುರುತಿಸುವುದು

೩. ಫೌಂಡ್ರಿ ಉದ್ದಿಮೆಗೆ ಬೇಕಾದ ದುಡಿಯುವ ಬಂಡವಾಳದ ಮೂಲಗಳು

೪. ದಾಸ್ತಾನು ನಿರ್ವಹಣೆ ಪದ್ಧತಿ

೫. ಆವಕಗಳ ಸ್ವೀಕೃತಿಗಳ ನಿರ್ವಹಣಾ ಪದ್ಧತಿ

೬. ಫೌಂಡ್ರಿಯಲ್ಲಿ ನಗದು ನಿರ್ವಹಣೆ ಪದ್ಧತಿಯನ್ನು ವಿಶ್ಲೇಷಿಸಿ, ಅವಶ್ಯಕವೆನಿಸಿದ ಸಲಹೆಗಳನ್ನು ನೀಡುವುದು.

ಅಧ್ಯಯನಕ್ಕೆ ನಾಲ್ಕು ಪೂರ್ವ ಕಲ್ಪನೆಗಳನ್ನು ಹಾಕಿಕೊಂಡಿದ್ದು ಅವುಗಳ ಪರೀಕ್ಷೆಗೆ ಸಂಖ್ಯಾಶಾಸ್ತ್ರದ ಪದ್ಧತಿಗಳನ್ನು ಬಳಸಿಕೊಂಡಿದ್ದಾರೆ. ಐದು ವರ್ಷಗಳ ಅವಧಿಯ ಅಂಕಿ ಸಂಖ್ಯೆ-ಗಳನ್ನು ಬಳಸಿ ೧೦೦ ಘಟಕಗಳ ಮಾದರಿ ಪಡೆದಿರುವರು.

ಪ್ರಮುಖವಾಗಿ ಕಂಡುಬಂದ ಅಂಶಗಳು -

೧. ಫೌಂಡ್ರಿ ಘಟಕಗಳ ಸಿಂಹ ಪಾಲು ನಿರ್ವಹಣೆಯನ್ನು ಸ್ವತ: ಮಾಲೀಕರೇ ನಿರ್ವಹಿಸುತ್ತಾರೆ.

೨. ಮಾರಾಟದ ಆಧಾರದಿಂದ ದುಡಿಯುವ ಬಂಡವಾಳದ ಅವಶ್ಯಕತೆಯನ್ನು ಲೆಕ್ಕ ಹಾಕುತ್ತಾರೆ.

೩. ಉದ್ದಿಮದಾರರದಲ್ಲಿ ಶೇ. ೬೫ರಷ್ಟು ಸಾಲವನ್ನು ಅವಲಂಬಿಸಿದ್ದಾರೆ.

೪. ಬಡ್ಡಿದರ ನಿಯಂತ್ರಣ ಪದ್ಧತಿಯನ್ನು ಬಳಸಿ ದುಡಿಯುವ ಬಂಡವಾಳವನ್ನು ನಿಯಂತ್ರಿಸುತ್ತಾರೆ.

ಇದರೊಂದಿಗೆ ಈ ಅಧ್ಯಯನವು ನಗದು ಸ್ವೀಕೃತ ಹಾಗೂ ಸರಕುಗಳ ನಿರ್ವಹಣಾ ಪದ್ಧತಿಗಳು, ಶುದ್ಧತೆ ಹಾಗೂ ಸುಧಾರಣಾ ಕ್ರಮಗಳ ಬಗ್ಗೆ ಅಮೂಲ್ಯ ಸಲಹೆಗಳನ್ನು ನೀಡುತ್ತದೆ.

ಬಿ. ಎಸ್. ಕಾರ್ಜಿಯವರ ಎಂ. ಫಿಲ್. ಡಿಜರ್ಟೇಶನ್ **"ಎ ಸ್ಟಡಿ ಆಫ್ ಅಥಣಿ ತಾಲೂಕಾ"** ಎಂಬ ಶೀರ್ಷಿಕೆಯಡಿಯಲ್ಲಿ ತಾಲೂಕಿನಲ್ಲಿಯ ಚರ್ಮ ಉದ್ದಿಮೆ ಮತ್ತು ಮಹಿಳಾ ಉದ್ಯಮಶೀಲತೆ ಬಗ್ಗೆ ತಮಿಳುನಾಡಿನ ವಿನಾಯಕ ಮಿಶನ್ ವಿಶ್ವವಿದ್ಯಾಲಯ ಸೆಲಂದಲ್ಲಿ ಜೂನ್ ೨೦೦೯ರಲ್ಲಿ ಪ್ರಬಂಧವನ್ನು ಮಂಡಿಸಿದ್ದಾರೆ.

ಇದರಲ್ಲಿ ಅವರು ಪೀಠಿಕೆಯಲ್ಲಿ ಉದ್ಯಮಶೀಲತೆಯ ಮತ್ತು ಚರ್ಮೋದ್ಯಮದ ಬಗ್ಗೆ ವಿವರವಾಗಿ ಚರ್ಚಿಸುತ್ತಾ ಮಹಿಳಾ ಉದ್ಯಮಶೀಲರಿಗೆ ಹಣಕಾಸಿನ ನೆರವು ನೀಡುವ, ಭವಿಷ್ಯದಲ್ಲಿನ ಅವಕಾಶಗಳ ಬಗ್ಗೆ ವಿವರ ನೀಡಿದ್ದಾರೆ. ಜೊತೆಗೆ ತಾಲೂಕಿನ ಪಾದರಕ್ಷೆ ಉದ್ದಿಮೆಯ ಬಗ್ಗೆ ಚರ್ಚೆ ಮಾಡಿದ್ದಾರೆ. ಈ ಅಧ್ಯನಯದಲ್ಲಿ ಅಥಣಿ ತಾಲೂಕಿನಲ್ಲಿ ಸ್ಥಾಪನೆಯಾದ "ಚರ್ಮಾಲಯ" ಮತ್ತು ಅದರ ಏಳು ಉದ್ದೇಶಗಳನ್ನು ಚರ್ಚಿಸಿದ್ದಾರೆ. ಅದರಂತೆ 'ಆಡಕರ್' ಅಸೆಂಟ್ (ಎ.ಎಸ್.ಸಿ.ಇ.ಎನ್.ಟಿ)ಗಳ ವಿವರ ನೀಡಿದ್ದಾರೆ.

ಜಿಲ್ಲೆಯ ಅಥಣಿ ತಾಲೂಕು ಚರ್ಮೋದ್ಧಿಮೆಗೆ ಹೆಸರುವಾಸಿಯಾಗಿದೆ. ಅದಕ್ಕಾಗಿಯೇ, ಇದನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿದ್ದಾಗಿ ಹೇಳುತ್ತಾ, ಒಟ್ಟು ಆರು ಉದ್ದೇಶಗಳನ್ನು ಸೂಚಿಸಿದ್ದಾರೆ. ಅವುಗಳಲ್ಲಿ ಮುಖ್ಯವಾಗಿ ತಾಲೂಕಿನಲ್ಲಿ ಸಿದ್ಧಗೊಳ್ಳುತ್ತಿರುವ "ಕೊಲ್ಲಾಪೂರಿ" ಪಾದರಕ್ಷೆಗಳ ತಯಾರಿಕೆ ಬಗ್ಗೆ ಅಧ್ಯಯನ ಮಾಡುವುದು, ಗೃಹ ಮಹಿಳಾ ಉದ್ಯಮದಾರರ ಸಮಸ್ಯೆಗಳನ್ನು ಅಭ್ಯಸಿಸುತ್ತಾ, ಅವರ ಸಾಮಾಜಿಕ, ಆರ್ಥಿಕ ಹಿನ್ನೆಲೆಯನ್ನು, ಯಾವ ತರದ ಯೋಜನೆಗಳು ಅವರ ಉದ್ಯಮಶೀಲತೆಯ ಮೇಲೆ ಪರಿಣಾಮ ಬೀರಿವೆ, ವಿವಿಧ ಸಂಸ್ಥೆಗಳ ವಂತಿಗೆ ಹಾಗೂ ಇದರಿಂದಾದ ಬದಲಾವಣೆಗಳನ್ನು ಅಭ್ಯಸಿಸುವುದಾಗಿ ಹೇಳಿಕೊಂಡಿದ್ದಾರೆ.

ಇದಕ್ಕಾಗಿ ಪ್ರಾಥಮಿಕ ಮತ್ತು ಆನುಷಂಗಿಕ ಮಾಹಿತಿಗಳನ್ನು ಅಳವಡಿಸುವ ಪದ್ಧತಿಯನ್ನು ಬಳಸಿಕೊಂಡು, ಅಥಣಿ ತಾಲೂಕಿನ ಆರು ಗ್ರಾಮ ಪಂಚಾಯ್ತಿಗಳನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಒಟ್ಟು ೩೦೦ ಮಾಹಿತಿದಾರರನ್ನು ಅಧ್ಯಯನಕ್ಕೊಳಪಡಿಸಿದ್ದಾರೆ.

ಒಟ್ಟು ಅಧ್ಯಯನದಿಂದ ೧೨ ಫಲಿತಗಳನ್ನು ಕಂಡುಕೊಂಡಿದ್ದು, ಮುಖ್ಯವಾಗಿ ೪ ಸಲಹೆಗಳಾದ ಸರಕಾರೇತರ ಸಂಸ್ಥೆಗಳ ಸ್ಥಾಪನೆ, ಮೂಲಸೌಕರ್ಯಗಳನ್ನು ನೀಡುವ, ಸರಕಾರಗಳು ಹೆಚ್ಚಿನ ಹಣಕಾಸು ನೀಡುವ ಯೋಜನೆಗಳ ಮತ್ತು ಸ್ವಸಹಾಯ ಗುಂಪುಗಳ ಸ್ಥಾಪನೆಯ ಅವಶ್ಯಕತೆಗಳಿವೆ ಎಂಬ ಉತ್ತಮ ಸಲಹೆಗಳನ್ನು ನೀಡಿದ್ದಾರೆ.

ಇದು ಸಹ ಜಿಲ್ಲೆಯ ಕೈಗಾರಿಕೆಯ ಒಂದು ಭಾಗವಾದ ಚರ್ಮೋದ್ಧಿಮೆಗೆ ಸಂಬಂಧಿಸಿದ್ದು, ಒಂದು ತಾಲೂಕಿನ ಪರಿಮಿತ ಗ್ರಾಮಗಳ ಉದ್ದಿಮೆದಾರರಿಗೆ ಸಂಬಂಧಿಸಿದ್ದಾಗಿದೆ.

ಈ ಎಲ್ಲ ಮಹಾಪ್ರಬಂಧಗಳು ಬೆಳಗಾವಿ ಜಿಲ್ಲೆಯ ಆರ್ಥಿಕ ಬೆಳವಣಿಗೆಯ ವಿವಿಧ ಆಯಾಮಗಳ ಕುರಿತು ಆಳವಾದ ಅಧ್ಯಯನದೊಂದಿಗೆ ಸೂಕ್ತ ಸಲಹೆಗಳನ್ನು ನೀಡಿದ್ದು ಪ್ರಶಂಸನೀಯವಾಗಿದೆ. ಆದರೆ ಜಿಲ್ಲೆಯ ಕೈಗಾರಿಕೆಯ ಸಮಗ್ರವಾದ ಒಟ್ಟಾರೆ ಅಧ್ಯಯನ ಈವರೆಗೂ ಆಗದಿರುವ ಕೊರತೆಯನ್ನು ನೀಗಿಸಲು ಪ್ರಸ್ತುತ ಅಧ್ಯಯನ ಅಗತ್ಯವೆನಿಸುತ್ತದೆ.

ಅಧ್ಯಾಯ : ಮೂರು

ಬೆಳಗಾವಿ ಜಿಲ್ಲೆಯ ಸ್ಥೂಲ ಸಮೀಕ್ಷೆ

೩.೧ ಭೂಗೋಳ

೩.೨ ಹವಾಮಾನ

೩.೩ ಇತಿಹಾಸ

೩.೪ ಆಡಳಿತ

೩.೫ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿ

೩.೬ ಸಂಪನ್ಮೂಲಗಳ ಲಭ್ಯತೆ

(ಅ) ಭೂ - ಸಂಪನ್ಮೂಲ

(ಬ) ಜಲ - ಸಂಪನ್ಮೂಲ

(ಕ) ಸಾರಿಗೆ - ಸಂಪರ್ಕ ಸಾಧನಗಳು

(ಡ) ಬ್ಯಾಂಕುಗಳ ವ್ಯವಸ್ಥೆ

(ಇ) ಶೈಕ್ಷಣಿಕ ಸಂಪನ್ಮೂಲಗಳು

(ಫ) ಪಶು ಸಂಗೋಪನೆ

(ಗ) ಮಾನವ ಸಂಪನ್ಮೂಲ

ಅಧ್ಯಾಯ : ಮೂರು

ಬೆಳಗಾವಿ ಜಿಲ್ಲೆಯ ಸ್ಥೂಲ ಸಮೀಕ್ಷೆ

೩.೧ ಬೆಳಗಾವಿ ಭೂಗೋಳ :

ಬೆಳಗಾವಿ ಜಿಲ್ಲೆಯು ಕರ್ನಾಟಕ ರಾಜ್ಯದ ವಾಯುವ್ಯ ಭಾಗದಲ್ಲಿದ್ದು ೧೫°- ೨೩° ರಿಂದ ೧೬° - ೫೮° ಉತ್ತರ ಅಕ್ಷಾಂಶ ಮತ್ತು ೭೪° - ೦೫° ರಿಂದ ೭೫°-೨೮° ಪೂರ್ವ ರೇಖಾಂಶಗಳ ಮಧ್ಯದಲ್ಲಿ ಇರುತ್ತದೆ. ಈ ಜಿಲ್ಲೆಯ ಪೂರ್ವ ದಿಕ್ಕಿನಲ್ಲಿ ವಿಜಾಪೂರ, ಬಾಗಲಕೋಟ ಹಾಗೂ ಧಾರವಾಡ ಜಿಲ್ಲೆಗಳು ಉತ್ತರದಲ್ಲಿ ಮಹಾರಾಷ್ಟ್ರ ರಾಜ್ಯದ ಕೊಲ್ಹಾಪೂರ ಹಾಗೂ ರತ್ನಾಗಿರಿ ಜಿಲ್ಲೆಗಳು ಇರುತ್ತವೆ.[೧] ಮಹಾರಾಷ್ಟ್ರ ಮತ್ತು ಗೋವಾ ರಾಜ್ಯದ ಗಡಿಯಿಂದ ೫೦ ಕಿ. ಮೀ. ಪಶ್ಚಿಮ ಘಟ್ಟಗಳೊಂದಿಗೆ ಗಡಿಯನ್ನು ಹಂಚಿಕೊಂಡಿದೆ. ಬೆಂಗಳೂರಿನಿಂದ ೫೧೨ ಕಿ. ಮೀ., ಹೈದ್ರಾಬಾದ್‌ದಿಂದ ೫೧೫ ಕಿ. ಮೀ. ಮತ್ತು ಮುಂಬೈನಿಂದ ೫೦೦ ಕಿ. ಮೀ.ಗಳ ಅಂತರದಲ್ಲಿದೆ. ಜಿಲ್ಲೆಯು ೧೨೭೮ ಗ್ರಾಮಗಳನ್ನು ಹೊಂದಿ, ೧೩,೪೧೫ ಚದರ ಕಿ. ಮೀ. ಕ್ಷೇತ್ರದಲ್ಲಿ ವ್ಯಾಪಿಸಿದೆ. ೨೦೧೧ರ ಜನಗಣತಿಯ ಪ್ರಕಾರ ೪೮ ಲಕ್ಷ ಅಥವಾ ೪.೮ ದಶ ಲಕ್ಷದಷ್ಟು (೪೭,೭೮,೪೩೯) ಜನಸಾಂದ್ರತೆ ಹೊಂದಿದೆ. ಪಶ್ಚಿಮ ಘಟ್ಟಕೆ ಹೊಂದಿಕೊಂಡ ಜಿಲ್ಲೆಯು ೭೭೯ ಮೀಟರಗಳ ಎತ್ತರದಲ್ಲಿದೆ.

ಭೌಗೋಳಿಕವಾಗಿ ಈ ಜಿಲ್ಲೆಯನ್ನು ಮೂರು ವಿಭಾಗಗಳಲ್ಲಿ ವಿಂಗಡಿಸಬಹುದಾಗಿದೆ.

೧) ಮಲೆನಾಡು ಪ್ರದೇಶ

೨) ಅರೆ- ಮಲೆನಾಡು

೩) ಬಯಲು ಪ್ರದೇಶ.

ಮಲೆನಾಡು ವಲಯದಲ್ಲಿ ಖಾನಾಪೂರ ಮತ್ತು ಬೆಳಗಾವಿ ತಾಲ್ಲೂಕುಗಳು ಮತ್ತು ಅರೆ ಮಲೆನಾಡು ವಲಯದಲ್ಲಿ ಸೌದತ್ತಿ, ಹುಕ್ಕೇರಿ, ಬೈಲಹೊಂಗಲ ಹಾಗೂ ಬಯಲು ನಾಡಿನಲ್ಲಿ ಅಥಣಿ, ರಾಯಬಾಗ, ಗೋಕಾಕ, ರಾಮದುರ್ಗ, ಚಿಕ್ಕೋಡಿ ತಾಲ್ಲೂಕುಗಳು ಬರುತ್ತವೆ.

೩.೨) ಹವಾಮಾನ :

ಬೆಳಗಾವಿ ಜಿಲ್ಲೆಯು ಹಿತಕರ, ಅಹ್ಲಾದಕರ ಮತ್ತು ಆರೋಗ್ಯಕರ ವಾತಾವರಣವನ್ನು ಹೊಂದಿದೆ. ಮಳೆಗಾಲದಲ್ಲಿ ಚೆನ್ನಾಗಿ ಮಳೆಯನ್ನು ಪಡೆಯುತ್ತಾ ತಂಪಾದ ಹವಾಗುಣವನ್ನು

ಹೊಂದಿರುತ್ತದೆ. ಜೂನ್‌ದಿಂದ ಸೆಪ್ಟೆಂಬರ್‌ವರೆಗೆ ಪಶ್ಚಿಮ ಭಾಗದಲ್ಲಿ ಸತತ ಮಳೆ ಸುರಿಯುತ್ತದೆ. ರಭಸದ ಮಳೆಯೂ ಆಗಾಗ ಸಾಮಾನ್ಯ. ಜಿಲ್ಲೆಯಲ್ಲಿ ೮೯೬.೬ ಮಿ.ಮೀ.ಸರಾಸರಿ ಮಳೆಯ ಪ್ರಮಾಣವಿದ್ದು ಖಾನಾಪೂರ ತಾಲೂಕು ೧೯೫೦ಮಿ.ಮೀ.ರಷ್ಟು ಗರಿಷ್ಟ ಮಳೆಯನ್ನು ಪಡೆದರೆ ಕನಿಷ್ಟ ಮಳೆಯ ಪ್ರಮಾಣ ೫೩೮ ಮಿ.ಮೀ. ಗೋಕಾಕ ಮತ್ತು ರಾಮದುರ್ಗ ತಾಲೂಕುಗಳಲ್ಲಿ ಕಂಡುಬರುತ್ತದೆ. ಅದರಂತೆ ಬೆಳಗಾವಿ-೧೪೧೮ ಮಿ.ಮೀ. ಹುಕ್ಕೇರಿ-೭೭೯ ಮತ್ತು ಬೈಲಹೊಂಗಲ-೭೧೧ ಮಿ.ಮೀ. ಮಳೆಯನ್ನು ಪಡೆದು ಕ್ರಮವಾಗಿ ಎರಡು, ಮೂರು ಮತ್ತು ನಾಲ್ಕನೆಯ ಸ್ಥಾನದಲ್ಲಿ ಇರುವದು ದಾಖಲೆಗಳು ಪುಷ್ಟೀಕರಿಸುತ್ತವೆ. (೨೦೧೧-೧೨ರ ಅಂಕಿ ಅಂಶಗಳ ಪ್ರಕಾರ)

ಇನ್ನುಳಿದ ಋತುಗಳಲ್ಲಿ ಒಣ ಹವಾಗುಣ ಸಾಮಾನ್ಯವಾಗಿರುತ್ತದೆ. ಮೂರು ತಿಂಗಳ ಅವಧಿ(ಜೂನ್ - ಸೆಪ್ಟೆಂಬರ್)ಯಲ್ಲಿ ಮಂಜು ಮುಸುಕಿದ ವಾತಾವರಣ ಜಿಲ್ಲೆಯ ಪಶ್ಚಿಮ ಭಾಗದಲ್ಲಿ ಸಾಮಾನ್ಯವಾಗಿರುತ್ತದೆ.

ಅದರಂತೆ ನವ್ಹೆಂಬರ್‌ದಿಂದ ಫೆಬ್ರುವರಿಯವರೆಗೆ ಚಳಿಗಾಲದ ವಾತಾವರಣ ಕಂಡುಬರುತ್ತದೆ. ಆಗ ಕನಿಷ್ಠ ೧೯.೫ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿರುತ್ತದೆ. ನೆರೆಹೊರೆಯ ಜಿಲ್ಲೆಗಳಗಿಂತ ಬೇಸಿಗೆಯು ಅಷ್ಟೇನು ವಿಪರೀತವಾಗಿರದೆ ಸೌಮ್ಯವಿರುವ ಅನುಭವವಾಗುತ್ತದೆ.

ಬೆಳಗಾವಿ ಜಿಲ್ಲೆಯ ಋತುಗಳನ್ನು ಐದು ರೀತಿಯಲ್ಲಿ ವಿಂಗಡಿಸುತ್ತಾರೆ-

ಅ) ಫೆಬ್ರುವರಿ ಮಧ್ಯಾವಧಿಯಿಂದ ಮೇ ತಿಂಗಳಾಂತ್ಯದವರೆಗೆ ಉಷ್ಣ ವಾತಾವರಣವಿದ್ದು, ಪಶ್ಚಿಮದಿಂದ ಬಿರುಗಾಳಿಯ ಅನುಭವ ಏಪ್ರಿಲ್ ಮಧ್ಯದ ಅವಧಿಯಲ್ಲಿರುತ್ತದೆ. ಇನ್ನುಳಿದ ಅವಧಿಯಲ್ಲಿ ಗುಡುಗು ಮಿಶ್ರಿತ ಮಳೆಯು ಕಂಡುಬರುತ್ತದೆ.

ಬ) ಜೂನ್‌ದಿಂದ ಸೆಪ್ಟಂಬರ್‌ವರೆಗೆ ನೈಋತ್ಯ ಮಾರುತಗಳಿಂದ ಮಳೆಯು ಸುರಿಯುತ್ತದೆ.ಮುಂಗಾರು ನಂತರದ ಅವಧಿಯಲ್ಲಿ ತಂಪನೆಯ ವಾತಾವರಣ ಸಾಮಾನ್ಯವಾಗಿರುತ್ತದೆ.

ಕ) ಅಕ್ಟೋಬರ್‌ದಲ್ಲಿ ಈಶಾನ್ಯ ಮಾರುತಗಳ ಆಗಮನದಿಂದ ಮಳೆಯು ಪ್ರಾರಂಭಗೊಂಡು ನವೆಂಬರ್‌ವರೆಗೆ ಮುಂದುವರೆಯುತ್ತದೆ. ಮುಖ್ಯವಾದ ಮಳೆಗಾಲ ಮೇ ದಿಂದ ಅಕ್ಟೋಬರ್ ತಿಂಗಳವರೆಗೆ ಕಂಡುಬರುತ್ತದೆ.

ಡ) ಡಿಸೆಂಬರ್‌ದಿಂದ ಫೆಬ್ರುವರಿಯವರೆಗೆ ಚಳಿಗಾಲವಿರುತ್ತದೆ.

ಇ) ಎಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ವಾತಾವರಣ ತೀಕ್ಷ್ಣ ಉಷ್ಣದಿಂದ ಕೂಡಿರುತ್ತದೆ.

೩.೩ ಇತಿಹಾಸ :

ಬೆಳಗಾವಿಯನ್ನು ಪ್ರಾಚೀನ ಕಾಲದಲ್ಲಿ ವೇಣುಗ್ರಾಮವೆಂದು ಕರೆಯುತ್ತಿದ್ದರು. 'ವೇಣು' ಎಂದರೆ ಬಿದಿರು. ಇಲ್ಲಿ ಬಿದಿರು ಬೆಳೆಯುತ್ತಿರಬಹುದು. ವೇಣುಗ್ರಾಮ ಪರಿವರ್ತನೆಗೊಂಡು **ಬೆಳಗಾವಿ**ಯಾಯಿತು. ಪಾಟೀಲ ಪುಟ್ಟಪ್ಪನವರು ತಮ್ಮ "ನಮ್ಮದು ಕನ್ನಡ ನಾಡು" ಪುಸ್ತಕದಲ್ಲಿ

ದಾಖಲಿಸಿರುವಂತೆ ವೇಣು ಗ್ರಾಮವು ರಾಮಾಯಣ ಕಾಲದ ದಂಡಕಾರಣ್ಯ ಪ್ರದೇಶಕ್ಕೆ ಸೇರಿದ್ದಿತು. ರಾವಣನಿಂದ ಪುರಸ್ಕೃತರಾದ ಸಂಗೀತಕಾರರು ಇಲ್ಲಿದ್ದರು ಎಂದು ಹೇಳಲಾಗುತ್ತಿದೆ. ಕ್ರಿ. ಪೂ. ೧ನೇ ಶತಮಾನದ ಬೆಳಗಾವಿಯ ಮಾಧವಪುರ (ಈಗಿನ ವಡಗಾವಿ) ಉತ್ಖನನದಲ್ಲಿ ಪ್ರಾಕೃತ ಬರಹದ ಯೂಪಸ್ಥಂಬಗಳು ದೊರೆತಿವೆ. ಇಲ್ಲಿ ಒಬ್ಬ ಬ್ರಾಹ್ಮಣನು ಮೂರು ಸಲ ವಾಜಪೇಯಿ ಯಾಗಗಳನ್ನು ಮಾಡಿದನು.[೨] ಕ್ರಿ.ಶ. ೧ನೇ ಶತಮಾನದಲ್ಲಿ ಇಟಲಿಯ ಭೂಗೋಳ ತಜ್ಞ **ಪ್ಲೇನಿ** ಎಂಬುವನು ವೇಣುಗ್ರಾಮಕ್ಕೆ ಬಂದಿದ್ದರು. ಕ್ರಿ.ಪೂ. ೩ನೇ ಶತಮಾನದಿಂದ ಕ್ರಿ.ಶ. ೩ನೇ ಶತಮಾನದವರೆಗೆ ಜಿಲ್ಲೆಯ ಬಹುಭಾಗ ಪೈಠಾಣದ ಶಾತವಾಹನ ಆಳ್ವಿಕೆಯಲ್ಲಿದ್ದು, ಅದು ಕುಂತಲ ನಾಡಿನ ಭಾಗವಾಗಿತ್ತು. ಅವರ ಆಳ್ವಿಕೆ ಅಂತ್ಯವಾದನಂತರ, ಬೆಳಗಾವಿಯಲ್ಲಿ ದೊರೆತ ಶಿಲಾಲೇಖನಗಳು, ಅವಶೇಷಗಳು,ತಾಮ್ರಪಟಗಳ ಆಧಾರದಿಂದ ಕ್ರಿ.ಶ. ೩೪೫ ರಿಂದ ೫೪೦ ರವರೆಗೆ ಭೋಜರು, ಕದಂಬರು, ಕ್ರಿ.ಶ ೫೪೦ ರಿಂದ ೭೬೦ ರವರೆಗೆ ಬಾದಾಮಿ ಚಾಲುಕ್ಯರು ಮತ್ತು ಕಲ್ಯಾಣದ ಚಾಲುಕ್ಯರು ಇದನ್ನು ಆಳಿದರು.

ಕ್ರಿ.ಶ. ೧೧೨೮ ರಿಂದ ಕ್ರಿ.ಶ. ೧೨೦೪ ರ ಅವಧಿಯಲ್ಲಿ ಸೇನ ರಾಜನು ವೇಣುಗ್ರಾಮವನ್ನು ಆಳುತ್ತಿದ್ದಾಗ ಅವರಿಂದ ಶಾಂತಿನಾಥ ತೀರ್ಥಂಕರ ಬಸದಿಯು ಸ್ಥಾಪಿಲ್ಪಟ್ಟು ಅದರ ಪೂಜೆಗಾಗಿ ಅಂಬರವಣ್ಣ (ಅಂಗರಗಟ್ಟಿ) ಗ್ರಾಮವು ದತ್ತಿಯಾಗಿ ಬಿಡಲ್ಪಟ್ಟಿತು. ವೇಣುಗ್ರಾಮವನ್ನು ಇಕ್ಷು ಗ್ರಾಮವೆಂದು ಕರೆಯುತ್ತಿದ್ದರು. ಇಕ್ಷು ಎಂದರೆ ಕಬ್ಬು. ಬಹುಶ: ಪ್ರಾಚೀನ ಕಾಲದಿಂದಲೂ ಇಲ್ಲಿ ಕಬ್ಬು ಬೆಳೆಯುತ್ತಿದ್ದಿರಬಹುದು.

ಸುಗಂಧವರ್ತಿ (ಅಂದರೆ ಈಗಿನ ಸವದತ್ತಿ)ಯನ್ನು ರಾಜಧಾನಿ ಮಾಡಿಕೊಂಡ ರಟ್ಟರ ಆಳ್ವಿಕೆ ಪ್ರಾರಂಭವಾಯಿತು ಎಂದು ಹಣ್ಣಿಕೇರಿ ಶಿಲಾಶಾಸನ ದಾಖಲಿಸುತ್ತದೆ.[೩]

ಕ್ರಿ.ಶ. ೧೨೦೪ ರಲ್ಲಿ ೪ನೇ ಕಾರ್ತವೀರ್ಯ ಅರಸ ರಾಜಧಾನಿಯನ್ನು ಸವದತ್ತಿಯಿಂದ ವೇಣು ಗ್ರಾಮಕ್ಕೆ ಸ್ಥಳಾಂತರಿಸಿದನು. ಕ್ರಿ.ಶ. ೧೨೦೨ ರಿಂದ ಕ್ರಿ.ಶ. ೧೨೨೦ ರವರೆಗೆ ಆಳ್ವಿಕೆ ನಡೆಸಿ ಬೆಳಗಾವಿಯ ಕೋಟೆಯನ್ನು ಕಟ್ಟಿಸಿದನು. ಕುಂತಳದ ಪ್ರಭುಗಳಾಗಿದ್ದು ರಟ್ಟರು ಕ್ರಿ.ಶ. ೧೨೫೦ ರವರೆಗೆ ರಾಜ್ಯವಾಳಿದರು. ನಂತರ ಈ ಪ್ರದೇಶ ದೇವಗಿರಿಯ ಯಾದವರ ಆಳ್ವಿಕೆಗೆ ಒಳಪಟ್ಟಿತು. ಇವರು ೧೩೨೦ ರವರೆಗೆ ಆಳ್ವಿಕೆ ನಡೆಸಿದರು. ಖಿಲ್ಜಿ ವಂಶದ ಮುಬಾರಕನು ಯಾದವರ ಕೊನೆಯ ಅರಸನಾದ ಶ್ರೀ ಶಂಕರದೇವರನ್ನು ಸೋಲಿಸುವುದರ ಮೂಲಕ ತನ್ನ ಅಧಿಪತ್ಯವನ್ನು ಸ್ಥಾಪಿಸಿದನು.[೪]

ಕ್ರಿ.ಶ. ೧೪೭೦ರಲ್ಲಿ ಬಹಮನಿ ಅರಸನಾದ ೨ನೇ ಮಹಮ್ಮದಶಹನ ಮಂತ್ರಿ ಮಹಮ್ಮದ ಗವಾನನು, ಗೋವೆಗೆ ದಂಡೆತ್ತಿ ಬಂದಾಗ ಬೆಳಗಾವಿಯಲ್ಲಿದ್ದ ವಿಜಯನಗರದ ಅಧೀನ ಅರಸು ವಿಕ್ರಮರಾಯನೊಂದಿಗೆ ಯುದ್ಧ ಮಾಡಿ ಜಯಿಸಿದನು. ತನ್ನ ಪ್ರತಿನಿಧಿಯಾಗಿ ಮುಸ್ತಾಫಾ ಎಂಬುವವನನ್ನು ನೇಮಿಸಿದಾಗ ಬೆಳಗಾವಿಗೆ ಮುಸ್ತಾಫಾಬಾದ ಎಂದು ಹೆಸರಾಯಿತು.[೫]

ಬಹಮನಿಯ ಪಾಳೆಗಾರನಾಗಿದ್ದು ಬಹದ್ದೂರರ ಗಿಲಾನಿ ಬಂಡೆದ್ದು ಬೆಳಗಾವಿ, ಗೋವೆ ಗೆದ್ದುಕೊಂಡನು. ಆದರೆ ಅಹಮ್ಮದಾಬಾದಿನ ಸುಲ್ತಾನ ಮಹಮ್ಮದಶಾ ಮತ್ತು ಬಿಜಾಪೂರದ ಯುಸುಫ

ಆದಿಲ್‌ಖಾನ ಶಹಾ ಕೂಡಿಕೊಂಡು ಬಹದ್ದೂರ ಗಿಲಾನಿಯನ್ನು ಸೋಲಿಸಿ ತಮ್ಮ ವಶಕ್ಕೆ ಪಡೆದುಕೊಂಡರು. ಇದೇ ಸಮಯದಲ್ಲಿ, ಪ್ರಬಲವಾಗಿ ಬೆಳೆದ ಅಸದಖಾನ್ ಈತನು ೧೫೧೧ರಲ್ಲಿ ಬೆಳಗಾವಿಯನ್ನು ಐ.ಎಲ್. ಮುಲ್ಕನಿಂದ ಕಸಿದುಕೊಂಡನು.[೬]

ಕ್ರಿ.ಶ. ೧೫೧೧ ರಿಂದ ೧೫೪೯ರವರೆಗೆ ಪರ್ಶಿಯಾ ದೇಶದ ತುರ್ಕ ವಂಶಕ್ಕೆ ಸೇರಿದ ಅಸದಖಾನ ಎಂಬುವನು ಆಳಿದನು. ಇವನ ತುರುವಾಯ ಶೇರಖಾನ ಎಂಬುವವನು ೧೫೫೦ ರಲ್ಲಿ ಶಹಪೇಟ (ಇಂದಿನ ಶಹಪೂರ) ನಿರ್ಮಿಸಿದನು. ನಂತರ ಸುಮಾರು ೧೬೪೮ ರಲ್ಲಿ ಅಬಿನೀಸಿಯಾದ ಗುಲಾಮ ಮಹಮ್ಮದ-ಬೀನ್-ಝುಮೀತಖಾನನ ವಶವಾಯಿತು. ಇನ್ನೊಂದೆಡೆ, ಹದಿನೇಳನೆಯ ಶತಮಾನದಲ್ಲಿ ಪೂರ್ತಿಯಾಗಿ ಮರಾಠರ ಪೇಶ್ವೆಗಳ ವಶವಾಯಿತು. ೧೬೭೮ ರಲ್ಲಿ ಶಿವಾಜಿಯ ಪ್ರಭಾವ ಹೆಚ್ಚಿತು. ಇದೇ ಸಮಯಕ್ಕೆ ಕೊಲ್ಲಾಪೂರದ ಛತ್ರಪತಿ, ಸವಣೂರು ನವಾಬರ ಆಡಳಿತಕ್ಕೆ ಒಳಪಟ್ಟಾಗ, ಇಡೀ ಜಿಲ್ಲೆಯ ಭೌಗೋಳಿಕ ಚಿತ್ರವು ಬದಲಾಗಿ ರಾಜಕೀಯ ಸ್ಥಿತ್ಯಂತರಗಳು ಕಂಡುಬಂದವು.[೭]

೧೭೭೬-೭೭ ರಲ್ಲಿ ಹೈದರಾಲಿಯ ವಶವಾದ ನಂತರ ಜನರಲ್ ಮನ್ರೋ ಇಂಗ್ಲೀಷ ಅಧಿಕಾರಿ ಪೇಶ್ವೆಯವರನ್ನು ೧೮೧೮ ರಲ್ಲಿ ಸೋಲಿಸುವುದರ ಮೂಲಕ ಬೆಳಗಾವಿ ಜಿಲ್ಹೆ ಬ್ರಿಟೀಷರ ಕೈವಶವಾಯಿತು. ಕ್ರಮೇಣ ೧೮೨೪ ರಲ್ಲಿ ಕಿತ್ತೂರನ್ನು ವಶಪಡಿಸಿಕೊಂಡರು. ೧೮೨೪ರಲ್ಲಿ ಬೆಳಗಾವಿ-ಯನ್ನು ಆಡಳಿತ ಜಿಲ್ಲೆಯನ್ನಾಗಿ ಮಾಡಿಕೊಂಡರು. ೧೮೨೭ ರಲ್ಲಿ ಗೌವರ್ನರ್ ಜನರಲ್ ಆದೇಶದ ಮೇರೆಗೆ ದಂಡಿನ ಛಾವಣಿ ಖಚಿತ ಪ್ರದೇಶಗಳನ್ನು ಗುರುತಿಸಿ ಅದಕ್ಕೆ ಸ್ಥಳಿಯ ಮರಾಠಾ ಯುವಕರನ್ನು ಸೈನ್ಯ ಭರ್ತಿ ಮಾಡಿ ಮರಾಠಾ ಲೈಟ್ ಇನ್‌ಫೆಂಟ್ರಿ ಎಂದು ಕರೆದರು.[೮]

೧೮೨೪ ರಲ್ಲಿ ಮಿ.ಢನಲಥ್ ಕಲೆಕ್ಟರನಾದ ಸಮಯದಲ್ಲಿ ಬೆಳಗಾವಿ ಜಿಲ್ಹೆ ಎಂದು ಬೇರ್ಪಟ್ಟಿತು. ಅದರಲ್ಲಿ ೧೦ ತಾಲ್ಲೂಕುಗಳು ಇದ್ದು, ೧೮೫೧ರಲ್ಲಿ ನಗರ ಸಭೆಯಾಯಿತು. ಮುಂದೆ ೧೮೪೮ ರಲ್ಲಿ ವಾಚನಾಲಯ ಸ್ಥಾಪನೆ, ೧೮೭೬ ರಲ್ಲಿ ಮಾರುಕಟ್ಟೆ ಸ್ಥಾಪನೆ, ೧೯೦೬ ರಲ್ಲಿ ದಿ. ಬೆಳಗಾಂವ ಪಾಯೋನಿಯರ ಅರ್ಬನ್ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ್ ಸ್ಥಾಪನೆಗೊಂಡವು. ಹೀಗೆ ಐತಿಹಾಸಿಕ ಏರು-ಪೇರುಗಳೊಂದಿಗೆ ತನ್ನಲ್ಲಿ ವಿಶಿಷ್ಟವಾದ ಪರಂಪರೆಯನ್ನು ಬೆಳಗಾವಿ ಗರ್ಭೀಕರಿಸಿಕೊಂಡಿದೆ.

೨.೪ ಆಡಳಿತಾತ್ಮಕ ವ್ಯವಸ್ಥೆ :

ಬ್ರಿಟೀಷರ ಆಡಳಿತಾಧಿಯಲ್ಲಿಯೇ ಹತ್ತು ತಾಲ್ಲೂಕುಗಳನ್ನು, ಬೆಳಗಾವಿ ಹೊಂದಿತ್ತು. ಪ್ರಸುತ್ತ, **ಬೆಳಗಾವಿ** ಜಿಲ್ಲಾ, ಕೇಂದ್ರ ಸ್ಥಳವಾಗಿ ೧೦ ತಾಲ್ಲೂಕುಗಳನ್ನು ಒಳಗೊಂಡಿದೆ. ೨೦೧೨ರ ಕಿತ್ತೂರ ಉತ್ಸವದಲ್ಲಿ ಮಾನ್ಯ ಮುಖ್ಯ ಮಂತ್ರಿ ಜಗದೀಶ ಶೆಟ್ಟರರವರು ಕಿತ್ತೂರನ್ನು ತಾಲ್ಲೂಕು ಎಂದು ಘೋಷಣೆ ಮಾಡುವ ಮೂಲಕ ೧೧ನೇ ತಾಲ್ಲೂಕು ರಚಿತಗೊಂಡಿತು.[೯] ಇವುಗಳಲ್ಲಿ ಕ್ರಮವಾಗಿ ಅಥಣಿ, ಬೈಲಹೊಂಗಲ, ಬೆಳಗಾವಿ, ಚಿಕ್ಕೋಡಿ,ಗೋಕಾಕ, ಹುಕ್ಕೇರಿ,ಖಾನಾಪೂರ, ರಾಯಬಾಗ, ರಾಮದುರ್ಗ,

ಸವದತ್ತಿ ಹಾಗೂ ಕಿತ್ತೂರು ಸೇರ್ಪಡೆಗೊಂಡಿವೆ. **ಅಧ್ಯಯನದ ಸಮಯದಲ್ಲಿ ಕಿತ್ತೂರ ಪ್ರತ್ಯೇಕ ತಾಲೂಕು ಆಗಿರಲಿಲ್ಲ**. ಎಲ್ಲ ಹನ್ನೊಂದು ತಾಲ್ಲೂಕುಗಳನ್ನು ಸೇರಿಸಿ ಮೂರು ಕಂದಾಯ ಉಪ-ವಿಭಾಗಗಳೆಂದು ಮಾಡಲಾಗಿದೆ. ಬೆಳಗಾವಿ, ಬೈಲಹೊಂಗಲ ಮತ್ತು ಚಿಕ್ಕೋಡಿ ಜಿಲ್ಲೆಯ ಉಪ ವಿಭಾಗಗಳು. ಇವುಗಳಲ್ಲಿ ರಾಯಬಾಗ ಅತೀ ಚಿಕ್ಕ ತಾಲ್ಲೂಕಾಗಿದ್ದು (೯೫೫ ಚ ಕಿ ಮೀ ವ್ಯಾಪ್ತಿ), ಅಥಣಿ ಅತೀ ದೊಡ್ಡ (೧೯೯೬ ಚ. ಕಿ. ಮೀ ವ್ಯಾಪ್ತಿ) ತಾಲ್ಲೂಕಾಗಿದೆ.

೩.೫ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿ :

ಗಡಿನಾಡು ಜಿಲ್ಲೆಯಾದ ಬೆಳಗಾವಿಯು ಕಲೆ, ಸಾಹಿತ್ಯ ಹಾಗೂ ಸಂಸ್ಕೃತಿಯಲ್ಲಿ ಪ್ರಾಚೀನ ಕಾಲದಿಂದಲೂ ಸಮೃದ್ಧವಾಗಿದೆ. ನಾಡಿನ ಕಲೆಗೆ, ಸಾಹಿತ್ಯಕ್ಕೆ ಅಪೂರ್ವವಾದ ಕಾಣಿಕೆ ನೀಡಿದೆ.

೧೯೨೪ ರಲ್ಲಿ ನಡೆದ ಕಾಂಗ್ರೆಸ್ ಅಧಿವೇಶನಕ್ಕೆ ಮಹಾತ್ಮಾ ಗಾಂಧೀಜಿಯವರು ಅಧ್ಯಕ್ಷರಾಗಿ-ದ್ದರು. ಹುಯಿಲಗೋಳ ನಾರಾಯಣರಾಯರು ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು ಎಂದು ಹಾಡಿ ಕನ್ನಡ ಚೈತನ್ಯದ ಪ್ರಜ್ಞಾ ಜ್ಯೋತಿಯನ್ನು ಹೊತ್ತಿಸಿದರು. ಐದು ಸಾಹಿತ್ಯ ಸಮ್ಮೇಳನಗಳು ೨೦೧೧ ರಲ್ಲಿ ವಿಶ್ವಕನ್ನಡ ಸಮ್ಮೇಳನ ನಡೆಯಿತು.

೩.೬ ಸಂಪನ್ಮೂಲಗಳ ಲಭ್ಯತೆ :

ಬೆಳಗಾವಿ ಜಿಲ್ಲೆಯ ಔದ್ಯೋಗಿಕ ಅಭಿವೃದ್ಧಿಯ ಅಧ್ಯಯನವಾದ ಪ್ರಯುಕ್ತ ಸಂಪನ್ಮೂಲಗಳ ಲಭ್ಯತೆಯ ಚಿತ್ರಣ ಅವಶ್ಯವೆನಿಸುತ್ತದೆ. ಉದ್ದಿಮೆಯ ಪ್ರಗತಿ, ಭೌತಿಕ, ನೈಸರ್ಗಿಕ ಹಾಗೂ ಅಭೌತಿಕ ಸಂಪನ್ಮೂಲಗಳು ಅತ್ಯವಶ್ಯಕ ಸಂಪನ್ಮೂಲಗಳ ಲಭ್ಯತೆಗೆ ಅನುಗುಣವಾಗಿ ಕೈಗಾರಿಕೆಗಳು ಕೇಂದ್ರೀಕರಣಗೊಳ್ಳುತ್ತವೆ. ಬೆಳಗಾವಿ ಜಿಲ್ಲೆಯನ್ನು ಸಕ್ಕರೆ ನಾಡು ಎಂದು ಕರೆಯಲು ಮುಖ್ಯ ಕಾರಣ ಇಲ್ಲಿ ಅಭಿವೃದ್ಧಿಗೊಂಡಿರುವ ಸಕ್ಕರೆ ಉದ್ದಿಮೆ ಹಾಗೂ ಅದಕ್ಕೆ ಪೂರಕವಾಗಿರುವ ಕಬ್ಬು ಬೆಳೆಯುವ ಕೃಷಿ ಪ್ರದೇಶ.

ಒಂದು ಪ್ರದೇಶದಲ್ಲಿ ಕೈಗಾರಿಕೆಗಳ ಪ್ರಗತಿಗೆ ಅದರ ಸುತ್ತಲೂ ಆವರಿಸಿರುವ ಪ್ರಾದೇಶಿಕ ಪರಿಸರ ಹೆಚ್ಚು ಪರಿಣಾಮ ಬೀರುತ್ತದೆ. ಸಂಪನ್ಮೂಲಗಳನ್ನು ಭೌತಿಕ ಮತ್ತು ಬೌದ್ಧಿಕ ಎಂದು ವರ್ಗ-ಯಿಸಬಹುದು. ಭೌತಿಕ ಸಂಪನ್ಮೂಲಗಳಲ್ಲಿ ಭೂಮಿ, ನೀರು, ರಸ್ತೆಗಳು, ಬ್ಯಾಂಕುಗಳು, ಸಾರಿಗೆ-ಸಂಪರ್ಕ, ಶಿಕ್ಷಣ ಸಂಸ್ಥೆಗಳು ಸೇರುತ್ತವೆ. ಬೌದ್ಧಿಕ ಸಂಪನ್ಮೂಲದಲ್ಲಿ ಮಾನವ ಸಂಪನ್ಮೂಲವೇ ಪ್ರಮುಖವಾಗಿರುತ್ತದೆ. ಅದರಲ್ಲಿ ನೈಪುಣ್ಯತೆ ಹೊಂದಿದ ಅರೆ-ಪರಿಣಿತ ಮತ್ತು ಶ್ರಮಿಕ ವರ್ಗದ ಸಂಖ್ಯೆ ಪ್ರಮುಖವಾಗುತ್ತದೆ. ಈ ದಿಶೆಯಲ್ಲಿ ಬೆಳಗಾವಿ ಜಿಲ್ಲೆಗೆ ಸಂಬಂಧಿಸಿದ ಸಂಪನ್ಮೂಲಗಳ ಲಭ್ಯತೆಯನ್ನು ಇಲ್ಲಿ ವಿಸ್ತೃತವಾಗಿ ಚರ್ಚಿಸಲಾಗಿದೆ.

೩.೬ (ಅ) ಭೂ ಸಂಪನ್ಮೂಲ :

ಕರ್ನಾಟಕದಲ್ಲಿಯೇ ಬೆಳಗಾವಿ ಅತೀ ದೊಡ್ಡ ಜಿಲ್ಲೆಯಾಗಿದೆ. ಅದು ಕರ್ನಾಟಕದ ಶೇಕಡಾ ೭.೦೦ರಷ್ಟು ಪ್ರದೇಶದಲ್ಲಿ ವ್ಯಾಪಿಸಿದೆ. ಉತ್ತರ ಕರ್ನಾಟಕದಲ್ಲಿ ಬೀಳು ಭೂಮಿ ಅಧಿಕವಾಗಿದೆ ಬಿತ್ತನೆಯಾದ ಪ್ರದೇಶ ಶೇಕಡಾ ೬೨.೩೯ ರಷ್ಟಿರುವ ಉ.ಕ.ವು ಕೃಷಿ ಆಧಾರಿತ ಕೈಗಾರಿಕೆಗಳಿಗೆ ಕಚ್ಚಾ ಸರಕುಗಳನ್ನು ಪೂರೈಸುತ್ತದೆ.

ಖಾನಾಪೂರ ತಾಲೂಕಿನಲ್ಲಿ ಅರಣ್ಯ ಪ್ರದೇಶವಿದ್ದು ಸಾಗುವಳಿ ಮಾಡದಿರುವ ಭೂಮಿಯು ಅತ್ಯಧಿಕ ಪ್ರಮಾಣದಲ್ಲಿದೆ. ಗೋಕಾಕ ತಾಲ್ಲೂಕು ಹೆಚ್ಚು ಬೀಳು ಭೂಮಿ ಹೊಂದಿದೆ. ಇದು **ಕೋಷ್ಟಕ** ೩.೧ (ಅ, ಬ, ಕ) ರಲ್ಲಿ ಸ್ಪಷ್ಟಗೊಳ್ಳುತ್ತದೆ.

ಒಟ್ಟಾರೆಯಾಗಿ ಬೆಳಗಾವಿ ಜಿಲ್ಲೆಯಲ್ಲಿ ಕೃಷಿಯೇತರ ಭೂಮಿ ಲಭ್ಯವಿದ್ದು, ಕೈಗಾರಿಕೆಗಳ ವಿಸ್ತರಣೆಗೆ ವಿಫುಲ ಅವಕಾಶಗಳಿವೆ. ಗೋಕಾಕ ಮತ್ತು ಅಥಣಿಗಳು ಭವಿಷ್ಯದ ಔದ್ಯೋಗಿಕ ಬೆಳವಣಿಗೆಗೆ ಸೂಕ್ತವೆನಿಸಿವೆ.

ಕೋಷ್ಟಕ ೩.೧ (ಅ) ಭೂ-ಸಂಪನ್ಮೂಲ

ಅ. ಸಂ	ವಿವರ		೨೦೦೧	ಒಟ್ಟು	೨೦೧೦	ಒಟ್ಟು
೧.	ಸಾಗುವಳಿಗೆ ಲಭ್ಯವಿಲ್ಲದ ಭೂಮಿ	ಅರಣ್ಯ	೧೯೦೪೨೪		೧೯೦೪೨೪	
		ವ್ಯವಸಾಯೇತರ	೬೯೦೪೪		೬೯೬೧೭	
		ಬಂಜರು	೪೪೩೪೨	೧೧೩೩೮೬	೪೪೩೪೨	೧೧೩೯೫೯
೨	ಸಾಗುವಳಿ ಮಾಡದಿರುವ ಇತರ ಭೂಮಿ	ಸಾಗುವಳಿ ಯೋಗ್ಯವಾದ ಬಂಜರು	೧೨೭೬೧		೧೧೪೬೫	
		ಖಾಯಂ ಗೋಮಾಳ	೨೪೮೦೭		೨೪೮೦೭	
		ವೃಕ್ಷ ಮತ್ತು ತೋಪು	೧೨೦೧	೩೮೭೬೯	೩೦೯೮	೩೯೩೭೦
೩	ಬೀಳು ಭೂಮಿ	ಚಾಲ್ತಿ	೧೪೦೬೧೦		೧೪೬೩೭೫	
		ಇತರೆ	೯೨೦೩	೧೪೯೮೧೩	೬೯೯೪	೧೫೩೩೬೯

(ಮೂಲ: ಕರ್ನಾಟಕ ಹಾಗೂ ಬೆಳಗಾವಿ ಜಿಲ್ಲಾ ಅಂಕಿ-ಅಂಶಗಳ ನೋಟ – ಕ್ರೋಢೀಕರಿಸಿದ್ದು)

ಕೋಷ್ಟಕ ೩.೧ (ಬ) ಭೂ-ಸಂಪನ್ಮೂಲ (ಹೆಕ್ಟೇರಗಳಲ್ಲಿ) (೨೦೧೦-೧೧)

ಅ ಸಂ	ತಾಲೂಕು	ಭೌಗೋಳಿಕ ವಿಸ್ತೀರ್ಣ	%	ಅರಣ್ಯ	%	ಸಾಗುವಳಿ ಲಭ್ಯವಿಲ್ಲದಿರುವ ಭೂಮಿ	%	ಸಾಗುವಳಿ ಮಾಡದಿರುವ ಇತರ ಭೂಮಿ	%	ಬೀಳು ಭೂಮಿ	%	ಬಿತ್ತನೆಯಾದ ಪ್ರದೇಶ	%
೧	ಅಥಣಿ	೧೯೯೫೧೩	೧೪.೮೫	೫೮೧	೦.೧೩	೧೦೯೦೧	೯.೫೬	೫೪೩೪	೧೩.೮೧	೨೦೦೬೪	೧೩.೦೮	೨೦೬೩೯೦	೧೮.೬೧
೨	ಬೈಲಹೊಂಗಲ	೧೧೨೨೩೩	೮.೩೫	೭೯೧೩	೪.೧೬	೧೧೮೮೭	೧೦.೪೩	೨೭೮೩	೭.೦೭	೪೯೩೯	೩.೨೨	೧೨೭೭೦೬	೧೧.೫೧
೩	ಬೆಳಗಾವಿ	೧೦೩೭೨೧	೭.೭೨	೨೨೬೪೩	೧೧.೮೯	೯೪೪೩	೮.೨೯	೬೮೦೧	೧೭.೨೮	೨೬೮೦	೧.೭೫	೭೨೫೨೮	೬.೫೪
೪	ಚಿಕ್ಕೋಡಿ	೧೨೬೯೪೯	೯.೪೪	೫೪೭	೦.೨೯	೧೨೩೦೦	೧೦.೭೯	೪೬೮೯	೧೧.೯೨	೧೪೮೦೫	೯.೬೫	೧೧೨೬೨೯	೧೦.೧೫
೫	ಗೋಕಾಕ	೧೫೪೩೦೮	೧೧.೪೮	೨೨೨೮೪	೧೧.೭೦	೧೧೬೦೧	೧೦.೧೮	೧೭೭೧	೪.೫೦	೩೩೦೫೨	೨೧.೫೫	೧೨೮೧೮೨	೧೧.೫೬
೬	ಹುಕ್ಕೇರಿ	೯೯೧೪೦	೭.೩೭	೧೩೯೮೭	೭.೩೪	೧೪೨೫೫	೧೨.೫೨	೨೮೯೪	೭.೩೬	೬೫೨೯	೪.೨೫	೭೭೭೭೩	೭.೦೧
೭	ಖಾನಾಪೂರ	೧೭೨೯೫೬	೧೨.೮೬	೯೧೩೦೯	೪೭.೯೫	೮೧೩೪	೭.೧೪	೭೧೧೮	೧೮.೦೯	೧೭೮೯೬	೧೧.೬೮	೪೯೪೯೫	೪.೪೬
೮	ರಾಯಬಾಗ	೯೫೮೭೪	೭.೧೩	೨೬೪೭	೧.೩೯	೯೬೫೭	೮.೪೭	೨೩೪೭	೫.೯೬	೧೮೬೨೩	೧೨.೧೪	೭೧೩೫೦	೬.೪೩
೯	ರಾಮದುರ್ಗ	೧೨೧೫೪೨	೯.೦೪	೧೫೦೮೧	೭.೯೨	೯೧೬೧	೮.೦೪	೧೧೪೯	೨.೯೨	೧೬೩೭೮	೧೦.೬೮	೧೦೫೦೫೫	೯.೪೭
೧೦	ಸವದತ್ತಿ	೧೫೮೧೪೬	೧೧.೭೬	೧೩೪೩೨	೭.೦೫	೧೬೬೨೦	೧೪.೫೮	೪೩೩೪	೧೧.೦೯	೧೮೪೦೬	೧೨.೦೦	೧೫೮೦೯೨	೧೪.೨೫
	ಒಟ್ಟು	೧೩೪೪೩೮೨		೧೯೦೪೨೪		೧೧೩೯೫೯		೩೯೩೪೭		೧೫೩೩೭೨		೧೧೦೯೨೦೦	

(ಮೂಲ: ಕರ್ನಾಟಕ ಹಾಗೂ ಬೆಳಗಾವಿ ಜಿಲ್ಲಾ ಅಂಕಿ-ಅಂಶಗಳ ನೋಟ – ಕ್ರೋಢೀಕರಿಸಿದ್ದು)

ಕೋಷ್ಟಕ ೩.೧ (ಕ) ಭೂ-ಸಂಪನ್ಮೂಲ

ಅ ಸಂ	ಪ್ರದೇಶ	ಭೌಗೋಳಿಕ ವಿಸ್ತೀರ್ಣ	%	ಅರಣ್ಯ	%	ಸಾಗುವಳಿ ಲಭ್ಯವಿಲ್ಲದಿರುವ ಭೂಮಿ	%	ಸಾಗುವಳಿ ಮಾಡದಿರುವ ಇತರ ಭೂಮಿ	%	ಬೀಳು ಭೂಮಿ	%	ಬಿತ್ತನೆಯಾದ ಪ್ರದೇಶ	%
೧	ದಕ್ಷಿಣ ಕರ್ನಾಟಕ	೯೨೩೬೭೨೦	೪೮.೪೮	೧೬೨೭೯೭೭	೫೩.೦೦	೧೪೧೨೯೩೧	೬೪.೯೯	೧೩೦೬೩೮೮	೮೦.೯೪	೭೭೩೯೨೭	೪೩.೩೫	೪೮೪೨೦೭೬	೩೭.೬೧
೨	ಉತ್ತರ ಕರ್ನಾಟಕ	೯೮೧೩೧೧೬	೫೧.೫೨	೧೪೪೩೮೫೬	೪೭.೦೦	೭೬೧೦೦೦	೩೫.೦೧	೩೦೮೨೮೯	೧೯.೦೬	೧೦೧೧೩೬೧	೫೬.೬೫	೮೦೩೧೨೩೨	೬೨.೩೯
೩	ಬೆಳಗಾವಿ	೧೩೪೪೩೮೨	೭.೦೬	೧೯೦೪೨೪	೬.೨೦	೧೧೩೯೫೯	೫.೨೪	೩೯೩೭೦	೨.೪೪	೧೫೩೩೬೯	೮.೫೯	೧೧೦೯೨೦೦	೮.೬೨
೪	ಕರ್ನಾಟಕ	೧೯೦೪೯೮೩೬	೧೦೦	೩೦೭೧೮೩೩	೧೦೦	೨೧೭೩೯೩೧	೧೦೦	೧೬೧೪೬೭೭	೧೦೦	೧೭೮೫೨೮೮	೧೦೦	೧೨೮೭೩೩೦೮	೧೦೦

(ಮೂಲ: ಕರ್ನಾಟಕ ಹಾಗೂ ಬೆಳಗಾವಿ ಜಿಲ್ಲಾ ಅಂಕಿ-ಅಂಶಗಳ ನೋಟ – ಕ್ರೋಢೀಕರಿಸಿದ್ದು)

೩.೬ (ಬ) ಜಲ - ಸಂಪನ್ಮೂಲ :

ಕೃಷಿಯ ಉತ್ಪನ್ನಗಳು ಕೃಷಿ ಆಧಾರಿತ ಕೈಗಾರಿಕೆಗಳಿಗೆ ಕಚ್ಚಾ ವಸ್ತುಗಳನ್ನು ಒದಗಿಸುತ್ತವೆ. ಜಲ ಸಂಪನ್ಮೂಲ ಕೃಷಿಗೆ ಪೂರಕವಾದರೆ, ಕೈಗಾರಿಕೆಗಳ ಬೆಳವಣಿಗೆಗಳಿಗೆ ಪರೋಕ್ಷ ಸಹಾಯ ಮಾಡುತ್ತವೆ. ಜಿಲ್ಲೆಯಲ್ಲಿ ಕೃಷ್ಣಾ, ಮಲಪ್ರಭಾ, ಮತ್ತು ಘಟಪ್ರಭಾ ನದಿಗಳು ಮುಖ್ಯ ನದಿಗಳಾಗಿದ್ದು ಮಾರ್ಕಾಂಡೇಯ, ಹಿರಣ್ಯಕೇಶಿ, ಮಹಾದಾಯಿ, ವೇದಗಂಗಾ ಮತ್ತು ದೂಧಗಂಗಾ ಉಪನದಿಗಳು ಹರಿಯುತ್ತಿವೆ. ಮಲಪ್ರಭಾ ನದಿಗೆ ಸವದತ್ತಿ ತಾಲ್ಲೂಕಿನ ನವಿಲುತೀರ್ಥದ ಹತ್ತಿರ ಹಾಗೂ ಘಟಪ್ರಭಾ ನದಿಗೆ ಹುಕ್ಕೇರಿ ತಾಲ್ಲೂಕಿನ ಹಿಡಕಲ್ ಹತ್ತಿರ ಬೃಹತ್ ಅಣೆಕಟ್ಟುಗಳನ್ನು ಕಟ್ಟಲಾಗಿದೆ. ಈ ಎರಡು ಬೃಹತ್ ನೀರಾವರಿ ಯೋಜನೆಗಳಿಂದ ಜಿಲ್ಲೆಯ ಒಟ್ಟು ೦೮ ತಾಲ್ಲೂಕುಗಳು ಭಾಗಶ: ನೀರಾವರಿ ಸೌಲಭ್ಯಕ್ಕೊಳಪಟ್ಟಿವೆ. ಮಲೆನಾಡಿನ ಲಕ್ಷಣ ಹೊಂದಿರುವ ಬೆಳಗಾವಿ ಜಿಲ್ಲೆಯ ಜಲಸಂಪನ್ಮೂಲಗಳನ್ನು **ಕೋಷ್ಟಕ** ೩.೨ (ಅ,ಬ,ಕ) ರಲ್ಲಿ ವಿವರಿಸುತ್ತದೆ.

ಸೂಚಿತ ಕೋಷ್ಟಕದಿಂದ ಕಂಡುಬರುವ ಸಾಮಾನ್ಯ ಅಂಶವೇನೆಂದರೆ ಮಳೆಯ ಸರಾಸರಿ ಪ್ರಮಾಣ ಬೆಳಗಾವಿ ಜಿಲ್ಲೆಯಲ್ಲಿ, ಹತ್ತು ವರ್ಷಗಳ ಅವಧಿಯಲ್ಲಿ ಅಂದರೆ, ೨೦೦೦ ರಿಂದ ೨೦೧೦ ರವರೆಗೆ ಹೆಚ್ಚಾದ ಪ್ರಮಾಣ ಸ್ಪಷ್ಟವಾಗಿರುತ್ತದೆ. ಅದರಂತೆ ಎಲ್ಲ ತಾಲ್ಲೂಕುಗಳು ಮಿಶ್ರ ರೀತಿಯ ಪ್ರಗತಿಯನ್ನು ಸಂಕೇತಿಸುತ್ತವೆ. ಪ್ರತೀ ವರ್ಷದಲ್ಲಿ ಏರಿಳಿತಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ಖಾನಾಪೂರ ಮತ್ತು ಬೆಳಗಾವಿಯಲ್ಲಿ ೨೦೦೦ನೆಯ ಸಾಲಿಗೆ ಹೋಲಿಸಿದಾಗ ಪ್ರಮಾಣದಲ್ಲಿ ಹೆಚ್ಚಳವಾದದ್ದು ಕಂಡು ಬರುತ್ತದೆ. ಅದೇ ರೀತಿಯಲ್ಲಿ ಚಿಕ್ಕೋಡಿ, ರಾಯಬಾಗ, ರಾಮದುರ್ಗ, ಗೋಕಾಕಗಳಲ್ಲಿ ವಿರಳ ಪ್ರಮಾಣದಲ್ಲಿ ಏರಿಕೆ ಗೋಚರಿಸುತ್ತದೆ. ಒಟ್ಟಾರೆ, ಬೆಳಗಾವಿ ಜಿಲ್ಲೆಯ ಸರಾಸರಿ ಮಳೆಯ ಪ್ರಮಾಣವು ಶೇಕಡಾ ೨೨.೮೫.

ಕಳೆದ ದಶಕದುದ್ದಕ್ಕೂ ದಕ್ಷಿಣ ಮತ್ತು ಉತ್ತರ ಕರ್ನಾಟಕದಲ್ಲಿನ ಒಟ್ಟಾರೆ ಮಳೆ ಪ್ರಮಾಣವು ಹೆಚ್ಚಾಗಿದೆ. ಹಾಗೂ ದಕ್ಷಿಣ ಕರ್ನಾಟಕದ ಮಳೆ ಪ್ರಮಾಣವು ಉತ್ತರ ಕರ್ನಾಟಕಕ್ಕಿಂತ ಅಧಿಕವಾಗಿದೆ. ಬೆಳಗಾವಿ ತಾಲ್ಲೂಕು ಅರೆಮಲೆನಾಡು ಪ್ರದೇಶವಾದರೂ ಕೂಡ ಮಳೆಯ ಗತಿಯು ಮಿಶ್ರಗತಿಯನ್ನು ಸೂಚಿಸುತ್ತಿದೆ. ಒಟ್ಟು ಮಳೆ ಪ್ರಮಾಣದಲ್ಲಿ ಏರಿಕೆ ಕಂಡರೂ, ಖಾನಾಪೂರ ತಾಲೂಕಿನ ಕೊಡುಗೆ ಅಧಿಕವಾಗಿದೆ.

ಇದು ಕೃಷಿ ಚಟುವಟಿಕೆಗಳಿಗೆ ಪೂರಕವಾದ ವಾತಾವರಣವನ್ನು ಕಲ್ಪಿಸಿದೆ. ಕಾರಣ, ಕೃಷಿ ಆಧಾರಿತ ಕೈಗಾರಿಕೆಗಳೂ ಕೂಡ ಹೆಚ್ಚಳವಾಗಿವೆ.

ಕೋಷ್ಟಕ ೩.೨ (ಅ) ಜಲ ಸಂಪನ್ಮೂಲ (ಮಿಲಿ ಮೀಟರಗಳಲ್ಲಿ)

ಅ. ಸಂ.	ವಿವರ	೨೦೦೧	೨೦೦೧	೨೦೦೩	೨೦೦೪	೨೦೦೫	೨೦೦೬	೨೦೦೭	೨೦೦೮	೨೦೦೯	೨೦೧೦
೧	ವಾಸ್ತವಿಕ ಮಳೆ	೫೯೫೩.೭	೫೯೪೯.೦	೪೪೮೬.೯	೭೩೬೯.೭	೧೦೩೩೪.೫	೮೬೨೫.೬	೯೦೬೫.೪	೮೬೪೮.೭	೧೧೩೯೧.೨	೯೩೮೨.೩
೨	ಸರಾಸರಿ ಮಳೆ ದಿನಗಳು	೪೨.೭	೪೧.೬	-	೪೯.೦	೫೯.೨	೫೬.೪	೪೫.೩	೫೦.೯	೫೩.೯	-

ಕೋಷ್ಟಕ ೩.೨ (ಬ) ಜಲ ಸಂಪನ್ಮೂಲ (ಸರಾಸರಿ ಮಳೆ ಮಿಲಿ ಮೀಟರಗಳಲ್ಲಿ)

ಅ. ಸಂ	ತಾಲೂಕು	೨೦೦೦	೨೦೦೨	೨೦೦೪	೨೦೦೬	೨೦೦೮	೨೦೧೦
೧	ಅಥಣಿ	೫೭೫.೫	೫೧೦.೩	೫೮೯.೪	೬೯೮.೫	೫೫೦.೦	೭೪೦.೦
೨	ಬೈಲಹೊಂಗಲ	೬೯೦.೦	೪೫೩.೫	೫೬೫.೬	೫೨೬.೦	೭೧೨.೪	೯೬೭.೧
೩	ಬೆಳಗಾವಿ	೧೨೨೬.೩	-	೧೧೫೩.೭	೧೮೧೬.೦	೧೩೨೪.೨	೧೨೫೨.೨
೪	ಚಿಕ್ಕೋಡಿ	೭೫೩.೯	೬೧೧.೨	೭೩೦.೪	೮೩೬.೯	೮೭೪.೭	೮೧೬.೯
೫	ಗೋಕಾಕ	೫೯೬.೧	೩೬೨.೪	೪೦೧.೯	೩೮೧.೪	೫೪೮.೬	೪೯೫.೮
೬	ಹುಕ್ಕೇರಿ	೪೭೮.೦	೪೦೫.೩	೫೯೪.೯	೬೮೪.೨	೬೧೩.೬	೮೮೧.೯
೭	ಖಾನಾಪೂರ	೧೫೨೪.೫	೧೧೮೪.೭	೧೬೬೬.೯	೨೨೨೭.೭	೨೨೧೪.೯	೨೦೨೨.೪
೮	ರಾಯಬಾಗ	೬೮೪.೪	೪೫೮.೮	೫೨೭.೪	೪೮೬.೯	೭೭೯.೬	೭೦೨.೮
೯	ರಾಮದುರ್ಗ	೫೫೬.೧	೪೬೪.೬	೬೫೧.೮	೩೯೩.೧	೪೦೯.೪	೫೩೧.೮
೧೦	ಸವದತ್ತಿ	೫೫೮.೧	೩೭೭.೨	೪೮೭.೭	೫೭೪.೯	೬೨೧.೩	೬೭೪.೪

ಕೋಷ್ಟಕ ೩.೨ (ಕ) ಜಲ ಸಂಪನ್ಮೂಲ (ಸರಾಸರಿ ಮಳೆ ಮಿಲಿ ಮೀಟರಗಳಲ್ಲಿ)

ಅ.ಸಂ	ಪ್ರದೇಶ	೨೦೦೦	೨೦೦೨	೨೦೦೪	೨೦೦೬	೨೦೦೮	೨೦೧೦
೧	ದಕ್ಷಿಣ ಕರ್ನಾಟಕ	೨೫೦೪೦	೧೮೫೪೧	೨೩೧೨೪	೨೩೭೪೫	೨೪೮೯೪	೨೮೧೩೯
೨	ಉತ್ತರ ಕರ್ನಾಟಕ	೧೦೨೩೫	೭೬೩೬	೯೦೧೯	೯೯೬೭	೯೯೮೮	೧೨೮೦೨
೩	ಬೆಳಗಾವಿ	೯೫೧	೭೮೭	೯೫೪	೧೨೯೮	೧೦೭೨	೧೧೯೦
೪	ಕರ್ನಾಟಕ	೧೪೨೦	೧೦೪೨	೧೨೭೧	೧೪೦೩	೧೩೪೦	೧೫೦೦

(ಮೂಲ: ಕರ್ನಾಟಕ ಹಾಗೂ ಬೆಳಗಾವಿ ಜಿಲ್ಲಾ ಅಂಕಿ-ಅಂಶಗಳ ನೋಟ – ಕ್ರೋಢೀಕರಿಸಿದ್ದು)

೩.೬ (ಕ) ಸಾರಿಗೆ - ಸಂಪರ್ಕ ಸಾಧನಗಳು :

ಸಂಪರ್ಕ ಸಾಧನಗಳು ಪ್ರಗತಿಯ ಬೆನ್ನೆಲುಬು. ಜನರನ್ನು ಮತ್ತು ಉತ್ಪಾದಿತ ಸರಕುಗಳನ್ನು ಬೇರೆ ಪ್ರದೇಶಕ್ಕೆ ರವಾನಿಸಲು ಅಗತ್ಯವಾಗಿ ಬೇಕು. ಇವುಗಳಲ್ಲಿ ವಾಹನಗಳು, ರಸ್ತೆಗಳು, ರೈಲುಮಾರ್ಗ, ಅಂಚೆ ಕಚೇರಿಗಳು, ದೂರವಾಣಿ ಸಂಪರ್ಕ, ಮೊಬೈಲ್‌ಗಳು ಕೂಡ ಸೇರುತ್ತವೆ. ಈ ಸಾಧನಗಳು ಪರಸ್ಪರ ಸಂಪರ್ಕ ಏರ್ಪಡಿಸಿ ದೇಶದ ಉದ್ದಗಲಕ್ಕೂ ಹರಡಿರುವುದರಿಂದ ಇವುಗಳನ್ನು ಆರ್ಥಿಕ ವ್ಯವಸ್ಥೆಯ ಜೀವನಾಡಿಗಳೆಂದು ಕರೆಯುತ್ತಾರೆ. ದೇಹದಲ್ಲಿ ನರವ್ಯೂಹವು ಸಂಪರ್ಕ ಸಾಧನವಾದಂತೆ ಆರ್ಥಿಕತೆಗೆ ಸಂಪರ್ಕ ವ್ಯವಸ್ಥೆ ಸಾಧನವಾಗಿದೆ. ಸಾಮಾನ್ಯವಾಗಿ ಔದ್ಯೋಗಿಕ ಪ್ರಗತಿ ಹೊಂದಿದ ಪ್ರದೇಶಗಳು ಉತ್ಕೃಷ್ಟ ಗುಣಮಟ್ಟದ ಸಂಪರ್ಕ ಸಾಧನ ಹೊಂದಿರುವುದು ಸರ್ವವಿಹಿತವಾಗಿದೆ.

ಬೆಳಗಾವಿ ಜಿಲ್ಲೆಗೆ ಸಂಬಂಧಿಸಿದಂತೆ ಸಂಪರ್ಕ ಸಾಧನಗಳ ವ್ಯವಸ್ಥೆಯನ್ನು **ಕೋಷ್ಟಕ ೩.೩** (ಅ, ಬ, ಕ)ರಲ್ಲಿ ಬಿಂಬಿಸುತ್ತದೆ.

ಕಳೆದ ದಶಕದಲ್ಲಿ ಸಾರಿಗೆ ಸಂಪರ್ಕದಲ್ಲಿ ಉಂಟಾದ ಬದಲಾಣೆಗಳನ್ನು ಸೂಚಿತ ಕೋಷ್ಟಕದಿಂದ ಕಂಡುಕೊಳ್ಳಬಹುದು. ವಾಹನಗಳ ಸಂಖ್ಯೆ ದ್ವಿಗುಣಗೊಂಡಿದೆ. ಆದರೆ ಅವುಗಳ ಪ್ರಮಾಣಕ್ಕೆ ತಕ್ಕಂತೆ ರಸ್ತೆಗಳ ಅಭಿವೃದ್ಧಿಯಾಗಿರುವುದಿಲ್ಲ. ಗ್ರಾಮೀಣ ಪ್ರದೇಶಗಳ ಮುಖ್ಯ ಸಂಪರ್ಕ ಸಾಧನವಾದ ಅಂಚೆ ಕಚೇರಿಗಳಲ್ಲಿ ಅಲ್ಪ ಪ್ರಮಾಣದ ಅಭಿವೃದ್ಧಿಗೊಂಡಿವೆ. ಮೊಬೈಲ್ ಬಳಕೆಯಿಂದ ಸ್ಥಿರ ದೂರವಾಣಿಗಳ ಸಂಖ್ಯೆ ಸ್ಥಿರವಾಗಿಯೇ ಇದೆ.

ಕೈಗಾರಿಕಾ ಕೇಂದ್ರೀಕರಣಗೊಂಡ ಬೆಳಗಾವಿಯಲ್ಲಿ ವಾಹನಗಳು, ಬಸ್ಸುಗಳು, ಇತರ ವಾಹನಗಳು ಇತರ ತಾಲ್ಲೂಕುಗಳಿಗೆ ಹೋಲಿಸಿದಾಗ ಅಧಿಕವಿರುವುದು ಕಂಡು ಬರುತ್ತದೆ. ಬೈಲಹೊಂಗಲ, ರಾಮದುರ್ಗ, ಸವದತ್ತಿಗಳಲ್ಲಿ ರೈಲು ಸಂಚಾರದ ಮಾರ್ಗಗಳು ಗೋಕಾಕ, ಚಿಕ್ಕೋಡಿಗಳಲ್ಲಿ ಅಧಿಕ ಪ್ರಮಾಣದ ದೂರವಾಣಿ ಸಂಪರ್ಕಗಳಿವೆ.

ಬೆಳಗಾವಿ ತಾಲ್ಲೂಕು ಸಂಪರ್ಕ ಸಾಧನಗಳಲ್ಲಿ ಅಧಿಕ ಪ್ರಗತಿ ದಾಖಲಿಸಿದೆ. ಸರಕು ಸಾಗಿಸುವ ವಾಹನಗಳು ಬೆಳಗಾವಿಯಲ್ಲಿ ಕೈಗಾರಿಕಾ ಉತ್ಪನ್ನಗಳನ್ನು ಸಾಗಿಸಲು ಪೂರಕವಾಗಿವೆ. ಖಾನಾಪೂರ ತಾಲ್ಲೂಕು ಹೆಚ್ಚಿನ ರೈಲು ಸಂಪರ್ಕ ಹೊಂದಿದ್ದು, ಅರಣ್ಯ ಉತ್ಪಾದಕಗಳನ್ನು ಮಾರುಕಟ್ಟೆಗೆ ಸಾಗಿಸಲು ಮುಖ್ಯ ಸಂಪರ್ಕ ಸಾಧನವಾಗಿದೆ.

ರಾಜ್ಯದ ದಕ್ಷಿಣ ಕರ್ನಾಟಕದಲ್ಲಿ ಎಲ್ಲ ಸಂಪರ್ಕ ಸಾಧನಗಳು ಹೆಚ್ಚು ಪ್ರಮಾಣದಲ್ಲಿವೆ. ತಾಲ್ಲೂಕು ಸರಾಸರಿ ದಾಖಲೆಗಳ ಪ್ರಕಾರ ಅಂಚೆ ಕಚೇರಿ ಮತ್ತು ದೂರವಾಣಿ ಕೇಂದ್ರಗಳು ದಕ್ಷಿಣ ಕರ್ನಾಟಕದಲ್ಲಿ ಉತ್ತರ ಕರ್ನಾಟಕಕ್ಕಿಂತ ಅಧಿಕವಾಗಿದೆ.

ಇವು ಕೈಗಾರಿಕೆಗಳ ಬೆಳವಣಿಗೆಗೆ ಪೂರಕವಾದ ವಾತಾವರಣವನ್ನು ಕಲ್ಪಿಸಿವೆ.

ಕೋಷ್ಟಕ ೩.೩ (ಅ) ಸಾರಿಗೆ ಸಂಪರ್ಕ ಸಾಧನಗಳು

ಅ. ಸಂ	ವರ್ಷ	ಒಟ್ಟು ವಾಹನಗಳು	ಒಟ್ಟು ರಸ್ತೆ ಉದ್ದ (ಕಿ. ಮೀ.)	ಒಟ್ಟು ರೈಲು ಮಾರ್ಗ (ಕಿ. ಮೀ.)	ಅಂಚೆ ಕಚೇರಿಗಳು ಸಂಖ್ಯೆ	ದೂರವಾಣಿ ವಿನಿಮಯ ಕೇಂದ್ರಗಳು	ದೂರವಾಣಿ ಸಂಪರ್ಕಗಳು
೧	೨೦೦೧	೨೪೯೪೭೫	೧೨೨೧೨	೨೨೦	೭೨೫	೧೭೯	೧೨೩೩೩೭
೨	೨೦೦೩	೩೧೮೨೯೦	೧೨೧೯೫	೨೨೦	೭೨೬	೧೭೯	೧೪೭೫೪೪
೩	೨೦೦೫	೩೬೭೪೦೪	೧೨೯೦೩	೧೯೭	೭೨೩	೧೮೯	೧೫೩೪೬೦
೪	೨೦೦೭	೪೨೭೩೯೨	೧೮೯೦೯	೧೯೭	೭೨೫	೧೮೯	೧೫೧೪೮೫
೫	೨೦೦೯	೪೮೨೬೭೭	೧೭೦೮೯	೧೯೭	೮೦೪	೧೮೯	೧೩೨
೬	೨೦೧೧	೫೭೮೮೬೭	-	೧೯೭	೮೦೪	೧೮೯	೧೨೩೫೨೩

(ಮೂಲ: ಕರ್ನಾಟಕ ಹಾಗೂ ಬೆಳಗಾವಿ ಜಿಲ್ಲಾ ಅಂಕಿ–ಅಂಶಗಳ ನೋಟ – ಕ್ರೋಢೀಕರಿಸಿದ್ದು)

ಕೋಷ್ಟಕ ೩.೩ (ಖ) ಸಾರಿಗೆ ಸಂಪರ್ಕ ಸಾಧನಗಳು (೨೦೧೦-೧೧)

ಅ. ಸಂ	ತಾಲೂಕು	ಸರಕು ವಾಹನಗಳು	ಬಸ್ಸುಗಳು	ಟ್ಯಾಕ್ಸಿಗಳು	ಎರಡು ಗಾಲಿಯ ವಾಹನಗಳು	ನಾಲ್ಕು ಗಾಲಿಯ ವಾಹನಗಳು	ರೈಲು ಮಾರ್ಗಗಳ ಉದ್ದಳತೆ	ಅಂಚೆ ಕಛೇರಿಗಳು	ದೂರವಾಣಿ ಕೇಂದ್ರಗಳು	ದೂರವಾಣಿಗಳು
೧	ಅಥಣಿ	೮೩೫	೮೦	೮೬೦	೪೦೮೪೦	೧೦೬೪೩	೧೫	೮೮	೨೬	೧೦೫೫೪
೨	ಬೈಲಹೋಂಗಲ	೧೨೨೪	೬೫	೪೮೪	೧೮೮೧೨	೭೭೪೮	೦೦	೯೫	೧೮	೧೧೧೧೨
೩	ಬೆಳಗಾವಿ	೧೦೦೧೪೪	೧೬೨೦	೬೬೬೫	೨೧೬೪೮೬	೨೮೯೩೧	೩೬	೧೦೫	೨೮	೪೬೩೦೯
೪	ಚಿಕ್ಕೋಡಿ	೧೪೧೫	೧೨೧	೧೫೮೧	೪೬೮೧೫	೧೦೨೨೨	೧೩	೯೯	೨೧	೧೭೪೭೭
೫	ಗೋಕಾಕ	೧೩೩೫	೧೫೧	೭೯೩	೨೯೮೦೩	೯೯೩೭	೨೦	೧೫೮	೧೮	೧೧೨೫೦
೬	ಹುಕ್ಕೇರಿ	೫೬೭	೧೨೫	೫೦೮	೨೦೧೧೨	೪೦೮೧	೧೮	೭೭	೧೮	೮೯೨೫
೭	ಖಾನಾಪೂರ	೨೫೩೬	೧೫೫	೨೬೮	೧೭೪೨೦	೪೪೭೪	೬೪	೪೧	೧೩	೫೫೩೯
೮	ರಾಯಬಾಗ	೬೩೩	೧೫೦	೪೭೯	೩೦೧೬೬	೯೯೩೬	೩೧	೪೪	೧೩	೪೭೩೬
೯	ರಾಮದುರ್ಗ	೫೩೩	೧೩೫	೧೯೪	೯೨೦೧	೭೦೨೮	೦೦	೪೪	೧೫	೪೬೦೧
೧೦	ಸವದತ್ತಿ	೯೧೭	೧೭೦	೫೨೨	೧೨೭೩೮	೭೭೮೨	೦೦	೫೩	೧೯	೩೦೭೭೦

(ಮೂಲ: ಕರ್ನಾಟಕ ಹಾಗೂ ಬೆಳಗಾವಿ ಜಿಲ್ಲಾ ಅಂಕಿ-ಅಂಶಗಳ ನೋಟ – ಕ್ರೋಢೀಕರಿಸಿದ್ದು)

ಕೋಷ್ಟಕ ೩.೩ (ಕ) ಸಾರಿಗೆ ಸಂಪರ್ಕ ಸಾಧನಗಳು

ಕ್ರ. ಸಂ	ಪ್ರದೇಶ		ಸರಕು ವಾಹನಗಳು	ಬಸ್ಸುಗಳು	ಟ್ಯಾಕ್ಸಿಗಳು	ಎರಡು ಗಾಲಿಯ ವಾಹನಗಳು	ನಾಲ್ಕು ಗಾಲಿಯ ವಾಹನಗಳು	ರೈಲು ಮಾರ್ಗಗಳ ಉದ್ದಳತೆ	ಅಂಚೆ ಕಛೇರಿ ಗಳು	ದೂರವಾಣಿ ಕೇಂದ್ರಗಳು	ದೂರವಾಣಿಗಳು ಬಿ.ಎಸ್.ಎನ್. ಎಲ್
೧	ದಕ್ಷಿಣ ಕರ್ನಾಟಕ	ಒಟ್ಟು	೨೯೭೩೩೯	೪೬೫೪೯	೯೬೯೪೦	೫೧೧೭೪೫೬	೧೩೮೩೨೭೦	೧೬೬೧.೦೨	೫೨೬೪	೧೬೦೮	೧೫೬೧೫೦೪
		ಸರಾಸರಿ	೧೭೪೯೧	೨೭೩೮	೫೭೦೨	೩೦೦೧೦೨೭	೮೧೩೬೯	೯೭.೭೧	೩೧೦	೯೫	೯೧೮೫೩
		ಶೇಕಡಾ	೭೧.೫೬	೮೦.೨೪	೭೪.೯೩	೭೨.೮೭	೭೪.೫೨	೫೧.೨೦	೫೩.೮೭	೫೫.೭೪	೭೬.೭೩
೨	ಉತ್ತರ ಕರ್ನಾಟಕ	ಒಟ್ಟು	೧೧೮೧೫೨	೧೧೪೬೩	೩೨೪೩೨	೧೯೦೪೮೯೪	೪೭೩೦೯೧	೧೫೮೩.೧೦	೪೫೦೮	೧೨೨೭	೪೭೩೬೩೯
		ಸರಾಸರಿ	೯೦೮೯	೮೮೧	೨೪೯೫	೧೪೬೫೩೦	೩೯೩೯೧	೧೨೧.೭೬	೩೪೭	೯೪	೩೬೪೩೪
		ಶೇಕಡಾ	೨೮.೪೪	೧೯.೭೬	೨೫.೦೭	೨೭.೧೩	೨೫.೪೮	೪೮.೮೦	೪೬.೧೩	೪೨.೫೬	೨೩.೨೭
೩	ಬೆಳಗಾವಿ	ಒಟ್ಟು	೨೭೪೬೦	೨೧೭೯	೩೭೩೫	೧೩೬೦೭೫	೩೩೯೯೪	೧೯೭.೦೦	೭೨೭	೧೮೯	೯೯೯೨೧
		ಶೇಕಡಾ	೬.೬೧	೩.೭೬	೨.೮೯	೧.೯೪	೧.೮೩	೬.೦೭	೭.೪೪	೬.೫೫	೪.೯೧
೪	ಕರ್ನಾಟಕ	ಒಟ್ಟು	೪೧೫೪೯೧	೫೮೦೧೨	೧೨೯೩೭೨	೭೦೨೨೩೫೦	೧೮೫೬೩೬೧	೩೨೪೪.೧೨	೯೭೭೨	೨೮೩೫	೨೦೩೫೧೪೩
		ಶೇಕಡಾ	೧೦೦	೧೦೦	೧೦೦	೧೦೦	೧೦೦	೧೦೦	೧೦೦	೧೦೦	೧೦೦

(ಮೂಲ: ಕರ್ನಾಟಕ ಹಾಗೂ ಬೆಳಗಾವಿ ಜಿಲ್ಲಾ ಅಂಕಿ-ಅಂಶಗಳ ನೋಟ – ಕ್ರೋಢೀಕರಿಸಿದ್ದು)

೩.೬ (ಡ) ಬ್ಯಾಂಕುಗಳ ವ್ಯವಸ್ಥೆ :

ವಾಣಿಜ್ಯದ ಬೆನ್ನೆಲುಬು ಹಣಕಾಸು ವ್ಯವಸ್ಥೆಯಾಗಿದೆ. ವ್ಯವಹಾರದ ಪ್ರಕ್ರಿಯೆಗಳು ಸುವ್ಯವಸ್ಥಿತವಾಗಿ ನಡೆದಿದೆ ಎಂದರೆ ಅದಕ್ಕೆ ಸಮರ್ಪಕವಾದ ಬ್ಯಾಕಿಂಗ್ ವ್ಯವಸ್ಥೆ ಪೂರಕವಾಗಿದೆ ಎಂದರ್ಥ. **ಹಣ** ಕೈಗಾರಿಕೆಗಳಿಗೆ **ರಕ್ತ** ವಾದರೆ, ಬ್ಯಾಂಕುಗಳು ರಕ್ತವನ್ನು ಪ್ರವಹಿಸುವ ನರನಾಡಿಗಳು ಇದ್ದಂತೆ.

ಒಂದು ಉದ್ದಿಮೆಯ ಪ್ರವರ್ತನದಿಂದ ಅದು ಯಶಸ್ವಿಯಾಗಿ ಮುನ್ನಡೆಯುವಲ್ಲಿ ಬ್ಯಾಂಕಿಂಗ್ ವ್ಯವಸ್ಥೆ ಸಕ್ರೀಯ ಪಾತ್ರ ನಿರ್ವಹಿಸುತ್ತದೆ. ಬೆಳಗಾವಿ ಜಿಲ್ಲೆಯಲ್ಲಿನ ಸಮಗ್ರ ಬ್ಯಾಂಕುಗಳ ಚಿತ್ರಣವನ್ನು **ಕೋಷ್ಟಕ ೩.೪** (ಅ,ಐ,ಕ) ರಲ್ಲಿ ನೀಡಲಾಗಿದೆ. ಕೋಷ್ಟಕದಲ್ಲಿ ಕಂಡು ಬರುವುದೇನೆಂದರೆ ಬ್ಯಾಂಕುಗಳ ಸಂಖ್ಯೆಯಲ್ಲಿ ಪ್ರಗತಿ ಕಂಡು ಬಂದಿದೆಯಾದರೂ, ಜನಸಂಖ್ಯೆಯ ಹೆಚ್ಚಳಕ್ಕೆ ಹೋಲಿಸಿದರೆ ಪ್ರಮಾಣ ಕಡಿಮೆಯಾಗಿದೆ. ಠೇವಣಿಗಳ ಸಂಗ್ರಹ ದ್ವಿಗುಣವಾಗಿದೆ ಹಾಗೂ ಸಾಲ ವಿತರಣೆ ಮೂರುಪಟ್ಟು ವೃದ್ಧಿಸಿದೆ. ನಗರ ಪತ್ತಿನ ಸಹಕಾರಿ ಸಂಘಗಳಲ್ಲಿ ಸದಸ್ಯತ್ವದ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಏರಿಕೆ ಕಂಡಿದೆ. ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳಲ್ಲಿ ಯಾವುದೇ ಬದಲಾವಣೆ ಕಂಡು ಬರುವುದಿಲ್ಲ.

ಬೆಳಗಾವಿ ತಾಲ್ಲೂಕು ಅತ್ಯಧಿಕ ಪ್ರಮಾಣದಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳನ್ನು ಹೊಂದಿದ್ದು, ವಿಸ್ತೀರ್ಣದಲ್ಲಿ ಅತೀ ದೊಡ್ಡ ತಾಲ್ಲೂಕಾದ ಅಥಣಿ ಕೇವಲ ಹತ್ತು ಬ್ಯಾಂಕುಗಳನ್ನು ಹೊಂದಿದೆ. ಇದು ಅಲ್ಲಿನ ವಾಣಿಜ್ಯ ಚಟುವಟಿಕೆಗಳ ಸ್ಥಿತಿಯನ್ನು ಸೂಚಿಸುತ್ತದೆ. ಗ್ರಾಮೀಣ ಪ್ರದೇಶಗಳಿಗಿಂತಲೂ ಪಟ್ಟಣಗಳಲ್ಲಿ ಹೆಚ್ಚು ಗ್ರಾಮೀಣ ಬ್ಯಾಂಕುಗಳಿವೆ. ಚಿಕ್ಕೋಡಿ ತಾಲ್ಲೂಕು ಅತ್ಯಧಿಕ ಪತ್ತಿನ ಸಹಕಾರಿ ಸಂಘಗಳನ್ನು ಹೊಂದಿದ್ದು, ಸದಸ್ಯರ ಸಂಖ್ಯೆ ಬೆಳಗಾವಿಗಿಂತಲೂ ಕಡಿಮೆ ಇದೆ.

ದಕ್ಷಿಣ ಕರ್ನಾಟಕದಲ್ಲಿ ಬ್ಯಾಂಕುಗಳ ಸಂಖ್ಯೆ ಉತ್ತರ ಕರ್ನಾಟಕ್ಕಿಂತ ಎರಡುವರೇ ಪಟ್ಟು ಅಧಿಕವಾಗಿದೆ. ಹಾಗೂ ಸಾಲದ ಪ್ರಮಾಣವು ಏಳು ಪಟ್ಟು ಹೆಚ್ಚಾಗಿದೆ. ಉತ್ತರ ಕರ್ನಾಟಕದ ಜಿಲ್ಲೆಗಳ-ಲ್ಲಿಯೇ ಬೆಳಗಾವಿ ಅಧಿಕ ಬ್ಯಾಂಕುಗಳ ಸಂಖ್ಯೆಯನ್ನು ಹೊಂದಿದ್ದು, ವಾಣಿಜ್ಯ ಚಟುವಟಿಕೆಗಳಲ್ಲಿ ಪೂರಕವಾದ ಪರಿಸರ ನಿರ್ಮಿಸಿದೆ.

ತಾಲ್ಲೂಕು ಸರಾಸರಿ ದಾಖಲೆಗಳ ಪ್ರಕಾರ ಗ್ರಾಮೀಣ ಬ್ಯಾಂಕುಗಳು, ಕ್ರೆಡಿಟ್ ಕೋಆಪ್‌ರೇಟಿವ್ ಸೊಸೈಟಿಗಳು ಹಾಗೂ ಅವುಗಳಲ್ಲಿನ ಸದಸ್ಯತ್ವವು ಉತ್ತರ ಕರ್ನಾಟಕದಲ್ಲಿ ಅಧಿಕವಿದ್ದು, ಗ್ರಾಮೀಣ ಪ್ರದೇಶಗಳಲ್ಲಿ ಈ ಸಂಸ್ಥೆಗಳ ಪ್ರಭಾವವನ್ನು ಸೂಚಿಸುತ್ತದೆ. ಬೆಳಗಾವಿಯು ಉತ್ತರ ಕರ್ನಾಟಕದ ಕ್ರೆಡಿಟ್ ಕೋಆಪ್‌ರೇಟಿವ್ ಸೊಸೈಟಿಗಳಲ್ಲಿ ಶೇ. ೩೩ ರಷ್ಟು ಹೊಂದಿದೆ.

ಕೋಷ್ಟಕ ೩.೪ (ಅ) ಬ್ಯಾಂಕುಗಳು ವ್ಯವಸ್ಥೆ

ಅ ಸಂ	ವರ್ಷ	ವಾಣಿಜ್ಯ ಬ್ಯಾಂಕುಗಳು	ಗ್ರಾ. ಬ್ಯಾಂಕು ಗಳು	ಒಟ್ಟು ಠೇವಣಿ	ಒಟ್ಟು ಸಾಲಗಳು	ನಗರ ಪ್ರದೇಶ ಸಹಕಾರಿ ಬ್ಯಾಂಕುಗಳು	ನಗರ ಪ್ರದೇಶ ಪತ್ತಿನ ಸಹಕಾರಿ ಬ್ಯಾಂಕುಗಳು	ಪ್ರಾಥಮಿಕ ಭೂ. ಅಭಿವೃಧಿ ಬ್ಯಾಂಕುಗಳು	ಸಹಕಾರಿ ಸಂಘಗಳು	ಪತ್ತಿನ ಸಹಕಾರಿ ಸಂಘಗಳ ಸದಸ್ಯರು
೧	೨೦೦೧	೨೧೧	೯೭	-	-	೪೬	-	೧೦	೩೧೮೭	೧೩೩೪೦೦೦
೨	೨೦೦೩	೨೧೭	೧೦೭	-	-	೪೬	-	೧೦	೩೮೫೦	೧೬೨೧೦೦೦
೩	೨೦೦೫	೨೨೮	೧೦೮	೩೩೫೭೬೮	೨೩೪೬೫೪	೪೧	೭೧೬	೧೦	೩೯೨೨	೫೧೭೬೬೪೦
೪	೨೦೦೭	೨೩೯	೧೦೮	೫೪೯೧೩೮	೪೬೮೨೬೧	೪೧	೬೮೧	೧೦	೪೦೬೯	೧೫೭೬೬೨೬
೫	೨೦೦೯	೨೬೧	೧೧೪	೫೪೯೮೪೯	೪೭೯೭೪೫	೪೫	೬೫೮	೧೦	೪೨೦೩	೧೪೯೭೭೧೭
೬	೨೦೧೧	೨೫೭	೧೧೪	-	-	-	೭೭೦	೧೦	-	-

(ಮೂಲ: ಕರ್ನಾಟಕ ಹಾಗೂ ಬೆಳಗಾವಿ ಜಿಲ್ಲಾ ಅಂಕಿ–ಅಂಶಗಳ ನೋಟ – ಕ್ರೋಢೀಕರಿಸಿದ್ದು)

ಕೋಷ್ಟಕ ೩.೪ (ಬ) ಬ್ಯಾಂಕುಗಳು ವ್ಯವಸ್ಥೆ

ಅ ಸಂ	ತಾಲೂಕು	ವಾಣಿಜ್ಯ ಬ್ಯಾಂಕುಗಳು ಶಾಖೆಗಳು	ಗ್ರಾ. ಬ್ಯಾಂಕುಗಳು	ಡಿ.ಸಿ.ಸಿ.	ಕ್ರೇ. ಕೋ. ಸೊಸೈಟಿ	ಸದಸ್ಯರು
೧	ಅಥಣಿ	೧೦	೧೩	೦೯	೧೭೧	೧೧೯೮೨೮
೨	ಬೈಲಹೊಂಗಲ	೨೫	೧೨	೦೮	೧೦೯	೧೦೩೫೪೨
೩	ಬೆಳಗಾವಿ	೧೧೭	೧೪	೧೦	೨೩೧	೧೭೦೨೦೦
೪	ಚಿಕ್ಕೋಡಿ	೩೨	೧೭	೧೧	೨೪೦	೧೬೭೯೧೦
೫	ಗೋಕಾಕ	೨೩	೧೧	೧೦	೧೬೨	೧೪೨೦೪೫
೬	ಹುಕ್ಕೇರಿ	೧೩	೦೮	೧೧	೧೧೯	೯೩೪೫೧
೭	ಖಾನಾಪೂರ	೧೪	೦೯	೦೬	೮೨	೬೦೦೧೭
೮	ರಾಯಬಾಗ	೦೬	೧೨	೦೫	೧೪೪	೮೮೫೩೫
೯	ರಾಮದುರ್ಗ	೦೫	೦೭	೦೬	೫೨	೫೦೧೧೪
೧೦	ಸವದತ್ತಿ	೧೨	೧೧	೦೬	೧೦೨	೯೯೯೮೨

(ಮೂಲ: ಕರ್ನಾಟಕ ಹಾಗೂ ಬೆಳಗಾವಿ ಜಿಲ್ಲಾ ಅಂಕಿ-ಅಂಶಗಳ ನೋಟ – ಕ್ರೋಢೀಕರಿಸಿದ್ದು)

ಕೋಷ್ಟಕ ೩.೪ (ಕ) ಬ್ಯಾಂಕುಗಳು ವ್ಯವಸ್ಥೆ

ಅ ಸಂ	ಪ್ರದೇಶ	ವಾಣಿಜ್ಯ ಬ್ಯಾಂಕುಗಳು			ಗ್ರಾ. ಬ್ಯಾಂಕುಗಳು			ಡಿ.ಸಿ.ಸಿ.			ಕ್ರೇ. ಕೋ. ಸೊಸೈಟಿ			ಮೆಂಬರಶಿಪ ಸಂಖ್ಯೆ		
		ಒಟ್ಟು	ಸರಾ ಸರಿ	ಶೇಕಡಾ	ಒಟ್ಟು	ಸರಾ ಸರಿ	ಶೇಕಡಾ	ಒಟ್ಟು	ಸರಾ ಸರಿ	ಶೇಕಡಾ	ಒಟ್ಟು	ಸರಾ ಸರಿ	ಶೇಕಡಾ	ಒಟ್ಟು	ಸರಾಸರಿ	ಶೇಕಡಾ
೧	ದಕ್ಷಿಣ ಕರ್ನಾಟಕ	೨೧೦೫	೧೨೪	೭೨.೩೯	೫೩೬	೩೨	೪೨.೬೮	೧೨	೦.೭೧	೫೭.೧೪	೩೪೭೪	೨೦೪	೪೨.೪೪	೫೬೬೧೪೮೯	೩೩೩೦೨೯	೫೪.೫೦
೨	ಉತ್ತರ ಕರ್ನಾಟಕ	೮೦೩	೬೨	೨೭.೬೧	೭೨೦	೫೫	೫೭.೩೨	೦೯	೦.೬೯	೪೨.೮೬	೪೭೧೧	೩೬೫	೫೭.೫೬	೪೭೨೬೧೧೬	೩೬೩೩೫೪೭	೪೫.೫೦
೩	ಬೆಳಗಾವಿ	೧೭೬	-	೬.೦೫	೧೧೬	-	೯.೨೪	೦೧	-	೪.೭೬	೧೫೮೭	-	೧೯.೩೯	೧೫೬೯೩೪೬	-	೧೫.೧೧
೪	ಕರ್ನಾಟಕ	೨೯೦೮	-	೧೦೦	೧೨೫೬	-	೧೦೦	೨೧	-	೧೦೦	೮೧೮೫	-	೧೦೦	೧೦೩೮೭೬೦೫	-	೧೦೦

(ಮೂಲ: ಕರ್ನಾಟಕ ಹಾಗೂ ಬೆಳಗಾವಿ ಜಿಲ್ಲಾ ಅಂಕಿ–ಅಂಶಗಳ ನೋಟ – ಕ್ರೋಢೀಕರಿಸಿದ್ದು)

೩.೬ (ಇ) ಶೈಕ್ಷಣಿಕ ಸಂಪನ್ಮೂಲಗಳು :

ಒಂದು ಪ್ರದೇಶದ ಆರ್ಥಿಕ ವ್ಯವಸ್ಥೆ ಹಾಗೂ ಔದ್ಯೋಗಿಕ ಸ್ಥಿತಿಗೆ ಶಿಕ್ಷಣವು ಪೂರಕ ಅಂಗ ಆಗಿದೆ. ಶೈಕ್ಷಣಿಕ ಪರಿಸರ ಮತ್ತು ಕೈಗಾರಿಕೋದ್ಯಮಕ್ಕೆ ಸಾವಯವ ಸಂಬಂಧವಿದೆ. ಉದ್ದಿಮೆಗಳ ಬಗ್ಗೆ ಪ್ರಾಥಮಿಕ ಆಲೋಚನೆಯಿಂದ ಪ್ರಾರಂಭಗೊಂಡು ಅದರ ಯಶಸ್ಸಿನ ಹಿಂದೆ ಶಿಕ್ಷಣವು ಪ್ರಮುಖ ಪಾತ್ರ ನಿರ್ವಹಿಸುತ್ತದೆ. ಶಿಕ್ಷಣ ಸಂಸ್ಥೆಗಳಲ್ಲಿ ಉದ್ದಿಮೆಗಳಿಗೆ ಪ್ರೇರಣೆ ನೀಡುವಂಥ ವೃತ್ತಿಪರ ಶಿಕ್ಷಣ ವ್ಯವಸ್ಥೆಗಳು ಪ್ರಭಾವ ಬೀರುತ್ತವೆ. ಮಾನವ ಸಂಪನ್ಮೂಲದ ಅಭಿವೃದ್ಧಿಗೂ ಶಿಕ್ಷಣವೇ ಪ್ರಧಾನವಾಗಿದೆ. ಬೆಳಗಾವಿ ಜಿಲ್ಲೆಯಲ್ಲಿನ ಶಿಕ್ಷಣ ಸಂಸ್ಥೆಗಳು,ಅವುಗಳ ವ್ಯವಸ್ಥೆ, ಪ್ರಗತಿ, ಹಾಗೂ ವಿದ್ಯಾರ್ಥಿಗಳ ಸಂಖ್ಯೆಯನ್ನು ಅಧ್ಯಯನ ಮಾಡುವುದರ ಮೂಲಕ ಶೈಕ್ಷಣಿಕ ಸಂಪನ್ಮೂಲವನ್ನು ಕೋಷ್ಟಕ ೩.೫ (ಅ,ಬ) ರಲ್ಲಿ ವಿವರಿಸಲಾಗಿದೆ.

ಸೂಚಿತ ಕೋಷ್ಟಕದಂತೆ, ವಿವಿಧ ಶೈಕ್ಷಣಿಕ ಸಂಸ್ಥೆಗಳಲ್ಲಾದ ಬೆಳವಣಿಗೆಯ ಪ್ರಮಾಣವನ್ನು ಗುರುತಿಸಬಹುದು. ಪ್ರಾಥಮಿಕದಿಂದ ಪದವಿ ಕಾಲೇಜುಗಳವರೆಗೆ ಕಳೆದ ದಶಕದುದ್ದಕ್ಕೂ ಏರಿಕೆ ಪ್ರಮಾಣ ಕಂಡು ಬರುತ್ತದೆ. ಆದರೆ ವೃತ್ತಿಯಾಧಾರಿತ ಸಂಸ್ಥೆಗಳಲ್ಲಿ ಸ್ಥಿರತೆಯಿದೆ. ವೈದ್ಯಕೀಯ, ಪಾಲಿಟೆಕ್ನಿಕ್, ಡೆಂಟಲ್ ಕಾಲೇಜುಗಳ ಸಂಖ್ಯೆ ೨೦೦೧ ರಿಂದ ೨೦೧೧ರವರೆಗೆ ಒಂದೇ ಪ್ರಮಾಣದಲ್ಲಿದೆ. ಸಾರ್ವಜನಿಕರಿಗೆ ಲಭ್ಯವಾಗುವ ಗ್ರಂಥಾಲಯಗಳ ಸಂಖ್ಯೆ ದ್ವಿಗುಣಗೊಂಡಿರುವುದು ಸಾರ್ವಜನಿಕರ ಜ್ಞಾನವೃದ್ಧಿಗೆ ಕಾರಣವಾಗಿದೆ.

ಕರ್ನಾಟಕದ ಎರಡು ಪ್ರಮುಖ ವಿಭಾಗಗಳನ್ನು ಗಮನಿಸಿದರೆ ದಕ್ಷಿಣ ಕರ್ನಾಟಕದಲ್ಲಿ ಗ್ರಂಥಾಲಯಗಳ ಸಂಖ್ಯೆ ಎಲ್ಲ ವಿಭಾಗಗಳಲ್ಲೂ ಅಧಿಕವಾಗಿದೆ. ಬೆಳಗಾವಿ ಜಿಲ್ಲೆ ಕರ್ನಾಟಕದ ಶೇಕಡಾ ೭.೫೯ ರಷ್ಟು ಗ್ರಂಥಾಲಯಗಳನ್ನು ಹೊಂದಿದೆ.

ಕೋಷ್ಟಕ ೩.೫ (ಅ) ಶೈಕ್ಷಣಿಕ ಸಂಪನ್ಮೂಲಗಳು ಬೆಳಗಾವಿ ಜಿಲೆಯಲ್ಲಿ (೨೦೧೦-೧೧)

ಅ ಸಂ	ವರ್ಷ	ಪ್ರಾಥಮಿಕ	ಪ್ರೌಢ	ಪದವಿಪೂರ್ವ	ಪದವಿ	ಮೆಡಿಕಲ್	ಪಾಲಿಟೆಕ್ನಿಕ್	ಇಂಜಿನೀಯರ	ಡೆಂಟಲ್	ಗ್ರಂಥಾಲಯಗಳು
೧	೨೦೦೧	೩೪೭೩	೫೭೨	೧೧೦	-	೧೦	೧೧	೦೪	೦೧	೨೨೩
೨	೨೦೦೨	೩೪೧೩	೫೭೯	೮೭	-	೧೦	೧೧	೦೪	೦೧	೧೮೭
೩	೨೦೦೩	೩೩೪೦	೫೪೩	೧೨೮	-	೧೦	೧೧	೦೪	೦೧	೨೨೨
೪	೨೦೦೪	೩೪೯೯	೬೩೦	೬೩	೭೧	೧೦	೧೧	೦೪	೦೧	೨೨೮
೫	೨೦೦೫	೩೫೩೪	೬೪೭	೧೩೩	೭೦	೧೦	೧೦	೦೪	೦೧	೨೩೦
೬	೨೦೦೬	೩೬೮೮	೬೩೦	೧೩೩	೬೮	೧೦	೧೦	೦೪	೦೧	೨೨೭
೭	೨೦೦೭	೩೭೮೦	೭೫೦	೧೭೪	೯೬	೧೦	೧೦	೦೪	೦೧	೫೧೭
೮	೨೦೦೮	-	-	-	-	-	-	-	-	-
೯	೨೦೦೯	೩೮೫೭	೭೫೫	೧೭೪	೧೫೩	೧೦	೧೦	೦೭	೦೨	೫೧೭
೧೦	೨೦೧೦	೩೯೩೬	೭೮೬	೨೩೯	೧೬೮	೧೦	೧೦	೦೭	೦೨	೫೧೭
೧೧	೨೦೧೧	೪೨೧೧	೮೨೨	೨೩೯	೧೭೬			೧೦		೫೩೦

(ಮೂಲ: ಕರ್ನಾಟಕ ಹಾಗೂ ಬೆಳಗಾವಿ ಜಿಲ್ಲಾ ಅಂಕಿ-ಅಂಶಗಳ ನೋಟ – ಕ್ರೋಢೀಕರಿಸಿದ್ದು)

ಕೋಷ್ಟಕ ೩.೫ (ಬ) ಶೈಕ್ಷಣಿಕ ಸಂಪನ್ಮೂಲಗಳು

ಕ್ರ ಸಂ	ಪ್ರದೇಶ	ಜಿಲ್ಲಾ ಕೇಂದ್ರಗಳು	%	ನಗರ ಕೇಂದ್ರಗಳು	%	ಶಾಖಾ ಗ್ರಂ			%	ಸಮುದಾಯ ಮಕ್ಕಳ ಗ್ರಂ	%	ವಾಚನಾಲಯ	%	ಸಂಚಾರಿ ಗ್ರಂಥ	%	ಗ್ರಾಂ ಪಂ ಸಂ ಕೋ							%
						ನಗರ	%	ಗ್ರಾಂ								ಗ್ರಾಂ ಪಂ	%	ಕೋ	%	ಸಂ	%	ಒಟ್ಟು	
೧	ದಕ್ಷಿಣ ಕರ್ನಾಟಕ	೧೭	೫೬.೬೭	೨೩	೭೧.೮೮	೨೮೪	೭೪.೭೪	೧೨೮	೪೨.೨೪	೩೨	೬೬.೬೭	೬೩	೬೨.೩೮	೮	೮೦	೩೨೪೮	೫೬.೩೩	೩೭೮	೮೦.೦೮	೩೯	೪೧.೦೦	೪೨೨೦	೫೮.೩೩
೨	ಉತ್ತರ ಕರ್ನಾಟಕ	೧೩	೪೩.೩೩	೦೯	೨೮.೧೨	೯೬	೨೫.೨೬	೧೭೫	೫೭.೭೬	೧೬	೩೩.೩೩	೩೮	೩೭.೬೨	೨	೨೦	೨೫೧೮	೪೩.೬೭	೯೪	೧೯.೯೨	೫೪	೫೯.೦೦	೩೦೧೫	೪೧.೬೭
೩	ಬೆಳಗಾವಿ	೧	೩.೩೩	೧	೩.೧೩	೧೮	೪.೭೪	೩೦	೯.೯೦	೨	೪.೧೭	೦	೦೦	೦	೦೦	೪೮೮	೮.೪೬	೪	೪.೮೫	೫	೫.೩೮	೫೪೯	೭.೫೯
೪	ಕರ್ನಾಟಕ	೩೦	೧೦೦	೩೨	೧೦೦	೩೮೦	೧೦೦	೩೦೩	೧೦೦	೪೮	೧೦೦	೧೦೧	೧೦೦	೧೦	೧೦೦	೫೭೬೬	೧೦೦	೪೭೨	೧೦೦	೯೩	೧೦೦	೭೨೩೫	೧೦೦

(ಮೂಲ: ಕರ್ನಾಟಕ ಹಾಗೂ ಬೆಳಗಾವಿ ಜಿಲ್ಲಾ ಅಂಕಿ-ಅಂಶಗಳ ನೋಟ – ಕ್ರೋಢೀಕರಿಸಿದ್ದು)

೩.೬ (ಫ) ಪಶು ಸಂಗೋಪನೆ :

ಹೈನುಗಾರಿಕೆ, ಚರ್ಮೋದ್ಯಮ, ಆಹಾರೋದ್ಯಮ, ಉಣ್ಣೆಗಾರಿಕೆ ಮುಂತಾದ ಕೈಗಾರಿಕೆಗಳು ಪಶು ಸಂಪನ್ಮೂಲಗಳನ್ನು ಆಧರಿಸಿದೆ. ಪಶು ಸಂಪನ್ಮೂಲಗಳಲ್ಲಿ ಪ್ರಮುಖವಾಗಿ ದನ-ಕರು, ಎಮ್ಮೆ, ಕುರಿ, ಮೇಕೆ, ಹಂದಿ, ಮೊಲ ಹಾಗೂ ಕೋಳಿ ಸಾಕಾಣಿಕೆ ಮುಖ್ಯವಾದವು. ಮಾಂಸಾಹಾರ ಪದ್ಧತಿಯು ಕೂಡ ಆಧುನಿಕ ಯುವ ಜನಾಂಗದಲ್ಲಿ ಕ್ಷಿಪ್ರಗತಿಯಲ್ಲಿ ಪ್ರಭಾವಿಯಾಗುತ್ತಿರುವುದರಿಂದ ಪಶು ಸಂಪನ್ಮೂಲವನ್ನು ಪರಿಶೀಲಿಸುವ ಅಗತ್ಯವಿದೆ. ಬೆಳಗಾವಿ ಜಿಲ್ಲೆಗೆ ನೆರೆಯ ಗೋವಾ, ಮಹಾರಾಷ್ಟ್ರದಿಂದ ಅಧಿಕ ಸಂಖ್ಯೆಯಲ್ಲಿ ಪ್ರವಾಸಿಗರು ಹರಿದು ಬರುವುದರಿಂದ ಹೊಟೇಲ ಉದ್ದಿಮೆಯು ಮಾಂಸಾಹಾರದ ಮೇಲೆ ಅಧಿಕ ಅವಲಂಬಿಸುವುದು ಅವಶ್ಯಕ ಮತ್ತು ಅನಿವಾರ್ಯ.

ಬೆಳಗಾವಿ ಜಿಲ್ಲೆಯ ಪಶು ಸಂಪನ್ಮೂಲದ ಸಂಪೂರ್ಣ ಚಿತ್ರಣವನ್ನು **ಕೋಷ್ಟಕ** ೩.೬(ಅ, ಬ)ರಲ್ಲಿ ಪ್ರಸ್ತುತಪಡಿಸಲಾಗಿದೆ. ಜಾನುವಾರಗಳು ಗಣತಿ ೨೦೦೭ರಲ್ಲಿ ಮಾತ್ರ ಮಾಡಿದ್ದರಿಂದ ಆ ವರ್ಷದ ಅಂಕಿ ಅಂಶಗಳನ್ನು ಮಾತ್ರ ಪ್ರಸ್ತುತಪಡಿಸಲಾಗಿದೆ.

ಈ ಕೋಷ್ಟಕವು ಪಶು ಸಂಪನ್ಮೂಲಗಳಲ್ಲಿ ಮಿಶ್ರ-ಸಂಗತಿಗಳನ್ನು ಸೂಚಿಸುತ್ತಿದೆ. ಚಿಕ್ಕೋಡಿ ಮತ್ತು ಗೋಕಾಕ ತಾಲ್ಲೂಕುಗಳು ದನಕರು ಹಾಗೂ ಕುರಿಗಳನ್ನು ಅತ್ಯಧಿಕ ಪ್ರಮಾಣದಲ್ಲಿ ಹೊಂದಿವೆ. ಗೋಕಾಕ ಮತ್ತು ಬೆಳಗಾವಿಯಲ್ಲಿ ಹೈನುಗಾರಿಕೆ ಉದ್ದಿಮೆಯು ಕಂಡು ಬರುತ್ತದೆ. ಕುಕ್ಕುಟೋದ್ದಿಮೆ ಕೂಡ ಅಭಿವೃದ್ಧಿ ದಾಖಲಿಸಿದೆ.

ಪಶು ಸಂಪನ್ಮೂಲದಲ್ಲಿ ತಾಲ್ಲೂಕು ಸರಾಸರಿ ದಾಖಲೆಗಳ ಪ್ರಕಾರ ಎಮ್ಮೆಗಳು, ಕುರಿಗಳು, ಮೇಕೆಗಳು, ಹಂದಿಗಳು ಸಂಖ್ಯೆಯಲ್ಲಿ ಉತ್ತರ ಕರ್ನಾಟಕದಲ್ಲಿ ಹೆಚ್ಚಾಗಿವೆ. ಕೃಷಿಯೇತರ ಭೂಮಿಯಲಭ್ಯತೆ ಹಾಗೂ ಹೈನು ಉತ್ಪನ್ನಗಳಿಗೆ, ಮಾಂಸದ ಆಹಾರಕ್ಕೆ ಇರುವ ಬೇಡಿಕೆಗಳು ಪೂರಕಗಳಾಗಿವೆ.

ಒಟ್ಟು ಕರ್ನಾಟಕದಲ್ಲಿ ಉತ್ತರ ಮತ್ತು ದಕ್ಷಿಣ ಭಾಗದಲ್ಲಿ ಸಮ ಪ್ರಮಾಣದಲ್ಲಿ ಪಶು-ಸಂಪನ್ಮೂಲವು ಹಂಚಿಹೋದಂತಿದೆ. ಉತ್ತರ ಕರ್ನಾಟಕದಲ್ಲಿ ಎಮ್ಮೆಗಳು, ಕುರಿಗಳು, ಮೇಕೆಗಳು, ಹಂದಿಗಳ ಸಂಖ್ಯೆಯು ಅಧಿಕವಿದೆ. ಇದು ಹೈನುಗಾರಿಕೆ, ಚರ್ಮೋದ್ಯಮ, ಹಾಗೂ ಮೌಂಸಹಾರದ ಕೇಂದ್ರಗಳ ಬೆಳವಣಿಗೆಗೆ ಸಹಕಾರಿ. ಅಲ್ಲದೆ ಬೆಳಗಾವಿಯ ಅರೆ-ಮಲೆನಾಡು ಪ್ರದೇಶ ಹೈನುಗಾರಿಕೆಗೆ ಮೂಲವಾದ ಹಸಿರು ಮೇವು ಪೂರೈಕೆಗೆ ಪ್ರಸಿದ್ಧವಾಗಿದೆ.

ಕೋಷ್ಟಕ ೩.೬ (ಅ) ಪಶು ಸಂಗೋಪನೆ

ಅ ಸಂ	ತಾಲೂಕು	ದನಕರು	%	ಎಮ್ಮೆಗಳು	%	ಕುರಿಗಳು	%	ಮೇಕೆಗಳು	%	ಹಂದಿಗಳು	%	ಮೊಲಗಳು	%	ಕೋಳಿಗಳು	%
೧	ಅಥಣಿ	೭೯೩೮೩	೧೩.೨೬	೧೨೧೨೦೦	೧೪.೦೪	೪೦೮೩೪	೪.೫೪	೮೮೯೬೪	೧೪.೫೮	೨೩೫೧	೧೦.೮೮	೪೬	೨.೩೫	೧೮೭೮೮೪	೧೩.೫೩
೨	ಬೈಲಹೊಂಗಲ	೫೪೧೨೫	೯.೦೪	೫೫೭೧೫	೬.೪೬	೩೭೭೧೦	೪.೧೯	೨೬೯೯೪	೪.೪೨	೪೬೪	೧.೮೩	೯೯	೫.೦೭	೭೪೫೩೬	೫.೩೭
೩	ಬೆಳಗಾವಿ	೫೭೦೬೧	೯.೫೩	೮೪೭೩೮	೯.೮೨	೩೪೪೮೨	೩.೮೩	೨೪೫೭೩	೪.೦೩	೧೬೩೮	೬.೪೮	೯೮೫	೫೦.೪೧	೨೦೩೧೧೫	೧೪.೬೩
೪	ಚಿಕ್ಕೋಡಿ	೪೬೧೪೬	೭.೭೧	೧೪೬೭೧೩	೧೧.೦೦	೨೨೬೦೨೬	೨೫.೧೨	೭೦೩೭೫	೧೧.೭೦	೨೯೫೩	೧೧.೬೮	೧೦೨	೫.೨೨	೧೨೬೪೨೧	೯.೧೧
೫	ಗೋಕಾಕ	೯೪೩೫೭	೧೫.೭೬	೧೨೩೮೭೩	೧೪.೩೫	೧೫೨೦೬೩	೧೬.೯೦	೧೧೮೨೪೭	೧೯.೩೮	೯೮೨೪	೩೮.೮೫	೪೮೦	೨೪.೫೬	೧೮೧೮೩	೧.೩೧
೬	ಹುಕ್ಕೇರಿ	೪೨೨೧೭	೭.೦೫	೯೧೩೩೦	೧೦.೫೮	೮೪೪೬೦	೯.೩೯	೫೮೪೮೦	೯.೫೮	೨೬೯೨	೧೦.೬೪	೮೪	೪.೩೦	೨೦೩೪೭೭	೧೪.೬೬
೭	ಖಾನಾಪೂರ	೪೮೬೭೨	೮.೧೩	೫೪೯೦೨	೬.೩೬	೦೦೫೧೯	.೦೬	೯೭೫೩	೧.೫೯	೧೧೧	೦.೪೪	೩೦	೧.೫೪	೧೦೮೨೫೩	೭.೮೦
೮	ರಾಯಬಾಗ	೭೦೬೦೬	೧೧.೮೦	೧೦೯೭೭೪	೧೨.೭೨	೧೨೧೦೨	೧.೩೫	೮೫೯೭೭	೧೪.೦೯	೫೫೬	೨.೨೦	೧೭೧	೮.೭೫	೧೬೯೦೯೨	೧೨.೧೮
೯	ರಾಮದುರ್ಗ	೫೦೬೨೮	೮.೪೬	೩೫೯೫೦	೪.೧೭	೧೦೧೭೪೭	೧೧.೩೧	೬೨೩೬೦	೧೦.೨೨	೧೫೫೯	೬.೧೬	೧೫	೦.೭೭	೬೦೫೬೮	೪.೩೬
೧೦	ಸವದತ್ತಿ	೫೫೩೩೩	೯.೨೬	೩೮೮೨೮	೪.೫೦	೧೦೦೯೯೫	೧೧.೨೧	೬೩೫೫೬	೧೦.೪೧	೨೭೪೦	೧೦.೮೪	೧೪	೦.೭೩	೭೩೪೫೧	೫.೨೯
	ಜಿಲ್ಲೆಯ ಒಟ್ಟು	೫೯೮೫೨೮		೮೬೩೦೨೩		೮೯೯೯೩೮		೬೧೦೨೭೯		೨೫೨೮೮		೧೯೫೪		೧೩೮೭೯೮೦	

(ಮೂಲ: ಕರ್ನಾಟಕ ಹಾಗೂ ಬೆಳಗಾವಿ ಜಿಲ್ಲಾ ಅಂಕಿ-ಅಂಶಗಳ ನೋಟ – ಕ್ರೋಢೀಕರಿಸಿದ್ದು)

ಕೋಷ್ಟಕ ೩.೬ (ಐ) ಪಶು ಸಂಗೋಪನೆ

ಅ ಸಂ	ಪ್ರದೇಶ		ದನಕರು	ಎಮ್ಮೆಗಳು	ಕುರಿಗಳು	ಮೇಕೆಗಳು	ಹಂದಿಗಳು	ಮೊಲಗಳು	ಕೋಳಿಗಳು
೧	ದಕ್ಷಿಣ ಕರ್ನಾಟಕ	ಒಟ್ಟು	೬೦೩೪೩೫೨	೧೬೫೦೨೮೯	೪೬೬೦೧೦೦	೨೪೫೮೫೮೭	೯೧೨೩೪	೬೧೫೪	೨೮೪೫೦೬೦೧
		ಸರಾಸರಿ	೩೫೪೯೬೨	೯೭೦೭೬	೨೭೪೧೨೩	೧೪೪೬೨೩	೫೩೬೭	೩೬೨	೧೬೭೩೫೬೫
		ಶೇಕಡಾ	೫೭.೪೩	೩೮.೧೨	೪೮.೭೨	೩೯.೯೩	೩೨.೬೧	೬೨.೫೩	೬೭.೦೫
೨	ಉತ್ತರ ಕರ್ನಾಟಕ	ಒಟ್ಟು	೪೪೭೨೯೭೩	೨೬೭೮೭೮೭	೪೯೦೫೫೯೬	೩೬೯೮೫೮೭	೧೮೮೫೨೯	೩೬೮೭	೧೩೯೮೩೦೯೧
		ಸರಾಸರಿ	೩೪೪೦೭೫	೨೦೬೦೬೦	೩೭೭೩೫೩	೨೮೪೫೦೭	೧೪೫೦೨	೨೮೪	೧೦೭೫೬೨೨
		ಶೇಕಡಾ	೪೫.೫೭	೬೧.೮೮	೫೧.೨೮	೬೦.೦೭	೬೭.೩೯	೩೭.೪೭	೩೨.೯೫
೩	ಬೆಳಗಾವಿ	ಒಟ್ಟು	೫೯೮೪೬೭	೮೫೯೪೨೧	೮೯೯೭೦೭	೬೦೯೯೦೨	೨೪೮೧೯	೧೯೫೪	೧೩೪೧೪೮೦
		ಶೇಕಡಾ	೫.೭೦	೧೯.೮೫	೯.೪೧	೯.೯೧	೮.೮೭	೧೯.೮೬	೩.೧೬
೪	ಕರ್ನಾಟಕ	ಒಟ್ಟು	೧೦೫೦೭೩೨೫	೪೩೨೯೦೭೬	೯೫೬೫೬೯೬	೬೧೫೭೧೩೪	೨೭೯೭೬೩	೯೮೪೧	೪೨೪೩೩೬೯೨
		ಶೇಕಡಾ	೧೦೦	೧೦೦	೧೦೦	೧೦೦	೧೦೦	೧೦೦	೧೦೦

(ಮೂಲ: ಕರ್ನಾಟಕ ಹಾಗೂ ಬೆಳಗಾವಿ ಜಿಲ್ಲಾ ಅಂಕಿ–ಅಂಶಗಳ ನೋಟ – ಕ್ರೋಢೀಕರಿಸಿದ್ದು)

೩.೬ (ಗ) ಮಾನವ ಸಂಪನ್ಮೂಲ :

ಸಂಪನ್ಮೂಲಗಳನ್ನು ಭೌತಿಕ ಮತ್ತು ಬೌದ್ಧಿಕವೆಂದು ವಿಂಗಡಿಸುತ್ತಾರೆ. ಭೌತಿಕ ಸಂಪನ್ಮೂಲಗಳಲ್ಲಿ ನೈಸರ್ಗಿಕ ಮತ್ತು ಮಾನವ ನಿರ್ಮಿತವೆಂದು ವಿಭಜಿಸಬಹುದು. ಭೂಮಿ, ಜಲ, ವಾಯುಗುಣ, ಖನಿಜಗಳು ಭೌತಿಕ ಸಂಪನ್ಮೂಲಗಳಾದರೆ ರಸ್ತೆಗಳು, ಬ್ಯಾಂಕುಗಳು, ಸಂಪರ್ಕ ಸಾಧನಗಳು ಮಾನವ ನಿರ್ಮಿತವಾಗಿವೆ. ಒಂದು ಪ್ರದೇಶದ ಸಮಗ್ರ ಅಭಿವೃದ್ಧಿಗೆ ಬೌದ್ಧಿಕ ಮತ್ತು ಭೌತಿಕ ಸಂಪನ್ಮೂಲಗಳು ಸೂಕ್ತ ಪ್ರಮಾಣದಲ್ಲಿರಬೇಕು. ಹಲವಾರು ಸಂದರ್ಭಗಳಲ್ಲಿ ಬೌದ್ಧಿಕ ಸಂಪನ್ಮೂಲವಿಲ್ಲದೆ ಭೌತಿಕ ಸಂಪನ್ಮೂಲಗಳು ಸರಿಯಾದ ಉಪಯುಕ್ತತೆ ಪಡೆಯದೆ ಕೈಗಾರಿಕೆ ಅಭಿವೃದ್ಧಿ ಕುಂಠಿತಗೊಂಡಿರುವ ಉದಾಹರಣೆಗಳಿವೆ.

ಬೆಳಗಾವಿ ಜಿಲ್ಲೆಗೆ ಸಂಬಂಧಿಸಿದಂತೆ ಮಾನವ ಸಂಪನ್ಮೂಲದ ವಿಸ್ತೃತ ಚಿತ್ರಣವನ್ನು **ಕೋಷ್ಟಕ** ೩.೭ (ಅ,ಬ) ರಲ್ಲಿ ಪ್ರಸ್ತುತ ಪಡಿಸಿದೆ. ಕೆಲವು ಗುಣಾತ್ಮಕ ಬದಲಾವಣೆಗಳನ್ನು ಬೆಳಗಾವಿಯ ಜಿಲ್ಲೆಯ ಮಾನವ ಸಂಪನ್ಮೂಲದ ಬಗ್ಗೆ ಗುರುತಿಸಬಹುದಾಗಿದೆ.

ಎಲ್ಲ ತಾಲ್ಲೂಕುಗಳಲ್ಲಿ ಪುರುಷರ ಸಂಖ್ಯೆ ಮಹಿಳೆಯರಿಗಿಂತ ಅಧಿಕವಿದ್ದು ಲಿಂಗ ಪ್ರಮಾಣ ಕುಸಿದಿರುವುದು ಕಂಡು ಬರುತ್ತದೆ. ಇನ್ನೊಂದು ಗಮನಾರ್ಹ ಅಂಶವೆಂದರೆ ಗ್ರಾಮೀಣ ಪ್ರದೇಶದ ಜನಸಂಖ್ಯೆಯು ಬೈಲಹೊಂಗಲ ಮತ್ತು ಹುಕ್ಕೇರಿ ತಾಲ್ಲೂಕುಗಳನ್ನು ಹೊರತುಪಡಿಸಿ ನಗರ ಪ್ರದೇಶಗಳಿಗಿಂತ ಹೆಚ್ಚಾಗಿದೆ. ಕಳೆದ ದಶಕದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿಯು ಕೂಡ ಸಣ್ಣ ಪ್ರಮಾಣದ ಕೈಗಾರಿಕೆಗಳು ಬೆಳೆದು ಗ್ರಾಮೀಣ ಜನತೆ ನಗರಗಳಿಗೆ ವಲಸೆ ಬರುವ ಪ್ರಮಾಣ ಕಡಿಮೆಯಾಗಿರುವ ಸಾಧ್ಯತೆಯಿದೆ.

ಬೆಳಗಾವಿ ತಾಲ್ಲೂಕಿನಲ್ಲಿ ಮಾತ್ರ ಸಾಕ್ಷರತೆಯ ಪ್ರಮಾಣವು ಶೇಕಡಾ ೭೫.೨೬ ಇದ್ದು ಕರ್ನಾಟಕ ರಾಜ್ಯದ ಸರಾಸರಿಗಿಂತ ಹೆಚ್ಚಿದೆ. ರಾಮದುರ್ಗ ತಾಲೂಕು ಅತ್ಯಂತ ಕಡಿಮೆ ಪ್ರಮಾಣದ ಸಾಕ್ಷರತೆ (೫೭.೪೧%) ಹೊಂದಿದೆ. ೨೦೦೧ ಕ್ಕೆ ಹೋಲಿಸಿದಾಗ ಬೆಳಗಾವಿ ಮತ್ತು ಚಿಕ್ಕೋಡಿಯಲ್ಲಿ ೨೦೧೧ರಲ್ಲಿ ಸಾಕ್ಷರತೆ ಪ್ರಮಾಣದಲ್ಲಿ ಸ್ವಲ್ಪ ಕಡಿಮೆಯಾಗಿದೆ.

ಕರ್ನಾಟಕ ರಾಜ್ಯದಲ್ಲಿಯು ಲಿಂಗ ಪ್ರಮಾಣ ೨೦೦೧ ಕ್ಕಿಂತ ೨೦೧೧ರಲ್ಲಿ ಕಡಿಮೆಯಾಗಿದೆ. ಆದರೆ ಗಂಡಸರು ಮತ್ತು ಹೆಂಗಸರು ನಡುವಿನ ವ್ಯತ್ಯಾಸದ ಗಾತ್ರ ಕಡಿಮೆಯಾಗಿದೆ ಎಂಬುವುದು ಸಮಾಧಾನಕರ ಅಂಶ. ಗ್ರಾಮೀಣ ಮತ್ತು ನಗರ ಪ್ರದೇಶದ ಜನಸಂಖ್ಯೆಯನ್ನು ಹೋಲಿಸಿದಾಗ ಕಳೆದ ದಶಕದಲ್ಲಿ ವ್ಯತ್ಯಾಸದ ಪ್ರಮಾಣ ಕಡಿಮೆಯಾಗಿದೆ.

ಕೋಷ್ಟಕ ೩.೭ (ಅ) ಮಾನವ ಸಂಪನ್ಮೂಲ

ಅ.ಸಂ	ತಾಲೂಕು	ಗಂಡಸರು		ಹೆಂಗಸರು		ಗ್ರಾಮೀಣ		ನಗರ		ಜನಸಾಂದ್ರತೆ ಪ್ರತಿ ಚ.ಕಿ.ಮೀ	ಸಾಕ್ಷರತೆ ಪ್ರತಿಶತ ಪ್ರಮಾಣ	
		೨೦೦೧	೨೦೧೧	೨೦೦೧	೨೦೧೧	೨೦೦೧	೨೦೧೧	೨೦೦೧	೨೦೧೧	೨೦೦೧	೨೦೦೧	೨೦೧೧
೧	ಅಥಣಿ	೨೩೬೮೭೮	೨೬೮೮೮೩	೨೨೪೯೮೪	೨೫೬೮೩೯	೪೨೦೯೧೨	೪೭೭೮೪೫	೪೦೯೫೦	೪೭೮೭೭	೨೩೧	೬೧.೪	೬೧.೫೬
೨	ಬೈಲಹೊಂಗಲ	೧೮೦೮೦೭	೧೬೮೬೭೦	೧೭೫೪೭೯	೧೮೮೨೬೪	೩೧೩೦೬೧	೩೩೨೩೧೬	೪೩೨೨೫	೪೯೨೨೩	೩೧೮	೬೩.೩೭	೬೪.೬೭
೩	ಬೆಳಗಾವಿ	೪೧೮೬೦೯	೯೫೬೦೧೯	೩೯೬೯೭೨	೪೬೮೮೨೫	೩೦೯೧೦೧	೩೫೬೭೭೩೯	೫೦೬೪೮೦	೧೨೧೦೭೦೦	೭೮೬	೭೮.೩೧	೭೫.೨೬
೪	ಚಿಕ್ಕೋಡಿ	೨೯೦೯೪೩	೬೨೮೩೧೧	೨೭೬೬೫೮	೩೦೮೪೧೭	೪೫೬೪೯೫	೫೦೩೪೯೧	೧೧೧೧೦೬	೧೨೪೮೪೦	೪೪೨	೬೮.೮೩	೬೭.೬೧
೫	ಗೋಕಾಕ	೨೬೬೬೩೦	೬೧೨೨೭೦	೨೫೯೪೬೨	೩೦೩೯೭೦	೪೦೧೦೦೬	೪೭೬೪೯೪	೧೨೫೦೮೬	೧೩೫೭೭೩	೩೪೨	೫೫.೯	೫೮.೨೭
೬	ಹುಕ್ಕೇರಿ	೧೮೧೫೭೯	೩೯೯೨೦೪	೧೭೫೬೧೪	೧೯೮೪೮೬	೩೦೪೭೬೫	೩೪೧೭೪೯	೨೪೨೮	೫೭೪೫೫	೩೬೦	೬೨.೦೯	೬೨.೪೭
೭	ಖಾನಾಪೂರ	೧೨೨೧೧೧	೨೫೮೦೫೧	೧೨೧೦೭೪	೧೨೭೧೯೫	೨೨೦೩೪೫	೨೨೩೯೧೯	೨೨೮೪೦	೩೪೧೩೨	೧೩೯	೬೫.೯೯	೬೬.೮೦
೮	ರಾಯಬಾಗ	೧೭೮೮೨೫	೪೦೫೪೮೧	೧೬೮೭೭೫	೧೯೭೯೩೦	೩೧೧೮೨೮	೩೬೩೭೯೦	೩೫೭೭೨	೪೧೬೯೧	೩೬೨	೫೫.೬೮	೫೭.೯೫
೯	ರಾಮದುರ್ಗ	೧೧೫೨೮೬	೧೩೧೨೬೦	೧೧೨೧೨೬	೧೭೪೬೩೦	೧೯೦೭೬೩	೨೨೩೯೦೯	೩೬೬೪೯	೩೪೮೧೪	೧೮೭	೫೫.೦೫	೫೭.೪೧
೧೦	ಸವದತ್ತಿ	೧೫೮೪೨೨		೧೫೩೨೭೧		೨೭೩೫೩೮		೩೮೧೫೫		೧೯೭	೫೬.೬೮	

(ಮೂಲ: ಕರ್ನಾಟಕ ಹಾಗೂ ಬೆಳಗಾವಿ ಜಿಲ್ಲಾ ಅಂಕಿ-ಅಂಶಗಳ ನೋಟ – ಕ್ರೋಢೀಕರಿಸಿದ್ದು)

ಕೋಷ್ಟಕ ೩.೭ (ಬ) ಮಾನವ ಸಂಪನ್ಮೂಲ :

ಅ.ಸಂ	ಪ್ರದೇಶ	ಗಂಡಸರು		ಹೆಂಗಸರು		ಗ್ರಾಮೀಣ		ನಗರ		ಜನಸಾಂದ್ರತೆ ಪ್ರತಿ ಚ.ಕಿ.ಮೀ		ಸಾಕ್ಷರತೆ ಪ್ರತಿಶತ ಪ್ರಮಾಣ	
		೨೦೦೧	೨೦೧೧	೨೦೦೧	೨೦೧೧	೨೦೦೧	೧೧	೨೦೦೧	೧೧	೨೦೦೧	೧೧	೨೦೦೧	೧೧
೧	ದಕ್ಷಿಣ ಕರ್ನಾಟಕ	೧೫೪೦೫೩೯೮	೧೭೮೨೩೦೭೧	೧೪೮೭೬೭೧೫	೧೭೨೨೯೩೪೨	೧೮೬೪೨೩೯೨	-	೧೧೬೩೯೭೨೧	-	೪೪೮		೬೯.೯೦	-
೨	ಉತ್ತರ ಕರ್ನಾಟಕ	೧೧೪೯೩೫೨೦	೧೩೨೩೪೬೭೧	೧೧೦೭೪೯೨೯	೧೨೮೪೩೬೨೦	೧೬೨೪೬೬೪೧	-	೯೩೨೧೮೦೮	-	೨೩೯		೬೧.೦೦	-
೩	ಬೆಳಗಾವಿ	೨೧೫೦೦೯೦	೨೪೨೭೧೦೪	೨೦೬೪೪೧೫	೨೩೫೧೩೩೫	೩೨೦೧೮೧೪	-	೧೦೧೨೬೯೧	-	೩೧೪		೬೪.೨೦	-
೪	ಕರ್ನಾಟಕ	೨೬೮೯೮೯೧೮	೩೧೦೫೭೭೪೨	೨೫೯೫೧೬೪೪	೩೦೦೭೨೯೬೨	೩೪೮೮೯೦೩೩	-	೧೭೯೬೧೫೨೯	-	೨೭೬		೬೬.೬೦	-

(ಮೂಲ: ಕರ್ನಾಟಕ ಹಾಗೂ ಬೆಳಗಾವಿ ಜಿಲ್ಲಾ ಅಂಕಿ-ಅಂಶಗಳ ನೋಟ – ಕ್ರೋಢೀಕರಿಸಿದ್ದು)

ಟಿಪ್ಪಣಿಗಳು :

೧) ಪಾಟೀಲ ಶೀ.ಬಾ – ರಟ್ಟರ ಕಾಲದ ಸಾಂಸ್ಕೃತಿಕ ಅಧ್ಯಯನ : ಬಸವಶ್ರೀ ಪ್ರಕಾಶನ, ಸಂಕೇಶ್ವರ ಪುಟ: ೨೯ (೧೯೯೫)

೨) ಹುಟಗಿ ರಾಮಚಂದ್ರ (ಸಂ) - ಬೆಳಗಾವಿ ಭೂಗೋಲ, ಪುಟ: ೨೨೦

೩) ವೇಣುನಾದ - ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಬೆಳಗಾವಿ ೧೯೮೦ರ ಸ್ಮರಣ ಸಂಪುಟ, ಪುಟ: ೫೭

೪) ಪಾಟೀಲ ಶೀ.ಬಾ – ರಟ್ಟರ ಕಾಲದ ಸಾಂಸ್ಕೃತಿಕ ಅಧ್ಯಯನ : ಬಸವಶ್ರೀ ಪ್ರಕಾಶನ, ಸಂಕೇಶ್ವರ ಪುಟ: ೨೮ (೧೯೯೫)

೫) ಹುಟಗಿ ರಾಮಚಂದ್ರ (ಸಂ) - ಬೆಳಗಾವಿ ಭೂಗೋಲ, ಪುಟ: ೨೨೨

೬) ಬೆಲಗಾಮ್ ಗೆಝೆಟಿಯರ್ - ಪುಟ: ೫೪೫

೭) ಹುಟಗಿ ರಾಮಚಂದ್ರ (ಸಂ) - ಬೆಳಗಾವಿ ಭೂಗೋಲ, ಪುಟ: ೨೨೨

೮) ಹರದಗಟ್ಟಿ ಎಸ್. ಎಂ. ಸಮತೋಲನ - ಪುಟ: ೧೯

೯) ಸಂಯುಕ್ತ ಕರ್ನಾಟಕ (ದಿನಪತ್ರಿಕೆ) - ದಿನಾಂಕ : ೨೫/೧೦/೨೦೧೨ (ಕಿತ್ತೂರು ಉತ್ಸವ ದಿನ)

****

ಅಧ್ಯಾಯ : ನಾಲ್ಕು

ಬೆಳಗಾವಿ ಜಿಲ್ಲೆಯ ಕೈಗಾರಿಕೆಗಳ ಬೆಳವಣಿಗೆಯ ಸಮೀಕ್ಷೆ

೪.೧ ಬೆಳಗಾವಿ ಜಿಲ್ಲೆಯ ಉದ್ದಿಮೆಗಳು

೪.೨ (ಅ) ಸಿದ್ಧ ಉಡುಪುಗಳ ಉದ್ದಿಮೆ

(ಬ) ರಾಸಾಯನಿಕ ಉದ್ದಿಮೆ

(ಕ) ಇಂಜಿನೀಯರಿಂಗ ಉದ್ದಿಮೆ

(ಡ) ಇತರೆ ಉದ್ದಿಮೆ

(ಇ) ಸಣ್ಣ ಕೈಗಾರಿಕೆ ಘಟಕಗಳು

(ಫ) ಸಕ್ಕರೆ ಉದ್ದಿಮೆ

(ಗ) ಮೀನುಗಾರಿಕೆ ಉದ್ದಿಮೆ

(ಹ) ಶೀಥಲೀಕರಣ ಕೇಂದ್ರಗಳು

(ಐ) ಕೈಗಾರಿಕಾ ಪ್ರದೇಶಗಳು

(ಜ) ಕೈಗಾರಿಕಾ ಶೆಡ್ಡುಗಳು

(ಖ) ಕೈಗಾರಿಕೆಗಳಲ್ಲಿ ಸರಾಸರಿ ವಿದ್ಯುತ್ ಬಳಕೆ

(ಲ) ವಾಣಿಜ್ಯದಲ್ಲಿ ಸರಾಸರಿ ವಿದ್ಯುತ್ ಬಳಕೆ

೪.೩ ಉದ್ದಿಮೆಗಳ ಕ್ಷೇತ್ರವಾರು ವಿಶ್ಲೇಷಣೆ

೪.೪ ಜಿಲ್ಲೆಯ ಸಣ್ಣ ಪ್ರಮಾಣದ ಕೈಗಾರಿಕೆಗಳು

ಅಧ್ಯಾಯ : ನಾಲ್ಕು

ಬೆಳಗಾವಿ ಜಿಲ್ಲೆಯ ಕೈಗಾರಿಕೆಗಳ ಬೆಳವಣಿಗೆಯ ಸಮೀಕ್ಷೆ

೪.೧ ಬೆಳಗಾವಿ ಜಿಲ್ಲೆಯ ಉದ್ದಿಮೆಗಳು :

ಬೆಳಗಾವಿ ಜಿಲ್ಲೆ ಕೃಷಿ ಪ್ರಧಾನವಾದದು. ಅದಕ್ಕೆ ಪೂರಕವಾದ ಹವಾಗುಣವಿದೆ. ರಟ್ಟರ ಆಳ್ವಿಕೆ ಕಾಲದಲ್ಲಿ ಕೃಷಿ ಆಧಾರಿತ ಕೈಗಾರಿಕೆಗಳು ಇಲ್ಲಿದ್ದ ಬಗ್ಗೆ ಸ್ಪಷ್ಟ ದಾಖಲೆಗಳಿವೆ. ಬೆಳಗಾವಿಯಲ್ಲಿ ದೊರೆತ ಒಂದು ಶಾಸನದಲ್ಲಿ **ಬೆಲ್ಲದ ಬಂಡೆ** ಎಂಬ ಪದದ ಬಳಕೆಯಾಗಿದ್ದು, ಅದು ಬೆಲ್ಲದ (ಗಾಣದ) ಆಲೆಮನೆಯನ್ನು ಪರಿಚಯಿಸುತ್ತದೆ. ಜಿಲ್ಲೆಯ ಹಲವು ಪ್ರಾಚೀನ ಶಾಸನಗಳಲ್ಲಿ ಗ್ರಾಮೀಣ ಗುಡಿ ಕೈಗಾರಿಕೆಗಳಿಗೆ ಸಂಬಂಧಿಸಿದ ವಿವರಗಳಿವೆ. ಮಗ್ಗದ ಮೇಲೆ ಕೆಲಸ ಮಾಡುವ ವ್ಯಕ್ತಿಯನ್ನು ಪಟ್ಟೆಗಾರಕಿ ಎಂದು ಕರೆಯುವರು, ಅರಳೆ ನೂಲಿನಿಂದ ಬಟ್ಟೆ ತಯಾರಿಸುವವನು ನೇಕಾರ. ದನಗಳಿಗೆ ಲಾಳ ಹಾಕುವ ರೂಢಿಯನ್ನು ಲಾಳ-ವ್ಯವಹಾರಕಿ ಎಂದು ಕರೆಯಲಾಗಿದೆ. ಕೃಷಿ ಚಟುವಟಿಕೆಗಳಿಗೆ ಪೂರಕವಾದ ಉಪಕರಣ ಸಿದ್ಧಪಡಿಸುವ ಕಸುಬುದಾರರನ್ನು ಕಮ್ಮಾರ ಎಂದು, ಕುಂಬಾರಿಕೆಯನ್ನು ಮಾಡುವರಿಗೆ ಕುಂಬಾರ ಎಂದೂ, ಪತ್ತಾರಿಕೆಯನ್ನು ನಿರ್ವಹಿಸಿದವರಿಗೆ ಟಂಕಸಾಲಿಗರು, ಚಿನ್ನಗೇಯಕರು, ಅಕ್ಕಸಾಲಿಗರು, ಪತ್ತಾರ ಎಂದು ಕರೆಯುತ್ತಿದ್ದರು.

ಮುಂದುವರೆದು ತಾಮ್ರ, ಹಿತ್ತಾಳೆ, ಕಂಚಿನ ಕೆಲಸ ಮಾಡುವವರಿಗೆ ಕಂಚಗಾರ ಎಂದು ಕರೆದರೆ, ವೀಳೆದೆಲೆಯನ್ನು ಊರಿಂದೂರಿಗೆ ಹೊತ್ತು ಮಾರುವವರನ್ನು ಅಂತರವಟ್ಟಿಗಳೆಂದು ಮತ್ತು ಬಿದಿರಿನ ಕೆಲಸ ಮಾಡುವವರನ್ನು ಮೇದಾರರೆಂದು ಕರೆಯಲಾಗಿದೆ.

ಬೆಳಗಾವಿ ಜಿಲ್ಲೆಯಾದ್ಯಂತ ನೂಲುವುದು, ನೇಯುವುದು, ಕುಸುಬಿ ಎಣ್ಣೆ ತೆಗೆಯುವುದು, ರೇಷ್ಮೆ, ಬೆಳ್ಳಿ, ಬಂಗಾರದ ಆಭರಣ ತಯಾರಿಕೆ ಪ್ರಗತಿಗೊಂಡಿತು. ತೇರದಾಳದ ಪಂಚಲೋಹ ವಿಗ್ರಹಗಳು, ತೆಲಸಂಗದ ತೈಲ ಉದ್ದಿಮೆ, ಅಥಣಿಯಲ್ಲಿನ ಚರ್ಮ ಉದ್ಯಮ, ಈ ನಿಟ್ಟಿನಲ್ಲಿ ದಾಖಲೆಗಳನ್ನು ಬರೆದಿವೆ.

ವಸಾಹತು ಆಡಳಿತ ಕೈಗಾರಿಕೆ ಕ್ರಾಂತಿಗೆ ಪೀಠಿಕೆಯಾಯಿತು. ಇಲ್ಲಿನ ಯುರೋಪಿನ ವಸತಿ ಶಾಲೆಗಳಿಗೆ ಮತ್ತು ಸೈನಿಕ ಠಾಣೆಗಳಿಗೆ ಬೇಕಾದ ಸಾಮಗ್ರಿಗಳ ಪೂರೈಕೆಗಾಗಿ ಚಿಕ್ಕ-ಪುಟ್ಟ ಕಾರ್ಖಾನೆಗಳು ಹುಟ್ಟಿಕೊಂಡವು. ಇಲ್ಲಿ ನೆಲೆಸಿದ್ದ ಪಾರ್ಸಿ ಜನರು ಮೋಟಾರು ವಾಹನಗಳನ್ನು ನೋಡಿಕೊಳ್ಳುತ್ತಿದ್ದರು. ಅವರಿಂದ ವಾಹನಗಳ ದುರಸ್ತಿ ಕೆಲಸ ಪ್ರಾರಂಭವಾಯಿತು.

ಮೋಟಾರು ವಾಹನಗಳ ಬಿಡಿಭಾಗಗಳನ್ನು ಸಿದ್ಧಪಡಿಸುವ ಕಾರ್ಖಾನೆಗಳು ಕ್ರಮೇಣ ಹುಟ್ಟಿಕೊಂಡವು. ಲೋಹ ಕಡಿಯುವ, ಅದಿರು ಶುದ್ಧೀಕರಿಸುವ ಚಿಕ್ಕ-ಪುಟ್ಟ ಕೈಗಾರಿಕೆಗಳು ಮುನ್ನುಡಿ ಬರೆದವು. ಇದರೊಂದಿಗೆ ಸಣ್ಣ-ಕೈಗಾರಿಕೆಗಳ ವ್ಯಾಪ್ತಿಯಲ್ಲಿ ಚರ್ಮ ಹದಮಾಡುವುದು, ಕಂಚುಗಾರಿಕೆ, ಹೈನುಗಾರಿಕೆ, ಕಾಸ್ಟಿಂಗ ಮಾಡುವಂಥ ಕೈಗಾರಿಕೆಗಳು ಕೇಂದ್ರೀಕರಣಗೊಂಡವು. ಆಧುನಿಕತೆ ಮೈಗೂಡಿಸಿಕೊಂಡ ಟಾಟಾ, ಕಿರ್ಲೋಸ್ಕರ, ವಾಲಚಂದ ಗ್ರುಪ್, ಕೂಪರ ಮುಂತಾದವರು ಗುಡಿ ಕೈಗಾರಿಕೆಗಳಿಗೆ ಬೃಹತ್ ಸ್ವರೂಪ ನೀಡಿದರು. ಇದರೊಂದಿಗೆ ಇಂಜಿನುಗಳ ದುರಸ್ತಿ, ಟೈರ್ ರಿಮೋಲ್ಡಿಂಗ, ಕಟ್ಟಿಗೆಯ ಪ್ಯಾಕಿಂಗ್, ಹೈಡ್ರೋಲಿಕ್ ಯಂತ್ರಗಳು, ವಿದ್ಯುತ್ತಿನ ಫೌಂಡ್ರಿಗಳು ಪ್ರಾರಂಭವಾದವು.

ಕೈಗಾರಿಕೆ ರಂಗದ ಆರಂಭ ಘಟ್ಟದಲ್ಲಿ ಯುರೋಪಿಯನ್ನರ ಅವಶ್ಯಕತೆಗೆ ತಕ್ಕಂತೆ ಉದ್ದಿಮೆಗಳು ಬೆಳೆದುಬಂದವು. ೧೯೬೯ ರಲ್ಲಿ ಪ್ರಾರಂಭವಾದ ಅಲ್ಯುಮಿನೀಯಂ ಕಾರ್ಖಾನೆಯಿಂದ ಅಲ್ಯುಮಿನಾ ಮತ್ತು ಸ್ಮೆಲ್ಟರ ಎಂಬ ಪದಾರ್ಥಗಳು ಉತ್ಪಾದಿಸಲ್ಪಟ್ಟವು. ಮಧ್ಯಮ ಪ್ರಮಾಣದಲ್ಲಿ ಈ ಉದ್ದಿಮೆ ಬೆಳೆದು ಬಂತು. ಈ ಉತ್ಪನ್ನಗಳು ವಿದೇಶಗಳಲ್ಲಿಯೂ ಬೇಡಿಕೆ ಹೊಂದಿವೆ. ಇಲ್ಲಿ ಉತ್ಪಾದಿಸುವ ಕಂಪನಿಗಳಲ್ಲಿ ಬಜಾಜ್, ಫಿಲಿಪ್ಸ್, ಕಿರ್ಲೋಸ್ಕರ ಮುಂತಾದವುಗಳು ಪ್ರಮುಖವಾದವು-ಗಳಾಗಿವೆ.

ಜಿಲ್ಲೆಯ ಉದ್ದಿಮೆಗಳ ಸಮೀಕ್ಷೆಯ ನೆಪದಲ್ಲಿ ಬೆಳಗಾವಿ ಜಿಲ್ಲೆಯ ಸ್ಥಾನಮಾನ ಪರಿಶೀಲಿಸುವ ಪ್ರಯತ್ನವನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ. ಈ ಪರಿಶೀಲನೆಯಲ್ಲಿ ವಿವಿಧ ಕೈಗಾರಿಕೆಗಳಾದ ಸಿದ್ಧ ಉಡುಪುಗಳು, ರಸಾಯನಿಕ, ಇಂಜಿನೀಯರಿಂಗ, ಇತರೆ ಕೈಗಾರಿಕೆಗಳನ್ನು ಸೇರಿಸಿಕೊಳ್ಳಲಾಗಿದೆ. ಇದರೊಂದಿಗೆ ಸಣ್ಣ ಕೈಗಾರಿಕಾ ಘಟಕಗಳು, ಶೆಡ್ಡುಗಳು, ಮಧ್ಯಮ ಪ್ರಮಾಣದ ಹಾಗೂ ದೊಡ್ಡ ಪ್ರಮಾಣದ ಉದ್ದಿಮೆಗಳೂ ಸೇರಿಕೊಂಡಿವೆ.

ಪ್ರಸ್ತುತ ಅಧ್ಯಯನ ಮಾಡುವಾಗ ಬೆಳಗಾವಿ ಜಿಲ್ಲೆಯನ್ನು ಇತರ ಜಿಲ್ಲೆಗಳಿಗೆ ಹೋಲಿಸಿ ನೋಡಲಾಗಿದೆ. ತನ್ಮೂಲಕ ಉದ್ದಿಮೆ ರಂಗದಲ್ಲಾಗಿರುವ ಬದಲಾವಣೆ ಹಾಗೂ ಪ್ರಗತಿಯನ್ನು ಪರಿಶೀಲಿಸಲಾಗಿದೆ.

ಪುರಾತನ ಕಾಲದಿಂದಲೂ ಭಾರತ ನೂಲಿನ ಉದ್ದಿಮೆಗೆ ಪ್ರಸಿದ್ಧಿ ಪಡೆದಿತ್ತು. ಕಡ್ಡಿಪೆಟ್ಟಿಗೆಯಲ್ಲಿ ಹಾಕಿ ಇಡಬಹುದಾದ ಉತ್ತಮ ಗುಣಮಟ್ಟದ ಸೀರೆಗಳನ್ನು ತಯಾರಿಸುವ ಖ್ಯಾತಿ ಭಾರತದ್ದಾಗಿತ್ತು. ನೂಲುವುದು, ನೇಯುವುದು ನಮ್ಮ ನಾಡಿನ ಇತಿಹಾಸದಲ್ಲಿ ಹಾಸುಹೊಕ್ಕಾಗಿವೆ. ಸ್ವಾತಂತ್ರ ಹೋರಾಟದಲ್ಲಿ ಗಾಂಧೀಜಿಯವರು ಸ್ವತ: ನೂಲುತ್ತಿದ್ದರು. ಅವರ ಚರಕ ಸ್ವಾವಲಂಭನೆಯ ಸಂಕೇತವಾಗಿತ್ತು. ಸುಧೀಂದ್ರ ಕುಲಕರ್ಣಿಯವರ ``ದಿ ಮ್ಯಾಜಿಕ್ ಆಫ್ ಸ್ಪಿನ್ನಿಂಗ್ ವ್ಹೀಲ್'' ಕೃತಿಯಲ್ಲಿ ಈ ಕುರಿತು ವಿಸ್ತೃತ ವಿವರಣೆಗಳಿವೆ. ಬಟ್ಟೆ ಉದ್ದಿಮೆಯು ಪುರಾತನವಾದದ್ದು ಹಾಗೂ ಸಹಜವಾಗಿ ಬಂದದ್ದಾಗಿದೆ. ಜವಳಿ ಉದ್ದಿಮೆಯಲ್ಲಿ ಬಟ್ಟೆ ಉತ್ಪಾದನೆ ಹಾಗೂ ಸಿದ್ಧ ಉಡುಪುಗಳ ಉತ್ಪಾದನೆ ಎಂದು ಎರಡು ವಿಭಾಗ ಮಾಡಬಹುದು.

೪.೨ ರಾಜ್ಯ ಮತ್ತು ಜಿಲ್ಲೆಯ ಉದ್ದಿಮೆಗಳ ಪ್ರಗತಿಯ ವಿಶ್ಲೇಷಣೆ :

ಕರ್ನಾಟಕದಲ್ಲಿಯ ಉದ್ದಿಮೆಗಳ ಪ್ರಗತಿಯನ್ನು ವಿಶ್ಲೇಷಿಸಲು ರಾಜ್ಯದ ಒಟ್ಟು ಅಂಕಿ ಅಂಶಗಳೊಂದಿಗೆ ಮುಖ್ಯವಾಗಿ ದಕ್ಷಿಣ ಕರ್ನಾಟಕ ಮತ್ತು ಉತ್ತರ ಕರ್ನಾಟಕದ (ಆಯಾ ಜಿಲ್ಲೆಗಳಲ್ಲಿನ ಪ್ರತ್ಯೇಕ ಘಟಕಗಳನ್ನು ಒಟ್ಟುಗೂಡಿಸಿದ) ಅಂಕಿ ಅಂಶಗಳು ಲಭ್ಯವಿರುತ್ತವೆ. ಇದರಲ್ಲಿ ಬೆಳಗಾವಿ ಜಿಲ್ಲೆಯ ಸ್ಥಾನಮಾನವನ್ನು ಕಂಡುಕೊಳ್ಳಬಹುದು.

ಇದಕ್ಕಾಗಿ ಜಿಲ್ಲಾವಾರು ಅಂಕಿ-ಅಂಶಗಳನ್ನು ಕ್ರೋಢಿಕರಿಸಿ ದಕ್ಷಿಣ ಮತ್ತು ಉತ್ತರ ಕರ್ನಾಟಕದೊಂದಿಗೆ ಜಿಲ್ಲೆಯ ಪಾಲನ್ನು ಪ್ರತಿಶತ ಪ್ರಮಾಣದಲ್ಲಿ ಲೆಕ್ಕಿಸಿ ವಿಶ್ಲೇಷಿಸಲಾಗಿದೆ.

೪.೨ (ಅ) ಸಿದ್ಧ ಉಡುಪುಗಳ ಉದ್ದಿಮೆ :

ಬೆಳಗಾವಿ ಜಿಲ್ಲೆಯಲ್ಲಿ ಸಿದ್ಧ ಉಡುಪುಗಳ ಉದ್ದಿಮೆಯು ಐತಿಹಾಸಿಕ ದಾಖಲೆ ಹೊಂದಿದ್ದು, ಬ್ರಿಟೀಷರ ಅವಧಿಯಲ್ಲಿ ಅತ್ಯುತ್ತಮ ಮಾರುಕಟ್ಟೆಯಾಗಿತ್ತು. ಬಟ್ಟೆ ಉದ್ಯಮಕ್ಕೆ ಬೇಕಾದ ಹತ್ತಿಯ ಪೂರೈಕೆಯಿದ್ದು, ಸಿದ್ಧ ಉಡುಪಿಗೆ ಒಳ್ಳೆಯ ಮಾರುಕಟ್ಟೆ ಇದೆ. ಸಿದ್ಧ ಉಡುಪುಗಳಲ್ಲಿ ಎಲ್ಲ ವಯೋಮಾನದವರಿಗೂ ವಿವಿಧ ಗಾತ್ರಗಳು, ಬಣ್ಣಗಳು, ವಿನ್ಯಾಸಗಳಲ್ಲಿ ಸಿದ್ಧಗೊಳ್ಳುತ್ತವೆ. ಸ್ಥಳೀಯ ಬೆಳಗಾವಿಯ ವಡಗಾಂವ, ಶಹಪೂರ, ಉಪ್ಪಾರ ಪೇಠ, ಟಿಳಕವಾಡಿಗಳಲ್ಲಿ ಈ ಉದ್ದಿಮೆ ಬೆಳೆದುಬಂದಿದೆ. ಕೋಷ್ಟಕ ೪.೧ರಲ್ಲಿ ಸಿದ್ಧಉಡುಪುಗಳ ಪ್ರಗತಿ ಚಿತ್ರಣ ತೋರಿಸಲಾಗಿದೆ.

ಕೋಷ್ಟಕ ೪.೧ ಸಿದ್ಧ ಉಡುಪು ಮತ್ತು ಬಟ್ಟೆ


ಕ್ರ.ಸಂ	ಜಿಲ್ಲೆ	೨೦೦೧	೨೦೦೩	೨೦೦೫	೨೦೦೭	೨೦೦೯	೨೦೧೧
೧	ಬೆಂಗಳೂರು	೭೬೭	೭೪೫	೮೭೦	೯೪೪	*೧೨೬	*೯೭೫
೨	ಬೆಂಗಳೂರು (ಗ್ರಾ)	೩೧	೨೯	೧೭	೪೦	೧೨	೩೯
೩	ರಾಮನಗರ	-	-	-	-	೬	೨೩
೪	ಚಿತ್ರದುರ್ಗ	೧೦	೧೬	೧೯	೧೪	೧೪	೧೩
೫	ದಾವಣಗೆರೆ	೩೦	೧೮	೧೯	೧೨	೩	೮
೬	ಕೋಲಾರ	೧೦	೮	೬	೩	೧	೯
೭	ಚಿಕ್ಕಬಳ್ಳಾಪೂರ	-	-	-	-	೪	೫
೮	ಶಿವಮೊಗ್ಗಾ	೩	೦	೦	೦	೦	೦
೯	ತುಮಕೂರು	೧	೦	೦	೦	೦	೩
೧೦	ಚಿಕ್ಕ-ಮಗಳೂರು	೦	೦	೦	೦	೦	೦
೧೧	ದಕ್ಷಿಣ- ಕನ್ನಡ	೧೭	೧	೧	೦	೦	೦

೧೨	ಉಡುಪಿ	೦	೧	೨	೨	೨	೨
೧೩	ಹಾಸನ	೪	೨	೧	೧	೦	೫
೧೪	ಕೊಡಗು	೦	೦	೦	೦	೦	೦
೧೫	ಮಂಡ್ಯ	೧	೦	೦	೦	೦	೫
೧೬	ಮೈಸೂರು	೫೫	೮	೧೬	೧೬	೨೦	೨೫
೧೭	ಚಾಮರಾಜನಗರ	೦	೧	೮	೭	೫	೧
	ದಕ್ಷಿಣ ಕರ್ನಾಟಕ	೯೨೯	೮೨೯	೯೫೯	೧೦೩೯	೧೯೩	೧೧೧೩
೧೮	ಬೆಳಗಾವಿ	೧೧೩	೪೯	೨೨	೬೬	೭೧	೭೬
೧೯	ಬಿಜಾಪೂರ	೧೫	೨೩	೦	೧೨	೧೨	೧೪
೨೦	ಬಾಗಲಕೋಟೆ	೩೭	೩೬	೬	೧೬	೫	೩
೨೧	ಧಾರವಾಡ	೧೨೧	೭೫	೪೨	೨೬	೩೧	೧೮
೨೨	ಗದಗ	೩೧	೩	೬	೫೮	೪	೧೮
೨೩	ಹಾವೇರಿ	೨೦	೪	೩	೪೫	೩	೩
೨೪	ಉತ್ತರ ಕನ್ನಡ	೦	೨	೩	೦	೦	೦
೨೫	ಬಳ್ಳಾರಿ	೪೫	೫೩	೪೯	೫	೦	೧
೨೬	ಬೀದರ	೩	೧	೦	೦	೦	೦
೨೭	ಗುಲ್ಬರ್ಗಾ	೧೦	೨	೧	೧	೦	೧
೨೮	ಯಾದಗಿರಿ	-	-	-	-	೦	೦
೨೯	ರಾಯಚೂರ	೮೮	೧	೦	೦	೦	೧
೩೦	ಕೊಪ್ಪಳ	೩೧	೦	೦	೦	೦	೦
	ಉತ್ತರ ಕರ್ನಾಟಕ	೫೧೪	೨೪೯	೧೩೨	೨೨೯	೧೨೬	೧೩೫
	ಕರ್ನಾಟಕ ರಾಜ್ಯ	೧೪೪೭	೧೦೭೮	೧೦೯೧	೧೨೬೮	೩೧೯	೧೨೪೮

(ಮೂಲ : ಕರ್ನಾಟಕ ಅಂಕಿ ಅಂಶಗಳ ನೋಟ ಅರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು, ೨೦೦೧ ರಿಂದ ೨೦೧೧)

ನಕ್ಷೆ ೪.೧

ಕರ್ನಾಟಕದಲ್ಲಿ ಸಿದ್ಧ ಉಡುಪು ಮತ್ತು ಬಟ್ಟೆ ಕೈಗಾರಿಕೆಗಳು



ಕೋಷ್ಟಕ ೪.೧ನ್ನು ವಿಶ್ಲೇಷಿಸಿದಾಗ ಬೆಳಗಾವಿಯಲ್ಲಿನ ಸಿದ್ಧ ಉಡುಪುಗಳ ಉದ್ದಿಮೆಯು ೨೦೦೧ ರಿಂದ ೨೦೧೧ರ ವರೆಗೆ ಕರ್ನಾಟಕದಂತೆಯೇ ಮಿಶ್ರ ಪ್ರಗತಿಯನ್ನು ತೋರುತ್ತಿದೆ. ೨೦೦೧ ರಿಂದ ೨೦೦೫ ರವರೆಗೆ ಉದ್ದಿಮೆ ಘಟಕಗಳ ಸಂಖ್ಯೆಯು ಕಡಿಮೆಯಾಗಿದ್ದು, ನಂತರ ಏರಿಕೆಯನ್ನು ತೋರಿಸಿದೆ. ೨೦೦೪ರಲ್ಲಿ ಅತೀ ಕಡಿಮೆ ಘಟಕಗಳು (ಕೇವಲ೨೨) ಕಾರ್ಯನಿರ್ವಹಿಸಿದ್ದು, ಉದ್ದಿಮೆಯ ಸಮಸ್ಯೆಗೆ ಸಾಕ್ಷಿಯಾಗಿದೆ. ಕ್ರಮೇಣ ಪ್ರಗತಿಯನ್ನು ದಾಖಲಿಸಿ ೨೦೧೧ ರಲ್ಲಿ ಒಟ್ಟು ೭೬ ಘಟಕಗಳೊಂದಿಗೆ ಕಾರ್ಯನಿರ್ವಹಿಸಿ ಹೆಗ್ಗಳಿಕೆಗೆ ಪಾತ್ರವಾಗಿದೆ. ಉತ್ತರ ಕರ್ನಾಟಕದ ಒಟ್ಟು ೧೩೫ ಘಟಕಗಳಲ್ಲಿ ೭೬ ಘಟಕಗಳು, ಅಂದರೆ ಶೇ. ೫೬.೩೦ರಷ್ಟು ಬೆಳಗಾವಿಯಲ್ಲಿ ಕಾರ್ಯನಿರತವಾಗಿವೆ. ಕರ್ನಾಟಕದೊಂದಿಗೆ ಹೋಲಿಕೆ ಮಾಡಿದರೆ ಬೆಂಗಳೂರಿನ ನಂತರದ ಸ್ಥಾನ ಬೆಳಗಾವಿಗೆ ದೊರೆತಿದೆ. ಕಾರಣ ಬೆಳಗಾವಿಗೆ ಸಮೀಪ ಇರುವ ಗೋವಾ ಮತ್ತು ಮಹಾರಾಷ್ಟ್ರದ ಮಾರುಕಟ್ಟೆಗಳು ಹಾಗೂ ಕಡಿಮೆ ದರದಲ್ಲಿ ದೊರೆಯುವ ತಂತ್ರಜ್ಞಾನ ಮತ್ತು ಕಚ್ಚಾಸಾಮಗ್ರಿಯಾಗಿವೆ. ಬೆಳಗಾವಿಯಲ್ಲಿ ಕರ್ನಾಟಕದ ಶೇ. ೬.೦೯ ರಷ್ಟು ಸಿದ್ಧ ಉಡುಪುಗಳ ಕೈಗಾರಿಕೆಗಳು ಕಾರ್ಯನಿರ್ವಹಿಸುತ್ತಿವೆ.

೪.೨ (ಬ) ರಾಸಾಯನಿಕ ಉದ್ದಿಮೆ :

ಕೈಗಾರಿಕೆಗಳಲ್ಲಿ ಬಳಸಬಹುದಾದ ಉತ್ಪನ್ನಗಳಲ್ಲಿ ರಾಸಾಯನಿಕ ಪದಾರ್ಥಗಳು ಪ್ರಮುಖವಾದವು. ರಾಸಾಯನಿಕ ಉದ್ದಿಮೆಯು ಇತರ ಉದ್ದಿಮೆಗಳಿಗೆ ಪೂರಕವಾಗಿ ಕಾರ್ಯನಿರ್ವಹಿಸುತ್ತಿದೆ. ರಾಸಾಯನಿಕ ಉತ್ಪನ್ನಗಳನ್ನು ಬಟ್ಟೆಗಳಿಗೆ ಬಣ್ಣಹಾಕಲು, ಕಟ್ಟಡಗಳಿಗೆ ಅವಶ್ಯವಾದ ಬಣ್ಣ ಉತ್ಪಾದಿಸುವ ಉದ್ದಿಮೆಯಲ್ಲಿ, ಔಷಧಗಳ ತಯಾರಿಕೆಯಲ್ಲಿ ಫೌಂಡ್ರಿ, ಸಕ್ಕರೆ ಉತ್ಪಾದನೆಯಲ್ಲಿ ಹಾಗೂ ಲೋಹದ ಉದ್ದಿಮೆಯಲ್ಲೂ ಬಳಸಲಾಗುತ್ತದೆ. ಯುರೋಪಿಯನ್ನರ ಪ್ರಭಾವಕ್ಕೆ ಒಳಗಾದ ಉದ್ದಿಮೆಯು ಬೆಳಗಾವಿಯಲ್ಲಿ ನೆಲೆಯೂರಲು ಕಾರಣವಾಗಿದೆ. **ಕೋಷ್ಟಕ ೪.೨** ರಲ್ಲಿ ರಾಸಾಯನಿಕ ಉದ್ದಿಮೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಘಟಕಗಳ ಚಿತ್ರಣ ನೀಡಲಾಗಿದೆ.




ಕೋಷ್ಟಕ ೪.೨ ಕರ್ನಾಟಕದಲ್ಲಿ ಕಾರ್ಯನಿರತ ರಾಸಾಯನಿಕ ಉದ್ದಿಮೆ ಘಟಕಗಳು

ಕ್ರ.ಸಂ	ಜಿಲ್ಲೆ	೨೦೦೧	೨೦೦೩	೨೦೦೫	೨೦೦೭	೨೦೦೯	೨೦೧೧
೧	ಬೆಂಗಳೂರು	೨೪೩	೧೯೬	೧೮೩	೨೭೫	೨೩೨	೨೬೦
೨	ಬೆಂಗಳೂರು (ಗ್ರಾ)	೨೪	೪೭	೩೯	೩೫	೪೫	೪೮
೩	ರಾಮನಗರ	-	-	-	-	೩	೫
೪	ಚಿತ್ರದುರ್ಗ	೧	೦	೧	೦	೦	೦
೫	ದಾವಣಗೆರೆ	೨	೮	೯	೯	೯	೯
೬	ಕೋಲಾರ	೧೫	೧೦	೧೪	೨೩	೧೫	೧೯
೭	ಚಿಕ್ಕಬಳ್ಳಾಪೂರ	-	-	-	-	೫	೭
೮	ಶಿವಮೊಗ್ಗಾ	೫	೨	೫	೯	೨	೪
೯	ತುಮಕೂರು	೧೩	೭	೮	೮	೯	೯
೧೦	ಚಿಕ್ಕ-ಮಗಳೂರು	೫	೨	೩	೨	೪	೩
೧೧	ದಕ್ಷಿಣ- ಕನ್ನಡ	೧೦	೧೫	೭	೨೪	೨೪	೨೪
೧೨	ಉಡುಪಿ	೪	೫	೫	೫	೩	೩
೧೩	ಹಾಸನ	೧೨	೫	೪	೨	೦	೪
೧೪	ಕೊಡಗು	೦	೦	೦	೦	೦	೦
೧೫	ಮಂಡ್ಯ	೦೯	೭	೭	೪	೧೮	೧೨
೧೬	ಮೈಸೂರು	೫೮	೨೭	೬೧	೫೭	೫೯	೪೨
೧೭	ಚಾಮರಾಜನಗರ	೦	೦	೦	೦	೦	೦
	ದಕ್ಷಿಣ ಕರ್ನಾಟಕ	೪೦೧	೩೩೧	೩೪೬	೪೫೩	೪೨೮	೪೪೯
೧೮	ಬೆಳಗಾವಿ	೧೧೩	೧೦	೧೧	೯	೧೨	೨೦
೧೯	ಬಿಜಾಪೂರ	೦೨	೧	೨	೦	೨	೫
೨೦	ಬಾಗಲಕೋಟೆ	೦೨	೩	೩	೩	೨	೦
೨೧	ಧಾರವಾಡ	೧೫	೪೩	೧೬	೮	೧೧	೧೧
೨೨	ಗದಗ	೫	೧	೦	೦	೦	೦
೨೩	ಹಾವೇರಿ	೦೨	೩	೫	೩	೨	೨
೨೪	ಉತ್ತರ ಕನ್ನಡ	೦೫	೧೪	೮	೪	೮	೩
೨೫	ಬಳ್ಳಾರಿ	೦೫	೧೨	೧೨	೧೫	೧೩	೧೩
೨೬	ಬೀದರ	೨೦	೧೮	೧೮	೧೬	೨೧	೩೧
೨೭	ಗುಲ್ಬರ್ಗಾ	೦೦	೬	೫	೪	೪	೭
೨೮	ಯಾದಗಿರಿ	-	-	-	-	-	೧
೨೯	ರಾಯಚೂರ	೧೧	೧೨	೧೨	೧೨	೮	೧೫
೩೦	ಕೊಪ್ಪಳ	೦೫	೭	೭	೭	೩	೩
	ಉತ್ತರ ಕರ್ನಾಟಕ	೮೫	೧೩೦	೯೯	೮೧	೮೬	೧೧೧
	ಕರ್ನಾಟಕ ರಾಜ್ಯ	೪೮೬	೪೬೧	೪೪೫	೫೪೩	೫೧೪	೫೬೦

(ಮೂಲ : ಕರ್ನಾಟಕ ಅಂಕಿ ಅಂಶಗಳ ನೋಟ, ಅರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು, ೨೦೦೧ ರಿಂದ ೨೦೧೧)

ನಕ್ಷೆ ೪.೨ ಕರ್ನಾಟಕದಲ್ಲಿ ಕಾರ್ಯನಿರತ ರಾಸಾಯನಿಕ ಘಟಕಗಳು



ಕೋಷ್ಟಕ ೪.೨ರಲ್ಲಿ ಕರ್ನಾಟಕದಲ್ಲಿ ರಸಾಯನಿಕ ಉದ್ದಿಮೆಯ ಪ್ರಗತಿಯ ಚಿತ್ರಣ ಕಂಡುಬರುತ್ತದೆ. ೨೦೦೧ ರಿಂದ ೨೦೧೧ ರವರೆಗೂ ಉದ್ದಿಮೆ ಏರಿಕೆ ಪ್ರಮಾಣವನ್ನೇ ದಾಖಲಿಸಿದೆ. ಇದೇ ಪ್ರವೃತ್ತಿಯನ್ನು ದಕ್ಷಿಣ ಕರ್ನಾಟಕದಲ್ಲಿ ಕಾಣಬಹುದಾಗಿದೆ. ಆದರೆ ಉತ್ತರ ಕರ್ನಾಟಕದಲ್ಲಿ ಮಾತ್ರ ನೀರಸ ಸ್ಥಿತಿ ಕಂಡುಬಂದಿದ್ದು, ೨೦೧೧ರಲ್ಲಿ ೫೧೪ ಘಟಕಗಳನ್ನು ಹೊಂದಿದ್ದು ೨೦೧೧ರಲ್ಲಿ ಕೇವಲ ೧೧೧ಕ್ಕೆ ಇಳಿಮುಖವಾಗಿದೆ. ಅದರಂತೆ ಬೆಳಗಾವಿಯಲ್ಲಿಯೂ ಕೂಡಾ ೨೦೧೧ರಲ್ಲಿ ೧೧೩ ಘಟಕಗಳನ್ನು ಹೊಂದಿದ್ದ ಉದ್ದಿಮೆ ೨೦೧೧ಕ್ಕೆ ಕೇವಲ ೨೦ಕ್ಕೆ ಇಳಿದಿದೆ. ಉತ್ತರ ಕರ್ನಾಟಕದಲ್ಲಿ ಬೀದರ ಪ್ರಥಮ ಸ್ಥಾನದಲ್ಲಿದೆ ಹಾಗೂ ಬೆಳಗಾವಿ ದ್ವಿತೀಯ ಸ್ಥಾನದಲ್ಲಿದೆ. ಕರ್ನಾಟಕಕ್ಕೆ ಹೋಲಿಸಿ ನೋಡಿದಾಗ ಬೆಳಗಾವಿ ಶೇ ೩.೫೭ ಭಾಗ ಹೊಂದಿದೆ. ಇದಕ್ಕೆ ಪ್ರಮುಖ ಕಾರಣ ದಕ್ಷಿಣ ಕರ್ನಾಟಕದಲ್ಲಿ ಬೆಳೆದ ಉದ್ದಿಮೆರಂಗ ತೀವ್ರ ಪೈಪೋಟಿಯನ್ನು ಒಡ್ಡಿದೆ. ಸಕ್ಕರೆ, ಸಿದ್ಧ ಉಡುಪುಗಳ ಉದ್ದಿಮೆಗಳು ಬೆಳೆದು ಬಂದರೂ ರಾಸಾಯನಿಕ ಉದ್ದಿಮೆಯಲ್ಲಿ ಹಿನ್ನೆಡೆ ಕಂಡಿವೆ. ೨೦೦೭ರಲ್ಲಿ ಕೇವಲ ೭ ಘಟಕಗಳು ಕಾರ್ಯನಿರ್ವಹಿಸಿದ್ದು ಅತ್ಯಂತ ಕೆಳಮಟ್ಟದ ದಾಖಲೆ, ೨೦೧೧ರಲ್ಲಿ ಸ್ವಲ್ಪ ಚೇತರಿಸಿಕೊಂಡಿದೆ. ಕರ್ನಾಟಕದಲ್ಲಿ ಬೆಂಗಳೂರು ೨೬೦ ಘಟಕಗಳೊಂದಿಗೆ ಪ್ರಥಮ ಸ್ಥಾನದಲ್ಲಿದೆ. ಬೆಳಗಾವಿ ಆರನೇ ಸ್ಥಾನದಲ್ಲಿದೆ. ರಾಸಾಯನಿಕಗಳನ್ನು ಬಳಸುವ ಸಣ್ಣ ಕೈಗಾರಿಕಾ ಘಟಕಗಳು ಸ್ಪರ್ಧೆಯಿಂದ ಹಿಂದೆ ಸರಿದು ಮುಚ್ಚಿದ ಕಾರಣ ರಾಸಾಯನಿಕ ಉತ್ಪನ್ನಗಳಿಗೆ ಬೇಡಿಕೆ ತೀವ್ರ ಕಡಿಮೆಯಾಗಿದೆ.

೪.೨ (ಕ) ಇಂಜಿನೀಯರಿಂಗ ಉದ್ದಿಮೆ :

ಉದ್ದಿಮೆಗಳಿಗೆ ಬಿಡಿಭಾಗಗಳನ್ನು ಒದಗಿಸುವ ಉದ್ದಿಮೆಯನ್ನು ಇಂಜಿನೀಯರಿಂಗ ಉದ್ದಿಮೆ ಎಂದು ಗುರುತಿಸಲಾಗಿದೆ. ಇವುಗಳಲ್ಲಿ ಕೃಷಿ ಕ್ಷೇತ್ರಕ್ಕೆ ಪೂರಕವಾದ ಯಂತ್ರೋಪಕರಣಗಳು, ಆಯಿಲ್ ಇಂಜನ್, ಕ್ರ್ಯಾಂಕ ಶಾಫ್ಟ ಮತ್ತು ಕನೆಕ್ಟಿಂಗ ಕಾಡ್ಸ, ಮೋಟಾರ ಟ್ರ್ಯಾಕ್ಟರಗಳ ಇಂಜಿನ, ರಿಗ್ರಾಯಿಂಡಿಂಗ, ಟ್ರಕ್ಕು, ಬಸ್ಸುಗಳ ಬಾಡಿ ಬಿಲ್ಡಿಂಗ, ಫೌಂಡರಿ, ರಿಮೋಲ್ಡಿಂಗ, ಮುಂತಾದವುಗಳು ಪ್ರಮುಖವಾದವು.

ಕೋಷ್ಟಕ ೪.೩ ರಲ್ಲಿ ಕರ್ನಾಟಕ ರಾಜ್ಯದೊಂದಿಗೆ ಬೆಳಗಾವಿ ಜಿಲ್ಲೆಯಲ್ಲಿನ ಇಂಜಿನೀಯರಿಂಗ ಉದ್ದಿಮೆ ಬಗ್ಗೆ ಚಿತ್ರಣ ನೀಡಲಾಗಿದೆ.



ಕೋಷ್ಟಕ ೪.೩ ಕರ್ನಾಟಕದಲ್ಲಿನ ಇಂಜಿನೀಯರಿಂಗ ಉದ್ದಿಮೆ ಘಟಕಗಳು

ಕ್ರ.ಸಂ	ಜಿಲ್ಲೆ	೨೦೦೧	೨೦೦೩	೨೦೦೫	೨೦೦೭	೨೦೦೯	೨೦೧೧
೧	ಬೆಂಗಳೂರು	೧೩೨೩	೧೩೮೫	೧೭೭೭	೨೦೪೨	೨೩೧೧	೨೫೯೪
೨	ಬೆಂಗಳೂರು (ಗ್ರಾ)	೬೦	೪೬	೪೫	೧೦೫	೬೫	೧೮೩
೩	ರಾಮನಗರ	-	-	-	-	೨೦	೨೮
೪	ಚಿತ್ರದುರ್ಗ	೧೨	೧	೧	೩	೩	೫
೫	ದಾವಣಗೆರೆ	೪೦	೪೩	೩೭	೪೦	೪೩	೫೩
೬	ಕೋಲಾರ	೨೦	೨೬	೧೭	೨೯	೧೭	೪೪
೭	ಚಿಕ್ಕಬಳ್ಳಾಪೂರ	-	-	-	-	೫	೧೧
೮	ಶಿವಮೊಗ್ಗಾ	೪೩	೩೬	೫೧	೬೭	೭೬	೯೨
೯	ತುಮಕೂರು	೩೪	೬೭	೫೬	೬೭	೧೦೭	೧೨೦
೧೦	ಚಿಕ್ಕ-ಮಗಳೂರು	೫	೬	೪	೩	೩	೫
೧೧	ದಕ್ಷಿಣ- ಕನ್ನಡ	೫೧	೫೨	೧೪	೫೩	೫೦	೫೧
೧೨	ಉಡುಪಿ	೧	೧೨	೨	೨	೭	೧
೧೩	ಹಾಸನ	೨	೧೧	೧೧	೦	೭	೦
೧೪	ಕೊಡಗು	೬	೭	೫	೭	೦	೦
೧೫	ಮಂಡ್ಯ	೬	೪	೪	೪	೨	೫
೧೬	ಮೈಸೂರು	೮೮	೬೮	೮೮	೮೬	೨೬	೭೭
೧೭	ಚಾಮರಾಜನಗರ	೦	೨	೩	೧	೩	೦
	ದಕ್ಷಿಣ ಕರ್ನಾಟಕ	೧೬೯೧	೧೭೬೬	೨೧೧೫	೨೫೦೯	೨೭೪೫	೩೨೬೯
೧೮	ಬೆಳಗಾವಿ	೧೯೪	೧೬೧	೧೬೦	೧೨೧	೧೫೭	೧೬೦
೧೯	ಬಿಜಾಪೂರ	೩	೫	೦	೦	೩	೯
೨೦	ಬಾಗಲಕೋಟೆ	೨	೫	೦	೭	೦	೬
೨೧	ಧಾರವಾಡ	೫೮	೧೦೮	೮೮	೧೧೫	೧೪೧	೧೪೭
೨೨	ಗದಗ	೨೦	೭	೩	೮	೦	೫
೨೩	ಹಾವೇರಿ	೧೦	೬	೫	೮	೦	೭
೨೪	ಉತ್ತರ ಕನ್ನಡ	೪	೧೫	೧೨	೧೬	೧೭	೧೫
೨೫	ಬಳ್ಳಾರಿ	೨೧	೩೯	೩೮	೬	೬	೬
೨೬	ಬೀದರ	೬	೮	೧೨	೧೨	೧೨	೨೨
೨೭	ಗುಲ್ಬರ್ಗಾ	೧೪	೧೮	೧೭	೧೯	೨೩	೨೪
೨೮	ಯಾದಗಿರಿ	-	-	-	-	-	೯
೨೯	ರಾಯಚೂರ	೮	೮	೬	೬	೭	೮
೩೦	ಕೊಪ್ಪಳ	೩	೧೫	೧೬	೦	೦	೦
	ಉತ್ತರ ಕರ್ನಾಟಕ	೩೪೩	೩೯೫	೩೫೭	೩೧೮	೩೬೬	೪೪೮
	ಕರ್ನಾಟಕ ರಾಜ್ಯ	೨೦೩೭	೨೧೬೧	೨೪೭೨	೨೮೨೭	೩೧೧೧	೩೭೧೭

(ಮೂಲ : ಕರ್ನಾಟಕ ಅಂಕಿ ಅಂಶಗಳ ನೋಟ, ಅರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು, ೨೦೦೧ ರಿಂದ ೨೦೧೧)

ನಕ್ಷೆ ೪.೩ ಕರ್ನಾಟಕದಲ್ಲಿನ ಇಂಜಿನೀಯರಿಂಗ ಉದ್ದಿಮೆ ಘಟಕಗಳು



ಕೋಷ್ಟಕ ೪.೩ ರನ್ವಯ ಕರ್ನಾಟಕದಲ್ಲಿ ಇಂಜಿನೀಯರಿಂಗ ಉದ್ದಿಮೆ ಪ್ರಗತಿ ಪಥದಲ್ಲಿರುವುದು ಸ್ಪಷ್ಟವಾಗಿದೆ. ಕಳೆದ ದಶಕದ ಪ್ರಾರಂಭದಲ್ಲಿ ೨೦೩೨ ಇಂಜಿನೀಯರಿಂಗ ಘಟಕಗಳಿದ್ದು ಕರ್ನಾಟಕದಲ್ಲಿ ೨೦೧೧ರಲ್ಲಿ ೩೭೧೨ ಘಟಕಗಳಿವೆ. ಉತ್ತರ ಹಾಗೂ ದಕ್ಷಿಣ ಕರ್ನಾಟಕಗಳೆರಡರಲ್ಲೂ ಪ್ರಗತಿ ಗೋಚರಿಸುತ್ತಿದೆ. ಆದರೆ ದಕ್ಷಿಣ ಕರ್ನಾಟಕದಲ್ಲಿ ಘಟಕಗಳ ಸಂಖ್ಯೆ ತೀವ್ರ ಪ್ರಗತಿ ಕಂಡಿದೆ. ಬೆಳಗಾವಿ-ಯಲ್ಲಿನ ಇಂಜಿನೀಯರಿಂಗ ಉದ್ಯಮದ ಸ್ಥಿತಿ ಯಥಾವತ್ತಾಗಿ ಮುಂದುವರೆದಿದೆ. ೨೦೦೧ರಲ್ಲಿ ೧೯೪ ಘಟಕಗಳನ್ನು ಹೊಂದಿದ್ದ ಬೆಳಗಾವಿ ೨೦೧೧ರಲ್ಲಿ ೧೯೦ ಘಟಕಗಳನ್ನು ಮಾತ್ರ ಹೊಂದಿ ಹಿನ್ನಡೆ ಅನುಭವಿಸಿದೆ.

೨೦೦೧ರಲ್ಲಿ ಕರ್ನಾಟಕದ ಶೇ. ೯.೫೨ ರಷ್ಟು ಘಟಕಗಳೊಂದಿಗೆ ಕಾರ್ಯನಿರ್ವಹಿಸುತ್ತಿದ್ದ ಬೆಳಗಾವಿ ಜಿಲ್ಲೆ ೨೦೧೧ರಲ್ಲಿ ಕೇವಲ ಶೇ ೫.೧೧ ರಷ್ಟು ಭಾಗ ಪಡೆದಿದೆ. ಉತ್ತರ ಕರ್ನಾಟಕದಲ್ಲಿಯೂ ಬೆಳಗಾವಿ ಅತೀ ಹೆಚ್ಚು ಘಟಕಗಳನ್ನು ಹೊಂದಿದ್ದರೂ ಕೂಡ ೨೦೦೧ರಲ್ಲಿ ಶೇಕಡಾವಾರು ೫೬.೫೬ ರಷ್ಟಿದ್ದದ್ದು ೨೦೧೧ರಲ್ಲಿ ಶೇ ೪೨.೪೧ಕ್ಕೆ ಇಳಿದಿದೆ. ಇದಕ್ಕೆ ಪ್ರಮುಖ ಕಾರಣ ಇಣಜಿನೀಯರಿಂಗ ಉತ್ಪನ್ನಗಳಲ್ಲಿನ ರಫ್ತುಪ್ರಮಾಣದಲ್ಲಿ ಯುವ ಉದ್ದಿಮೆದಾರರು ಇಂಜನೀಯರಿಂಗ ಕ್ಷೇತ್ರಕ್ಕೆ ಬಾರದಿರುವುದು ಕಂಡುಬರುತ್ತದೆ.

೪.೨ (ಡ) ಇತರೆ ಉದ್ದಿಮೆಗಳು :

ಸಿದ್ಧ ಉಡುಪು, ರಾಸಾಯನಿಕಗಳು ಹಾಗೂ ಇಂಜಿನೀಯರಿಂಗ ಕೈಗಾರಿಕೆಗಳನ್ನು ಹೊರತುಪಡಿಸಿ ಇರುವ ಉದ್ದಿಮೆಗಳನ್ನು ಇತರೆ ಉದ್ದಿಮೆಗಳೆಂದು ವರ್ಗಿಕರಿಸಲಾಗಿದೆ. ಇತರೆ ಕೈಗಾರಿಕೆಗಳ ಪ್ರಗತಿಯ ಚಿತ್ರಣವನ್ನು **ಕೋಷ್ಟಕ** ೪.೪ ರಲ್ಲಿ ನೀಡಲಾಗಿದೆ.



ಕೋಷ್ಟಕ ೪.೪ ಕರ್ನಾಟಕದಲ್ಲಿನ ಇತರ ಉದ್ದಿಮೆಗಳು

ಕ್ರ.ಸಂ	ಜಿಲ್ಲೆ	೨೦೦೧	೨೦೦೩	೨೦೦೭	೨೦೦೫	೨೦೦೯	೨೦೧೧
೧	ಬೆಂಗಳೂರು	೨೦೬೬	೨೨೩೮	೨೭೦೮	೨೨೦೯	೩೬೭೭	೨೭೬೫
೨	ಬೆಂಗಳೂರು (ಗ್ರಾ)	೩೮೦	೧೬೮	೨೦೬	೧೭೭	೨೩೪	೧೯೦
೩	ರಾಮನಗರ	-	-	-	-	೬೭	೭೭
೪	ಚಿತ್ರದುರ್ಗ	೧೨೩	೧೨೬	೬೯	೧೨೯	೧೫೦	೧೫೫
೫	ದಾವಣಗೆರೆ	೩೩೪	೧೬೮	೨೪೨	೧೬೬	೧೮೩	೧೬೮
೬	ಕೋಲಾರ	೧೨೫	೧೩೫	೧೦೨	೧೩೫	೧೬೩	೧೫೨
೭	ಚಿಕ್ಕಬಳ್ಳಾಪೂರ	-	-	-	-	೨೪	೧೯
೮	ಶಿವಮೊಗ್ಗಾ	೯೦	೧೧೮	೧೧೫	೧೨೯	೧೨೭	೧೩೫
೯	ತುಮಕೂರು	೧೫೭	೧೫೩	೧೯೭	೧೭೧	೨೨೮	೨೫೪
೧೦	ಚಿಕ್ಕ-ಮಗಳೂರು	೫೬	೪೪	೯೧	೫೦	೯೩	೯೯
೧೧	ದಕ್ಷಿಣ- ಕನ್ನಡ	೩೯೫	೩೯೫	೪೩೪	೪೭೨	೩೪೯	೪೭೯
೧೨	ಉಡುಪಿ	೨೨೯	೨೪೧	೨೬೯	೨೭೧	೪೨೫	೩೪೭
೧೩	ಹಾಸನ	೨೭	೩೨	೫೩	೩೧	೧೨	೭೨
೧೪	ಕೊಡಗು	೩೨	೩೩	೩೯	೩೪	೪೬	೪೬
೧೫	ಮಂಡ್ಯ	೨೨	೪೦	೫೦	೩೨	೪೭	೬೮
೧೬	ಮೈಸೂರು	೨೦೨	೩೨೫	೩೩೨	೨೯೦	೪೫೯	೪೪೨
೧೭	ಚಾಮರಾಜನಗರ	೧೯	೧೬	೧೩	೯	೧೫	೨೫
	ದಕ್ಷಿಣ ಕರ್ನಾಟಕ	೪೨೫೯	೪೨೩೨	೪೯೭೦	೪೩೦೫	೬೨೯೯	೫೪೯೩
೧೮	ಬೆಳಗಾವಿ	೧೨೩	೩೯೫	೩೬೨	೩೬೭	೪೧೫	೪೨೬
೧೯	ಬಿಜಾಪೂರ	೪೭	೩೯	೨೮	೬೮	೨೮	೨೦
೨೦	ಬಾಗಲಕೋಟೆ	೪೧	೩೯	೩೦	೭೫	೬೫	೪೯
೨೧	ಧಾರವಾಡ	೨೩೩	೨೦೮	೨೪೩	೨೭೯	೧೬೨	೨೭೪
೨೨	ಗದಗ	೫೦	೭೮	೩೫	೭೬	೯೦	೮೬
೨೩	ಹಾವೇರಿ	೪೫	೭೩	೨೨	೬೪	೬೯	೯೮
೨೪	ಉತ್ತರ ಕನ್ನಡ	೭೫	೬೬	೬೯	೭೮	೪೫	೬೬
೨೫	ಬಳ್ಳಾರಿ	೧೬೧	೧೮೬	೩೧೨	೨೨೧	೩೩೪	೩೯೨
೨೬	ಬೀದರ	೬೫	೪೫	೭೮	೫೮	೫೧	೪೯
೨೭	ಗುಲ್ಬರ್ಗಾ	೧೦೫	೮೪	೮೯	೭೯	೧೦೨	೬೯
೨೮	ಯಾದಗಿರಿ	-	-	-	-	-	೩೭
೨೯	ರಾಯಚೂರ	೧೨೯	೧೯೬	೨೨೨	೨೦೯	೨೧೨	೨೪೧
೩೦	ಕೊಪ್ಪಳ	೧೪೦	೧೩೭	೧೩೬	೧೪೧	೧೬೭	೧೮೭
	ಉತ್ತರ ಕರ್ನಾಟಕ	೧೨೧೪	೧೫೪೬	೧೩೨೬	೧೭೧೫	೧೭೪೦	೧೯೯೪
	ಕರ್ನಾಟಕ ರಾಜ್ಯ	೫೪೭೩	೫೭೭೮	೬೫೪೬	೬೦೨೦	೮೦೩೯	೭೪೮೭

(ಮೂಲ : ಕರ್ನಾಟಕ ಅಂಕಿ ಅಂಶಗಳ ನೋಟ, ಅರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು, ೨೦೦೧ ರಿಂದ ೨೦೧೧)

ಕೋಷ್ಟಕ ೪.೪ರಲ್ಲಿ ಇತರ ಉದ್ದಿಮೆಗಳು ಕರ್ನಾಟಕದಲ್ಲಿ ಕಳೆದ ದಶಕದಲ್ಲಿ ಹೆಚ್ಚಳದ ಗತಿಯನ್ನು ತೋರಿವೆ. ಉತ್ತರ ಕರ್ನಾಟಕದಲ್ಲಿನ ಏರಿಕೆ ದರವು ದಕ್ಷಣ ಕರ್ನಾಟಕಕ್ಕಿಂತ ಹೆಚ್ಚಾಗಿದೆ. ಆದರೆ ದಕ್ಷಿಣ ಕರ್ನಾಟಕದಲ್ಲಿ ಹೆಚ್ಚು ಕೇಂದ್ರಿಕೃತವಾಗಿವೆ. ಬೆಳಗಾವಿಯಲ್ಲಿ ೨೦೦೧ನ್ನು ಹೋಲಿಸಿದರೆ ಒಂದು ದಶಕದಲ್ಲಿ ಸುಮಾರು ಮೂರರಷ್ಟು ಹೆಚ್ಚಳವಾಗಿವೆ. ಇಲ್ಲಿ ಒಟ್ಟು ಕರ್ನಾಟಕದ ಶೇ. ೫.೬೮ ಹಾಗೂ ಉತ್ತರ ಕರ್ನಾಟಕದ ಶೇ ೨೧.೩೬ ಉದ್ದಿಮೆಗಳು ಕಾರ್ಯನಿರತವಾಗಿವೆ.

೪.೨ (ಇ) ಸಣ್ಣ ಕೈಗಾರಿಕಾ ಘಟಕಗಳು :

ಒಂದು ದೇಶದ ಆರ್ಥಿಕ ವ್ಯವಸ್ಥೆಯಲ್ಲಿ ಎಲ್ಲ ಪ್ರಕಾರದ ಉದ್ದಿಮೆಗಳು ಆರ್ಥಿಕ ಪ್ರಗತಿಗೆ ಪೂರಕವಾಗಿರುತ್ತದೆ. ಭಾರತದಂತಹ ಬೃಹತ್ ರಾಷ್ಟ್ರಕ್ಕೆ (ಜನಸಂಖ್ಯೆ ಆಧಾರದಲ್ಲಿ) ಜನರಿಗೆ ಹೆಚ್ಚಿನ ಉದ್ಯೋಗ ನೀಡುವ ಉದ್ದಿಮೆಗಳಿವು. ಭಾರತದಲ್ಲಿ ಇಂದಿಗೂ ಕೂಡ ಶೇ. ೭೨% ರಷ್ಟು ಜನರು ಗ್ರಾಮಗಳಲ್ಲಿಯೇ ವಾಸಿಸುತ್ತಾರೆ.[೧] ಕಾರಣ ಗ್ರಾಮೀಣ ಪ್ರದೇಶದಲ್ಲಿ ಉದ್ದಿಮೆಗಳ ಸ್ಥಾಪನೆ, ಗ್ರಾಮ ಆರ್ಥಿಕ ವ್ಯವಸ್ಥೆಗೆ ಚೇತರಿಕೆ ನೀಡುವುದಲ್ಲದೇ ಬೃಹತ್ ಕೈಗಾರಿಕೆಗಳಿಗೆ ಅವಶ್ಯಕ ವಸ್ತುಗಳನ್ನು ಉತ್ಪಾದಿಸುತ್ತದೆ. ಜೊತೆಗೆ ಇವು ಸ್ಥಳೀಯ ಸಂಪನ್ಮೂಲಗಳನ್ನು ಬಳಸಿಕೊಳ್ಳುತ್ತವೆ. ಉದ್ಯೋಗಗಳನ್ನು ಸೃಷ್ಟಿಸುತ್ತವೆ.

ಮಹಾತ್ಮಾ ಗಾಂಧೀಜಿಯವರ ಕನಸಿನಂತೆ ಸಣ್ಣ ಕೈಗಾರಿಕೆಗಳು ಗ್ರಾಮೀಣ ಜನರ ಜೀವನಾಡಿಗಳಿದ್ದಂತೆ. ಈ ಹಿನ್ನೆಲೆಯಲ್ಲಿ ಬೆಳಗಾವಿ ಜಿಲ್ಲೆಯ ಸಣ್ಣಕೈಗಾರಿಕೆಗಳ ದಾಖಲೆಗಳನ್ನು **ಕೋಷ್ಟಕ ೪.೫**ರಲ್ಲಿ ನೀಡಲಾಗಿದೆ.

ಕೋಷ್ಟಕ ೪.೫ ಕರ್ನಾಟಕದ ಸಣ್ಣ ಕೈಗಾರಿಕಾ (ನೋಂದಾಯಿತ) ಘಟಕಗಳು

ಕ್ರ.ಸಂ	ಜಿಲ್ಲೆ	೨೦೦೧	೨೦೦೩	೨೦೦೫	೨೦೦೭	೨೦೦೯	೨೦೧೧
೧	ಬೆಂಗಳೂರು	೪೯೫೫೩	೫೩೬೬೫	೫೬೫೪೦	೫೯೭೬೧	೬೪೭೮೬	೭೧೨೪೯
೨	ಬೆಂಗಳೂರು (ಗ್ರಾ)	೧೧೯೬೨	೧೩೭೨೬	೧೫೦೦೨	೧೬೨೫೦	೧೬೭೪೩	೧೭೧೪೮
೩	ರಾಮನಗರ	-	-	-	-	೫೭೧	೧೩೩೮
೪	ಚಿತ್ರದುರ್ಗ	೬೨೦೫	೬೮೯೪	೭೬೪೫	೮೪೬೦	೯೪೩೪	೧೦೧೪೧
೫	ದಾವಣಗೆರೆ	೫೨೭೭	೬೧೨೩	೬೮೧೭	೭೪೭೫	೮೨೫೧	೯೧೯೮
೬	ಕೋಲಾರ	೧೦೨೦೨	೧೧೨೬೨	೧೨೧೫೦	೧೩೧೯೭	೧೩೮೪೮	೧೪೩೮೩
೭	ಚಿಕ್ಕಬಳ್ಳಾಪೂರ	-	-	-	-	೪೨೮	೯೩೨
೮	ಶಿವಮೊಗ್ಗಾ	೧೦೨೦೧	೧೧೧೨೭	೧೨೦೩೩	೧೩೦೩೩	೧೪೩೬೧	೧೫೮೨೯
೯	ತುಮಕೂರು	೧೫೯೬೮	೧೭೬೧೫	೧೮೬೯೭	೧೯೭೭೧	೨೧೦೮೨	೨೨೭೨೯
೧೦	ಚಿಕ್ಕ-ಮಗಳೂರು	೪೫೭೬	೫೧೬೯	೫೮೭೦	೬೭೨೬	೭೬೮೫	೮೮೪೬
೧೧	ದಕ್ಷಿಣ- ಕನ್ನಡ	೧೨೭೦೨	೧೪೧೪೪	೧೫೫೬೫	೧೭೧೬೫	೧೮೯೯೦	೨೧೧೮೦
೧೨	ಉಡುಪಿ	೫೨೧೮	೫೮೫೨	೬೪೫೭	೭೦೮೪	೭೮೦೦	೮೬೬೧
೧೩	ಹಾಸನ	೭೧೬೯	೮೨೭೭	೯೨೬೪	೯೯೮೪	೧೦೮೮೩	೧೨೦೬೯
೧೪	ಕೊಡಗು	೨೭೭೪	೩೦೦೨	೩೧೩೩	೩೨೯೩	೩೪೭೨	೩೬೩೯
೧೫	ಮಂಡ್ಯ	೬೩೦೪	೭೧೨೦	೭೬೬೮	೮೨೬೮	೮೯೪೮	೯೭೮೨
೧೬	ಮೈಸೂರು	೧೬೪೮೬	೧೮೧೪೯	೧೯೧೭೭	೨೦೪೪೯	೨೧೯೫೧	೨೩೬೩೫
೧೭	ಚಾಮರಾಜ ನಗರ	೬೩೩೯	೬೭೮೫	೭೧೨೦	೭೪೫೦	೭೮೮೩	೮೪೦೦
	ದಕ್ಷಿಣ ಕರ್ನಾಟಕ			೨೦೩೧೩೮	೨೧೮೩೬೬	೨೩೭೧೧೬	೨೫೯೧೫೯
೧೮	ಬೆಳಗಾವಿ	೨೫೦೮೧	೨೭೦೮೪	೨೮೨೩೨	೨೯೮೮೦	೩೨೨೦೧	೩೫೪೩೮
೧೯	ಬಿಜಾಪೂರ	೪೮೫೫	೫೬೧೮	೬೩೫೦	೭೧೯೨	೮೧೩೭	೯೧೨೪
೨೦	ಬಾಗಲಕೋಟೆ	೪೭೫೧	೫೪೨೭	೬೦೩೦	೬೬೭೭	೭೩೬೩	೮೧೩೫
೨೧	ಧಾರವಾಡ	೧೦೧೧೭	೧೧೭೫೭	೧೩೧೯೫	೧೪೪೨೦	೧೫೭೯೦	೧೭೫೫೦
೨೨	ಗದಗ	೫೪೦೭	೬೦೫೪	೬೪೬೩	೬೮೬೯	೭೩೧೦	೭೮೨೬
೨೩	ಹಾವೇರಿ	೬೪೭೮	೬೮೮೬	೭೫೪೯	೮೦೭೯	೮೭೭೫	೯೬೨೨
೨೪	ಉತ್ತರ ಕನ್ನಡ	೫೮೩೬	೬೪೯೫	೭೨೭೭	೮೧೯೨	೯೦೦೮	೯೮೪೯
೨೫	ಬಳ್ಳಾರಿ	೧೦೩೩೭	೧೧೩೬೧	೧೨೨೫೪	೧೩೩೫೫	೧೪೯೭೪	೧೬೭೫೨
೨೬	ಬೀದರ	೬೨೦೫	೬೮೪೫	೭೨೩೮	೭೪೭೭	೭೫೮೮	೭೭೭೨
೨೭	ಗುಲ್ಬರ್ಗಾ	೯೮೭೪	೧೧೦೯೬	೧೨೩೨೩	೧೪೦೧೦	೧೫೬೯೩	೧೬೮೧೦
೨೮	ಯಾದಗಿರಿ	-	-	-	-	-	೮೨
೨೯	ರಾಯಚೂರ	೬೩೩೫	೭೨೩೪	೭೭೭೨	೮೨೩೨	೮೮೭	೯೪೯೯
೩೦	ಕೊಪ್ಪಳ	೩೦೧೩	೩೪೫೧	೩೮೫೫	೪೨೮೭	೪೯೨೩	೫೭೩೬
	ಉತ್ತರ ಕರ್ನಾಟಕ	೯೪೪೦	೯೪೭೮	೧೧೮೫೩೮	೧೨೮೬೭೦	೧೪೦೬೦೯	೧೫೪೧೯೫
	ಕರ್ನಾಟಕ ರಾಜ್ಯ	೨೬೯೨೨೫	೨೯೮೨೧೮	೩೨೧೬೭೬	೩೪೭೦೩೬	೩೭೭೭೨೫	೪೧೩೩೫೪

(ಮೂಲ : ಕರ್ನಾಟಕ ಅಂಕಿ ಅಂಶಗಳ ನೋಟ, ಅರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು, ೨೦೦೧ ರಿಂದ ೨೦೧೧)

ಕೋಷ್ಟಕ ೪.೫ ರಂತೆ ಸಣ್ಣ ಕೈಗಾರಿಕೆಗಳ ಕ್ಷೇತ್ರ ಪ್ರಗತಿಯಲ್ಲಿದೆ. ಕಳೆದ ದಶಕದ ಬೆಳವಣಿಗೆ ಗಮನಿಸಿದರೆ ಒಟ್ಟಾರೆ ಕರ್ನಾಟಕದಲ್ಲಿ ಶೇ. ೧೫೩.೫೪ರಷ್ಟು ವೃದ್ಧಿಸಿವೆ ಹಾಗೂ ಉತ್ತರ ಕರ್ನಾಟಕದಲ್ಲಿನ ವೃದ್ಧಿ ದರವು ದಕ್ಷಿಣ ಕರ್ನಾಟಕ ಹಾಗೂ ಕರ್ನಾಟಕಕ್ಕಿಂತ ಹೆಚ್ಚಾಗಿದೆ. ಬೆಳಗಾವಿ ಜಿಲ್ಲೆಯ ಪ್ರಗತಿ ದರವು ಶೇ ೧೪೧.೨೯ರಷ್ಟು ದಾಖಲಾಗಿದ್ದು, ರಾಜ್ಯಕ್ಕಿಂತ ಕಡಿಮೆಯಾಗಿದೆ. ಉತ್ತರ ಕರ್ನಾಟಕದಲ್ಲಿನ ಉದ್ದಿಮೆಗಳನ್ನು ಹೋಲಿಸಿ ನೋಡಿದಾಗ ಬೆಳಗಾವಿ ವೃದ್ಧಿ ಪ್ರಮಾಣ ಶೇ. ೨೨.೯೮ರಷ್ಟು. ಇಲ್ಲಿ ಕರ್ನಾಟಕದ ಶೇ ೮.೫೭ರಷ್ಟು ಉದ್ದಿಮೆಗಳು ಸ್ಥಾಪಿತಗೊಂಡಿವೆ. ಜಿಲ್ಲೆಯ ತಾಲೂಕುಗಳ ವ್ಯಾಪ್ತಿಯನ್ನು ಪರಿಗಣಿಸಿದರೆ ಚಿಕ್ಕ- ಘಟಕಗಳ ಸಂಖ್ಯೆ ಇನ್ನು ಅಧಿಕವಾಗಬೇಕಾದ ಅವಶ್ಯಕತೆ ಇದೆ.

೪.೨ (ಫ) ಸಕ್ಕರೆ ಉದ್ದಿಮೆ :


ಕೃಷಿಯು ಇತ್ತೀಚಿನ ದಿನಗಳಲ್ಲಿ ವಾಣಿಜ್ಯೀಕರಣದತ್ತ ವಾಲುತ್ತಿದೆ. ಸಾಂಪ್ರದಾಯಿಕ ಬೆಳೆಗಳ ಬಗ್ಗೆ ಅಧಿಕ ಒಲವಿದ್ದು ಭಾರತದ ಕೃಷಿಕರು ಈಗ ವಾಣಿಜ್ಯ ಬೆಳೆಗಳತ್ತ ಆಕರ್ಷಿತರಾಗುತ್ತಿದ್ದಾರೆ ವಾಣಿಜ್ಯ ಬೆಳೆಗಳಾದ ಕಬ್ಬು, ತಂಬಾಕು, ಹತ್ತಿ, ಸಣಬುಗಳಂತಹ ಬೆಳೆಗಳ ಉತ್ಪನ್ನ ಹೆಚ್ಚಿದಂತೆ ಅವುಗಳನ್ನಾಧರಿಸಿದ ಕಾರ್ಖಾನೆಗಳು ಬೆಳೆಯುತ್ತವೆ. ಕರ್ನಾಟಕದ ಪ್ರಮುಖ ಬೆಳೆಗಳಲ್ಲಿ ಕಬ್ಬು ಒಂದಾಗಿದ್ದು, ಅದನ್ನವಲಂಬಿಸಿದಂತೆ ಸಕ್ಕರೆ ಕಾರ್ಖಾನೆಗಳು ಸ್ಥಾಪಿತಗೊಳ್ಳುತ್ತಿವೆ. ಬೆಳಗಾವಿ ಜಿಲ್ಲೆಯನ್ನು ಸಕ್ಕರೆ ಕಣಜವೆಂದು ಕರೆಯಲಾಗುತ್ತದೆ. ಕಾರಣ ಇಲ್ಲಿನ ಸಕ್ಕರೆ ಕಾರ್ಖಾನೆಗಳ ಸಂಖ್ಯೆಯನ್ನು ಗಮನಿಸಿದರೆ ಅದು ಸ್ಪಷ್ಟವಾಗುತ್ತದೆ. ಅದನ್ನು ಕೋಷ್ಟಕ ೪.೬ ಮತ್ತು ನಕ್ಷೆ ೪.೪ ರಲ್ಲಿ ನೀಡಲಾಗಿದೆ.

ಕೋಷ್ಟಕ ೪.೬ ಕರ್ನಾಟಕದಲ್ಲಿನ ಸಕ್ಕರೆ ಕಾರ್ಖಾನೆಗಳು

ಕ್ರ.ಸಂ	ಜಿಲ್ಲೆ	೨೦೦೧	೨೦೦೩	೨೦೦೫	೨೦೦೭	೨೦೦೯	೨೦೧೧
೧	ಬೆಂಗಳೂರು	೦	-	-	-	-	-
೨	ಬೆಂಗಳೂರು(ಗ್ರಾ)	೦	-	-	-	-	-
೩	ರಾಮನಗರ	-	-	-	-	೧	೧
೪	ಚಿತ್ರದುರ್ಗ	೧	-	-	-	-	-
೫	ದಾವಣಗೆರೆ	೩	೩	೨	೨	೨	೩
೬	ಕೋಲಾರ	೧	-	-	-	-	-
೭	ಚಿಕ್ಕಬಳ್ಳಾಪೂರ	-	-	-	-	-	-
೮	ಶಿವಮೊಗ್ಗಾ	೧	೧	೧	೧	೧	೧
೯	ತುಮಕೂರು	೦	-	-	-	-	-
೧೦	ಚಿಕ್ಕ-ಮಗಳೂರು	೦	-	-	-	-	-
೧೧	ದಕ್ಷಿಣ- ಕನ್ನಡ	೦	-	-	-	-	-
೧೨	ಉಡುಪಿ	೧	೧	೦	-	-	-
೧೩	ಹಾಸನ	೧	೧	೧	೧	೧	೧
೧೪	ಕೊಡಗು	೦		-	-	-	-
೧೫	ಮಂಡ್ಯ	೪	೪	೪	೫	೫	೫
೧೬	ಮೈಸೂರು	೨	೨	೨	೨	೨	೨
೧೭	ಚಾಮರಾಜ ನಗರ	೧	-	-	೧	೧	೧
	ದಕ್ಷಿಣ ಕರ್ನಾಟಕ	೧೫	೧೨	೧೦	೧೨	೧೩	೧೪
೧೮	ಬೆಳಗಾವಿ	೯	೧೨	೧೧	೧೪	೧೬	೨೭
೧೯	ಬಿಜಾಪೂರ	೧	೧	೨	೨	೨	೩
೨೦	ಬಾಗಲಕೋಟೆ	೩	೬	೬	೭	೯	೧೦
೨೧	ಧಾರವಾಡ	೦	-	-	-	-	-
೨೨	ಗದಗ	೦	-	-	-	-	೧
೨೩	ಹಾವೇರಿ	೧	೧	೧	-	೧	೧
೨೪	ಉತ್ತರ ಕನ್ನಡ	೦	-	-	-	೧	೧
೨೫	ಬಳ್ಳಾರಿ	೩	೧	೧	೨	೨	೨
೨೬	ಬೀದರ	೧	೨	೩	೪	೪	೪
೨೭	ಗುಲ್ಬರ್ಗಾ	೧	೧	೧	೧	೨	೩
೨೮	ಯಾದಗಿರಿ	-	-	-	-	-	-
೨೯	ರಾಯಚೂರ	೦	-	-	-	-	-
೩೦	ಕೊಪ್ಪಳ	೧	-	-	-	-	-
	ಉತ್ತರ ಕರ್ನಾಟಕ	೨೦	೨೪	೨೫	೩೦	೩೭	೫೨
	ಕರ್ನಾಟಕ ರಾಜ್ಯ	೩೫	೩೬	೩೫	೪೨	೫೦	೬೬

(ಮೂಲ : ಕರ್ನಾಟಕ ಅಂಕಿ ಅಂಶಗಳ ನೋಟ, ಅರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು, ೨೦೦೧ ರಿಂದ ೨೦೧೧)

ನಕ್ಷೆ ೪.೪ ಕರ್ನಾಟಕದಲ್ಲಿನ ಸಕ್ಕರೆ ಕಾರ್ಖಾನೆಗಳು



ಕೋಷ್ಟಕ ೪.೬ ದಿಂದ ಸ್ಪಷ್ಟವಾಗುವುದೇನೆಂದರೆ ಸಕ್ಕರೆ ಉದ್ದಿಮೆಯಲ್ಲಿ ಬೆಳಗಾವಿ ಜಿಲ್ಲೆಯ ಕೊಡುಗೆ ಅಪಾರವಾಗಿದೆ. ಕರ್ನಾಟಕದ ಒಟ್ಟು ೬೬ ಕಾರ್ಖಾನೆಗಳಲ್ಲಿ ಶೇ ೪೦.೯ರಷ್ಟು ಕಾರ್ಖಾನೆಗಳು ಬೆಳಗಾವಿ ಜಿಲ್ಲೆಯಲ್ಲಿ ಸ್ಥಾಪನೆಗೊಂಡಿವೆ. ಇದಕ್ಕೆ ಪ್ರಮುಖ ಕಾರಣ ಇಲ್ಲಿನ ವಾಣಿಜ್ಯ ಬೆಳೆಯಾಗುತ್ತಿರುವ ಕಬ್ಬು. ಕಬ್ಬು ಬೆಳೆಯಲು ಪೂರಕವಾದ ನೀರಾವರಿ ಹಾಗೂ ಹವಾಮಾನ. ಉತ್ತರ ಕರ್ನಾಟಕವು ದಕ್ಷಿಣ ಕರ್ನಾಟಕಕ್ಕಿಂತ ಅಧಿಕ ಪ್ರಮಾಣದಲ್ಲಿ ಕಬ್ಬು ಬೆಳೆಯುತ್ತಿದೆ. ಶೇ ೭೮.೭೮ರಷ್ಟು ಕಾರ್ಖಾನೆಗಳು ಉತ್ತರಭಾಗದಲ್ಲಿಯೇ ಸ್ಥಾಪಿತಗೊಂಡಿವೆ. ಜಿಲ್ಲಾವಾರು ಕಾರ್ಖಾನೆಗಳನ್ನು ಗಮನಿಸಿದಾಗ ಬೆಳಗಾವಿ ಜಿಲ್ಲೆಯಲ್ಲಿ ಗರಿಷ್ಠ ಪ್ರಮಾಣದ ಸಕ್ಕರೆ ಕಾರ್ಖಾನೆಗಳಿರುವುದು ಕಂಡು ಬರುತ್ತದೆ.

೪.೨ (ಗ) ಮೀನುಗಾರಿಕೆ :

ಮೀನುಗಾರಿಕೆಯನ್ನು ಮತ್ಸ್ಯೋದ್ಯಮ ಎಂದು ಕರೆಯಲಾಗಿದೆ. ಕರಾವಳಿ ತೀರದ ಪ್ರದೇಶಗಳಲ್ಲಿ ಮೀನುಗಾರಿಕೆ ಲಾಭದಾಯಕವಾಗಿದ್ದರೂ ಸರಕಾರವು ಒಳನಾಡುಗಳಲ್ಲಿಯೂ ಮೀನುಗಾರಿಕೆಯನ್ನು ಅಭಿವೃದ್ಧಿ ಪಡಿಸಲು ಪ್ರೋತ್ಸಾಹಿಸುತ್ತಿದೆ. ಒಳನಾಡುಗಳಲ್ಲಿ ಕೆರೆಗಳನ್ನು ನಿರ್ಮಿಸಿ, ಕೃಷಿ ಹೊಂಡಗಳನ್ನು ಕಟ್ಟಿ, ಆರ್ಥಿಕ ಸಹಾಯ ನೀಡುವುದರ ಮೂಲಕ ಮೀನುಗಾರಿಕೆಗೆ ಉದ್ದಿಮೆ ಸ್ವರೂಪ ನೀಡುವ ಪ್ರಯತ್ನ ನಡೆಸಿದೆ. ಇದಕ್ಕೆ ಪೂರಕವಾಗಿ ಮೀನು ಹಾಗೂ ಮೀನಿನ ಎಣ್ಣೆಯ ಬೇಡಿಕೆ ಹೆಚ್ಚಾಗುತ್ತದೆ. ಈ ದಿಸೆಯಲ್ಲಿ **ಕೋಷ್ಟಕ ೪.೭**ರಲ್ಲಿ ಕರ್ನಾಟಕದ ಮತ್ಸ್ಯೋದ್ಯಮದ ಚಿತ್ರಣ ನೀಡಲಾಗಿದೆ.




ಕೋಷ್ಟಕ ೪.೭ ಕರ್ನಾಟಕದಲ್ಲಿ ಮೀನು ಉತ್ಪಾದನೆ (ಟನ್ನುಗಳಲ್ಲಿ)

ಕ್ರ. ಸಂ	ಜಿಲ್ಲೆ	೨೦೦೧	೨೦೦೩	೨೦೦೫	೨೦೦೭	೨೦೦೯	೨೦೧೧
೧	ಬೆಂಗಳೂರು	೩೯೯೦	೩೮೨೮	೨೪೨೪	೩೫೩೮	೪೭೫೫	೪೨೧೬
೨	ಬೆಂಗಳೂರು (ಗ್ರಾ)	೬೩೮೨	೪೨೬೩	೨೦೨೦	೪೭೯೩	೩೮೮೬	೧೧೮೧
೩	ರಾಮನಗರ	-	-	-	-	೧೭೯೫	೪೭೩೫
೪	ಚಿತ್ರದುರ್ಗ	೫೮೯೭	೨೭೯೯	೨೧೦೦	೩೬೬೯	೬೩೬೯	೮೨೭೫
೫	ದಾವಣಗೆರೆ	೪೦೮೦	೨೯೦೬	೨೬೪೧	೭೪೨೩	೮೬೪೪	೧೧೩೫೫
೬	ಕೋಲಾರ	೪೨೯೨	೪೯೭೯	೩೧೬೪	೬೦೨೫	೩೪೭೧	೨೮೮೩
೭	ಚಿಕ್ಕಬಳ್ಳಾಪೂರ	-	-	-	-	೨೭೨೭	೫೦೯೦
೮	ಶಿವಮೊಗ್ಗಾ	೧೨೭೫೪	೫೦೦೭	೫೯೩೩	೭೯೦೮	೧೦೭೧೨	೨೦೨೫೪
೯	ತುಮಕೂರು	೧೩೫೫೫	೧೧೫೩೪	೯೦೫೦	೧೬೪೯೦	೧೯೦೧೭	೧೭೩೪೭
೧೦	ಚಿಕ್ಕ-ಮಗಳೂರು	೪೩೦೩	೨೭೯೭	೨೮೩೯	೪೪೩೨	೪೬೫೦	೭೪೬೦
೧೧	ದಕ್ಷಿಣ- ಕನ್ನಡ	೮೧೪೧೦	೮೩೧೬೦	೮೬೧೨೨	೯೦೦೩೭	೮೭೮೫೦	೧೩೫೮೧೩
೧೨	ಉಡುಪಿ	೬೯೨೨೮	೬೬೮೪೮	೬೧೨೩೧	೬೪೧೦೫	೧೦೦೦೦೬	೧೧೯೫೦೬
೧೩	ಹಾಸನ	೪೪೪೯	೫೧೨೭	೩೨೪೬	೬೦೫೯	೬೭೧೮	೯೮೯೬
೧೪	ಕೊಡಗು	೧೧೬೧	೫೪೧	೮೬೪	೧೧೧೩	೯೫೯	೧೬೯೬
೧೫	ಮಂಡ್ಯ	೮೫೯೧	೭೫೦೨	೬೭೨೧	೭೭೭೪	೧೦೩೬೯	೭೯೬೫
೧೬	ಮೈಸೂರು	೧೬೧೮೯	೫೩೭೨	೩೩೫೯	೮೬೧೫	೭೦೭೬	೮೨೩೪
೧೭	ಚಾಮರಾಜನಗರ	೧೫೦೮	೯೨೬	೧೬೩೨	೩೮೮೫	೩೦೬೦	೩೮೩೨
	ದಕ್ಷಿಣ ಕರ್ನಾಟಕ	೨೩೭೭೮೯	೨೦೭೫೮೯	೧೯೩೩೪೭	೨೩೫೮೬೫	೨೮೨೦೫೪	೩೬೯೭೩೮
೧೮	ಬೆಳಗಾವಿ	೩೦೦೩	೧೬೩೭	೨೨೬೧	೩೦೬೯	೩೫೯೯	೫೮೩೩
೧೯	ಬಿಜಾಪೂರ	೧೬೬೦	೧೭೬೨	೧೯೧೯	೨೦೩೬	೪೨೧೭	೧೧೦೬೯
೨೦	ಬಾಗಲಕೋಟೆ	೧೮೨	೪೪೦	೨೭೭	೭೨೯	೧೩೯೪	೧೦೪೨
೨೧	ಧಾರವಾಡ	೨೦೧೦	೧೦೪೯	೧೪೬೩	೨೫೫೨	೨೩೯೫	೨೫೩೭
೨೨	ಗದಗ	೧೯೯	೪೧	೩೯೬	೯೬೮	೯೫೭	೧೦೦೧
೨೩	ಹಾವೇರಿ	೩೧೦೩	೭೪೦	೨೯೦೬	೪೧೬೯	೬೫೮೨	೬೪೭೮
೨೪	ಉತ್ತರ ಕನ್ನಡ	೩೫೪೧೨	೩೭೦೨೨	೩೨೫೩೦	೨೩೦೦೬	೩೮೫೮೧	೯೫೦೭೮
೨೫	ಬಳ್ಳಾರಿ	೧೦೩೯೫	೬೩೪೦	೭೬೬೮	೯೪೭೦	೧೦೦೮೬	೧೦೨೮೬
೨೬	ಬೀದರ	೧೩೫೬	೭೨೧	೧೦೦೧	೧೩೨೯	೨೫೮೭	೫೬೦೮
೨೭	ಗುಲ್ಬರ್ಗಾ	೩೫೩೨	೩೯೨೫	೪೩೫೮	೩೬೦೨	೩೨೯೩	೫೮೪೫
೨೮	ಯಾದಗಿರಿ	-	-	-	-	-	೧೭೬೪
೨೯	ರಾಯಚೂರ	೩೪೧೦	೨೫೯೮	೨೨೫೧	೩೩೨೪	೩೫೨೨	೮೩೯೭
೩೦	ಕೊಪ್ಪಳ	೩೩೨೪	೧೫೬೦	೧೪೦೧	೨೩೧೬	೨೫೮೮	೨೮೦೪
	ಉತ್ತರ ಕರ್ನಾಟಕ	೬೭೫೮೬	೫೭೮೩೫	೫೮೪೩೧	೫೬೫೬೮	೭೯೮೦೦	೧೫೬೮೪೨
	ಕರ್ನಾಟಕ ರಾಜ್ಯ	೩೦೫೩೭೫	೨೬೬೪೨೪	೨೫೧೭೭೭	೨೯೨೪೩೩	೩೬೧೮೫೪	೫೨೬೫೮೦

(ಮೂಲ : ಕರ್ನಾಟಕ ಅಂಕಿ ಅಂಶಗಳ ನೋಟ, ಅರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು, ೨೦೦೧ ರಿಂದ ೨೦೧೧)

ನಕ್ಷೆ ೪.೫ ಕರ್ನಾಟಕದಲ್ಲಿ ಮೀನು ಉತ್ಪಾದನೆ (ಟನ್ನುಗಳಲ್ಲಿ)



ಕೋಷ್ಟಕ ೪.೭ರನ್ವಯ ಮೀನು ಉತ್ಪಾದನೆಯು ಕರ್ನಾಟಕದಲ್ಲಿ ಏರಿಕೆಯ ಕ್ರಮದಲ್ಲಿದೆ. ಕಳೆದ ದಶಕದಲ್ಲಿ ಶೇ. ೧೭೨.೪೪ರಷ್ಟು ಹೆಚ್ಚುವರಿ ಉತ್ಪಾದನೆ ಮಾಡಿದೆ. ಗಮನಾರ್ಹ ಸಂಗತಿಯೆಂದರೆ, ಕರಾವಳಿ ಪ್ರದೇಶ, ಕಡಿಮೆ ಇರುವ ಉತ್ತರ ಕರ್ನಾಟಕವು ಶೇ. ೨೩೨.೦೬ ರಷ್ಟು ಉತ್ಪಾದನೆ ಹೆಚ್ಚಿಸಿದೆ. ಆದರೆ, ದಕ್ಷಿಣ ಕರ್ನಾಟಕದಲ್ಲಿ ಉತ್ಪಾದನೆ ಪ್ರಮಾಣ ಎರಡರಷ್ಟು ಹೆಚ್ಚಾಗಿದೆ. ಬೆಳಗಾವಿ ಜಿಲ್ಲೆಯ ಉತ್ಪಾದನೆಯು ಕರ್ನಾಟಕ ರಾಜ್ಯಕ್ಕಿಂತ ತೃಪ್ತಿಕರವಾಗಿದೆ. ಜಿಲ್ಲೆಯ ಮೀನು ಉತ್ಪಾದನೆಯು ೨೦೧೧ರಲ್ಲಿ ಕರ್ನಾಟಕದ ಶೇ. ೧.೦೨ರಷ್ಟು ಹಾಗೂ ಉತ್ತರ ಕರ್ನಾಟಕದ ಶೇ. ೩.೭೭ ರಷ್ಟಿದೆ. ಆದರೆ, ಬೆಳಗಾವಿಯು ಮೀನು ಉತ್ಪಾದನೆಯಲ್ಲಿ (ಉತ್ತರ ಕರ್ನಾಟಕದ) ಏಳನೇ ಸ್ಥಾನದಲ್ಲಿದೆ. ಇಲ್ಲಿಯ ಮೂಲಭೂತ ಸೌಕರ್ಯಗಳು ಕೊರತೆಯೂ ಉತ್ಪಾದನೆಗೆ ಧಕ್ಕೆ ತಂದಿದೆ.

೪.೨ (ಹ) ಶೀತಲೀಕರಣ ಕೇಂದ್ರಗಳು :

ಮೀನು ಉತ್ಪಾದನೆಗೆ ಅಗತ್ಯವಾಗಿರಬೇಕಾದ ಸೌಲಭ್ಯವೆಂದರೆ ಶೀತಲೀಕರಣ ಕೇಂದ್ರಗಳು. ಕರ್ನಾಟಕದಲ್ಲಿನ ಶೀತಲೀಕರಣ ಘಟಕಗಳನ್ನು ಕೋಷ್ಟಕ ೪.೮ ರಲ್ಲಿ ನೀಡಲಾಗಿದೆ.

ಕೋಷ್ಟಕ ೪.೮ ಕರ್ನಾಟಕದಲ್ಲಿನ ಶೀತಲೀಕರಣದ ಕೇಂದ್ರಗಳು

ಕ್ರ.ಸಂ	ಜಿಲ್ಲೆ	೨೦೦೧	೨೦೦೩	೨೦೦೫	೨೦೦೭	೨೦೦೯	೨೦೧೧
೧	ಬೆಂಗಳೂರು	೬	೬	೬	೬	೬	೮
೨	ಬೆಂಗಳೂರು (ಗ್ರಾ)	೦	೦	೦	೦	೦	೦
೩	ರಾಮನಗರ	-	-	-	-	-	-
೪	ಚಿತ್ರದುರ್ಗ	೦	೦	೦	೦	೦	೦
೫	ದಾವಣಗೆರೆ	೦	೦	೦	೦	೦	೦
೬	ಕೋಲಾರ	೦	೦	೦	೦	೦	೧
೭	ಚಿಕ್ಕಬಳ್ಳಾಪೂರ	-	-	-	-	-	೦
೮	ಶಿವಮೊಗ್ಗಾ	೦	೦	೦	೦	೦	೦
೯	ತುಮಕೂರು	೦	೦	೦	೦	೦	೧
೧೦	ಚಿಕ್ಕ-ಮಗಳೂರು	೦	೦	೦	೦	೦	೦
೧೧	ದಕ್ಷಿಣ- ಕನ್ನಡ	೧೨	೧೬	೧೧	೧೧	೧೦	೧೦
೧೨	ಉಡುಪಿ	೯	೧೧	೧೦	೧೦	೮	೮
೧೩	ಹಾಸನ	೦	೦	೦	೦	೦	೦
೧೪	ಕೊಡಗು	೨	೨	೦	೦	೨	೦
೧೫	ಮಂಡ್ಯ	೦	೦	೦	೦	೦	೦
೧೬	ಮೈಸೂರು	೨	೨	೦	೦	೦	೨
೧೭	ಚಾಮರಾಜನಗರ	೦	೦	೨	೦	೨	೦
	ದಕ್ಷಿಣ ಕರ್ನಾಟಕ	೩೧	೩೭	೨೯	೨೯	೨೮	೩೦
೧೮	ಬೆಳಗಾವಿ	೧	೧	೧	೧	೧	೧
೧೯	ಬಿಜಾಪೂರ	೩	೦	೦	೦	೦	೦
೨೦	ಬಾಗಲಕೋಟೆ	೦	೦	೦	೦	೦	೦
೨೧	ಧಾರವಾಡ	೦	೦	೦	೦	೦	೨
೨೨	ಗದಗ	೦	೦	೦	೦	೦	೦
೨೩	ಹಾವೇರಿ	೦	೦	೦	೦	೦	೦
೨೪	ಉತ್ತರ ಕನ್ನಡ	೧೨	೧೦	೧೦	೧೦	೯	೭
೨೫	ಬಳ್ಳಾರಿ	೧	೧	೧	೧	೧	೦
೨೬	ಬೀದರ	೦	೦	೦	೦	೦	೦
೨೭	ಗುಲ್ಬರ್ಗಾ	೦	೦	೦	೦	೦	೦
೨೮	ಯಾದಗಿರಿ	೦	೦	೦	೦	೦	೦
೨೯	ರಾಯಚೂರ	೧	೧	೧	೧	೧	೧
೩೦	ಕೊಪ್ಪಳ		೦	೦	೦	೦	೦
	ಉತ್ತರ ಕರ್ನಾಟಕ	೧೮	೧೩	೧೩	೧೩	೧೨	೧೧
	ಕರ್ನಾಟಕ ರಾಜ್ಯ	೫೬	೫೦	೪೨	೪೨	೪೦	೪೧

(ಮೂಲ : ಕರ್ನಾಟಕ ಅಂಕಿ ಅಂಶಗಳ ನೋಟ, ಅರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು, ೨೦೦೧ ರಿಂದ ೨೦೧೧)

ಕೋಷ್ಟಕ ೪.೮ದಿಂದ ಸ್ಪಷ್ಟವಾಗುವುದೇನೆಂದರೆ ದಕ್ಷಿಣ ಕರ್ನಾಟಕದಲ್ಲಿ ಅದರಲ್ಲೂ ವಿಶೇಷವಾಗಿ ದಕ್ಷಿಣ ಕನ್ನಡ ಹಾಗೂ ಉಡುಪಿಯಲ್ಲಿ ಅಧಿಕ ಪ್ರಮಾಣದಲ್ಲಿ ಶೀತಲೀಕರಣ ಕೇಂದ್ರಗಳು ಸ್ಥಾಪಿಸಲ್ಪಟ್ಟಿವೆ. ಉತ್ತರ ಕರ್ನಾಟಕದಲ್ಲಿ ೧೧ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಬೆಳಗಾವಿಯಲ್ಲಿ ಕೇವಲ ೧ ಕೇಂದ್ರ ಸ್ಥಾಪಿತವಾಗಿದೆ. ಬೆಳಗಾವಿಗೆ ಸಮೀಪದಲ್ಲಿ ಗೋವೆಯಿಂದ ಸಾಕಷ್ಟು ಪ್ರಮಾಣದ ಮೀನು ಪೂರೈಕೆಯಾಗುವುದನ್ನು ಗಮನಿಸಿದಾಗ ಇನ್ನೂ ಶೀತಲೀಕರಣ ಕೇಂದ್ರಗಳ ಅವಶ್ಯಕತೆ ಕಂಡುಬರುತ್ತದೆ. ಕರ್ನಾಟಕದ ಇತರ ಪ್ರದೇಶಗಳಲ್ಲಿಯೂ ಮೀನುಗಾರಿಕೆ ಅಭಿವೃದ್ಧಿ ಪಡಿಸಿದರೆ ಪೂರಕವಾದ ಶೀತಲೀಕರಣ ಉದ್ದಿಮೆ ಬೆಳೆಯುವ ಸಾಧ್ಯತೆ ಇದೆ. ಬೆಂಗಳೂರಿನಲ್ಲಿಯೂ ಕೂಡ ಅಧಿಕ ಪ್ರಮಾಣದಲ್ಲಿ ಕೇಂದ್ರಗಳ ಸ್ಥಾಪನೆಗೆ ಮುಖ್ಯ ಕಾರಣವೆಂದರೆ ಅಲ್ಲಿನ ಕ್ರೋಢೀಕೃತ ಮಾರುಕಟ್ಟೆಯಾಗಿದೆ.

೪.೨ (ಐ) ಕೈಗಾರಿಕಾ ಪ್ರದೇಶಗಳು :


ಕೈಗಾರಿಕೆಗಳ ಪ್ರಗತಿಗೆ ಪೂರಕ ಸೌಲಭ್ಯಗಳ ಅವಶ್ಯಕತೆ ಇದೆ. ಅವುಗಳಿಗೆ ಮೂಲಭೂತ ಸೌಕರ್ಯಗಳಾದ ವಿದ್ಯುತ್, ನೀರು, ರಸ್ತೆ, ಪ್ರದೇಶ, ಬ್ಯಾಂಕು, ವಿಮೆಗಳಂತವು ಒಂದೆಡೆ ಲಭಿಸಿದಾಗ ಉದ್ದಿಮೆರಂಗ ಬೆಳವಣಿಗೆಯಾಗಲು ಸಹಾಯಕಾರಿಯಾಗುತ್ತವೆ. ಏಕ ಪ್ರಕಾರದ ಉದ್ದಿಮೆಗಳು ಒಂದೆಡೆ ಕಾರ್ಯನಿರ್ವಹಿಸುವಾಗ ಸಮಸ್ಯೆಗಳ ಪರಿಹಾರ ತ್ವರಿತವಾಗುತ್ತದೆ. ಜನವಸತಿ ಪ್ರದೇಶಗಳಲ್ಲಿ ಕೈಗಾರಿಕೆಗಳು ಪ್ರಾರಂಭಗೊಂಡರೆ ಜನತೆ ಹಾಗೂ ಕೈಗಾರಿಕೆ ಇಬ್ಬರಿಗೂ ಸಮಸ್ಯೆಯಾಗುವುದನ್ನರಿತ ಸರಕಾರಗಳು ಪ್ರತ್ಯೇಕ ಕೈಗಾರಿಕಾ ಪ್ರದೇಶಗಳನ್ನು ಗುರುತಿಸುವ ಯೋಜನೆ ಹಮ್ಮಿಕೊಂಡಿವೆ. ಒಂದು ಪ್ರದೇಶದ ಉದ್ದಿಮೆ ಅಭಿವೃದ್ಧಿಯನ್ನು ಪರಿಗಣಿಸುವಾಗ ಅಲ್ಲಿನ ಕೈಗಾರಿಕಾ ಪ್ರದೇಶಗಳನ್ನು ಮಾನದಂಡವಾಗಿ ಇಟ್ಟುಕೊಳ್ಳಬಹುದು. ಅದರಂತೆ ಹೆಚ್ಚಿನ ಕೈಗಾರಿಕಾ ಪ್ರದೇಶಗಳು ಹೆಚ್ಚಿನ ಉದ್ದಿಮೆಯ ಪ್ರಗತಿಯನ್ನು ಸೂಚಿಸುತ್ತವೆ ಹಾಗೂ ತದ್ವಿರುದ್ಧವಾಗಿ ಕಡಿಮೆ ಸಂಖ್ಯೆಯ ಪ್ರದೇಶಗಳು ಉದ್ದಿಮೆಗಳಲ್ಲಿ ಕಡಿಮೆ ಸಂಖ್ಯೆಯನ್ನು ಪ್ರತಿನಿಧಿಸುತ್ತದೆ. ಈ ದಿಶೆಯಲ್ಲಿ ಬೆಳಗಾವಿ ಜಿಲ್ಲೆಯಲ್ಲಿನ ಕೈಗಾರಿಕಾ ಪ್ರದೇಶಗಳನ್ನು ರಾಜ್ಯದೊಂದಿಗೆ ತುಲನೆ ಮಾಡಿ **ಕೋಷ್ಟಕ** ೪.೯ ರಲ್ಲಿ ತೋರಿಸಲಾಗಿದೆ.

ಕೋಷ್ಟಕ ೪.೯ ಕರ್ನಾಟಕದ ಕೈಗಾರಿಕಾ ಪ್ರದೇಶಗಳು

ಕ್ರ.ಸಂ	ಜಿಲ್ಲೆ	೨೦೦೧	೨೦೦೩	೨೦೦೫	೨೦೦೭	೨೦೦೯	೨೦೧೧
೧	ಬೆಂಗಳೂರು	೧೧	೧೨	೧೫	೧೬	೧೪	೧೪
೨	ಬೆಂಗಳೂರು (ಗ್ರಾ)	೯	೧೦	೭	೬	೪	೬
೩	ರಾಮನಗರ	-	-	-	-	೪	೩
೪	ಚಿತ್ರದುರ್ಗ	೪	೩	೩	೩	೩	೩
೫	ದಾವಣಗೆರೆ	೨	೨	೨	೨	೨	೨
೬	ಕೋಲಾರ	೯	೯	೯	೯	೫	೬
೭	ಚಿಕ್ಕಬಳ್ಳಾಪೂರ	-	-	-	-	೪	೪
೮	ಶಿವಮೊಗ್ಗಾ	೭	೬	೬	೬	೬	೭
೯	ತುಮಕೂರು	೨	೨	೮	೮	೯	೭
೧೦	ಚಿಕ್ಕ-ಮಗಳೂರು	೭	೮	೨	೨	೩	೩
೧೧	ದಕ್ಷಿಣ- ಕನ್ನಡ	೭	೮	೬	೬	೬	೫
೧೨	ಉಡುಪಿ	೨	೩	೩	೩	೩	೩
೧೩	ಹಾಸನ	೮	೭	೭	೭	೭	೭
೧೪	ಕೊಡಗು	೨	೨	೨	೨	೨	೨
೧೫	ಮಂಡ್ಯ	೬	೬	೬	೬	೬	೭
೧೬	ಮೈಸೂರು	೬	೭	೭	೭	೭	೭
೧೭	ಚಾಮರಾಜನಗರ	೧	೧	೧	೧	೧	೩
	ದಕ್ಷಿಣ ಕರ್ನಾಟಕ			೮೪	೮೪	೮೬	೮೯
೧೮	ಬೆಳಗಾವಿ	೧೧	೧೧	೧೧	೧೧	೧೧	೧೨
೧೯	ಬಿಜಾಪೂರ	೪	೪	೪	೪	೪	೪
೨೦	ಬಾಗಲಕೋಟೆ	೪	೪	೪	೪	೪	೬
೨೧	ಧಾರವಾಡ	೫	೫	೫	೫	೫	೬
೨೨	ಗದಗ	೫	೬	೬	೬	೬	೬
೨೩	ಹಾವೇರಿ	೫	೬	೬	೬	೬	೫
೨೪	ಉತ್ತರ ಕನ್ನಡ	೮	೮	೮	೮	೮	೯
೨೫	ಬಳ್ಳಾರಿ	೬	೫	೫	೫	೫	೫
೨೬	ಬೀದರ	೭	೭	೭	೭	೭	೮
೨೭	ಗುಲ್ಬರ್ಗಾ	೧೧	೧೧	೧೧	೧೧	೧೧	೧೧
೨೮	ಯಾದಗಿರಿ	-	-	-	-	-	೦
೨೯	ರಾಯಚೂರ	೪	೪	೪	೪	೪	೩
೩೦	ಕೊಪ್ಪಳ	೨	೨	೨	೨	೨	೩
	ಉತ್ತರ ಕರ್ನಾಟಕ			೭೩	೭೩	೭೩	೭೮
	ಕರ್ನಾಟಕ ರಾಜ್ಯ	೧೫೫	೧೫೭	೧೫೭	೧೫೭	೧೫೯	೧೬೭

(ಮೂಲ : ಕರ್ನಾಟಕ ಅಂಕಿ ಅಂಶಗಳ ನೋಟ, ಅರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು, ೨೦೦೧ ರಿಂದ ೨೦೧೧)

ನಕ್ಷೆ ೪.೬ ಕರ್ನಾಟಕದ ಕೈಗಾರಿಕಾ ಪ್ರದೇಶಗಳು



ಕೋಷ್ಟಕ ೪.೯ರಂತೆ ಕೈಗಾರಿಕಾ ಪ್ರದೇಶಗಳಲ್ಲಿನ ಪ್ರಗತಿ ಹೆಚ್ಚು ಕಡಿಮೆ ಸ್ಥಿರವಾಗಿದೆ. ೨೦೦೧ರಲ್ಲಿ ೧೫೫ ಪ್ರದೇಶಗಳನ್ನು ಹೊಂದಿದ್ದು, ಕರ್ನಾಟಕ ಕೇವಲ ೧೨ ಪ್ರದೇಶಗಳನ್ನು ಕಳೆದ ದಶಕದಲ್ಲಿ ರೂಪಿಸಿ, ೨೦೧೧ರಲ್ಲಿ ಒಟ್ಟು ೧೬೨ ಪ್ರದೇಶಗಳನ್ನು ಹೊಂದಿದೆ. ದಕ್ಷಿಣ ಕರ್ನಾಟಕವು ಉತ್ತರ ಕರ್ನಾಟಕಕ್ಕಿಂತ ಹೆಚ್ಚಿನ ಕೈಗಾರಿಕಾ ಪ್ರದೇಶಗಳನ್ನು ಹೊಂದಿದ್ದು, ಬೆಂಗಳೂರು ಕರ್ನಾಟಕದಲ್ಲಿ ಪ್ರಥಮ ಸ್ಥಾನದಲ್ಲಿದೆ. ಬೆಳಗಾವಿ ದ್ವಿತೀಯ ಸ್ಥಾನ ಪಡೆದಿದೆ. ಬೆಳಗಾವಿಯಲ್ಲಿ ಕಳೆದ ದಶಕದುದ್ದಕ್ಕೂ ಕೇವಲ ಒಂದು ಕೈಗಾರಿಕಾ ಪ್ರದೇಶ ಹೆಚ್ಚಾಗಿದೆ. ಜನಸಂಖ್ಯೆಯಲ್ಲಿನ ಹೆಚ್ಚಳವನ್ನು ಗಮನಿಸಿದಾಗ ಈ ಪ್ರಗತಿಯು ಅಲ್ಪ ಪ್ರಮಾಣದ್ದಾಗಿದೆ.

೪.೨ (ಜ) ಕೈಗಾರಿಕಾ ಶೆಡ್ಡುಗಳು :

ಉದ್ದಿಮೆಗಳ ಅಭಿವೃದ್ಧಿಗೆ ಕೈಗಾರಿಕಾ ಶೆಡ್ಡುಗಳ ನಿರ್ಮಾಣ ಇನ್ನೊಂದು ಮಹತ್ವದ ಹೆಜ್ಜೆಯಾಗಿದೆ. ಕೆಲವು ಸಂದರ್ಭಗಳಲ್ಲಿ ಗುರುತಿಸಲ್ಪಟ್ಟ ಕೈಗಾರಿಕಾ ಪ್ರದೇಶಗಳಲ್ಲಿ ಉದ್ಯಮಶೀಲರ ಅನಾಸಕ್ತಿಯಿಂದ ಹಾಗೂ ಶೆಡ್ಡುಗಳು ನಿರ್ಮಾಣವಾಗದಿರುವುದರಿಂದ ಉದ್ದಿಮೆಗಳ ಸ್ಥಾಪನೆಗೆ ಹಿನ್ನಡೆಯಾಗಿದೆ. ಆದ್ದರಿಂದ ನಿರ್ಮಿತ ಶೆಡ್ಡುಗಳ ಸಂಖ್ಯೆಯೂ ಕೂಡ ಉದ್ದಿಮೆಗಳ ಪ್ರಗತಿ ಸೂಚಕವಾಗಿದೆ. ಈ ಕಾರಣದಿಂದ ಉದ್ದೇಶಿತ ಅಧ್ಯಯನ ಪ್ರದೇಶದಲ್ಲಿನ ಕೈಗಾರಿಕಾ ಶೆಡ್ಡುಗಳಲ್ಲಿನ ಪ್ರಗತಿಯ ಚಿತ್ರಣವನ್ನು **ಕೋಷ್ಟಕ** ೪.೧೦ರಲ್ಲಿ ನೀಡಲಾಗಿದೆ.




ಕೋಷ್ಟಕ ೪.೧೦ ಕರ್ನಾಟಕದಲ್ಲಿನ ಕೈಗಾರಿಕಾ ಶೆಡ್ಡುಗಳು

ಕ್ರ.ಸಂ	ಜಿಲ್ಲೆ	೨೦೦೧	೨೦೦೩	೨೦೦೫	೨೦೦೭	೨೦೦೯	೨೦೧೧
೧	ಬೆಂಗಳೂರು	೧೮೫೧	೧೭೮೮	೧೯೬೧	೧೯೯೭	೧೮೯೨	೧೯೩೦
೨	ಬೆಂಗಳೂರು (ಗ್ರಾ)	೪೨೫	೪೩೪	೨೬೧	೨೨೫	೨೭೮	೨೯೬
೩	ರಾಮನಗರ	-	-	-	-	೫೩	೩೫
೪	ಚಿತ್ರದುರ್ಗ	೭೫	೬೦	೬೦	೬೦	೬೦	೬೦
೫	ದಾವಣಗೆರೆ	೧೦೮	೧೨೩	೧೨೩	೧೨೫	೧೨೫	೧೨೫
೬	ಕೋಲಾರ	೧೫೮	೧೫೮	೧೫೮	೧೫೮	೧೧೦	೧೧೨
೭	ಚಿಕ್ಕಬಳ್ಳಾಪೂರ	-	-	-	-	೪೬	೪೬
೮	ಶಿವಮೊಗ್ಗಾ	೧೮೧	೧೮೫	೧೮೫	೧೮೫	೧೮೫	೧೮೫
೯	ತುಮಕೂರು	೧೨೮	೧೩೬	೧೪೪	೧೪೪	೧೫೩	೧೪೪
೧೦	ಚಿಕ್ಕ-ಮಗಳೂರು	೪೨	೪೨೦	೪೨	೪೨	೪೨	೪೨
೧೧	ದಕ್ಷಿಣ- ಕನ್ನಡ	೩೦೬	೨೭೪	೨೭೪	೨೭೨	೨೭೨	೨೭೨
೧೨	ಉಡುಪಿ	೬೨	೭೮	೭೮	೭೮	೭೮	೭೮
೧೩	ಹಾಸನ	೧೦೫	೧೨೦	೧೨೦	೧೨೦	೧೨೦	೧೨೦
೧೪	ಕೊಡಗು	೩೮	೩೮	೩೮	೩೮	೩೮	೩೮
೧೫	ಮಂಡ್ಯ	೧೨೩	೧೩೪	೧೩೪	೧೩೪	೧೩೪	೧೩೪
೧೬	ಮೈಸೂರು	೫೨೬	೫೩೪	೫೩೧	೫೩೪	೫೩೪	೫೩೪
೧೭	ಚಾಮರಾಜನಗರ	೨೪	೨೪	೨೪	೨೪	೨೪	೨೪
	ದಕ್ಷಿಣ ಕರ್ನಾಟಕ			೪೧೩೩	೪೧೩೬	೪೧೪೪	೪೧೭೫
೧೮	ಬೆಳಗಾವಿ	೩೦೨	೩೧೪	೩೧೪	೩೨೪	೩೨೪	೩೨೪
೧೯	ಬಿಜಾಪೂರ	೬೬	೭೦	೭೦	೭೦	೭೦	೭೦
೨೦	ಬಾಗಲಕೋಟೆ	೬೨	೭೨	೭೨	೭೨	೭೨	೭೨
೨೧	ಧಾರವಾಡ	೫೨೪	೫೬೮	೫೬೮	೫೬೮	೫೯೧	೫೭೦
೨೨	ಗದಗ	೨೪	೩೪	೩೪	೩೪	೩೪	೩೪
೨೩	ಹಾವೇರಿ	೩೨	೩೨	೩೨	೩೨	೩೨	೩೨
೨೪	ಉತ್ತರ ಕನ್ನಡ	೧೧೦	೧೧೦	೧೧೦	೧೧೦	೧೧೦	೧೧೦
೨೫	ಬಳ್ಳಾರಿ	೧೨೬	೧೧೬	೧೧೬	೧೧೬	೧೧೬	೧೧೬
೨೬	ಬೀದರ	೮೮	೯೦	೯೦	೯೦	೯೦	೯೦
೨೭	ಗುಲ್ಬರ್ಗಾ	೧೪೦	೧೪೦	೧೪೦	೧೪೦	೧೪೦	೧೪೦
೨೮	ಯಾದಗಿರಿ	-	-	-	-	-	-
೨೯	ರಾಯಚೂರ	೫೬	೬೦	೬೦	೬೦	೬೦	೫೬
೩೦	ಕೊಪ್ಪಳ	೪	೪	೪	೪	೪	೮
	ಉತ್ತರ ಕರ್ನಾಟಕ			೧೬೧೦	೧೬೨೦	೧೬೪೩	೧೬೨೨
	ಕರ್ನಾಟಕ ರಾಜ್ಯ						
		೫೬೫೦	೫೭೩೮	೫೭೪೩	೫೭೫೬	೫೭೮೭	೫೭೯೭

(ಮೂಲ : ಕರ್ನಾಟಕ ಅಂಕಿ ಅಂಶಗಳ ನೋಟ, ಅರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು, ೨೦೦೧ ರಿಂದ ೨೦೧೧)

ನಕ್ಷೆ ೪.೭ ಕರ್ನಾಟಕದಲ್ಲಿನ ಕೈಗಾರಿಕಾ ಶೆಡ್ಡುಗಳು



ಕೋಷ್ಟಕ ೪.೧೦ರಂತೆ ಕೈಗಾರಿಕಾ ಶೆಡ್ಡುಗಳಲ್ಲಿನ ಪ್ರಗತಿಯು ಕೈಗಾರಿಕಾ ಪ್ರದೇಶದ ಪ್ರಗತಿಯಂತೆಯೇ ಇರುವುದು ಕಂಡುಬರುತ್ತದೆ. ಕರ್ನಾಟಕದಾದ್ಯಂತ ಸ್ಥಿರತೆ ಕಂಡುಬಂದರೆ, ದಕ್ಷಿಣ ಕರ್ನಾಟಕದಲ್ಲಿ ಶೆಡ್ಡುಗಳ ನಿರ್ಮಿತಿಯಲ್ಲಿ ಬೆಳಗಾವಿ ಜಿಲ್ಲೆಯು ೧ನೇ ಸ್ಥಾನ ಹೊಂದಿದೆ. ಕೈಗಾರಿಕಾ ಪ್ರದೇಶಗಳ ಸಂಖ್ಯೆಯು ಸ್ಥಿರವಾಗಿರುವ ಕಾರಣ ಶೆಡ್ಡುಗಳಲ್ಲಿ ಹೆಚ್ಚಿನ ಪ್ರಗತಿ ಕಂಡು ಬಂದಿಲ್ಲ. ಕಳೆದ ದಶಕದಲ್ಲಿ ಶೆಡ್ಡುಗಳ ಪ್ರಗತಿಯ ಸಂಖ್ಯೆ ಶೇ. ೧೦ಕ್ಕಿಂತ ಕಡಿಮೆಯಿದ್ದು, ಇದು ಉದ್ದಿಮೆ ಸ್ಥಾಪಿಸುವವರ ಹಾಗೂ ಶೆಡ್ಡುಗಳ ನಿರ್ಮಿಸುವವರ ಹಿಂಜರಿಕೆ ಮನೋಭಾವನೆ ತೋರಿಸುತ್ತದೆ.

೪.೨ (ಖ) ಸರಾಸರಿ ವಿದ್ಯುತ್ ಬಳಕೆ :

ಕೈಗಾರಿಕೆಗಳ ಚಕ್ರಗಳು ತಿರುಗಲು ವಿದ್ಯುತ್ ಅನಿವಾರ್ಯ ಅಗತ್ಯವಾಗಿದೆ. ವಿದ್ಯುತ್ತಿನ ಬಳಕೆಯನ್ನು ಮುಖ್ಯವಾಗಿ ಗೃಹಬಳಕೆ, ಕೈಗಾರಿಕೆ, ವಾಣಿಜ್ಯ, ನೀರಾವರಿ, ಬೀದಿ ದೀಪಗಳು ಹಾಗೂ ಇತರೆ ಕಾರಣಗಳಿಗೆಂದು ವಿಭಾಗಿಸಲಾಗಿದೆ. ಪ್ರಸ್ತುತ ಅಧ್ಯಯನವು ಉದ್ದಿಮೆಗಳ ಅಭಿವೃದ್ಧಿಗೆ ಸಂಬಂಧಿಸಿದ್ದರಿಂದ ಕೈಗಾರಿಕೆ ಹಾಗೂ ವಾಣಿಜ್ಯ ಕ್ಷೇತ್ರದಲ್ಲಿ ವಿದ್ಯುತ್ ಬಳಕೆಯನ್ನಾಧರಿಸಿ ಪ್ರಗತಿಯನ್ನು ಗುರುತಿಸಬಹುದಾಗಿದೆ. **ಕೋಷ್ಟಕ ೪.೧೧**ದಲ್ಲಿ ಕೈಗಾರಿಕಾ ಕ್ಷೇತ್ರದಲ್ಲಿ ಸರಾಸರಿ ವಿದ್ಯುತ್ ಬಳಕೆಯನ್ನು ದಾಖಲಿಸಿದೆ. ಸರಾಸರಿ ವಿದ್ಯುತ್ ಬಳಕೆಯನ್ನು ಬಳಸಿದ ವಿದ್ಯುತ್‌ನ್ನು ಬಳಕೆದಾರರಿಂದ ಭಾಗಿಸಿದಾಗ ಬರುವ ಮೊತ್ತ (ಸರಾಸರಿ ವಿದ್ಯುತ್ ಬಳಕೆ) ವಾಗಿದೆ. ವಿದ್ಯುತ್ ಸರಾಸರಿ ಮೊತ್ತವು ಲಕ್ಷ ಯುನಿಟ್‌ಗಳಲ್ಲಿ ದಾಖಲಿಸಲ್ಪಟ್ಟಿದೆ.

ಕೋಷ್ಟಕ ೪.೧೧ ಕರ್ನಾಟಕದ ಕೈಗಾರಿಕೆಗಳಲ್ಲಿ ಸರಾಸರಿ ವಿದ್ಯುತ್ ಬಳಕೆ (ಲಕ್ಷಯುನಿಟ್‌ಗಳಲ್ಲಿ)

ಕ್ರ.ಸಂ	ಜಿಲ್ಲೆ	೨೦೦೫	೨೦೦೭	೨೦೦೯	೨೦೧೧
೧	ಬೆಂಗಳೂರು	೦.೩೩	೦.೩೮೮	೦.೯೯೦	೦.೪೬೪
೨	ಬೆಂಗಳೂರು (ಗ್ರಾ)	೦.೧೬	೦.೨೪೪	೦.೦೩೮	೦.೨೬೩
೩	ರಾಮನಗರ	-	-	೦.೪೧	೦.೨೬೮
೪	ಚಿತ್ರದುರ್ಗ	೦.೦೯	೦.೧೧೬	೦.೦೪೬	೦.೦೭೪
೫	ದಾವಣಗೆರೆ	೦.೧೧	೦.೧೨೧	೦.೦೪೪	೦.೧೨೭
೬	ಕೋಲಾರ	೦.೧೧	೦.೧೨೪	೦.೦೩೧	೦.೧೨೫
೭	ಚಿಕ್ಕಬಳ್ಳಾಪೂರ	-	-	೦.೦೨೭	೦.೦೯೬
೮	ಶಿವಮೊಗ್ಗಾ	೦.೪೫	೦.೫೬೯	೦.೭೫೪	೦.೪೬೫
೯	ತುಮಕೂರು	೦.೦೯	೦.೧೩೨	೦.೦೩೬	೦.೧೯೧
೧೦	ಚಿಕ್ಕ-ಮಗಳೂರು	೧.೨೯	೦.೦೧೫	೦.೦೭೪	೦.೦೭೫
೧೧	ದಕ್ಷಿಣ- ಕನ್ನಡ	೦.೨೪	-	೦.೪೨೯	೦.೪೭೦
೧೨	ಉಡುಪಿ	೦.೧೭	೦.೨೦೦	೦.೨೪೧	೦.೨೯೮
೧೩	ಹಾಸನ	೦.೦೬	೦.೦೭೪	೦.೧೩೭	೦.೦೧೦೮
೧೪	ಕೊಡಗು	೦.೦೫	೦.೦೫೯	೦.೦೫೭	೦.೦೮೧
೧೫	ಮಂಡ್ಯ	೦.೦೭	೦.೦೬೬	೦.೦೭೨	೦.೦೮೪
೧೬	ಮೈಸೂರು	೦.೩೯	೦.೪೦೮	೦.೪೧೬	೦.೫೧೯
೧೭	ಚಾಮರಾಜನಗರ	೦.೦೫	೦.೦೪೮	೦.೦೪೬	೦.೨೪೫
	ದಕ್ಷಿಣ ಕರ್ನಾಟಕ	೦.೨೫೨	೦.೨೮೯	೦.೧೧೬	೧.೦೩೭
೧೮	ಬೆಳಗಾವಿ	೦.೧೨೭	೦.೧೭೯	೦.೧೬೫	೦.೧೬೪
೧೯	ಬಿಜಾಪೂರ	೦.೩೯	೦.೦೩೯	೦.೦೩೯	೦.೦೩೫
೨೦	ಬಾಗಲಕೋಟೆ	೦.೦೮೨	೦.೦೭೧	೦.೧೦೨	೦.೦೯೯
೨೧	ಧಾರವಾಡ	೦.೧೮೧	೦.೨೧೪	೦.೧೯೭	೦.೨೩೩
೨೨	ಗದಗ	೦.೦೮೫	೦.೦೯೭	೦.೦೮೮	೦.೦೭೫
೨೩	ಹಾವೇರಿ	೦.೦೭೮	೦.೦೮೬	೦.೦೮೪	೦.೦೭೯
೨೪	ಉತ್ತರ ಕನ್ನಡ	೦.೧೧೮	೦.೧೩೩	೦.೧೩೦	೦.೧೯೬
೨೫	ಬಳ್ಳಾರಿ	೦.೨೪೪	೦.೩೬೫	.೦೩೯೯	೦.೪೦೬
೨೬	ಬೀದರ	೦.೦೮೪	೦.೦೩	೦.೦೯೧	೦.೧೦೬
೨೭	ಗುಲ್ಬರ್ಗಾ	೦.೧೨೯	೦.೧೩೨	೦.೨೦೧	೦.೦೮೬
೨೮	ಯಾದಗಿರಿ	-	-	-	೦.೦೭೧
೨೯	ರಾಯಚೂರ	೦.೧೬೭	೦.೧೭೮	೦.೧೯೧	೦.೨೭೨
೩೦	ಕೊಪ್ಪಳ	೦.೪೭೬	೦.೪೫೯	೦.೫೬೩	೦.೬೭೯
	ಉತ್ತರ ಕರ್ನಾಟಕ	.೦೧೪೦	೦.೧೬೨	೦.೧೭೭	೧.೦೮೧
	ಕರ್ನಾಟಕ ರಾಜ್ಯ				
		೦.೨೧೨	೦.೨೪೨	೦.೧೩೮	೧.೦೪೯

(ಮೂಲ : ಕರ್ನಾಟಕ ಅಂಕಿ ಅಂಶಗಳ ನೋಟ, ಅರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು, ೨೦೦೧ ರಿಂದ ೨೦೧೧) (೨೦೦೧ ರಿಂದ ೨೦೦೩ ರವರೆಗೆ ಅಂಕಿ ಸಂಖ್ಯೆ ಪ್ರಕಟಗೊಂಡಿಲ್ಲ)

ಕೋಷ್ಟಕ ೪.೧೧ರಲ್ಲಿ ಕಂಡುಬರುವುದೇನೆಂದರೆ, ಕೈಗಾರಿಕೆಗಳಲ್ಲಿ ಸರಾಸರಿ ವಿದ್ಯುತ್ ಬಳಕೆ ಕರ್ನಾಟಕದಲ್ಲಿ ಹೆಚ್ಚಿದೆ. ಉತ್ತರ ಕರ್ನಾಟಕದ ಸರಾಸರಿ ಬಳಕೆಯು ದಕ್ಷಿಣ ಕರ್ನಾಟಕಕ್ಕಿಂತ ಹೆಚ್ಚಿಗೆ ಇದೆ. ಆದರೆ ಬೆಳಗಾವಿ ಪ್ರದೇಶದಲ್ಲಿ ಕರ್ನಾಟಕಕ್ಕಿಂತ ಅರ್ಧ ಪ್ರಮಾಣದಲ್ಲಿ ವಿದ್ಯುತ್ ಬಳಸಲ್ಪಟ್ಟಿದೆ. ಅಂದರೆ ಬೆಳಗಾವಿಯ ಕೈಗಾರಿಕೆಗಳ ಅಭಿವೃದ್ಧಿ ಪ್ರಮಾಣ ಕಡಿಮೆಯಾಗಿದೆ ಎಂದು ಅರ್ಥೈಸಬಹು-ದಾಗಿದೆ. ಇದಕ್ಕೆ ಇನ್ನೊಂದು ಕಾರಣ ಹುಡುಕಿದಾಗ ವಿದ್ಯುತ್ ಬಳಕೆದಾರರ ಸಂಖ್ಯೆ ಅಧಿಕಗೊಂಡಿದ್ದು, ವಿದ್ಯುತ್ ಬಳಕೆ ಅದೇ ಪ್ರಮಾಣದಲ್ಲಿರುವ ಸಾಧ್ಯತೆ ಇದೆ. ಅಥವಾ ಬಳಕೆದಾರರು ವಿದ್ಯುತ್ ಪೂರೈಕೆಯಲ್ಲಿನ ಕೊರತೆಯನ್ನು ಅನುಭವಿಸಿರಬಹುದು. ಕಳೆದ ದಶಕದ ಪ್ರಾರಂಭದಲ್ಲಿ ಸರಾಸರಿ ಬಳಕೆ ೦.೧೨೭ ಲಕ್ಷ ಯುನಿಟ್ ಇದ್ದದ್ದು, ೨೦೧೧ರಲ್ಲಿ ೦.೧೬೪ ಲಕ್ಷ ಯುನಿಟ್‌ಗೆ ಹೆಚ್ಚಳವಾಗಿದೆ. ಆದರೆ ಇದು ೨೦೦೭ಕ್ಕಿಂತ ಕಡಿಮೆ ಮಟ್ಟದಲ್ಲಿದೆ. ಕಾರಣ, ಅಧ್ಯಯನ ಪ್ರದೇಶದಲ್ಲಿ ಸರಿಯಾದ ವಿದ್ಯುತ್ ಬಳಕೆ ಮಾಡಿ ಉತ್ಪಾದನೆ ಹೆಚ್ಚಿಸುವ ಅವಶ್ಯಕತೆ ಇದೆ.

೪.೨ (ಲ) ವಾಣಿಜ್ಯ ಕ್ಷೇತ್ರದಲ್ಲಿ ಸರಾಸರಿ ವಿದ್ಯುತ್ ಬಳಕೆ :

ಕೈಗಾರಿಕೆಗಳು ಉತ್ಪಾದನೆ ಮಾಡಿದಂತೆಲ್ಲ ವಾಣಿಜ್ಯ ಕ್ಷೇತ್ರ ಅವುಗಳನ್ನು ಗ್ರಾಹಕರಿಗೆ ವಿತರಿಸುವ ಜವಾಬ್ದಾರಿ ನಿಭಾಯಿಸುತ್ತದೆ. ವಾಣಿಜ್ಯದ ಚಟುವಟಿಕೆಗಳು ಕೈಗಾರಿಕಗಳೊಂದಿಗೆ ಪೂರಕ ಸಂಬಂಧ ಹೊಂದಿದ್ದರಿಂದ, ವಾಣಿಜ್ಯ ಕ್ಷೇತ್ರದಲ್ಲಿನ ವಿದ್ಯುತ್ ಬಳಕೆಯೂ ಕೂಡಾ ಉದ್ದಿಮೆಗಳ ಪ್ರಗತಿಯನ್ನು ಬೆಂಬಲಿಸುವ ಮಾನದಂಡವಾಗುತ್ತದೆ. ಸಾಮಾನ್ಯವಾಗಿ ಕೈಗಾರಿಕೆ ಹಾಗೂ ವಾಣಿಜ್ಯ ಕ್ಷೇತ್ರದಲ್ಲಿನ ವಿದ್ಯುತ್ ಬಳಕೆಯು ಧನಾತ್ಮಕ ಸಂಬಂಧ ಹೊಂದಿರುತ್ತವೆ. ಅಂದರೆ ಉದ್ದಿಮೆ ರಂಗದಲ್ಲಿನ ವಿದ್ಯುತ್ ಬಳಕೆ ಪ್ರಮಾಣ ಅಧಿಕಗೊಂಡರೆ ವ್ಯಾಪಾರಿ ರಂಗದಲ್ಲೂ ವಿದ್ಯುತ್ ಬಳಕೆ ಹೆಚ್ಚುತ್ತದೆ. ಈ ಸಂಬಂಧ ಅರಿತುಕೊಳ್ಳಲು **ಕೋಷ್ಟಕ** ೪.೧೨ನ್ನು ಸಿದ್ಧಪಡಿಸಲಾಗಿದೆ.

ಕೋಷ್ಟಕ ೪.೧೨ ಕರ್ನಾಟಕದ ವಾಣಿಜ್ಯ ಕ್ಷೇತ್ರದಲ್ಲಿ ಸರಾಸರಿ ವಿದ್ಯುತ್ ಬಳಕೆ (ಲಕ್ಷ ಯುನಿಟ್‌ಗಳಲ್ಲಿ)

ಕ್ರ.ಸಂ	ಜಿಲ್ಲೆ	೨೦೦೫	೨೦೦೭	೨೦೦೯	೨೦೧೧
೧	ಬೆಂಗಳೂರು	೦.೦೪	೦.೦೬	೦.೦೧೯	೦.೦೬೯
೨	ಬೆಂಗಳೂರು (ಗ್ರಾ)	೦.೦೧	೦.೦೧	೦.೦೦೮	೦.೦೩೩
೩	ರಾಮನಗರ	-	-	೦.೦೦೮	೦.೦೧೮
೪	ಚಿತ್ರದುರ್ಗ	೦.೦೧	೦.೦೧	೦.೦೦೭	೦.೦೧೧
೫	ದಾವಣಗೆರೆ	೦.೦೧	೦.೦೧	೦.೦೧೧	೦.೦೧೩
೬	ಕೋಲಾರ	.೦೦೧	೦.೦೧	೦.೦೦೫	೦.೦೦೮
೭	ಚಿಕ್ಕಬಳ್ಳಾಪೂರ	೦.೦೦೮	೦.೦೧	೦.೦೦೫	೦.೦೦೭
೮	ಶಿವಮೊಗ್ಗಾ	೦.೦೦೫	೦.೦೧	೦.೦೧೦	೦.೦೧೩
೯	ತುಮಕೂರು	೦.೦೦೬	೦.೦೧	೦.೦೦೭	೦.೦೧೦
೧೦	ಚಿಕ್ಕ-ಮಗಳೂರು	-	೦.೦೧	೦.೦೦೯	೦.೦೧೧
೧೧	ದಕ್ಷಿಣ- ಕನ್ನಡ	೦.೦೨೫	೦.೦೩	೦.೦೩೨	೦.೦೩೯
೧೨	ಉಡುಪಿ	೦.೦೧೯	೦.೦೨	೦.೦೨೭	೦.೦೩೧
೧೩	ಹಾಸನ	೦.೦೦೬	೦.೦೧	೦.೦೦೯	೦.೦೧೨
೧೪	ಕೊಡಗು	೦.೦೦೯	೦.೦೧	೦.೦೧೨	೦.೦೧೫
೧೫	ಮಂಡ್ಯ	೦.೦೦೫	೦.೦೧	೦.೦೦೮	೦.೦೧೧
೧೬	ಮೈಸೂರು	೦.೦೧೨	೦.೦೧	೦.೦೧೮	೦.೦೨೨
೧೭	ಚಾಮರಾಜನಗರ	೦.೦೦೬	೦.೦೧	೦.೦೦೭	೦.೦೧೦
	ದಕ್ಷಿಣ ಕರ್ನಾಟಕ	೦.೦೨೩	೦.೦೩೨	೦.೦೧೬	೦.೦೪೨
೧೮	ಬೆಳಗಾವಿ	೦.೦೦೯	೦.೦೧	೦.೦೧೧	೦.೦೧೪
೧೯	ಬಿಜಾಪೂರ	೦.೦೧	೦.೦೨	೦.೦೧೧	೦.೦೧೩
೨೦	ಬಾಗಲಕೋಟೆ	೦.೦೦೭	೦.೦೧	೦.೦೧೧	೦.೦೧೧
೨೧	ಧಾರವಾಡ	೦.೦೧೫	೦.೦೨	೦.೦೨೧	೦.೦೨೩
೨೨	ಗದಗ	೦.೦೦೬	೦.೦೧	೦.೦೦೮	೦.೦೧೧
೨೩	ಹಾವೇರಿ	೦.೦೦೫	೦.೦೧	೦.೦೦೭	೦.೦೦೯
೨೪	ಉತ್ತರ ಕನ್ನಡ	೦.೦೦೯	೦.೦೧	೦.೦೧೨	೦.೦೧೪
೨೫	ಬಳ್ಳಾರಿ	೦.೦೦೯	೦.೦೧	೦.೦೬೧	೦.೦೧೬
೨೬	ಬೀದರ	೦.೦೦೫	೦.೦೧	೦.೦೦೬	೦.೦೦೮
೨೭	ಗುಲ್ಬರ್ಗಾ	೦.೦೦೮	೦.೦೧	೦.೦೧೧	೦.೦೧೨
೨೮	ಯಾದಗಿರಿ	-	-	-	೦.೦೧೩
೨೯	ರಾಯಚೂರ	೦.೦೦೭	೦.೦೮	೦.೦೧೩	೦.೦೧೫
೩೦	ಕೊಪ್ಪಳ	೦.೦೦೬	೦.೦೦೭	೦.೦೧೧	೦.೦೦೧
	ಉತ್ತರ ಕರ್ನಾಟಕ	೦.೦೮೭	೦.೦೧೦	೦.೦೧೧	೦.೦೧೪
	ಕರ್ನಾಟಕ ರಾಜ್ಯ				
		೦.೦೧೯	೦.೦೨೫	೦.೦೧೫	೦.೦೩೩

(ಮೂಲ : ಕರ್ನಾಟಕ ಅಂಕಿ ಅಂಶಗಳ ನೋಟ, ಅರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು, ೨೦೦೧ ರಿಂದ ೨೦೧೧) (೨೦೦೧ ರಿಂದ ೨೦೦೩ ರವರೆಗೆ ಅಂಕಿ ಸಂಖ್ಯೆ ಪ್ರಕಟಗೊಂಡಿಲ್ಲ)

ಕೋಷ್ಟಕ ೪.೧೨ರನ್ವಯ, ವಾಣಿಜ್ಯ ಕ್ಷೇತ್ರದಲ್ಲೂ ಕೂಡಾ ಸರಾಸರಿ ವಿದ್ಯುತ್ ಬಳಕೆ ಹೆಚ್ಚಿರುವುದು ಕಂಡುಬರುತ್ತದೆ. ೨೦೦೧ರಲ್ಲಿ ೦.೦೧೯ ಸರಾಸರಿ ಲಕ್ಷಯುನಿಟ್ ಇದ್ದದ್ದು ೨೦೧೧ರಲ್ಲಿ ೦.೦೩೩ ಲಕ್ಷಯುನಿಟ್ ತಲುಪಿದೆ. ಉತ್ತರ ಕರ್ನಾಟಕದಲ್ಲಿ ಸರಾಸರಿ ಸಂಖ್ಯೆಯು ಕರ್ನಾಟಕ ಹಾಗೂ ದಕ್ಷಿಣ ಕರ್ನಾಟಕಕ್ಕಿಂತ ಕಡಿಮೆ ಇದೆ. ಬೆಳಗಾವಿಯು ಉತ್ತರ ಕರ್ನಾಟಕದ ಸರಾಸರಿ ಸಂಖ್ಯೆಗೆ ಸಮವಾಗಿದೆ.

೪.೩ ಉದ್ದಿಮೆಗಳ ಕ್ಷೇತ್ರವಾರು ವಿಶ್ಲೇಷಣೆ :

ಬೆಳಗಾವಿ ಜಿಲ್ಲೆಯು ವಾಣಿಜ್ಯ - ವ್ಯವಹಾರದ ಪ್ರಮುಖ ಕೇಂದ್ರವಾಗಿದ್ದು, ಉತ್ತರ ಕರ್ನಾಟಕದ ವಿಭಾಗೀಯ ಕೇಂದ್ರವಾಗಿದೆ. ರಾಜ್ಯದ ಒಟ್ಟಾರೆ ನಿರ್ಯಾತ ವ್ಯವಹಾರದಲ್ಲಿ, ವಿಶೇಷವಾಗಿ ಆಟೋಮೋಟಿವ್ ಉದ್ದಿಮೆಯಿಂದ ಜಿಲ್ಲೆಯು ಎರಡನೆಯ ಸ್ಥಾನದಲ್ಲಿ ನಿಲ್ಲುತ್ತದೆ. ಮೊದಲನೆಯ ಸ್ಥಾನ ಬೆಂಗಳೂರಿಗೆ ಸಲ್ಲುತ್ತದೆ. ಉತ್ತರ ಕರ್ನಾಟಕದ ಅಕ್ಕಿ ಕಣಜ ಅಥವಾ ಬುಟ್ಟಿಯೆಂದು ಕರೆಯಲ್ಪಡುವ ಈ ಜಿಲ್ಲೆಯು ಕಾಯಿಪಲ್ಲೆ, ಹಣ್ಣುಗಳು, ಮಾಂಸ, ಮೀನು, ಕೋಳಿ ಸಾಕಾಣಿಕೆ, ಕಟ್ಟಿಗೆ (ಉತ್ತಮ ಮಳೆ, ನದಿ ಹಾಗೂ ನೀರು ಹೇರಳವಾಗಿ ಲಭ್ಯವಿರುವದರಿಂದ) ಗಣಿ ಉತ್ಪನ್ನಗಳಿಗೆ ಪ್ರಸಿದ್ಧಿ ಪಡೆದಿದೆ. ಪಕ್ಕದ ಗೋವಾ ಹಾಗೂ ಮಹಾರಾಷ್ಟ್ರದ ಪ್ರಮುಖ ನಗರಗಳಾದ ಪುಣೆ-ಮುಂಬೈಗಳೊಂದಿಗೆ ವ್ಯಾಪಾರ ಸಂಬಂಧಗಳನ್ನು ಬೆಳೆಸಿದೆ.

ಬೆಳಗಾವಿ ಜಿಲ್ಲೆಯಲ್ಲಿ ಹೇರಳವಾಗಿ ಬಾಕ್ಸೈಟ್ ಸಂಗ್ರಹವಿದೆ. ಅದರಿಂದಾಗಿಯೇ, ಆದಿತ್ಯ ಬಿರ್ಲಾ ಗುಂಪಿನ ಉದ್ದಿಮೆದಾರರ ಮುಂದಾಳತ್ವದಲ್ಲಿ ಹಿಂಡಾಲ್ಕೋ-ಇಂಡಿಯನ್ ಅಲ್ಯುಮಿನಿಯಂ ಕಂಪನಿಯು ಅಲ್ಯುಮಿನಿಯಂ ಉತ್ಪಾದನೆಯಲ್ಲಿ ತೊಡಗಿದೆ. ಇತ್ತೀಚೆಗೆ ಬೈಲಹೊಂಗಲ ತಾಲೂಕಿನ ಚಿಕ್ಕ ಗ್ರಾಮವಾದ ದೇಸೂರದಲ್ಲಿ ಯುರೇನಿಯಂ ಸಂಗ್ರಹವು ಕಂಡು ಬಂದಿದೆ. ಹಾಲು ಉತ್ಪಾದನೆಯಲ್ಲಿ ಬೆಳಗಾವಿ ಜಿಲ್ಲೆಯು ಕರ್ನಾಟಕದಲ್ಲಿಯೇ ಮುಂಚೂಣಿಯಲ್ಲಿದೆ. ಒಟ್ಟಾರೆ ಮೂರನೆಯ ಒಂದು ಪಾಲು ಶೇ. ೩೦ರಷ್ಟು ರಾಜ್ಯದ ಹಾಲು ಉತ್ಪಾದನೆಯು ಜಿಲ್ಲೆಯಲ್ಲಾಗುತ್ತದೆ.

೧೯೫೦ರಿಂದೀಚೆಗೆ ಬೆಳಗಾವಿಯು ಬೃಹತ್ ಯಂತ್ರೋಪಕರಣಗಳ ಉತ್ಪಾದನೆಯ ಕೇಂದ್ರವಾಗಿ ಹೊರಹೊಮ್ಮುತ್ತದೆ. ಇವುಗಳ ಜೊತೆಗೆ ಹೆಚ್ಚಿನ ಒತ್ತಡದ ಆಯಿಲ್ ಹೈಡ್ರಾಲಿಕ್ಸಗಳ ಉತ್ಪಾದನೆಯು ಕಂಡು ಬರುತ್ತದೆ.

ಜಿಲ್ಲೆಯು ಕರ್ನಾಟಕ ರಾಜ್ಯದಲ್ಲಿಯೇ ಫೌಂಡ್ರಿ ಉದ್ದಿಮೆಯ ಕೇಂದ್ರ ಸ್ಥಾನವಾಗಿದೆ. ಅಂದಾಜು 20,000 ಟನ್‌ಗಳಷ್ಟು ಉತ್ಪಾದನೆ ಸಾಮರ್ಥ್ಯ ಹೊಂದಿರುವ ೨೦೦ ಫೌಂಡ್ರಿ ಘಟಕಗಳಿವೆ. ಫೆರಸ್ಸ್ ಆಧಾರಿತ ವಾಹನದ ಮತ್ತು ಉದ್ದಿಮೆಗಳಿಗೆ ಕಾಸ್ಟಿಂಗ್ಸ್‌ಗಳನ್ನು ಪೂರೈಸುತ್ತದೆ. ಈ ಉದ್ದಿಮೆಗೆ ಬೆಂಬಲವಾಗಿ ಸಿಎನ್‌ಸಿ ಮತ್ತು ಸಾಂಪ್ರದಾಯಕ ಯಂತ್ರೋಪಕರಣ ಮಳಿಗೆಗಳು ಜಿಲ್ಲೆಯಲ್ಲಿ ಉತ್ಪಾದನೆಗೊಳ್ಳುವ ಕಾಸ್ಟಿಂಗ್ಸಗಳನ್ನು ಸಿದ್ಧಗೊಳಿಸುತ್ತವೆ.

ಅಲ್ಲದೇ, ಜಿಲ್ಲೆಯು ಜವಳಿ ಉದ್ದಿಮೆಯ ಪ್ರಮುಖ ಕೇಂದ್ರವಾಗಿದೆ. ಸುಮಾರು ೫೧,೧೦೦ಕ್ಕೂ (ನೋಂದಣಿ ಇಲ್ಲದ ಘಟಕಗಳು ಸೇರಿ) ವಿದ್ಯುತ್ ಚಾಲಿತ್ ಮಗ್ಗಗಳಿವೆ. ಹಳೆಯ ಬೆಳಗಾವಿ ನಗರದ

ವಡಗಾಂವ್, ಖಾಸಬಾಗ್, ಶಾಹಪೂರ ಭಾಗಗಳಲ್ಲಿ ಪೂರ್ತಿಯಾಗಿ ವಿದ್ಯುತ್ ಮಗ್ಗಗಳಿವೆ. ವಿವಿಧ ಹೆಸರುಗಳಿಂದ ಮಾರಾಟಗೊಳ್ಳುವ ಬೆಳಗಾವಿ ಸೀರೆಗಳಿಗೆ ಜಿಲ್ಲೆಯು ಹೆಸರುವಾಸಿಯಾಗಿದೆ. ಅಂದಾಜು ೩೦,೦೦೦ ಜನರು ವಿದ್ಯುತ್ ಮಗ್ಗಗಳ ಮೇಲೆ ನೇರವಾಗಿ ಅವಲಂಬಿತರಾಗಿದ್ದಾರೆ. ಇದರ ಜೊತೆಗೆ ಸಿದ್ಧ ಉಡುಪು ಘಟಕಗಳು ಕಾರ್ಯಗೈಯ್ಯುತ್ತಿವೆ. ಅವುಗಳಲ್ಲಿ ರಫ್ತು ಉದ್ದೇಶಿತ ಘಟಕಗಳಿದ್ದು, ಕೆಲವು ಖಾದಿ ಉಡುಪು ತಯಾರಿಕೆಯಲ್ಲಿ ತೊಡಗಿವೆ.

ಬೆಳಗಾವಿಯಲ್ಲಿ ವ್ಯಾಪಾರ ಸಹಜವಾಗಿ ಪ್ರಗತಿಗೊಳ್ಳುತ್ತಿದೆ. ಇಲ್ಲಿನ ಸಾಕಷ್ಟು ಪ್ರದೇಶಗಳು ನಿಶ್ಚಿತ ಪ್ರಕಾರದ ವ್ಯಾಪಾರಕ್ಕಾಗಿ ಮೀಸಲುಗೊಂಡಂತಾಗಿವೆ. ಉದಾಹರಣೆಗಾಗಿ ನಗರದ ಫೋರ್ಟ ರಸ್ತೆಯ ಪ್ರದೇಶಕ್ಕೆ ಮತ್ತು ಉದ್ಯಮಭಾಗಗಳು ವಾಹನ ಬಿಡಿಭಾಗ ಸಂಬಂಧಿತ ವ್ಯಾಪಾರದ ಕೇಂದ್ರೀಕೃತ ಸ್ಥಾನಗಳಾಗಿವೆ. ಕಾಳುಕಡಿ, ಚಹಾ ಇತ್ಯಾದಿಗಳನ್ನು ಠೋಕ ವ್ಯಾಪಾರದ ಕೇಂದ್ರವಾಗಿ ರವಿವಾರ ಪೇಠವನ್ನು ಕರೆಯಲಾಗುತ್ತದೆ.

ವಾಹನಗಳ ಉತ್ಪಾದನೆಗೆ ಸಹಾಯಕವಾಗುವ ಯಂತ್ರೋಪಕರಣ ಮಳಿಗೆಗಳಿಂದ ಶಕ್ತಿಶಾಲಿ ಕೈಗಾರಿಕಾ ಕೇಂದ್ರವೆಂದು ಬೆಳಗಾವಿಯು ಹೆಸರುವಾಸಿಯಾಗಿದೆ. ಅದರಲ್ಲೂ ಕಾಸ್ಟಿಂಗ್ ಮತ್ತು ಕ್ರ್ಯಾಂಕ್ ಶಾಫ್ಟ್ ಮಸಿನಿಂಗ್‌ಗಳಿಗೆ ಪ್ರಮುಖವಾಗಿದೆ. ಜಿಲ್ಲೆಯು ಬೆಂಗಳೂರು ಮತ್ತು ಮುಂಬೈ-ಪುಣೆ ನಗರಗಳ ಮಧ್ಯದಲ್ಲಿದ್ದು, ಭೌಗೋಳಿಕವಾಗಿ ಪ್ರಯೋಜನಕಾರಿಯಾಗಿದೆ.

ಪುಣೆ-ಬೆಂಗಳೂರು ಹೆದ್ದಾರಿಯ ಅಂಚಿಗೆ ೩೦೦ ಎಕರೆ (೧.೨ ಕಿ ಮೀ.^{2}) ವಿಸ್ತೀರ್ಣದ ವಿಶೇಷ ಆರ್ಥಿಕವಲಯವು ಸ್ಥಾಪನೆಗೊಂಡಿದ್ದು, ಪ್ರಿಸಿಜನ್ ಎಂಜಿನೀಯರಿಂಗ್‌ದ ಜಾಗತಿಕ ವಾಯುಯಾನ, ಯಂತ್ರೋಪಕರಣ ಮತ್ತು ಕೈಗಾರಿಯ ಸಂಸ್ಥಾ ಶ್ರೇಣಿಗಳು (ವ್ಹರ್ಟಿಕಲ್ಸ್) ಗಳನ್ನು ಪೂರೈಸಲು ಸಿದ್ಧಗೊಂಡಿದೆ.

ಜಿಲ್ಲೆಯ ಉದ್ದಿಮೆ ರಂಗ : ಪ್ರಗತಿ ಚಕ್ರಗಳ ಚಾಲನೆಯ ಶಕ್ತಿ

೧) ಫೌಂಡ್ರಿ ಉದ್ದಿಮೆ :

೧೯೩೦ರ ಪ್ರಾರಂಭದ ದಿನಗಳಿಂದ ಭಾರ ಯಂತ್ರೋಪಕರಣಗಳ ಉತ್ಪಾದನೆ ಕೇಂದ್ರವಾಗಿ ಬೆಳಗಾವಿ ಜಿಲ್ಲಾ ನಗರವು ಬೆಳವಣಿಗೆ ಹೊಂದುತ್ತಾ ಬಂದಿದೆ. ಫೌಂಡ್ರಿಗಳು ಮತ್ತು ವಾಹನದ ಬಿಡಿಭಾಗಗಳು ಇದೀಗ ಅಂತರಾಷ್ಟ್ರೀಯ ಮಾರುಕಟ್ಟೆಗೆ ಲಗ್ಗೆ ಇಡುತ್ತಿವೆ. ನಗರದ ಆಟೋ ನಗರವು ೧೨೦೦ ಕ್ಕೂ ಮಿಕ್ಕಿ ಘಟಕಗಳನ್ನು ಹೊಂದಿ, ವಾಹನಗಳ ಬಾಹ್ಯ ರಚನೆ, ಬಿಡಿಭಾಗಗಳು, ಜೋಡಣೆಗಳು, ಕ್ರಾಂಕ್‌ಶಾಫ್ಟ, ವಾಹನ ಉಪಕರಣಗಳು ಸಿದ್ಧಗೊಳ್ಳುತ್ತವೆ. ಇವು ಬೃಹತ್ ಉದ್ದಿಮೆ ಘಟಕಗಳಿಗೆ ಪೂರಕವಾಗಿವೆ. ಫೌಂಡ್ರಿಗೆ ಸಂಬಂಧಿಸಿದ ಸಂಶೋಧನೆ ಮತ್ತು ಅಭಿವೃದ್ಧಿ ಯೋಜನೆಗಳನ್ನು ಕಾರ್ಯಗತಗೊಳಿಸಲು ಇದೀಗ ಭಾರತ ಸರ್ಕಾರವು ರೂ. ೨೪.೭ ಕೋಟಿಗಳಷ್ಟು ಹೂಡಿಕೆಗೊಳಿಸಿ ಫೌಂಡ್ರಿ ಕ್ಲಸ್ಟರ್ ಪ್ರೊಜೆಕ್ಟನ್ನು ಸ್ಥಾಪಿಸಲು ಒಪ್ಪಿಗೆ ನೀಡಿದೆ. ವ್ಯಾಪಕಗೊಳ್ಳುತ್ತಿರುವ ವಾಹನ ಉದ್ದಿಮೆಯು ಬೆಳಗಾವಿಯ ಫೌಂಡ್ರಿಯ ಉದ್ದಿಮೆಗೆ ಚೇತನದಾಯಕವಾಗಿದೆ.

ಬೆಳಗಾವಿ ಜಿಲ್ಲೆಯಲ್ಲಿನ ಫೌಂಡ್ರಿ ಉದ್ದಿಮೆಯು ಒಂದು ಪ್ರಮುಖ ರಂಗವಾಗಿದ್ದು, ಅದು ಆರ್ಥಿಕತೆಯ ನಿರ್ಧಾರದಲ್ಲಿ ಮುಖ್ಯ ಅಂಗವೆನಿಸಿದೆ. ಸದ್ಯ ಒಟ್ಟು ೧೪೨ ಫೌಂಡ್ರಿ ಘಟಕಗಳಿದ್ದು, ಅವುಗಳಲ್ಲಿ ಶೇ. ೭೬ ರಷ್ಟು ಚಿಕ್ಕ ಉದ್ದಿಮೆ, ಶೇ. ೨೧ ರಷ್ಟು ಮಧ್ಯಮ ಮತ್ತು ಶೇ. ೩ ರಷ್ಟು ಬೃಹತ್ ಗಾತ್ರದ ಕ್ಷೇತ್ರದಲ್ಲಿ ಕಾರ್ಯಗೈಯ್ಯತ್ತಿವೆ.

ಇವುಗಳಲ್ಲಿ ಮುಖ್ಯವಾಗಿ ಎರಡು ವಿಧ. ಫೆರಸ್ ಮತ್ತು ನಾನ್-ಫೆರಸ್-ಫೌಂಡ್ರಿಗಳು ಬೆಳಗಾವಿಯಲ್ಲಿ ವಿವಿಧ ತರಹದ ಕಾಸ್ಟಿಂಗಗಳನ್ನು ೫೦೦gm ದಿಂದ ೧.೮ ಟನ್‌ಗಳವರೆಗಿನ ಪ್ರಮಾಣದಲ್ಲಿ ಸಿದ್ಧಗೊಳಿಸಲಾಗಿತ್ತದೆ. ಇದರಲ್ಲಿ ಗುಣಮಟ್ಟ ಕಾಯ್ದುಕೊಳ್ಳುವದು ಮಹತ್ವದ ಕಾಳಜಿಯಾಗಿದೆ. ಸ್ವಚ್ಛಗೊಳಿಸಿದ ಮತ್ತು ಸ್ವಚ್ಛಗೊಳಿಸದ ಉಸುಕು, ರೇಸಿನ್ ಮತ್ತು ಎಲಾಯಗಳು ಫೌಂಡ್ರಿಗೆ ಅವಶ್ಯವಿರುವ ಕಚ್ಚಾ ಸಾಮಗ್ರಿಗಳಾಗಿವೆ. ಈ ಘಟಕಗಳು ಉಸುಕು ಸಾಗಾಣಿಕೆಯಲ್ಲಿ ಅಂದಾಜು ೧೦,೦೦೦ ಟನ್‌ಗಳಷ್ಟು ನಷ್ಟ ಅನುಭವಿಸುತ್ತಿರುವದು ಹೊರಲಾರದ ಭಾರವಾಗಿದೆ. ಆದರೂ ಈ ಉದ್ದಿಮೆಯಲ್ಲಿನ ಬೆಳವಣಿಗೆಯ ಗತಿಯು ಅಗಾಧ ಪ್ರಮಾಣದಾಗಿದ್ದು, ೨೦೦೩-೦೫ ರಲ್ಲಿದ್ದ ಶೇ. ೨೩ರ ಬೆಳವಣಿಗೆಯ ಗತಿಯು ೨೦೦೫-೦೬ರಲ್ಲಿ ಶೇ. ೩೪ಕ್ಕೆ ಮುಟ್ಟಿತ್ತು. ಈ ಉದ್ದಿಮೆಯಿಂದ ಹೊರಹೊಮ್ಮುವ ಹೊಗೆಯು ಪರಿಸರದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿರುವದು ಉದ್ದಿಮೆಗೆ ಸವಾಲಾಗಿದೆ. ಅಲ್ಲದೇ ಅನುಪಯುಕ್ತ ಉಸುಕನ್ನು ಬಯಲು ಪ್ರದೇಶದಲ್ಲಿ ಗುಡ್ಡೆ ಹಾಕುತ್ತಿರುವುದು ಒಂದು ದೊಡ್ಡ ಸಮಸ್ಯೆಯಾಗಿದೆ. ಅಸಿಡ್‌ಯುಕ್ತ್ ಹೊಗೆಯನ್ನು ಶುದ್ಧೀಕರಿಸುವದು, ಅನುಪಯುಕ್ತ ಉಸುಕನ್ನು ಗುಡ್ಡೆಹಾಕಲು ನಿರ್ದಿಷ್ಠ ಪ್ರದೇಶವನ್ನು ನೀಡುವದು ಮುಂತಾದ ಕ್ರಮಗಳು ಜಾರಿಗೊಳ್ಳುತ್ತಿವೆ. **ಸ್ಯಾಂಡ್ ರಿಕ್ಲೇಯಿಂಗ್ ಮಶಿನ್**ವೆಂಬ ಪ್ರಕಲ್ಪವು ತಲೆಯೆತ್ತಿ, ಕಾರ್ಯ ನಿರ್ವಹಿಸುತ್ತಿದೆ.

ಅಶೋಕ ಆಯರ್ನ ವರ್ಕ್ಸ (I,II, III), ಎ.ಕೆ.ಫಿ. ಫೌಂಡ್ರೀಜ, ಕೆ.ಟಿ.ಎನ್ ಮೆಟಲ್ಸ್, ಫೌಂಡ್ರೀಜ್, ಆಲ್ಯುಕಾಸ್ಟ್, ಅಲೈಡ್ ಫೌಂಡ್ರೀಜ್ ಮುಂತಾದವು ಪ್ರಮುಖ ಫೌಂಡ್ರಿಗಳಾಗಿವೆ. ಪ್ರತಿ ತಿಂಗಳು ೩೦೦೦ಟನ್‌ಗಳಷ್ಟು ಕಾಸ್ಟಿಂಗ್ ಉತ್ಪಾದನಾ ಪ್ರಮಾಣ ಹೊಂದಿದ ಅಶೋಕಾ ಆಯರ್ನ ವರ್ಕ್ಸ ಘಟಕವು ದೊಡ್ಡ ಪ್ರಮಾಣದ್ದಾಗಿದೆ. ಫೌಂಡ್ರಿ ಉದ್ಯಮದ ಬೆಳವಣಿಗೆಯನ್ನು ಕೋಷ್ಟಕದ ೪.೧೩ರಲ್ಲಿ ನೀಡಲಾಗಿದೆ.

ಕೋಷ್ಟಕ ೪.೧೩ ೨೦೦೫ ಮತ್ತು ೨೦೦೬ ಕ್ಕೆ ಸಂಬಂಧಿಸಿದ ಮಾಹಿತಿ

ಅ.ಸಂ.	ವಿವರ	೨೦೦೫	೨೦೦೬
೧	ಮಾರಾಟ	ರೂ. ೩೭೫ ಕೋಟಿ	೫೦೦ ಕೋಟಿ
೨	ನಿರ್ಯಾತ	ಶೇ. ೪೫	ಶೇ. ೮೫
೩	ಉದ್ಯೋಗಿಗಳು	೪೦,೦೦೦	೫೦,೦೦೦

(ಮೂಲ: ಇಂಡಸ್ಟ್ರಿಯಲ್ ಡೆವಲಪ್‌ಮೆಂಟ ಪ್ಲ್ಯಾನ- ಬೆಳಗಾವಿ, ಕೆ. ಎಸ್. ಎಸ್. ಐ.ಡಿ. ಬೋರ್ಡ)

೨) ಸಕ್ಕರೆ ಉದ್ದಿಮೆ :

ಜಿಲ್ಲೆಯಲ್ಲಿ ೧,೫೦,೦೦೦ಹೆಕ್ಟೆರದಷ್ಟು ಪ್ರದೇಶವು ವಾಣಿಜ್ಯ ಬೆಳೆಯ ಉತ್ಪಾದನೆಗೆ ಬಳಸಲ್ಪಡುತ್ತಿದೆ. ಅಂದಾಜು ೧೪೦ ಲಕ್ಷ್ ಟನ್‌ಗಳಷ್ಟು ಕಬ್ಬು ಬೆಳೆಯುತ್ತಿದ್ದರೂ ಕೇವಲ ೬೫ ಲಕ್ಷ ಟನ್‌ಗಳಷ್ಟು ಕಬ್ಬು ನುರಿಸುವ ಸಾಮರ್ಥ್ಯ ಹೊಂದಿದ ಕಾರ್ಖಾನೆಗಳಿವೆ. ಇವು ೧,೨೦,೦೦೦ ಕ್ವಿಂಟಾಲಗಳಷ್ಟು ಬೃಹತ್ ಪ್ರಮಾಣದ ಸಕ್ಕರೆಯನ್ನು ಉತ್ಪಾದಿಸುತ್ತಿವೆ. ಜಿಲ್ಲೆಯಲ್ಲಿ ಒಂದು ಬೃಹತ್ ಘಟಕವಿದ್ದು, ವಿದ್ಯುತ್ ಮತ್ತು ಅಲ್ಕೋಹಾಲ್ ಪೇಯಗಳನ್ನು ಉತ್ಪಾದಿಸುವ ೧೪ ಮಧ್ಯಮ ಮತ್ತು ದೊಡ್ಡ ಗಾತ್ರದ ಘಟಕಗಳಿವೆ.

೩) ಜವಳಿ (ಬಟ್ಟೆ) ಉದ್ದಿಮೆ :

ಬೆಳಗಾವಿ ಜಿಲ್ಲೆಯು ಸ್ಥಳೀಯವಾಗಿ ಜವಳಿ ಉದ್ದಿಮೆಯನ್ನು ಸ್ಥಾಪಿಸಿದೆ. ನೂಲು, ಬಟ್ಟೆ ಸಂಸ್ಕರಣ, ರೇಷ್ಮೆ ರೀಲ ತಯಾರಿಕೆ, ಹೊಸೆಯುವ, ಸಿದ್ಧ ಬಟ್ಟೆ, ಸಿದ್ಧಪಡಿಸಿದ ಉಡುಪು, ಮತ್ತು ಟಿ-ಶರ್ಟ ತಯಾರಿಕೆಗಳು ಬೆಳಗಾವಿಯಿಂದ ನಿರ್ಯಾತಗೊಳ್ಳುವ ಸರಕುಗಳಾಗಿವೆ. ಒಟ್ಟು ೧೩,೬೧೦ ವಿದ್ಯುತ್ ಮಗ್ಗಗಳು, ಮತ್ತು ೪೫೪೬ ಕೈಮಗ್ಗಗಳೊಂದಿಗೆ ೫೪,೪೪೦ ಜನರಿಗೆ ಉದ್ಯೋಗ ನೀಡಿದೆ. ಕಳೆದ ಐದು ದಶಕಗಳಿಂದ ಜಿಲ್ಲೆಯ ಶಹಾಪೂರ ಸೀರೆಗಳಿಂದ ಬೆಳಗಾವಿಯು ಜಗತ್ತಿನಾದ್ಯಂತ ಪರಿಚಯಗೊಂಡಿದೆ. ಈ ರಂಗದಲ್ಲಿ ಹೂಡಿಕೆಗೆ ವಿಫುಲ ಅವಕಾಶಗಳಿವೆ.

೪) ಖನಿಜ ಸಂಸ್ಕರಣೆ :

ಬೆಳಗಾವಿ ಜಿಲ್ಲೆಯು ಖನಿಜ ಸಂಪನ್ಮೂಲದ ಸಾಕಷ್ಟು ಸಂಗ್ರಹವನ್ನು ಹೊಂದಿದೆ. ಒಟ್ಟು ೧,೨೦,೦೦೦ ಮೆಟ್ರಿಕ್ ಟನ್‌ಗಳಷ್ಟು ಅಲ್ಯುಮಿನಿಯಂ ಖನಿಜ, ೪೦,೦೦೦ಮೆಟ್ರಿಕ್ ಟನ್ ಡೋಲೊಮೈಟ್, ೪೫,೦೦೦ ಮೆಟ್ರಿಕ್ ಟನ್‌ಗಳಷ್ಟು ಸುಣ್ಣದಕಲ್ಲು ಸಂಗ್ರಹದೊಂದಿಗೆ ಸಿಲಿಕಾ, ಬಾಕ್ಸೈಟ್, ಚೀನಿ ಮಣ್ಣು, ಮ್ಯಾಂಗನೀಸ್ ಅದಿರು ಮುಂತಾದ ನೈಸರ್ಗಿಕ ಸಂಪತ್ತಿನ ಸಂಗ್ರಹವನ್ನು ಹೊಂದಿದೆ.

೫) ಕೃಷಿ ಮತ್ತು ಆಹಾರ ಸಂಸ್ಕರಣ :

ಜಿಲ್ಲೆಯಲ್ಲಿ ೪೦,೦೦೦ ಟನ್‌ಗಳಷ್ಟು ಮಾವಿನ ಹಣ್ಣನ್ನು ಮತ್ತು ೪೩,೦೦೦ ಟನ್‌ಗಳಷ್ಟು ಬಾಳೆ ಹಣ್ಣಗಳನ್ನು ಬೆಳೆಯಲಾಗುತ್ತದೆ. ಜಿಲ್ಲೆಯ ೭೧೪ ಹೆಕ್ಟೇರ ಕ್ಷೇತ್ರದಲ್ಲಿ ಪ್ರತಿವರ್ಷ ೧೩,೧೦೦ ಟನ್‌ಗಳಷ್ಟು ದ್ರಾಕ್ಷಿ ಹಣ್ಣನ್ನು ಬೆಳೆಯಲಾಗಿತ್ತದೆ. ಅದರಂತೆ ೨೪೫ ಎಕರೆ ಜಮೀನಿನಿಂದ ೫೬೦೦ ಟನ್‌ಗಳಷ್ಟು ಸಿಟ್ರಿಕ್ (ಮಾದಳದ) ಹಣ್ಣನ್ನು ಬೆಳೆಯಲಾಗುವುದು. ಆಹಾರ ಸಂಸ್ಕರಣ ಮತ್ತು ವೈನ್ ಉತ್ಪಾದನೆಗೆ ಅಧಿಕ ಅವಕಾಶಗಳಿದ್ದುದು ನಿಜ.

ಪೂರಕ ಕೋಷ್ಟಕಗಳು :

ಕೋಷ್ಟಕ ೪.೧೪ ಬೃಹತ್ ಉದ್ದಿಮೆ ಘಟಕಗಳು

ಅ. ಸಂ.	ಹೆಸರು - ವಿಳಾಸ	ಉತ್ಪನ್ನ	ಹೂಡಿಕೆ (ರೂ.ಕೋಟಿ ಗಳಲ್ಲಿ)	ಉದ್ಯೋಗಿ ಗಳ ಸಂಖ್ಯೆ
೧	ಇಂಡಿಯನ್ ಅಲ್ಯುಮಿನಿಯಂ ಕಂ. ಬೆಳಗಾವಿ	ಅಲ್ಯುಮಿನಿಯಂ ಪುಡಿ	೧೪೦	೯೫೫
೨	ಟಾಟಾ ಪಾವರ್ ಪ್ರೊಜೆಕ್ಟ್ಸ ಕ.ಕೆ.ಅ. ಕೇಂದ್ರ, ಕೈಗಾರಿಕೆ ವಲಯ, ಕಣಬರ್ಗಿ, ಬೆಳಗಾವಿ	ಇಂಧನ (ವಿದ್ಯುತ್)	೨೫೦	೩೭
೩	ಪೋರ್ಬ್ಸ್ ಗೋಕಾಕ ಲಿ. ಗೋಕಾಕ ಫಾಲ್ಸ್ ಬೆಳಗಾವಿ	ನೂಲಿನ ಎಳೆ	೧೫೬	೩೭೫೧
೪	ರಿದ್ಧಿ-ಸಿದ್ಧಿ ಗ್ಲುಕೋ ಬಾಯ್ಲ್ಸ ಲಿ. ಫಾಲ್ಸ ರಸ್ತೆ, ಗೋಕಾಕ	ಗ್ಲುಕೋಸ್ ಪುಡಿ	೧೧೦	೨೬೪
೫	ಉಗಾರ ಶುಗರ್ ವರ್ಕ್ಸ ಲಿ. ಉಗಾರ ಖುರ್ದ, ತಾ. ಅಥಣಿ	ಸಕ್ಕರೆ, ವಿದ್ಯುತ್, ಸ್ಪಿರಿಟ್	೧೬೧	೧೮೭೬
		ಒಟ್ಟು	೮೧೭	೬೮೮೩

(ಮೂಲ: ಇಂಡಸ್ಟ್ರಿಯಲ್ ಡೆವಲಪ್‌ಮೆಂಟ ಪ್ಲ್ಯಾನ್-ಬೆಳಗಾವಿ, ಕೆ. ಎಸ್. ಎಸ್. ಐ.ಡಿ. ಬೋರ್ಡ)

ಕೋಷ್ಟಕ ೪.೧೫ ದೊಡ್ಡ ಮತ್ತು ಮಧ್ಯಮ ಗಾತ್ರದ ಘಟಕಗಳು

ಅ. ಸಂ.	ಹೆಸರು-ವಿಳಾಸ	ಉತ್ಪನ್ನ	ಹೂಡಿಕೆ (ರೂ. ಕೋಟಿ ಗಳಲ್ಲಿ)	ಉದ್ಯೋಗಿ ಗಳ ಸಂಖ್ಯೆ
೧	ಗೋಗಟೆ ಟೆಕ್ಸಟೈಲ್ಸ್ ಕಾಕತಿ ಕೈಗಾರಿಕೆ ವಲಯ, ಕಾಕತಿ	ನೂಲಿನ ಎಳೆ	೧.೧೦	೧೫೪
೨	ಕ್ಯಾಂಪ್‌ಬೆಲ್ ನೇಟವೇರ ಲಿ. ಮಾರಿಹಾಳ ಗ್ರಾಮ, ತಾ. ಬೆಳಗಾವಿ	ಟಿ-ಶರ್ಟ, ಪೋಲೋ ಶರ್ಟ	೨೮.೦	೫೫೮
೩	ಹಿಂದೂಸ್ತಾನ ಲೆಟೆಕ್ಸ ಲಿ. ಕಣಗಲಾ ತಾ. ಹುಕ್ಕೇರಿ	ಗರ್ಭನಿರೋಧಕ	೧.೧೦	೩೪೬
೪	ಮಹಾಂತ ಆಯಿಲ್ ಇಂಡಸ್ಟ್ರೀಜ್ ಬಿ ಕೆ ಕಂಗ್ರಾಳಿ, ಬೆಳಗಾವಿ	ಎಣ್ಣೆ ಮತ್ತು ಆಯಿಲ್ ಕೇಕ್	೧.೬೦	೭೫
೫	ಅರುಣ ಎಂಜೀನಿಯರಿಂಗ್ ಉದ್ಯಮಬಾಗ, ಬೆಳಗಾವಿ	ಹೈಡ್ರಾಲಿಕ್ ಪ್ರೆಸ್	೧.೦೫	೨೭೫
೬	ಅಶೋಕ ಆಯರ್ನ ವರ್ಕ್ಸ ಪ್ರೈ.ಲಿ.ಪ್ಲಾಂಟ-I, ಉದ್ಯಮಬಾಗ	ಸಿ.ಡಿ. ಕಾಸ್ಟಿಂಗ್	೧೮.೦೫	೪೬೫
೭	ಜೈಹಿಂದ ಎಂಜೀನಿಯರಿಂಗ್ ವರ್ಕ್ಸ ಉದ್ಯಮಬಾಗ, ಬೆಳಗಾವಿ	ಮಶಿನಿಂಗ ಜಾಬ್ ವರ್ಕ್ಸ	೧.೨೦	೧೮೯
೮	ಕಾಟವಾ ಸಿಮೆಂಟ್ ಕಂ. ಯಾದವಾಡ, ಗೋಕಾಕ	ಪೋರ್ಟ ಲ್ಯಾಂಡ್ ಸಿಮೆಂಟ	೩.೩೦	೨೫

೯	ಬೆಮ್ಕೋ ಹೈಡ್ರಾಲಿಕ್ಸ ಖಾನಾಪೂರ ರೋಡ, ಬೆಳಗಾವಿ	ಹೈಡ್ರಾಲಿಕ್ ಪಂಪ್-ಜಾಕ್ಸ	೨.೨೦	೩೫೦
೧೦	ಪಾಟ್ಸನ್ ಸ್ಟ್ರಕ್ಚರಲ್ ಪ್ರೈ. ಲಿ. ಉದ್ಯಮಭಾಗ, ಬೆಳಗಾವಿ	ಸೆಮಿ-ಟೇಲರಿಂಗ	೦.೫೩	೨೮
೧೧	ಸಿದ್ಧಗಂಗಾ ಆಯಿಲ್ ಎಕ್ಸಟ್ರಾಕ್ಷನ್ ಪ್ರೈ.ಲಿ ಉಕ್ಕತ-ಕಂಗ್ರಾಳಿ, ಬೆಳಗಾವಿ	ದ್ರವ ಎಣ್ಣೆ ತಯಾರಿಕೆ	೧.೧೦	೪೨
೧೨	ಗೋಮಟೇಶ ಗ್ರಾನೈಟ್ಸ ಪ್ರೈ. ಲಿ ಹೊನಗಾ ಬೆಳಗಾವಿ	ಗ್ರಾನೈಟ್ ಸ್ಲಾಬ್ ಕಟಿಂಗ್	೨.೭೯	೩೮
೧೩	ಪ್ರೊಗ್ರೆಸ್ಸಿವ್ ಎಂಜೀನಿಯರಿಂಗ್ ಪ್ಲಾಂಟ್ ಉದ್ಯಮಬಾಗ ಬೆಳಗಾವಿ	ಎಂಜಿನಿಯರಿಂಗ ಜಾಬ್ ವರ್ಕ್ಸ	೨.೨೫	೪೫
೧೪	ಸ್ಟ್ಯಾಂಡರ್ಡ ಎಂಜೀನಿಯರಿಂಗ್ ಮಚ್ಚೆ, ಬೆಳಗಾವಿ	ಎಂಜಿನಿಯರಿಂಗ ಜಾಬ್ ವರ್ಕ್ಸ	೧.೫೦	೫೦
೧೫	ಅಶೋಕ ಆಯರ್ನ ಪ್ಲಾಂಟ್-II ಕೈಗಾರಿಕೆ ವಲಯ, ಬೆಳಗಾವಿ	ಸಿ.ಆಯ್. ಕಾಸ್ಟಿಂಗ್	೨೦.೦೦	೩೨೦
		ಒಟ್ಟು	೮೩.೯೯	೨೯೬೦

(ಮೂಲ: ಇಂಡಸ್ಟ್ರಿಯಲ್ ಡೆವಲಪ್‌ಮೆಂಟ ಪ್ಲಾನ- ಬೆಳಗಾವಿ, ಕೆ. ಎಸ್. ಎಸ್. ಐ.ಡಿ. ಬೋರ್ಡ)

ಕೋಷ್ಟಕ ೪.೧೬ ಬೆಳಗಾವಿ ಜಿಲ್ಲೆಯ ಸಕ್ಕರೆ ಉದ್ದಿಮ ಘಟಕಗಳು

ಅ. ಸಂ.	ಹೆಸರು-ವಿಳಾಸ	ಹೂಡಿಕೆ (ರೂ. ಕೋಟಿ ಗಳಲ್ಲಿ)	ಉದ್ಯೋಗಿ ಗಳ ಸಂಖ್ಯೆ	ಷರಾ
೧	ಭಾಗ್ಯಲಕ್ಷ್ಮಿ ಸಹಕಾರಿ ಸಕ್ಕರೆ ಕಾರ್ಖಾನೆ ಖಾನಾಪೂರ (ಲೈಲಾ ಕಂ. ಲಿ. ಹೈದ್ರಾಬಾದ)	೪೪.೫೦	೧೬೧೦	ಕಾರ್ಯನಿರತ
೨	ದೂಧಗಂಗಾ ಕೃಷ್ಣಾ ಸಹಕಾರಿ ಸಕ್ಕರೆ ಕಾರ್ಖಾನೆ, ಚಿಕ್ಕೋಡಿ	೧೩೦.೭೪	೭೪೦	ಕಾರ್ಯನಿರತ
೩	ಘಟಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆ ಗೋಕಾಕ	೩೧.೪೩	೪೬೯	ಕಾರ್ಯನಿರತ
೪	ಹಾಲಸಿದ್ಧನಾಥ ಸಹಕಾರಿ ಸಕ್ಕರೆ ಕಾರ್ಖಾನೆ ನಿಪ್ಪಾಣಿ, ತಾ. ಚಿಕ್ಕೋಡಿ	೬೪.೭೫	೬೪೬	ಕಾರ್ಯನಿರತ
೫	ಹಿರಣ್ಯಕೇಶಿ ಸಹಕಾರಿ ಸಕ್ಕರೆ ಕಾರ್ಖಾನೆ ಸಂಕೇಶ್ವರ, ತಾ. ಹುಕ್ಕೇರಿ	೧೫೨.೩೧	೧೪೫೨	ಕಾರ್ಯನಿರತ
೬	ಮಲಪ್ರಬಾ ಸಹಕಾರಿ ಸಕ್ಕರೆ ಕಾರ್ಖಾನೆ, ಎಮ್‌ಕೆ ಹುಬ್ಬಳ್ಳಿ, ತಾ. ಬೈಲಹೊಂಗಲ	೬೩.೦೬	೭೪೯	ಕಾರ್ಯನಿರತ
೭	ರಾಯಭಾಗ ಸಹಕಾರಿ ಸಕ್ಕರೆ ಕಾರ್ಖಾನೆ ರಾಯಬಾಗ (ರೇಣುಕಾ ಸುಗರ್ಸ್ ಲಿ. ಬೆಳಗಾವಿ)	೪೦೦	೨೫೦	ಕಾರ್ಯನಿರತ
೮	ರೇಣುಕಾ ಶುಗರ್ಸ್, ಮುನ್ನೋಳಿ ತಾ. ಸವದತ್ತಿ	೨೫೬.೧೭	೪೭೦	ಕಾರ್ಯನಿರತ
೯	ಶ್ರೀ ವೆಂಕಟೇಶ್ವರ ಪಾವರ್ ಪ್ರೋಜೆಕ್ಟ ಬೇಡಕಿಹಾಳ, ತಾ. ಚಿಕ್ಕೋಡಿ	೬೦.೭೩	೬೬೦	ಕಾರ್ಯನಿರತ
೧೦	ಕೃಷ್ಣಾ ಸಹಕಾರಿ ಸಕ್ಕರೆ ಕಾರ್ಖಾನೆ ಹಳಿಯಾಳ, ತಾ. ಅಥಣಿ	೯೩.೫೭	೨೩೫	ಕಾರ್ಯನಿರತ
೧೧	ಅಥಣಿ ಫಾರ್ಮರ್ಸ ಸಹಕಾರಿ ಸಕ್ಕರೆ ಕಾರ್ಖಾನೆ ಕೆಂಪವಾಡ, ತಾ. ಅಥಣಿ	೧೬೩೦.೫೬	೪೯೪	ಕಾರ್ಯನಿರತ

೧೨	ಉಗಾರ್ ಶುಗರ್ ವರ್ಕ್ಸ ಉಗಾರ ಖುರ್ದ ತಾ. ಅಥಣಿ	೩೯೦	೧೭೧೩	ಕಾರ್ಯನಿರತ
೧೩	ಶ್ರೀ ಸೋಮೆಶ್ವರ ಸಹಕಾರಿ ಸಕ್ಕರೆ ಕಾರ್ಖಾನೆ ಸಿದ್ಧ ಸಮುದ್ರ ತಾ. ಬೈಲಹೊಂಗಲ	೫೦೦	೬೨೫	ಕಾರ್ಯನಿರತ
೧೪	ಧನಲಕ್ಷ್ಮೀ ಸಹಕಾರಿ ಸಕ್ಕರೆ ಕಾರ್ಖಾನೆ ರಾಮದುರ್ಗ (ಜಿ.ಆಯ್.ಡಿ ಪ್ಯಾರಿ, ಚೆನ್ನೈ)	೪೯.೯೫	೬೨೫	ಕಾರ್ಯನಿರತ
೧೫	ವಿಶ್ವನಾಥ ಶುಗರ್ಸ, ಬೆಲ್ಲದ ಬಾಗೇವಾಡಿ ತಾ. ಹುಕ್ಕೇರಿ	೨೧೫	೫೧೫	ಕಾರ್ಯನಿರತ
೧೬	ಶಿವಶಿಕ್ತಿ ಶುಗರ್ಸ್, ಸವದತ್ತಿ ತಾ : ರಾಯಬಾಗ	೧೦೬.೮೪	೯೮೭	ಕಾರ್ಯನಿರತ
೧೭	ಗೋಕಾಕ ಶುಗರ್ಸ್ ಕೊಳವಿ, ತಾ. ಗೋಕಾಕ (ರೇಣುಕಾ ಶುಗರ್ಸ್)	೨೦೦	೪೫೦	ಕಾರ್ಯನಿರತ
೧೮	ಶಿವಸಾಗರ ಆ್ಯಂಡ್ ಅಗ್ರೋ ಪ್ರೋಡೆಕ್ಟ್ಸ ಉದಪುಡಿ, ತಾ. ರಾಮದುರ್ಗ	೯೫	೨೦೦	ಕಾರ್ಯನಿರತ
೧೯	ರೇಣುಕಾ ಶುಗರ್ಸ್, ಬುರ್ಲಟ್ಟಿ ತಾ. ಅಥಣಿ	೩೪೩.೫೫	೩೩೫	ಕಾರ್ಯನಿರತ
೨೦	ಸತೀಶ ಶುಗರ್ಸ್ , ಸಂಗನಕೇರಿ ತಾ.ಗೋಕಾಕ	೨೦೦	೪೫೦	ಕಾರ್ಯನಿರತ
೨೧	ಶಿರಗುಪ್ಪಿ ಶುಗರ್ಸ, ಕಾಗವಾಡ, ತಾ. ಅಥಣಿ	೩೦	೨೫೦	ಕಾರ್ಯನಿರತ
೨೨	ಮಾರ್ಕಂಡೇಯ ಸಹಕಾರಿ ಸಕ್ಕರೆ ಕಾರ್ಖಾನೆ ಕಾಕತಿ, ತಾ. ಬೆಳಗಾವಿ	೭೦.೨೦	೫೦೦	ಕಾರ್ಯನಿರತ

(ಮೂಲ: ೧. ಇಂಡಸ್ಟ್ರಿಯಲ್ ಡೆವಲಪ್‌ಮೆಂಟ ಪ್ಲಾನ- ಬೆಳಗಾವಿ, ಕೆ. ಎಸ್. ಎಸ್. ಐ.ಡಿ. ಬೋರ್ಡ)

ಕೋಷ್ಟಕ ೪.೧೭ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಕೇಂದ್ರ

ಅ. ನಂ	ಕೈಗಾರಿಕಾ ಪ್ರದೇಶ	ಸ್ಥಾಪನೆ	ಕ್ಷೇತ್ರ (ಎಕರೆಗಳಲ್ಲಿ)	ನಿವೇಶನ ಕಟ್ಟಿದ್ದು	ನಿವೇಶನ ಹಂಚಿದ್ದು	ಹಂಚಿದ ಘಟಕಗಳ ಸಂಖ್ಯೆ	ಕಾರ್ಯದಲ್ಲಿರುವ ಘಟಕಗಳು
೧	ಬಿಎಲ್ ಕಣಗಲಿ	೧೯೭೨-೭೩	೫೮.೭೮	೫೦	೫೦	೫೦	೫೦
೨	ಕಾಕತಿ	೧೯೭೩-೭೪	೭೪.೨೫	೫೬	೫೬	೨೯	೨೯
೩	ಹೊನಗಾ	೧೯೮೧-೮೨	೨೦೯.೫೦	೨೭೪	೨೭೪	೨೩೨	೯೮
೪	ಕಣಬರ್ಗಿ	೧೯೯೧-೯೨	೨೬೭.೦೧	೧೪೩೨	೧೪೩೨	೧೪೩೨	೨೫೨
೫	ಗೋಕಾಕ	೧೯೮೪-೮೫	೧೦೯.೧೮	೨೦	೧೭	೨೦	೦೬

(ಮೂಲ: ಇಂಡಸ್ಟ್ರಿಯಲ್ ಡೆವಲಪ್‌ಮೆಂಟ ಪ್ಲ್ಯಾನ- ಬೆಳಗಾವಿ, ಕೆ. ಎಸ್. ಎಸ್. ಐ.ಡಿ. ಬೋರ್ಡ)

ಕೋಷ್ಟಕ ೪.೧೮ ಕೈಗಾರಿಕಾ ವಸಾಹತುಗಳ ಬೆಳಗಾವಿ ಉತ್ಪಾದಕರ ಕಂಪನಿಗಳು

ಅ. ನಂ	ಗ್ರಾಮ	ಕ್ಷೇತ್ರ (ಎಕರೆ)	ನಿವೇಶನಗಳು	ಕಟ್ಟಿದ್ದು	ಹಂಚಿದ್ದು	ಕಾರ್ಯದಲ್ಲಿ ರುವುದು
೧	ಮಜಗಾಂವ/ ಉದ್ಯಮಭಾಗ	೮೭	೨೬ ನಿವೇಶನಗಳು ೪೮ ಕಟ್ಟಡಗಳು	೫೨	೫೨	೫೨
೨	ಅನಗೋಳ	೩೧	೫೪ ನಿವೇಶನಗಳು ೧೦ ಕಟ್ಟಡಗಳು	೫೪	೫೦	೫೦
೩	ಮಚ್ಛೆ	೧೨೨.೭	೧೭೩ ನಿವೇಶನಗಳು ೩೫ ಕಟ್ಟಡಗಳು	೧೭೩	೯೦	೫೦
೪	ನಾವಗೆ	೫೭	ನಿಯೋಜಿತ	-----	-----	-----

(ಮೂಲ: ಇಂಡಸ್ಟ್ರಿಯಲ್ ಡೆವಲಪ್‌ಮೆಂಟ ಪ್ಲಾನ- ಬೆಳಗಾವಿ, ಕೆ. ಎಸ್. ಎಸ್. ಐ.ಡಿ. ಬೋರ್ಡ)

೪.೪ ಜಿಲ್ಲೆಯ ಸಣ್ಣ ಪ್ರಮಾಣದ ಕೈಗಾರಿಕೆಗಳು :

ಕೋಷ್ಟಕ ೪.೧೯ ಆಟೋಮೋಬೈಲ್ಸ್

ಅ ಸಂ	ತಾಲೂಕು		೨೦೦೪	೨೦೦೫	೨೦೦೬	೨೦೦೭	೨೦೦೯	೨೦೧೦	೨೦೧೧	ಒಟ್ಟು
೧	ಅಥಣಿ	ಘ. ಸಂ.	೦೫	೦೬	೦೬	೦೬	೦೮	೦೮	೦೯	೪೮
		ಉ. ಸಂ	೪೦	೪೫	೪೫	೪೫	೫೫	೫೫	೫೮	೩೪೩
೨	ಬೈಲಹೊಂಗಲ	ಘ. ಸಂ.	೧೮	೧೯	೧೯	೧೯	೨೦	೨೦	೨೧	೧೩೬
		ಉ. ಸಂ	೮೭	೯೨	೯೨	೯೨	೧೦೦	೧೦೦	೧೦೦	೬೬೩
೩	ಬೆಳಗಾವಿ	ಘ. ಸಂ.	೪೦	೪೨	೪೨	೪೨	೫೬	೫೬	೬೨	೩೪೦
		ಉ. ಸಂ	೧೪೫	೧೫೧	೧೫೧	೧೫೧	೨೪೩	೨೪೩	೨೬೫	೧೩೪೯
೪	ಚಿಕ್ಕೋಡಿ	ಘ. ಸಂ.	೦೬	೦೭	೦೮	೦೮	೧೦	೧೦	೧೨	೬೧
		ಉ. ಸಂ	೩೪	೪೦	೪೪	೪೪	೫೦	೫೦	೬೦	೩೨೨
೫	ಗೋಕಾಕ	ಘ. ಸಂ.	೦೫	೦೬	೦೬	೦೬	೦೭	೦೭	೦೯	೪೬
		ಉ. ಸಂ	೩೦	೩೫	೩೫	೩೫	೪೦	೪೦	೫೧	೨೬೬
೬	ಹುಕ್ಕೇರಿ	ಘ. ಸಂ.	೦೩	೦೪	೦೪	೦೪	೦೪	೦೪	೦೫	೨೮
		ಉ. ಸಂ	೨೮	೩೪	೩೪	೩೪	೩೪	೩೪	೪೦	೨೩೮
೭	ಖಾನಾಪೂರ	ಘ. ಸಂ.	೦೨	೦೩	೦೩	೦೩	೦೩	೦೩	೦೩	೨೦
		ಉ. ಸಂ	೨೦	೨೫	೨೫	೨೫	೨೫	೨೫	೨೪	೧೬೯
೮	ರಾಯಬಾಗ	ಘ. ಸಂ.	೦೩	೦೪	೦೪	೦೪	೦೪	೦೪	೦೬	೨೯
		ಉ. ಸಂ	೨೬	೩೪	೩೪	೩೪	೩೪	೩೪	೪೫	೨೪೧
೯	ರಾಮದುರ್ಗ	ಘ. ಸಂ.	೦೨	೦೨	೦೨	೦೨	೦೨	೦೨	೦೩	೧೫
		ಉ. ಸಂ	೨೨	೨೨	೨೨	೨೨	೨೨	೨೨	೨೫	೧೫೭
೧೦	ಸವದತ್ತಿ	ಘ. ಸಂ.	೦೧	೦೨	೦೨	೦೨	೦೨	೦೨	೦೪	೧೫
		ಉ. ಸಂ	೧೦	೧೭	೧೭	೧೭	೧೭	೧೭	೨೫	೧೨೦
	ಒಟ್ಟು	ಘ. ಸಂ.	೮೫	೯೫	೯೬	೯೬	೧೧೬	೧೧೬	೧೩೪	೭೩೮
		ಉ. ಸಂ	೪೪೨	೪೯೫	೪೯೯	೪೯೯	೬೨೦	೬೨೦	೬೯೩	೩೮೬೮

ಘ. ಸಂ.: ಘಟಕಗಳ ಸಂಖ್ಯೆ   ಉ. ಸಂ: ಉದ್ಯೋಗಿಗಳ ಸಂಖ್ಯೆ

(ಮೂಲ : ಬೆಳಗಾವಿ ಜಿಲ್ಲೆಯ ಅಂಕಿ ಅಂಶಗಳ ನೋಟ, ೨೦೦೪ ರಿಂದ ೨೦೧೧, ಕ್ರೋಢಿಕೃತ)

(೨೦೦೪ ರಿಂದ ಕೈಗಾರಿಕೆಗಳನ್ನು ಮೇಲಿನಂತೆ ವರ್ಗೀಕರಿಸಿ, ಅಂಕಿ ಸಂಖ್ಯೆಗಳು ಲಭ್ಯವಿವೆ)

ಅಟೋಮೊಬೈಲ್ಸ್‌ನಲ್ಲಿ ಜಿಲ್ಲಾ ಸ್ಥಾನ ಬೆಳಗಾವಿ ಅತೀ ಹೆಚ್ಚಿನ ಘಟಕಗಳನ್ನು ಹೊಂದಿದ್ದು ಉದ್ಯೋಗ ನೀಡಿಕೆಯಲ್ಲೂ ಮುಂಚೂಣಿಯಲ್ಲಿದೆ. ಈ ಉದ್ದಿಮೆಯಲ್ಲಿ ಖಾನಾಪೂರ ಮತ್ತು ರಾಮದುರ್ಗ ತಾಲೂಕುಗಳು ಕೊನೆಯ ಸ್ಥಾನದಲ್ಲಿವೆ. ಇದು ೨೦೦೪ ರಲ್ಲಿ ಮತ್ತು ೨೦೧೧ ರಲ್ಲಿಯೂ ಅದೇ ಚಿತ್ರಣ ನೀಡುತ್ತದೆ.

ಕೋಷ್ಟಕ : ೪.೨೦ ಎಲೆಕ್ಟ್ರಿಕಲ್ಸ್ ಮತ್ತು ಎಲೆಕ್ಟ್ರಾನಿಕ್ಸ್

ಅ ಸಂ	ತಾಲೂಕು		೨೦೦೪	೨೦೦೫	೨೦೦೬	೨೦೦೭	೨೦೦೯	೨೦೧೦	೨೦೧೧	ಒಟ್ಟು
೧	ಅಥಣಿ	ಫ. ಸಂ.	೨೫	೩೦	೩೨	೩೫	೩೯	೪೧	೪೫	೨೪೭
		ಉ. ಸಂ	೮೦	೯೦	೯೫	೧೦೧	೧೨೦	೧೩೫	೧೪೦	೭೬೧
೨	ಬೈಲಹೊಂಗಲ	ಫ. ಸಂ.	೪೫	೫೦	೫೨	೫೫	೫೭	೫೮	೫೪	೩೭೧
		ಉ. ಸಂ	೨೦೦	೨೧೫	೨೨೦	೨೨೬	೧೪೦	೧೪೫	೧೫೨	೧೨೯೮
೩	ಬೆಳಗಾವಿ	ಫ. ಸಂ.	೨೩೦	೨೩೪	೨೪೬	೨೫೬	೨೯೦	೨೯೭	೩೧೦	೧೮೬೩
		ಉ. ಸಂ	೭೧೦	೭೨೧	೭೩೦	೭೬೦	೮೧೭	೮೪೦	೮೭೪	೫೪೫೨
೪	ಚಿಕ್ಕೋಡಿ	ಫ. ಸಂ.	೧೭೫	೧೮೦	೧೮೫	೧೮೯	೨೦೨	೨೦೩	೨೦೫	೧೩೩೯
		ಉ. ಸಂ	೩೮೦	೩೯೦	೪೧೨	೪೨೦	೪೪೪	೪೪೬	೪೫೩	೨೯೪೫
೫	ಗೋಕಾಕ	ಫ. ಸಂ.	೧೬೫	೧೭೦	೧೭೪	೧೭೮	೧೮೭	೧೮೮	೧೯೦	೧೨೫೨
		ಉ. ಸಂ	೫೧೦	೫೩೦	೫೪೦	೫೪೮	೫೯೫	೫೯೮	೬೦೬	೩೯೨೭
೬	ಹುಕ್ಕೇರಿ	ಫ. ಸಂ.	೧೧೨	೧೧೭	೧೨೦	೧೨೫	೧೩೩	೧೩೪	೧೩೬	೮೭೧
		ಉ. ಸಂ	೪೨೦	೪೩೨	೪೩೮	೪೪೮	೪೭೨	೪೭೫	೪೭೮	೩೧೬೩
೭	ಖಾನಾಪೂರ	ಫ. ಸಂ.	೭೫	೮೦	೮೮	೯೩	೯೬	೯೬	೯೮	೬೨೬
		ಉ. ಸಂ	೨೪೦	೨೫೮	೨೬೫	೨೭೫	೨೯೫	೨೯೫	೩೦೦	೧೯೨೮
೮	ರಾಯಬಾಗ	ಫ. ಸಂ.	೧೨೫	೧೩೦	೧೩೪	೧೩೬	೧೩೬	೧೩೭	೧೩೮	೯೩೬
		ಉ. ಸಂ	೨೮೦	೨೯೦	೩೧೫	೩೧೯	೩೧೯	೩೨೨	೩೨೮	೨೧೭೩
೯	ರಾಮದುರ್ಗ	ಫ. ಸಂ.	೧೩೦	೧೩೫	೧೩೯	೧೪೩	೧೩೪	೧೩೪	೧೩೬	೯೫೧
		ಉ. ಸಂ	೪೮೯	೪೯೫	೫೧೨	೫೨೦	೫೨೫	೫೨೫	೫೨೮	೩೫೯೪
೧೦	ಸವದತ್ತಿ	ಫ. ಸಂ.	೭೫	೮೦	೮೪	೮೬	೮೭	೮೮	೯೦	೫೯೦
		ಉ. ಸಂ	೨೪೦	೨೬೧	೨೭೦	೨೭೫	೨೭೮	೨೯೮	೩೦೨	೧೯೨೪
	ಒಟ್ಟು	ಫ. ಸಂ.	೧೧೫೭	೧೨೦೬	೧೨೫೪	೧೨೯೬	೧೩೬೧	೧೩೭೬	೧೪೦೨	೯೦೫೨
		ಉ. ಸಂ	೩೫೮೯	೩೬೮೨	೩೬೯೭	೩೮೯೨	೪೦೦೫	೪೦೭೯	೪೧೬೧	೨೭೧೬೫

ಫ. ಸಂ.: ಘಟಕಗಳ ಸಂಖ್ಯೆ   ಉ. ಸಂ: ಉದ್ಯೋಗಿಗಳ ಸಂಖ್ಯೆ

(ಮೂಲ : ಬೆಳಗಾವಿ ಜಿಲ್ಲೆಯ ಅಂಕಿ ಅಂಶಗಳ ನೋಟ, ೨೦೦೪ ರಿಂದ ೨೦೧೧, ಕ್ರೋಢಿಕೃತ)

(೨೦೦೪ ರಿಂದ ಕೈಗಾರಿಕೆಗಳನ್ನು ಮೇಲಿನಂತೆ ವರ್ಗೀಕರಿಸಿ, ಅಂಕಿ ಸಂಖ್ಯೆಗಳು ಲಭ್ಯವಿವೆ)

ಎಲೆಕ್ಟ್ರಾನಿಕ್ಸ್ ಮತ್ತು ಎಲೆಕ್ಟ್ರಿಕಲ್ಸ್ ಉದ್ದಿಮೆಯಲ್ಲಿ ಬೆಳಗಾವಿ ತಾಲೂಕು ಘಟಕಗಳ ಸಂಖ್ಯೆಯಲ್ಲಿ ಹಾಗೂ ಉದ್ಯೋಗ ನೀಡಿಕೆಯಲ್ಲಿಯೂ ೨೦೦೪ ಮತ್ತು ೨೦೧೧ ರಲ್ಲಿಯೂ ಪ್ರಥಮ ಸ್ಥಾನದಲ್ಲಿದೆ. ಅದೇ ರೀತಿಯಾಗಿ ಚಿಕ್ಕೋಡಿ ತಾಲೂಕು ದ್ವಿತೀಯ ಸ್ಥಾನದಲ್ಲಿದೆ. ಇದರಲ್ಲಿ ಅಥಣಿ ತಾಲೂಕು ಕೊನೆಯ ಸ್ಥಾನದಲ್ಲಿದೆ.

ಕೋಷ್ಟಕ : ೪.೨೧ ಕೆಮಿಕಲ್ಸ್

ಅ ಸಂ	ತಾಲೂಕು		೨೦೦೪	೨೦೦೫	೨೦೦೬	೨೦೦೭	೨೦೦೮	೨೦೦೯	೨೦೧೦	೨೦೧೧	ಒಟ್ಟು
೧	ಅಥಣಿ	ಘ. ಸಂ.	೦೪	೦೪	೦೫	೦೬	೦೮	೦೯	೦೯	೪೫
		ಉ. ಸಂ	೨೫	೨೫	೪೨	೪೬	೫೨	೫೫	೫೫	೩೦೦
೨	ಬೈಲಹೊಂಗಲ	ಘ. ಸಂ.	೦೬	೦೭	೦೮	೦೮	೦೯	೧೦	೧೨	೬೦
		ಉ. ಸಂ	೪೫	೫೦	೬೨	೬೨	೬೮	೭೮	೮೪	೪೪೯
೩	ಬೆಳಗಾವಿ	ಘ. ಸಂ.	೭೫	೮೦	೮೮	೯೦	೧೦೦	೧೦೫	೧೧೦	೬೪೮
		ಉ. ಸಂ	೩೮೦	೩೯೫	೪೩೫	೪೪೩	೫೩೦	೫೬೦	೬೮೦	೩೪೨೩
೪	ಚಿಕ್ಕೋಡಿ	ಘ. ಸಂ.	೧೫	೧೬	೧೮	೨೦	೨೪	೨೫	೨೮	೧೪೬
		ಉ. ಸಂ	೧೪೮	೧೬೧	೧೯೪	೨೦೯	೨೨೫	೨೩೦	೨೫೦	೧೪೧೭
೫	ಗೋಕಾಕ	ಘ. ಸಂ.	೦೪	೦೫	೦೬	೦೮	೧೨	೧೩	೧೫	೬೩
		ಉ. ಸಂ	೩೪	೪೦	೪೮	೬೩	೮೫	೯೦	೧೦೫	೪೬೫
೬	ಹುಕ್ಕೇರಿ	ಘ. ಸಂ.	೦೩	೦೩	೦೪	೦೪	೦೫	೦೫	೦೬	೩೦
		ಉ. ಸಂ	೨೫	೨೫	೩೨	೩೨	೩೭	೩೭	೪೦	೨೨೮
೭	ಖಾನಾಪೂರ	ಘ. ಸಂ.	೦೨	೦೨	೦೩	೦೩	೦೩	೦೫	೦೬	೨೪
		ಉ. ಸಂ	೨೨	೨೨	೨೮	೨೮	೨೮	೨೮	೩೫	೧೯೧
೮	ರಾಯಬಾಗ	ಘ. ಸಂ.	೦೪	೦೪	೦೫	೦೬	೦೮	೦೮	೦೮	೪೩
		ಉ. ಸಂ	೪೦	೪೦	೫೦	೫೭	೬೫	೬೫	೬೫	೩೮೨
೯	ರಾಮದುರ್ಗ	ಘ. ಸಂ.	೦೨	೦೨	೦೨	೦೨	೦೨	೦೩	೦೪	೧೭
		ಉ. ಸಂ	೨೨	೨೨	೨೨	೨೨	೨೨	೨೮	೩೨	೧೭೦
೧೦	ಸವದತ್ತಿ	ಘ. ಸಂ.	೦೩	೦೩	೦೩	೦೩	೦೩	೦೪	೦೫	೨೪
		ಉ. ಸಂ	೨೫	೨೫	೨೫	೨೫	೨೫	೩೦	೩೫	೧೯೦
	ಒಟ್ಟು	ಘ. ಸಂ.	೧೧೮	೧೨೬	೧೪೨	೧೫೦	೧೭೪	೧೮೭	೨೦೩	೧೧೦೦
		ಉ. ಸಂ	೭೬೬	೮೦೫	೯೩೮	೯೮೭	೧೧೩೭	೧೨೦೧	೧೩೮೧	೭೨೧೫

ಘ. ಸಂ.: ಘಟಕಗಳ ಸಂಖ್ಯೆ   ಉ. ಸಂ: ಉದ್ಯೋಗಿಗಳ ಸಂಖ್ಯೆ

(ಮೂಲ : ಬೆಳಗಾವಿ ಜಿಲ್ಲೆಯ ಅಂಕಿ ಅಂಶಗಳ ನೋಟ, ೨೦೦೪ ರಿಂದ ೨೦೧೧, ಕ್ರೋಢಿಕೃತ)

(೨೦೦೪ ರಿಂದ ಕೈಗಾರಿಕೆಗಳನ್ನು ಮೇಲಿನಂತೆ ವರ್ಗೀಕರಿಸಿ, ಅಂಕಿ ಸಂಖ್ಯೆಗಳು ಲಭ್ಯವಿವೆ)

ಕೆಮಿಕಲ್ಸ್ ಉದ್ದಿಮೆಯಲ್ಲಿ ಘಟಕಗಳ ಸಂಖ್ಯೆ ಮತ್ತು ಉದ್ಯೋಗ ನೀಡಿಕೆಯಲ್ಲಿ ೨೦೦೪ ಮತ್ತು ೨೦೧೧ ರಲ್ಲಿ ಜಿಲ್ಲಾ ಕೇಂದ್ರ ಪ್ರಥಮ ಸ್ಥಾನದಲ್ಲಿದ್ದು, ರಾಮದುರ್ಗ ಕೊನೆಯ ಸ್ಥಾನದಲ್ಲಿದೆ.

ಕೋಷ್ಟಕ : ೪.೨೨ ಫೆರಸ್ ಮತ್ತು ನಾನ್ ಫೆರಸ್

ಅ ಸಂ	ತಾಲೂಕು		೨೦೦೪	೨೦೦೫	೨೦೦೬	೨೦೦೭	೨೦೦೯	೨೦೧೦	೨೦೧೧	ಒಟ್ಟು
೧	ಅಥಣಿ	ಫ. ಸಂ.	೦೦	೦೦	೦೦	೦೦	೦೦	೦೦	೦೦	೦
		ಉ. ಸಂ	೦೦	೦೦	೦೦	೦೦	೦೦	೦೦	೦೦	೦
೨	ಬೈಲಹೊಂಗಲ	ಫ. ಸಂ.	೦೦	೦೦	೦೦	೦೦	೦೦	೦೦	೦೦	೦
		ಉ. ಸಂ	೦೦	೦೦	೦೦	೦೦	೦೦	೦೦	೦೦	೦
೩	ಬೆಳಗಾವಿ	ಫ. ಸಂ.	೧೨೦	೧೨೫	೧೩೦	೧೩೬	೧೪೮	೧೫೩	೧೫೩	೯೬೫
		ಉ. ಸಂ	೭೩೫	೭೬೫	೮೩೫	೮೬೦	೯೫೬	೧೦೫೬	೧೦೫೬	೬೨೬೩
೪	ಚಿಕ್ಕೋಡಿ	ಫ. ಸಂ.	೦೪	೦೪	೦೪	೦೪	೦೪	೦೪	೦೪	೨೮
		ಉ. ಸಂ	೩೦	೩೦	೩೦	೩೦	೩೦	೩೦	೩೦	೨೧೦
೫	ಗೋಕಾಕ	ಫ. ಸಂ.	೦೨	೦೨	೦೨	೦೨	೦೨	೦೨	೦೨	೧೪
		ಉ. ಸಂ	೧೦	೧೦	೧೦	೧೦	೧೦	೧೦	೧೦	೭೦
೬	ಹುಕ್ಕೇರಿ	ಫ. ಸಂ.	೦೦	೦೦	೦೧	೦೧	೦೧	೦೧	೦೧	೫
		ಉ. ಸಂ	೦೦	೦೦	೦೫	೦೫	೦೫	೦೫	೦೫	೨೫
೭	ಖಾನಾಪೂರ	ಫ. ಸಂ.	೦೦	೦೦	೦೧	೦೧	೦೧	೦೧	೦೧	೫
		ಉ. ಸಂ	೦೦	೦೦	೦೫	೦೫	೦೫	೦೫	೦೫	೨೫
೮	ರಾಯಬಾಗ	ಫ. ಸಂ.	೦೦	೦೦	೦೧	೦೧	೦೧	೦೧	೦೧	೫
		ಉ. ಸಂ	೦೦	೦೦	೦೫	೦೫	೦೫	೦೫	೦೫	೨೫
೯	ರಾಮದುರ್ಗ	ಫ. ಸಂ.	೦೦	೦೦	೦೦	೦೦	೦೦	೦೦	೦೦	೦
		ಉ. ಸಂ	೦೦	೦೦	೦೦	೦೦	೦೦	೦೦	೦೦	೦
೧೦	ಸವದತ್ತಿ	ಫ. ಸಂ.	೦೦	೦೦	೦೦	೦೦	೦೦	೦೦	೦೦	೦
		ಉ. ಸಂ	೦೦	೦೦	೦೦	೦೦	೦೦	೦೦	೦೦	೦
	ಒಟ್ಟು	ಫ. ಸಂ.	೧೨೬	೮೦೫	೧೩೯	೧೪೫	೧೫೭	೧೬೨	೧೬೨	೧೬೯೬
		ಉ. ಸಂ	೭೭೫	೨೮೫೪	೮೯೦	೯೧೫	೧೦೧೧	೧೧೧೧	೧೧೧೧	೮೬೬೭

ಫ. ಸಂ: ಘಟಕಗಳ ಸಂಖ್ಯೆ ಉ. ಸಂ: ಉದ್ಯೋಗಿಗಳ ಸಂಖ್ಯೆ

(ಮೂಲ : ಬೆಳಗಾವಿ ಜಿಲ್ಲೆಯ ಅಂಕಿ ಅಂಶಗಳ ನೋಟ, ೨೦೦೪ ರಿಂದ ೨೦೧೧, ಕ್ರೋಢಿಕೃತ)

(೨೦೦೪ ರಿಂದ ಕೈಗಾರಿಕೆಗಳನ್ನು ಮೇಲಿನಂತೆ ವರ್ಗೀಕರಿಸಿ, ಅಂಕಿ ಸಂಖ್ಯೆಗಳು ಲಭ್ಯವಿವೆ)

ಫೆರಸ್ ಮತ್ತು ನಾನ್-ಫೆರಸ್ ಉದ್ದಿಮೆಯು ನೈಸರ್ಗಿಕವಾಗಿ ಬೆಳಗಾವಿಯಲ್ಲಿ ಕೇಂದ್ರಿತವಾಗಿದ್ದು ಸ್ಪಷ್ಟವಾಗುತ್ತದೆ. ಚಿಕ್ಕೋಡಿ ಮತ್ತು ಖಾನಾಪೂರಗಳಲ್ಲಿ ಅತ್ಯಲ್ಪ ಘಟಕಗಳು ಕಂಡು ಬಂದರೆ ಇನ್ನುಳಿದ ೭ ತಾಲೂಕುಗಳಲ್ಲಿ ಇವುಗಳ ಅಸ್ತಿತ್ವ ಕಂಡು ಬರುವುದಿಲ್ಲ.

ಕೋಷ್ಟಕ : ೪.೨೩ ಆಹಾರ ಮತ್ತು ಮಾದಕ ವಸ್ತುಗಳು

ಅ.ಸಂ.	ತಾಲ್ಲೂಕು		೨೦೦೪	೨೦೦೫	೨೦೦೬	೨೦೦೭	೨೦೦೯	೨೦೧೦	೨೦೧೧	ಒಟ್ಟು
೧	ಅಥಣಿ	ಘ. ಸಂ.	೧೬೫	೧೭೦	೧೭೬	೧೮೬	೧೯೦	೧೯೭	೨೧೦	೧೨೯೪
		ಉ. ಸಂ	೧೫೯೮	೧೬೧೫	೧೬೩೫	೨೦೭೫	೨೧೦೫	೨೧೨೫	೨೧೭೫	೧೩೩೨೮
೨	ಬೈಲಹೊಂಗಲ	ಘ. ಸಂ.	೨೬೦	೨೬೫	೨೭೨	೨೭೮	೨೮೮	೨೯೮	೩೦೫	೧೯೬೬
		ಉ. ಸಂ	೧೧೮೦	೧೧೯೫	೧೨೩೨	೧೨೫೬	೧೩೦೫	೧೩೩೫	೧೩೯೦	೮೮೯೩
೩	ಬೆಳಗಾವಿ	ಘ. ಸಂ.	೬೨೫	೬೩೫	೬೪೫	೬೫೯	೬೯೦	೭೦೨	೭೩೬	೪೬೯೨
		ಉ. ಸಂ	೧೬೭೮	೧೭೦೫	೧೮೫೫	೧೯೧೫	೩೦೦೦	೩೦೨೫	೩೨೩೬	೧೬೪೧೪
೪	ಚಿಕ್ಕೋಡಿ	ಘ. ಸಂ.	೪೮೦	೪೮೫	೪೯೬	೫೦೨	೫೨೫	೫೩೫	೫೪೦	೩೫೬೩
		ಉ. ಸಂ	೧೫೪೦	೧೫೬೪	೧೬೧೧	೧೬೪೧	೧೭೩೫	೧೭೪೫	೧೮೮೦	೧೧೭೧೬
೫	ಗೋಕಾಕ	ಘ. ಸಂ.	೩೫೦	೩೫೫	೩೬೦	೩೬೭	೩೮೨	೩೯೦	೪೨೫	೨೬೨೯
		ಉ. ಸಂ	೧೫೧೦	೧೫೩೦	೧೫೬೫	೧೬೦೧	೧೬೬೫	೧೬೮೦	೧೭೦೫	೧೧೨೫೬
೬	ಹುಕ್ಕೇರಿ	ಘ. ಸಂ.	೨೧೫	೨೨೧	೨೨೮	೨೩೨	೨೪೬	೨೫೬	೨೭೫	೧೬೭೩
		ಉ. ಸಂ	೧೭೫೮	೧೭೮೮	೧೮೧೦	೧೮೩೫	೧೮೯೧	೧೯೦೫	೧೯೪೦	೧೨೯೨೭
೭	ಖಾನಾ ಪೂರ	ಘ. ಸಂ.	೧೬೦	೧೬೨	೧೭೧	೧೭೬	೧೮೮	೧೯೬	೨೧೦	೧೨೬೩
		ಉ. ಸಂ	೧೩೮೦	೧೩೮೫	೧೪೦೦	೧೪೨೦	೧೪೬೧	೧೪೭೫	೧೫೦೩	೧೦೦೨೪
೮	ರಾಯ ಬಾಗ	ಘ. ಸಂ.	೨೪೦	೨೪೫	೨೪೮	೨೫೫	೨೭೨	೨೯೨	೩೦೮	೧೮೬೦
		ಉ. ಸಂ	೧೯೬೫	೧೯೯೫	೨೦೧೫	೨೧೩೦	೨೧೯೬	೨೨೦೫	೨೨೨೫	೧೪೭೩೧
೯	ರಾಮ ದುರ್ಗ	ಘ. ಸಂ.	೧೬೦	೧೬೭	೧೭೧	೧೭೬	೧೮೮	೧೯೫	೨೧೨	೧೨೬೯
		ಉ. ಸಂ	೧೪೮೦	೧೪೯೨	೧೫೧೬	೧೫೩೧	೧೫೮೦	೧೫೯೮	೧೬೨೯	೧೦೮೨೬
೧೦	ಸವದತ್ತಿ	ಘ. ಸಂ.	೧೪೫	೧೪೯	೧೫೪	೧೫೯	೧೬೮	೧೭೮	೨೧೫	೧೧೬೮
		ಉ. ಸಂ	೧೭೩೫	೧೭೫೨	೧೭೭೨	೧೭೯೬	೧೮೨೦	೧೮೪೦	೧೮೮೫	೧೨೬೦೦
	ಒಟ್ಟು	ಘ. ಸಂ.	೨೮೦೦	೨೮೫೪	೨೯೨೧	೨೯೮೬	೩೧೩೭	೩೨೩೯	೩೪೩೬	೨೧೩೭೩
		ಉ. ಸಂ	೧೫೮೨೪	೧೬೦೨೧	೧೬೪೧೧	೧೭೨೦೦	೧೮೭೫೮	೧೮೯೩೩	೧೯೫೬೮	೧೩+೦೫

ಘ. ಸಂ.: ಘಟಕಗಳ ಸಂಖ್ಯೆ ಉ. ಸಂ: ಉದ್ಯೋಗಿಗಳ ಸಂಖ್ಯೆ

(ಮೂಲ : ಬೆಳಗಾವಿ ಜಿಲ್ಲೆಯ ಅಂಕಿ ಅಂಶಗಳ ನೋಟ, ೨೦೦೪ ರಿಂದ ೨೦೧೧, ಕ್ರೋಢಿಕೃತ)

ಕೈಗಾರಿಕೆಗಳನ್ನು ಮೇಲಿನಂತೆ ವರ್ಗೀಕರಿಸಿ, ಅಂಕಿ ಸಂಖ್ಯೆಗಳು ಲಭ್ಯವಿವೆ)

ಆಹಾರ ಮತ್ತು ಮಾದಕ ವಸ್ತುಗಳ ಉದ್ದಿಮೆಯಲ್ಲಿ ೨೦೦೪ ಮತ್ತು ೨೦೧೧ರಲ್ಲಿ ಯಥಾ ರೀತಿ ಬೆಳಗಾವಿ ಜಿಲ್ಲೆಯೂ ಪ್ರಥಮ ಸ್ಥಾನದಲ್ಲಿದ್ದು, ನಂತರದ ಸ್ಥಾನದಲ್ಲಿ ರಾಮದುರ್ಗ ಮತ್ತು ಅಥಣಿ ತಾಲೂಕುಗಳು ಬರುತ್ತವೆ.

ಕೋಷ್ಟಕ : ೪.೨೪ ಗ್ಯಾಸ್ ಮತ್ತು ಸಿರಾಮಿಕ್ಸ್

ಕ್ರ ಸಂ	ತಾಲೂಕು		೨೦೦೪	೨೦೦೫	೨೦೦೬	೨೦೦೭	೨೦೦೯	೨೦೧೦	೨೦೧೧	ಒಟ್ಟು
೧	ಅಥಣಿ	ಘ. ಸಂ.	೧೨೦	೧೨೫	೧೩೦	೧೩೨	೧೪೦	೧೪೨	೧೫೦	೯೩೯
		ಉ. ಸಂ	೬೦೦	೬೧೫	೬೩೫	೬೪೫	೬೭೨	೬೮೨	೭೦೧	೪೫೫೦
೨	ಬೈಲಹೊಂಗಲ	ಘ. ಸಂ.	೨೧೫	೨೨೦	೨೨೫	೨೨೭	೨೩೪	೨೩೯	೨೪೫	೧೬೦೫
		ಉ. ಸಂ	೮೬೫	೮೮೯	೯೪೦	೯೫೦	೯೭೬	೧೦೦೫	೧೦೨೫	೬೬೫೦
೩	ಬೆಳಗಾವಿ	ಘ. ಸಂ.	೪೫	೪೯	೫೬	೬೦	೭೪	೮೦	೮೫	೪೪೯
		ಉ. ಸಂ	೨೧೫	೨೩೫	೨೬೪	೨೮೪	೩೬೫	೩೮೮	೪೧೫	೨೧೬೬
೪	ಚಿಕ್ಕೋಡಿ	ಘ. ಸಂ.	೮೫೦	೮೬೦	೮೬೫	೮೭೫	೯೦೪	೯೧೫	೯೩೦	೬೧೯೯
		ಉ. ಸಂ	೨೫೦೦	೨೫೬೦	೨೬೦೮	೨೬೫೮	೨೭೪೬	೨೭೮೫	೨೮೧೦	೧೮೬೬೭
೫	ಗೋಕಾಕ	ಘ. ಸಂ.	೪೩೦	೪೩೫	೪೪೦	೪೪೨	೪೫೦	೪೫೬	೪೫೮	೩೧೧೧
		ಉ. ಸಂ	೧೬೫೦	೧೬೭೫	೧೭೧೦	೧೭೨೦	೧೭೬೦	೧೭೯೦	೧೮೦೫	೧೨೧೧೦
೬	ಹುಕ್ಕೇರಿ	ಘ. ಸಂ.	೨೧೦	೨೧೫	೨೨೦	೨೨೨	೨೩೦	೨೩೫	೨೪೦	೧೫೭೨
		ಉ. ಸಂ	೮೩೦	೮೪೦	೮೬೦	೮೭೦	೯೧೯	೯೩೮	೯೫೬	೬೨೧೩
೭	ಖಾನಾಪೂರ	ಘ. ಸಂ.	೨೫೦	೨೬೦	೨೭೫	೩೦೦	೩೩೫	೩೫೫	೩೯೦	೨೧೬೫
		ಉ. ಸಂ	೧೪೦೦	೧೪೨೫	೧೪೫೫	೧೭೦೫	೧೮೫೦	೧೮೫೦	೨೩೨೯	೧೨೦೧೪
೮	ರಾಯಬಾಗ	ಘ. ಸಂ.	೧೦೦	೧೦೫	೧೦೯	೧೧೩	೧೧೬	೧೧೮	೧೨೨	೭೮೩
		ಉ. ಸಂ	೪೬೫	೪೭೫	೫೧೦	೫೩೦	೫೪೦	೫೫೨	೫೬೮	೩೬೪೦
೯	ರಾಮದುರ್ಗ	ಘ. ಸಂ.	೮೦	೮೩	೮೫	೮೮	೯೪	೯೬	೯೮	೬೨೪
		ಉ. ಸಂ	೪೬೨	೪೦೦	೪೧೧	೪೩೦	೪೪೨	೪೫೨	೪೭೨	೩೦೬೯
೧೦	ಸವದತ್ತಿ	ಘ. ಸಂ.	೬೫	೬೮	೭೩	೭೫	೭೮	೮೦	೮೪	೫೨೩
		ಉ. ಸಂ	೩೬೫	೩೭೮	೪೦೦	೪೦೮	೪೧೫	೪೨೪	೪೪೫	೨೮೩೫
	ಒಟ್ಟು	ಘ. ಸಂ.	೨೩೬೫	೨೪೨೦	೨೪೭೮	೨೫೩೪	೨೬೫೫	೨೭೧೬	೨೮೦೨	೧೭೯೭೦
		ಉ. ಸಂ	೯೨೯೦	೯೫೦೩	೯೮೧೨	೧೦೨೧೨	೧೦೬೯೫	೧೦೮೭೬	೧೧೫೨೬	೭೧೯೧೪

ಘ. ಸಂ: ಘಟಕಗಳ ಸಂಖ್ಯೆ   ಉ. ಸಂ: ಉದ್ಯೋಗಿಗಳ ಸಂಖ್ಯೆ

(ಮೂಲ : ಬೆಳಗಾವಿ ಜಿಲ್ಲೆಯ ಅಂಕಿ ಅಂಶಗಳ ನೋಟ, ೨೦೦೪ ರಿಂದ ೨೦೧೧, ಕ್ರೋಢಿಕೃತ)

(೨೦೦೪ ರಿಂದ ಕೈಗಾರಿಕೆಗಳನ್ನು ಮೇಲಿನಂತೆ ವರ್ಗೀಕರಿಸಿ, ಅಂಕಿ ಸಂಖ್ಯೆಗಳು ಲಭ್ಯವಿವೆ)

ಗ್ಯಾಸ್ ಮತ್ತು ಸಿರಾಮಿಕ್ಸ್ ಉದ್ದಿಮೆಯಲ್ಲಿ ಚಿಕ್ಕೋಡಿ ಪ್ರಥಮ ಸ್ಥಾನದಲ್ಲಿದ್ದು ಬೆಳಗಾವಿ ತಾಲೂಕು ಕೊನೆಯ ಸ್ಥಾನದಲ್ಲಿರುವುದು ಆಶ್ಚರ್ಯಕರವೆನಿಸುತ್ತದೆ. ೨೦೦೪ರಲ್ಲಿ ಎರಡನೇಯ ಸ್ಥಾನದಲ್ಲಿದ್ದ ಗೋಕಾಕ ೨೦೧೧ರಲ್ಲೂ ಅದೇ ರೀತಿಯ ಪ್ರಗತಿ ಹೊಂದಿದೆ.

ಕೋಷ್ಟಕ : ೪.೨೫ ಜಾಬ್ ವರ್ಕ್ಸ ಮತ್ತು ರಿಪೇರಿ

ಅ ಸಂ	ತಾಲೂಕು		೨೦೦೪	೨೦೦೫	೨೦೦೬	೨೦೦೭	೨೦೦೯	೨೦೧೦	೨೦೧೧	ಒಟ್ಟು
೧	ಅಥಣಿ	ಘ. ಸಂ.	೭೫	೮೦	೮೫	೮೭	೯೪	೯೮	೧೨೦	೬೩೯
		ಉ. ಸಂ	೯೧೦	೯೨೫	೯೫೦	೯೫೪	೯೭೨	೯೮೦	೩೦೬	೫೯೯೭
೨	ಬೈಲಹೊಂಗಲ	ಘ. ಸಂ.	೧೮೨	೧೮೬	೧೯೦	೧೯೫	೨೦೪	೨೧೦	೨೧೫	೧೩೮೨
		ಉ. ಸಂ	೧೪೮೨	೧೫೦೧	೧೫೨೫	೧೫೩೫	೧೫೬೮	೧೬೨೫	೧೬೪೦	೧೦೮೭೬
೩	ಬೆಳಗಾವಿ	ಘ. ಸಂ.	೧೮೬೫	೧೯೦೪	೧೯೪೨	೧೯೫೮	೨೦೬೦	೨೨೦೦	೨೩೬೯	೧೪೨೯೮
		ಉ. ಸಂ	೫೫೯೫	೫೬೯೬	೫೭೩೨	೫೭೮೯	೬೯೩೫	೭೫೨೩	೯೦೯೦	೪೬೩೬೦
೪	ಚಿಕ್ಕೋಡಿ	ಘ. ಸಂ.	೨೩೦	೨೩೫	೨೪೦	೨೪೫	೨೫೪	೨೬೪	೨೭೨	೧೭೪೦
		ಉ. ಸಂ	೧೬೯೫	೧೭೧೫	೧೭೩೫	೧೭೫೦	೧೮೧೨	೧೮೩೪	೧೮೪೬	೧೨೩೮೭
೫	ಗೋಕಾಕ	ಘ. ಸಂ.	೧೬೪	೧೬೮	೧೭೨	೧೭೫	೧೮೫	೧೯೦	೧೯೫	೧೨೪೯
		ಉ. ಸಂ	೮೩೫	೮೫೨	೮೭೨	೮೮೪	೯೦೫	೯೧೫	೧೦೧೫	೬೨೭೮
೬	ಹುಕ್ಕೇರಿ	ಘ. ಸಂ.	೬೫	೭೦	೭೫	೮೧	೯೦	೯೪	೯೮	೫೭೩
		ಉ. ಸಂ	೩೮೫	೩೮೯	೪೧೦	೪೩೪	೪೬೬	೪೭೨	೫೧೦	೩೦೬೬
೭	ಖಾನಾಪೂರ	ಘ. ಸಂ.	೪೮	೫೦	೫೬	೬೦	೬೯	೭೫	೮೩	೪೪೧
		ಉ. ಸಂ	೨೯೫	೩೦೨	೩೧೮	೩೩೨	೩೬೨	೩೮೦	೪೦೨	೨೩೯೧
೮	ರಾಯಬಾಗ	ಘ. ಸಂ.	೬೫	೬೯	೭೨	೭೮	೮೪	೮೮	೯೫	೫೫೧
		ಉ. ಸಂ	೩೯೫	೪೦೬	೪೧೬	೪೩೪	೪೪೬	೪೫೪	೪೭೫	೩೦೨೬
೯	ರಾಮದುರ್ಗ	ಘ. ಸಂ.	೧೨೦	೧೨೩	೧೨೫	೧೨೯	೧೩೪	೧೩೫	೧೪೨	೯೦೮
		ಉ. ಸಂ	೮೪೦	೮೫೧	೮೬೪	೮೭೬	೮೯೫	೮೯೮	೯೧೦	೬೧೩೪
೧೦	ಸವದತ್ತಿ	ಘ. ಸಂ.	೧೩೦	೧೩೩	೧೩೫	೧೩೯	೧೪೩	೧೫೦	೧೫೮	೯೮೮
		ಉ. ಸಂ	೪೬೫	೪೭೪	೪೯೬	೫೧೦	೫೩೨	೫೪೬	೫೫೮	೩೫೮೧
	ಒಟ್ಟು	ಘ. ಸಂ.	೨೯೯೪೪	೩೦೧೮	೩೦೯೨	೩೧೪೭	೩೩೧೭	೩೫೦೪	೩೭೨೯	೪೯೭೫೧
		ಉ. ಸಂ	೧೨೮೬೭	೧೩೧೧೧	೧೩೩೧೮	೧೩೪೯೮	೧೪೮೯೩	೧೫೬೭೨	೧೬೭೫೨	೧೦೦೦೬೬

ಘ. ಸಂ.: ಘಟಕಗಳ ಸಂಖ್ಯೆ   ಉ. ಸಂ: ಉದ್ಯೋಗಿಗಳ ಸಂಖ್ಯೆ

(ಮೂಲ : ಬೆಳಗಾವಿ ಜಿಲ್ಲೆಯ ಅಂಕಿ ಅಂಶಗಳ ನೋಟ, ೨೦೦೪ ರಿಂದ ೨೦೧೧, ಕ್ರೋಢಿಕೃತ)

(೨೦೦೪ ರಿಂದ ಕೈಗಾರಿಕೆಗಳನ್ನು ಮೇಲಿನಂತೆ ವರ್ಗೀಕರಿಸಿ, ಅಂಕಿ ಸಂಖ್ಯೆಗಳು ಲಭ್ಯವಿವೆ)

ಜಾಬ್ ವರ್ಕ್ಸ ಮತ್ತು ರಿಪೇರಿಯಲ್ಲಿ ೨೦೦೪ಮತ್ತು ೨೦೧೧ರಲ್ಲಿಯೂ ಜಿಲ್ಲಾ ಕೇಂದ್ರ ಬೆಳಗಾವಿಯೇ ಉನ್ನತ ಸ್ಥಾನದಲ್ಲಿದೆ. ೨೦೦೪ರಲ್ಲಿ ಹುಕ್ಕೇರಿ ಕೊನೆಯ ಸ್ಥಾನದಲ್ಲಿತ್ತು. ಆದರೆ ೨೦೧೧ರ ವರೆಗೆ ಪ್ರಗತಿ ಹೊಂದಿ, ಖಾನಾಪೂರಕ್ಕೆ ಕೊನೆಯ ಸ್ಥಾನವನ್ನು ಬಿಟ್ಟು ಕೊಟ್ಟಿದೆ.

ಕೋಷ್ಟಕ : ೪.೨೬ ಚರ್ಮ ಉದ್ದಿಮೆ

ಅ ಸಂ	ತಾಲೂಕು		೨೦೦೪	೨೦೦೫	೨೦೦೬	೨೦೦೭	೨೦೦೮	೨೦೧೦	೨೦೧೧	ಒಟ್ಟು
೧	ಅಥಣಿ	ಫ. ಸಂ.	೫೦೦	೫೧೫	೫೨೫	೫೪೬	೫೯೮	೬೩೫	೬೫೦	೩೯೬೯
		ಉ. ಸಂ	೧೩೦೦	೧೩೫೦	೧೪೧೦	೧೪೨೫	೧೫೦೪	೧೫೬೦	೧೬೧೨	೧೦೧೬೧
೨	ಬೈಲಹೊಂಗಲ	ಫ. ಸಂ.	೧೭೫	೧೮೦	೧೮೫	೧೯೨	೨೦೬	೨೨೫	೨೩೨	೧೩೯೫
		ಉ. ಸಂ	೪೨೫	೪೪೫	೪೫೫	೪೬೫	೫೦೦	೫೨೫	೬೫೦	೩೪೬೫
೩	ಬೆಳಗಾವಿ	ಫ. ಸಂ.	೨೦೦	೨೦೪	೨೧೦	೨೧೫	೨೩೫	೨೬೬	೨೭೮	೧೬೦೮
		ಉ. ಸಂ	೪೫೦	೪೬೦	೪೭೫	೪೮೮	೫೬೬	೫೮೫	೬೦೫	೩೬೨೯
೪	ಚಿಕ್ಕೋಡಿ	ಫ. ಸಂ.	೨೪೦	೨೪೫	೨೫೧	೨೬೫	೨೮೫	೩೧೫	೩೩೨	೧೯೩೩
		ಉ. ಸಂ	೪೮೦	೪೯೫	೫೧೦	೫೬೫	೬೨೫	೬೪೫	೬೮೫	೪೦೦೫
೫	ಗೋಕಾಕ	ಫ. ಸಂ.	೧೮೯	೧೯೮	೨೧೦	೨೧೫	೨೨೮	೨೪೦	೨೫೦	೧೫೩೦
		ಉ. ಸಂ	೫೬೮	೫೮೮	೬೦೦	೬೧೦	೫೪೫	೫೬೪	೬೦೫	೪೦೮೦
೬	ಹುಕ್ಕೇರಿ	ಫ. ಸಂ.	೧೬೦	೧೬	೧೭೨	೧೭೫	೧೯೦	೧೯೫	೨೦೫	೧೧೧೩
		ಉ. ಸಂ	೪೮೦	೪೯೬	೫೦೫	೫೧೫	೫೫೨	೫೬೪	೫೮೦	೩೬೯೨
೭	ಖಾನಾಪೂರ	ಫ. ಸಂ.	೧೧೦	೧೧೫	೧೨೦	೧೨೭	೧೪೩	೧೬೫	೧೭೮	೯೫೮
		ಉ. ಸಂ	೩೨೦	೩೩೦	೩೩೫	೩೫೫	೩೯೦	೪೧೦	೪೩೫	೨೫೭೫
೮	ರಾಯಬಾಗ	ಫ. ಸಂ.	೧೫೦	೧೫೫	೧೬೦	೧೬೫	೧೮೫	೧೯೫	೨೧೦	೧೨೨೦
		ಉ. ಸಂ	೫೬೦	೫೮೦	೫೮೬	೫೯೮	೬೪೫೮	೬೬೮	೬೮೫	೧೦೧೩೫
೯	ರಾಮದುರ್ಗ	ಫ. ಸಂ.	೩೨೫	೩೩೧	೩೩೪	೩೩೮	೩೫೨	೪೦೦	೪೧೨	೨೪೯೨
		ಉ. ಸಂ	೬೫೦	೬೬೭	೬೭೨	೬೮೪	೭೪೦	೭೮೫	೮೧೫	೫೦೧೩
೧೦	ಸವದತ್ತಿ	ಫ. ಸಂ.	೧೮೦	೧೮೫	೧೮೮	೧೯೫	೨೧೩	೩೨೮	೩೫೦	೧೬೩೯
		ಉ. ಸಂ	೫೪೦	೫೬೫	೫೭೩	೬೦೪	೬೮೦	೭೨೫	೮೨೫	೪೫೧೨
	ಒಟ್ಟು	ಫ. ಸಂ.	೨೨೨೯	೨೨೯೬	೨೩೫೫	೨೪೩೩	೨೬೩೫	೨೯೬೪	೩೦೯೭	೧೮೦೦೯
		ಉ. ಸಂ	೫೭೭೩	೫೯೭೬	೬೧೨೧	೬೩೦೯	೬೭೫೦	೭೦೩೧	೭೪೯೭	೪೫೪೫೭

ಘ. ಸಂ.: ಘಟಕಗಳ ಸಂಖ್ಯೆ   ಉ. ಸಂ: ಉದ್ಯೋಗಿಗಳ ಸಂಖ್ಯೆ

(ಮೂಲ : ಬೆಳಗಾವಿ ಜಿಲ್ಲೆಯ ಅಂಕಿ ಅಂಶಗಳ ನೋಟ, ೨೦೦೪ ರಿಂದ ೨೦೧೧, ಕ್ರೋಢಿಕೃತ)

(೨೦೦೪ ರಿಂದ ಕೈಗಾರಿಕೆಗಳನ್ನು ಮೇಲಿನಂತೆ ವರ್ಗೀಕರಿಸಿ, ಅಂಕಿ ಸಂಖ್ಯೆಗಳು ಲಭ್ಯವಿವೆ)

ಚರ್ಮೋದ್ಧಿಮೆಗೆ ಅಥಣಿ ತಾಲೂಕು ಪ್ರಸಿದ್ಧಿಯನ್ನು ಪಡೆದಿದೆ. ಅಲ್ಲಿನ ಮದಭಾವಿ ಗ್ರಾಮದ ಪಾದರಕ್ಷೆಗಳು ಖ್ಯಾತಿ ಪಡೆದಿವೆ. ಕಾಗವಾಡದ ಚಮ್ಮಾರ ಆಮ್ಕಾ ದಾಖಲು ಪಡೆದಿದ್ದಾರೆ. ಇದು ೨೦೦೪ ಮತ್ತು ೨೦೧೧ ರಲ್ಲಿ ಅದೇ ಸ್ಥಾನದಲ್ಲಿದೆ. ಆದರೆ ೨೦೦೪ ಮತ್ತು ೨೦೧೧ರಲ್ಲಿ ರಾಮದುರ್ಗ ತಾಲೂಕು ದ್ವಿತೀಯ ಸ್ಥಾನವನ್ನು ಹೊಂದಿ, ಖಾನಾಪೂರ ಕೊನೆಯ ಸ್ಥಾನದಲ್ಲಿದೆ.

ಕೋಷ್ಟಕ : ೪.೨೭ ಮೆಕ್ಯಾನಿಕಲ್ ಇಂಜಿನಿಯರಿಂಗ

ಅ ಸಂ	ತಾಲೂಕು		೨೦೦೪	೨೦೦೫	೨೦೦೬	೨೦೦೭	೨೦೦೯	೨೦೧೦	೨೦೧೧	ಒಟ್ಟು
೧	ಅಥಣಿ	ಘ. ಸಂ.	೩೫	೩೭	೪೦	೫೦	೫೪	೫೬	೫೮	೩೩೦
		ಉ. ಸಂ	೨೫೦	೨೬೦	೨೭೦	೨೮೫	೩೦೯	೩೨೦	೩೨೮	೨೦೨೨
೨	ಬೈಲಹೊಂಗಲ	ಘ. ಸಂ.	೧೧೨	೧೧೭	೧೨೧	೧೩೩	೧೪೦	೧೪೨	೧೪೪	೯೦೯
		ಉ. ಸಂ	೮೩೬	೮೪೫	೮೫೬	೮೮೭	೯೧೦	೧೦೧೨	೧೦೨೫	೬೩೭೧
೩	ಬೆಳಗಾವಿ	ಘ. ಸಂ.	೨೧೩೫	೨೧೫೦	೨೨೨೦	೨೨೬೭	೨೩೬೬	೨೩೮೨	೨೩೮೬	೧೫೯೦೬
		ಉ. ಸಂ	೮೫೪೦	೮೫೯೫	೮೯೮೧	೯೦೧೫	೧೧೫೬೩	೧೧೮೪೦	೧೧೮೪೦	೭೦೩೭೪
೪	ಚಿಕ್ಕೋಡಿ	ಘ. ಸಂ.	೮೦೦	೮೧೦	೮೧೫	೮೨೫	೮೩೪	೮೩೮	೮೪೦	೫೭೬೨
		ಉ. ಸಂ	೧೮೭೫	೧೯೯೮	೯೧೧೫	೨೦೧೬	೨೦೪೬	೨೦೬೦	೨೦೬೮	೨೧೧೭೮
೫	ಗೋಕಾಕ	ಘ. ಸಂ.	೭೫	೮೦	೮೫	೯೨	೧೦೦	೧೦೨	೧೦೪	೬೩೮
		ಉ. ಸಂ	೧೩೦೦	೧೩೨೫	೧೩೩೨	೧೩೯೫	೧೪೧೫	೧೪೨೨	೧೪೩೨	೯೬೨೧
೬	ಹುಕ್ಕೇರಿ	ಘ. ಸಂ.	೬೫	೬೮	೭೫	೮೨	೯೦	೯೨	೯೪	೫೬೬
		ಉ. ಸಂ	೧೨೬೦	೧೨೭೬	೧೨೯೮	೧೩೭೫	೧೩೯೫	೧೪೦೧	೧೪೧೫	೯೪೨೦
೭	ಖಾನಾಪೂರ	ಘ. ಸಂ.	೪೦	೪೧	೪೬	೫೬	೬೫	೬೬	೬೭	೩೮೧
		ಉ. ಸಂ	೯೬೦	೯೬೪	೯೮೫	೧೦೩೨	೧೦೫೪	೧೦೫೮	೧೦೬೪	೭೧೧೭
೮	ರಾಯಬಾಗ	ಘ. ಸಂ.	೬೫	೬೮	೭೦	೭೮	೮೪	೮೫	೮೭	೫೩೭
		ಉ. ಸಂ	೭೮೦	೭೯೪	೮೧೦	೮೯೦	೯೦೪	೯೦೮	೯೧೮	೬೦೦೪
೯	ರಾಮದುರ್ಗ	ಘ. ಸಂ.	೭೪	೭೬	೮೦	೮೪	೯೨	೯೪	೯೨	೫೯೨
		ಉ. ಸಂ	೮೯೬	೯೧೫	೯೩೫	೧೦೦೯	೧೦೩೬	೧೦೪೦	೧೦೫೦	೬೮೮೧
೧೦	ಸವದತ್ತಿ	ಘ. ಸಂ.	೬೪	೬೬	೭೧	೮೦	೮೮	೯೧	೮೪	೫೪೪
		ಉ. ಸಂ	೬೫೬	೬೭೩	೬೮೫	೭೧೫	೭೨೮	೭೩೬	೭೪೦	೪೯೩೩
	ಒಟ್ಟು	ಘ. ಸಂ.	೩೪೬೫	೩೫೧೩	೩೬೨೩	೩೭೪೭	೩೯೧೩	೩೯೪೮	೩೯೬೬	೨೬೧೭೫
		ಉ. ಸಂ	೧೭೩೫೩	೧೭೫೪೫	೧೮೦೬೭	೧೮೬೧೯	೨೧೩೬೦	೨೧೭೯೭	೨೧೮೮೦	೧೩೬೬೨೧

ಘ. ಸಂ.: ಘಟಕಗಳ ಸಂಖ್ಯೆ   ಉ. ಸಂ: ಉದ್ಯೋಗಿಗಳ ಸಂಖ್ಯೆ

(ಮೂಲ : ಬೆಳಗಾವಿ ಜಿಲ್ಲೆಯ ಅಂಕಿ ಅಂಶಗಳ ನೋಟ, ೨೦೦೪ ರಿಂದ ೨೦೧೧, ಕ್ರೋಢಿಕೃತ)

(೨೦೦೪ ರಿಂದ ಕೈಗಾರಿಕೆಗಳನ್ನು ಮೇಲಿನಂತೆ ವರ್ಗೀಕರಿಸಿ, ಅಂಕಿ ಸಂಖ್ಯೆಗಳು ಲಭ್ಯವಿವೆ)

ಮೆಕ್ಯಾನಿಕಲ್ ಇಂಜಿನೀಯರಿಂಗ್ ಉದ್ದಿಮೆಗಳು ಬೆಳಗಾವಿ ಮತ್ತು ಚಿಕ್ಕೋಡಿಗಳಲ್ಲಿ ಕ್ರಮವಾಗಿ ಪ್ರಥಮ ಹಾಗೂ ದ್ವಿತೀಯ ಸ್ಥಾನ ಪಡೆದಿದ್ದು ೨೦೦೪ ಮತ್ತು ೨೦೧೧ ರಲ್ಲಿಯೂ ಅದೇ ಚಿತ್ರಣ ಕಾಣುತ್ತದೆ. ಈ ಉದ್ದಿಮೆಯು ಅಥಣಿ ತಾಲೂಕಿನಲ್ಲಿ ಕನಿಷ್ಠವಾದ ಸ್ಥಾನ ಹೊಂದಿದೆ.

ಕೋಷ್ಟಕ : ೪.೨೮ ಕಾಗದ ಮತ್ತು ಮುದ್ರಣ

ಅ ಸಂ	ತಾಲೂಕು		೨೦೦೪	೨೦೦೫	೨೦೦೬	೨೦೦೭	೨೦೦೯	೨೦೧೦	೨೦೧೧	ಒಟ್ಟು
೧	ಅಥಣಿ	ಘ. ಸಂ.	೨೪	೨೬	೨೮	೨೮	೩೦	೩೦	೩೦	೧೯೬
		ಉ. ಸಂ	೧೯೬	೨೦೬	೨೨೦	೨೨೦	೨೩೦	೨೩೦	೨೩೦	೧೫೩೨
೨	ಬೈಲಹೊಂಗಲ	ಘ. ಸಂ.	೬೦	೬೪	೬೭	೬೭	೭೦	೭೦	೭೦	೪೬೮
		ಉ. ಸಂ	೩೪೫	೩೪೫	೩೫೩	೩೫೩	೨೬೦	೨೬೦	೨೬೦	೨೧೭೬
೩	ಬೆಳಗಾವಿ	ಘ. ಸಂ.	೨೧೨	೨೧೮	೨೨೫	೨೨೭	೨೪೦	೨೪೧	೨೪೫	೧೬೦೮
		ಉ. ಸಂ	೮೪೮	೮೭೮	೯೧೯	೯೩೪	೧೦೫೨	೧೦೫೭	೧೦೭೦	೬೭೫೮
೪	ಚಿಕ್ಕೋಡಿ	ಘ. ಸಂ.	೪೫	೪೮	೫೦	೫೧	೫೪	೫೪	೫೫	೩೫೭
		ಉ. ಸಂ	೩೩೫	೩೫೦	೩೫೮	೩೬೫	೩೯೫	೩೯೫	೪೦೦	೨೫೯೮
೫	ಗೋಕಾಕ	ಘ. ಸಂ.	೪೮	೫೨	೫೨	೫೨	೫೬	೫೬	೫೭	೩೭೩
		ಉ. ಸಂ	೩೬೫	೨೭೮	೨೭೮	೨೭೮	೩೦೨	೩೦೨	೩೦೮	೨೧೧೧
೬	ಹುಕ್ಕೇರಿ	ಘ. ಸಂ.	೩೧	೩೪	೩೪	೩೪	೩೬	೩೬	೩೭	೨೪೨
		ಉ. ಸಂ	೨೨೫	೨೩೬	೨೩೬	೨೩೬	೨೪೮	೨೪೮	೨೫೪	೧೬೮೩
೭	ಖಾನಾಪೂರ	ಘ. ಸಂ.	೧೫	೧೬	೧೭	೧೭	೨೦	೨೦	೨೦	೧೨೫
		ಉ. ಸಂ	೧೫೬	೧೬೮	೧೬೮	೧೬೮	೧೭೫	೧೭೫	೧೭೫	೧೧೮೫
೮	ರಾಯಬಾಗ	ಘ. ಸಂ.	೧೭	೧೯	೧೯	೧೯	೨೦	೨೦	೨೦	೧೩೪
		ಉ. ಸಂ	೧೮೫	೧೯೨	೧೯೨	೧೯೨	೧೯೮	೧೯೮	೧೯೮	೧೩೫೫
೯	ರಾಮದುರ್ಗ	ಘ. ಸಂ.	೧೨	೧೩	೧೩	೧೩	೧೪	೧೪	೧೪	೯೩
		ಉ. ಸಂ	೧೬೪	೧೭೨	೧೭೨	೧೭೨	೧೭೪	೧೭೪	೧೭೪	೧೨೦೨
೧೦	ಸವದತ್ತಿ	ಘ. ಸಂ.	೧೪	೧೫	೧೫	೧೫	೧೬	೧೬	೧೬	೧೦೭
		ಉ. ಸಂ	೧೫೬	೧೬೮	೧೬೮	೧೬೮	೧೭೨	೧೭೨	೧೭೨	೧೧೭೬
	ಒಟ್ಟು	ಘ. ಸಂ.	೪೭೮	೫೦೫	೫೨೦	೫೨೩	೫೫೬	೫೫೭	೫೬೪	೩೭೦೩
		ಉ. ಸಂ	೨೮೭೫	೨೯೯೩	೩೦೬೪	೩೦೮೬	೩೨೦೬	೩೨೧೧	೩೨೪೧	೨೧೬೭೬

ಘ. ಸಂ.: ಘಟಕಗಳ ಸಂಖ್ಯೆ ಉ. ಸಂ: ಉದ್ಯೋಗಿಗಳ ಸಂಖ್ಯೆ

(ಮೂಲ : ಬೆಳಗಾವಿ ಜಿಲ್ಲೆಯ ಅಂಕಿ ಅಂಶಗಳ ನೋಟ, ೨೦೦೪ ರಿಂದ ೨೦೧೧, ಕ್ರೋಢಿಕೃತ)

(೨೦೦೪ ರಿಂದ ಕೈಗಾರಿಕೆಗಳನ್ನು ಮೇಲಿನಂತೆ ವರ್ಗೀಕರಿಸಿ, ಅಂಕಿ ಸಂಖ್ಯೆಗಳು ಲಭ್ಯವಿವೆ)

ಕಾಗದ ಮತ್ತು ಮುದ್ರಣ ಉದ್ದಿಮೆಯಲ್ಲಿ ಬೆಳಗಾವಿಯು ಎತ್ತರರದ ಸ್ಥಾನ ಹೊಂದಿದೆ. ಗೋಕಾಕ ದ್ವಿತೀಯ ಸ್ಥಾನವನ್ನು ಮತ್ತು ರಾಮದುರ್ಗ ತಾಲ್ಲೂಕು ಕೊನೆಯ ಸ್ತಾನ ಹೊಂದಿರುವುದು ಕೋಷ್ಟಕದಿಂದ ತಿಳಿದು ಬರುತ್ತದೆ.

ಕೋಷ್ಟಕ : ೪.೨೯ ರಬ್ಬರ್ ಮತ್ತು ಪ್ಲಾಸ್ಟಿಕ್

ಅ ಸಂ	ತಾಲೂಕು		೨೦೦೪	೨೦೦೫	೨೦೦೬	೨೦೦೭	೨೦೦೯	೨೦೧೦	೨೦೧೧	ಒಟ್ಟು
೧	ಅಥಣಿ	ಘ. ಸಂ.	೧೧	೧೨	೧೨	೧೪	೧೪	೧೪	೧೪	೯೧
		ಉ. ಸಂ	೩೫	೪೦	೪೦	೫೦	೫೮	೫೮	೫೮	೩೩೯
೨	ಬೈಲಹೊಂಗಲ	ಘ. ಸಂ.	೨೨	೨೨	೨೨	೨೩	೨೫	೨೫	೨೮	೧೬೭
		ಉ. ಸಂ	೮೫	೮೫	೮೫	೯೦	೧೦೫	೧೦೫	೧೨೫	೬೮೦
೩	ಬೆಳಗಾವಿ	ಘ. ಸಂ.	೬೦	೬೫	೬೯	೭೪	೮೫	೯೧	೧೦೧	೫೪೫
		ಉ. ಸಂ	೨೪೫	೨೬೫	೨೮೩	೩೦೩	೩೫೯	೩೮೦	೪೨೦	೨೨೫೫
೪	ಚಿಕ್ಕೋಡಿ	ಘ. ಸಂ.	೧೫	೧೬	೧೬	೧೬	೧೯	೨೦	೨೨	೧೨೪
		ಉ. ಸಂ	೬೫	೭೦	೭೦	೭೦	೯೪	೧೦೦	೧೧೫	೫೮೪
೫	ಗೋಕಾಕ	ಘ. ಸಂ.	೧೮	೧೯	೧೯	೨೨	೨೫	೨೬	೨೮	೧೫೭
		ಉ. ಸಂ	೯೫	೧೦೦	೧೦೦	೧೧೩	೧೨೮	೧೩೨	೧೫೨	೮೨೦
೬	ಹುಕ್ಕೇರಿ	ಘ. ಸಂ.	೦೮	೧೦	೧೦	೧೦	೧೧	೧೨	೧೨	೭೩
		ಉ. ಸಂ	೩೨	೩೮	೩೮	೩೮	೪೨	೪೭	೪೭	೨೮೨
೭	ಖಾನಾಪೂರ	ಘ. ಸಂ.	೧೨	೧೨	೧೨	೧೩	೧೬	೧೭	೧೭	೯೯
		ಉ. ಸಂ	೫೦	೫೦	೫೦	೫೬	೧೩೫	೧೪೨	೧೪೨	೬೨೫
೮	ರಾಯಬಾಗ	ಘ. ಸಂ.	೦೪	೦೪	೦೬	೦೭	೦೮	೧೨	೧೨	೫೩
		ಉ. ಸಂ	೧೨	೧೨	೩೧	೪೫	೪೮	೬೪	೬೪	೨೭೬
೯	ರಾಮದುರ್ಗ	ಘ. ಸಂ.	೦೫	೦೫	೦೫	೦೬	೦೭	೦೯	೧೦	೪೭
		ಉ. ಸಂ	೨೨	೨೨	೨೨	೨೮	೩೨	೪೪	೬೪	೨೩೪
೧೦	ಸವದತ್ತಿ	ಘ. ಸಂ.	೦೬	೦೬	೦೬	೦೬	೦೭	೧೦	೧೨	೫೩
		ಉ. ಸಂ	೨೬	೨೬	೨೬	೨೬	೩೦	೪೫	೭೫	೨೫೪
	ಒಟ್ಟು	ಘ. ಸಂ.	೧೬೧	೧೭೧	೧೭೭	೧೯೧	೨೧೭	೨೩೬	೨೫೬	೧೪೦೯
		ಉ. ಸಂ	೬೬೭	೭೦೮	೭೪೫	೮೧೯	೧೦೩೧	೧೧೧೭	೧೨೬೨	೬೩೪೯

ಘ. ಸಂ.: ಘಟಕಗಳ ಸಂಖ್ಯೆ   ಉ. ಸಂ: ಉದ್ಯೋಗಿಗಳ ಸಂಖ್ಯೆ

(ಮೂಲ : ಬೆಳಗಾವಿ ಜಿಲ್ಲೆಯ ಅಂಕಿ ಅಂಶಗಳ ನೋಟ, ೨೦೦೪ ರಿಂದ ೨೦೧೧, ಕ್ರೋಢಿಕೃತ)

(೨೦೦೪ ರಿಂದ ಕೈಗಾರಿಕೆಗಳನ್ನು ಮೇಲಿನಂತೆ ವರ್ಗೀಕರಿಸಿ, ಅಂಕಿ ಸಂಖ್ಯೆಗಳು ಲಭ್ಯವಿವೆ)

ರಬ್ಬರ್ ಮತ್ತು ಪ್ಲಾಸ್ಟಿಕ್ ಉದ್ದಿಮೆಯೂ ಸಹ ಬೆಳಗಾವಿಯಲ್ಲಿಯೇ ಕೇಂದ್ರಿಕೃತವಾಗಿದ್ದು ಸಹಜವಾಗಿ ಕಾಣುತ್ತದೆ, ರಾಮದುರ್ಗ ಕೊನೆಯ ಸ್ಥಾನದಲ್ಲಿದೆ.

ಕೋಷ್ಟಕ : ೪.೩೦ ಟೆಕ್ಸ್‌ಟೈಲ್ಸ

ಅ ಸಂ	ತಾಲೂಕು		೨೦೦೪	೨೦೦೫	೨೦೦೬	೨೦೦೭	೨೦೦೯	೨೦೧೦	೨೦೧೧	ಒಟ್ಟು
೧	ಅಥಣಿ	ಘ. ಸಂ.	೨೧೫	೨೨೦	೨೨೫	೨೩೫	೨೫೫	೨೬೬	೨೭೫	೧೬೯೧
		ಉ. ಸಂ	೬೪೫	೬೬೫	೬೮೦	೭೧೦	೭೩೦	೭೫೬	೩೭೮	೪೫೬೪
೨	ಬೈಲಹೊಂಗಲ	ಘ. ಸಂ.	೩೫೦	೩೬೦	೩೭೫	೩೮೫	೪೧೬	೪೩೦	೪೬೦	೨೭೭೬
		ಉ. ಸಂ	೧೨೨೫	೧೨೪೫	೧೨೯೪	೧೩೨೦	೧೩೫೬	೧೩೯೫	೧೫೨೫	೯೩೬೦
೩	ಬೆಳಗಾವಿ	ಘ. ಸಂ.	೬೩೦	೬೩೫	೬೪೫	೬೫೫	೧೦೨೯	೧೨೯೯	೧೪೫೦	೬೩೪೩
		ಉ. ಸಂ	೨೬೦೦	೨೬೩೦	೨೬೫೫	೨೭೧೫	೩೪೦೮	೩೫೫೦	೩೯೨೦	೨೧೪೭೮
೪	ಚಿಕ್ಕೋಡಿ	ಘ. ಸಂ.	೩೨೫	೩೨೮	೩೪೮	೩೬೨	೪೩೦	೪೫೬	೫೬೦	೨೮೦೯
		ಉ. ಸಂ	೧೨೭೫	೧೨೯೦	೧೩೦೫	೧೩೩೫	೧೪೬೦	೧೫೧೬	೧೮೭೨	೧೦೦೫೩
೫	ಗೋಕಾಕ	ಘ. ಸಂ.	೩೨೮	೩೩೬	೩೪೨	೩೫೭	೩೭೬	೪೦೨	೪೫೬	೨೫೯೭
		ಉ. ಸಂ	೧೩೧೨	೧೩೩೨	೧೩೪೫	೧೩೬೫	೧೪೨೫	೧೪೫೬	೧೫೯೬	೯೮೩೧
೬	ಹುಕ್ಕೇರಿ	ಘ. ಸಂ.	೧೮೭	೧೯೦	೧೯೫	೨೦೪	೨೨೦	೨೨೮	೨೬೫	೧೪೮೯
		ಉ. ಸಂ	೫೩೪	೫೪೮	೫೮೫	೬೧೦	೬೪೫	೬೭೫	೮೭೬	೪೪೭೩
೭	ಖಾನಾಪೂರ	ಘ. ಸಂ.	೭೫	೭೭	೮೩	೯೮	೧೩೦	೧೬೦	೧೮೫	೮೦೮
		ಉ. ಸಂ	೨೨೫	೨೩೮	೩೪೭	೩೭೮	೪೮೦	೫೨೬	೭೨೮	೨೯೨೨
೮	ರಾಯಬಾಗ	ಘ. ಸಂ.	೮೦	೮೪	೮೮	೯೩	೧೧೫	೧೨೮	೧೬೫	೭೫೩
		ಉ. ಸಂ	೩೨೬	೩೩೮	೩೫೪	೩೮೦	೪೧೦	೪೩೬	೫೮೫	೨೮೨೯
೯	ರಾಮದುರ್ಗ	ಘ. ಸಂ.	೧೧೫	೧೨೧	೧೨೬	೧೩೪	೧೫೦	೧೮೦	೨೧೦	೧೦೩೬
		ಉ. ಸಂ	೩೪೫	೩೫೪	೩೭೧	೩೯೮	೪೪೫	೫೧೦	೭೩೫	೩೧೫೮
೧೦	ಸವದತ್ತಿ	ಘ. ಸಂ.	೨೧೨	೨೧೫	೨೩೯	೨೪೮	೨೭೪	೨೮೫	೨೫೦	೧೭೨೩
		ಉ. ಸಂ	೮೩೬	೮೪೫	೮೬೫	೯೧೨	೧೦೧೫	೧೦೬೫	೧೦೮೫	೬೬೨೩
	ಒಟ್ಟು	ಘ. ಸಂ.	೨೫೧೭	೨೫೬೬	೨೬೬೬	೨೭೭೧	೩೩೯೫	೩೮೩೩	೪೨೭೬	೨೨೦೨೪
		ಉ. ಸಂ	೯೩೨೨	೯೪೮೫	೯೮೦೧	೧೦೧೨೩	೧೧೩೭೪	೧೧೮೮೫	೧೩೮೦೦	೫೭೭೯೦

ಘ. ಸಂ.: ಘಟಕಗಳ ಸಂಖ್ಯೆ   ಉ. ಸಂ: ಉದ್ಯೋಗಿಗಳ ಸಂಖ್ಯೆ

(ಮೂಲ : ಬೆಳಗಾವಿ ಜಿಲ್ಲೆಯ ಅಂಕಿ ಅಂಶಗಳ ನೋಟ, ೨೦೦೪ ರಿಂದ ೨೦೧೧, ಕ್ರೋಢಿಕೃತ)

(೨೦೦೪ ರಿಂದ ಕೈಗಾರಿಕೆಗಳನ್ನು ಮೇಲಿನಂತೆ ವರ್ಗೀಕರಿಸಿ, ಅಂಕಿ ಸಂಖ್ಯೆಗಳು ಲಭ್ಯವಿವೆ)

ಟೆಕ್ಸ್‌ಟೈಲ್ಸ್‌ನಲ್ಲಿಯೂ ಬೆಳಗಾವಿ ತಾಲೂಕಿನದೆ ಪ್ರಥಮ ಸ್ಥಾನವಾಗಿದೆ. ೨೦೦೪ ರಲ್ಲಿ ಬೈಲಹೊಂಗಲ ದ್ವಿತೀಯ ಸ್ಥಾನದಲ್ಲಿದ್ದರೆ, ೨೦೧೧ ರಲ್ಲಿ ದ್ವಿತೀಯ ಸ್ಥಾನಕ್ಕೇರಿದೆ. ೨೦೦೪ರಲ್ಲಿ ಖಾನಾಪೂರ ಕೊನೆಯ ಸ್ಥಾನದಲ್ಲಿದ್ದರೆ. ೨೦೧೧ ರಲ್ಲಿ ರಾಯಬಾಗ ತಾಲೂಕು ಆ ಸ್ಥಾನದಲ್ಲಿದ್ದುದು ಸ್ಪಷ್ಟವಾಗಿದೆ.

ಕೋಷ್ಟಕ : ೪.೩೧ ಮರದ ಉದ್ದಿಮೆ

ಅ ಸಂ	ತಾಲೂಕು		೨೦೦೪	೨೦೦೫	೨೦೦೬	೨೦೦೭	೨೦೦೯	೨೦೧೦	೨೦೧೧	ಒಟ್ಟು
೧	ಅಥಣಿ	ಘ. ಸಂ.	೨೨೫	೨೩೦	೨೪೫	೨೫೦	೨೭೫	೨೮೨	೨೯೫	೧೮೦೨
		ಉ. ಸಂ	೭೮೭	೮೩೦	೮೬೫	೯೧೫	೯೮೦	೧೦೦೫	೧೦೪೫	೬೪೨೭
೨	ಬೈಲಹೊಂಗಲ	ಘ. ಸಂ.	೬೫೦	೬೫೮	೬೭೫	೭೧೫	೭೫೫	೭೬೮	೭೮೫	೫೦೦೬
		ಉ. ಸಂ	೨೨೦೦	೨೨೨೧	೨೨೭೬	೨೩೩೫	೨೩೮೦	೨೪೩೬	೨೪೭೮	೧೬೩೨೬
೩	ಬೆಳಗಾವಿ	ಘ. ಸಂ.	೨೧೨	೨೧೫	೨೩೦	೨೪೦	೨೬೫	೨೯೬	೩೦೫	೧೭೬೩
		ಉ. ಸಂ	೪೨೬	೪೫೨	೪೯೮	೫೩೮	೭೭೫	೮೨೫	೯೩೫	೪೪೪೯
೪	ಚಿಕ್ಕೋಡಿ	ಘ. ಸಂ.	೪೩೦	೪೩೬	೪೫೬	೪೬೮	೫೬೧	೫೭೨	೫೯೦	೩೫೧೩
		ಉ. ಸಂ	೧೨೯೦	೧೩೧೦	೧೩೭೧	೧೪೩೨	೧೫೨೫	೧೫೮೮	೧೬೨೫	೧೦೧೪೧
೫	ಗೋಕಾಕ	ಘ. ಸಂ.	೪೪೦	೪೪೫	೪೬೪	೪೯೫	೫೨೮	೫೪೨	೫೬೫	೩೪೭೯
		ಉ. ಸಂ	೧೦೮೦	೧೦೯೮	೧೧೪೬	೧೧೯೮	೧೨೬೫	೧೨೮೦	೧೪೨೦	೮೪೮೭
೬	ಹುಕ್ಕೇರಿ	ಘ. ಸಂ.	೩೮೫	೩೯೧	೪೧೨	೪೩೯	೪೭೦	೪೮೪	೪೯೬	೩೦೭೭
		ಉ. ಸಂ	೭೭೦	೭೮೫	೮೧೨	೮೮೫	೯೭೦	೯೮೫	೧೨೨೦	೬೪೨೭
೭	ಖಾನಾಪೂರ	ಘ. ಸಂ.	೨೪೨	೨೪೭	೨೬೮	೨೮೫	೩೦೧	೩೩೨	೩೪೮	೨೦೨೩
		ಉ. ಸಂ	೬೮೪	೬೯೬	೭೭೨	೭೯೫	೮೧೨	೯೧೫	೯೮೦	೫೬೫೪
೮	ರಾಯಬಾಗ	ಘ. ಸಂ.	೧೬೮	೧೭೫	೧೯೦	೧೯೮	೨೨೦	೨೩೧	೨೪೨	೧೪೨೪
		ಉ. ಸಂ	೪೮೫	೫೦೨	೫೩೨	೫೭೫	೬೧೫	೬೭೫	೮೨೫	೪೨೦೯
೯	ರಾಮದುರ್ಗ	ಘ. ಸಂ.	೧೪೬	೧೪೯	೧೬೩	೧೭೮	೨೦೫	೨೨೮	೨೪೮	೧೩೧೭
		ಉ. ಸಂ	೭೨೦	೭೩೨	೭೬೪	೭೮೫	೮೩೭	೯೧೫	೯೬೬	೫೭೧೯
೧೦	ಸವದತ್ತಿ	ಘ. ಸಂ.	೩೮೭	೩೯೧	೪೦೧	೪೨೭	೪೪೧	೪೫೮	೪೯೪	೨೯೯೯
		ಉ. ಸಂ	೧೧೬೧	೧೧೬೫	೧೧೯೦	೧೨೩೩	೧೨೬೨	೧೨೮೦	೧೩೧೦	೮೬೦೧
	ಒಟ್ಟು	ಘ. ಸಂ.	೩೨೮೫	೩೩೩೭	೩೫೦೪	೩೬೯೫	೪೦೨೧	೪೧೯೩	೪೩೬೮	೨೬೪೦೩
		ಉ. ಸಂ	೯೬೦೩	೯೭೯೧	೧೦೨೨೬	೧೦೬೯೧	೧೧೪೨೧	೧೧೯೦೪	೧೨೮೦೪	೭೬೪೪೦

ಘ. ಸಂ: ಘಟಕಗಳ ಸಂಖ್ಯೆ ಉ. ಸಂ: ಉದ್ಯೋಗಿಗಳ ಸಂಖ್ಯೆ

(ಮೂಲ : ಬೆಳಗಾವಿ ಜಿಲ್ಲೆಯ ಅಂಕಿ ಅಂಶಗಳ ನೋಟ, ೨೦೦೪ ರಿಂದ ೨೦೧೧, ಕ್ರೋಢಿಕೃತ)

(೨೦೦೪ ರಿಂದ ಕೈಗಾರಿಕೆಗಳನ್ನು ಮೇಲಿನಂತೆ ವರ್ಗೀಕರಿಸಿ, ಅಂಕಿ ಸಂಖ್ಯೆಗಳು ಲಭ್ಯವಿವೆ)

ಮರದ ಉದ್ದಿಮೆಯಲ್ಲಿ ಚಿತ್ರಣ ಸಂಪೂರ್ಣವಾಗಿ ಬೇರೆಯಾಗಿದೆ. ಬೈಲಹೊಂಗಲ ೨೦೦೪ ಮತ್ತು ೨೦೧೧ ಪ್ರಥಮ ಸ್ಥಾನದಲ್ಲಿದೆ. ಆದರೆ ೨೦೦೪ ರಲ್ಲಿ ಗೋಕಾಕ ದ್ವಿತೀಯ ಸ್ಥಾನದಲ್ಲಿದ್ದು ೨೦೧೧ ರಲ್ಲಿ ಚಿಕ್ಕೋಡಿ ಆ ಸ್ಥಾನ ಪಡೆದಿದೆ. ಅದರಂತೆ, ೨೦೦೪ರಲ್ಲಿ ರಾಮದುರ್ಗ ಕೊನೆಯ ಸ್ಥಾನದಲ್ಲಿದ್ದರೆ, ೨೦೧೧ರಲ್ಲಿ ರಾಯಬಾಗ ಕೊನೆಯ ಸ್ಥಾನದಲ್ಲಿದೆ.

ಕೋಷ್ಠಕ : ೪.೩೩ ಇತರೆ

ಅ ಸಂ	ತಾಲೂಕು		೨೦೦೪	೨೦೦೫	೨೦೦೬	೨೦೦೭	೨೦೦೯	೨೦೧೦	೨೦೧೧	ಒಟ್ಟು
೧	ಅಥಣಿ	ಘ. ಸಂ.	೨೬೧	೨೬೫	೨೭೦	೨೮೫	೩೪೦	೩೨೮	೩೪೮	೨೦೯೭
		ಉ. ಸಂ	೧೫೨೫	೧೫೫೧	೧೫೭೪	೧೫೯೬	೧೬೪೫	೧೬೬೨	೧೬೬೫	೧೧೨೧೮
೨	ಬೈಲಹೊಂಗಲ	ಘ. ಸಂ.	೨೬೯	೨೭೩	೨೭೮	೨೯೫	೩೫೦	೩೫೪	೩೬೫	೨೧೮೪
		ಉ. ಸಂ	೧೮೧೦	೧೮೧೮	೧೮೪೮	೧೮೯೮	೧೯೬೪	೧೯೮೭	೨೦೧೦	೧೩೩೩೫
೩	ಬೆಳಗಾವಿ	ಘ. ಸಂ.	೧೮೬೬	೧೮೭೩	೧೮೮೧	೧೮೮೫	೧೯೪೦	೧೯೬೦	೨೦೧೫	೧೩೪೨೦
		ಉ. ಸಂ	೬೫೯೫	೬೭೧೫	೬೭೩೫	೬೭೯೫	೭೦೪೪	೮೦೯೧	೮೬೧೨	೫೦೫೮೭
೪	ಚಿಕ್ಕೋಡಿ	ಘ. ಸಂ.	೯೬೭	೯೮೨	೯೯೨	೧೦೨೪	೧೦೫೨	೧೦೬೦	೧೧೩೪	೭೨೧೧
		ಉ. ಸಂ	೩೭೬೬	೩೭೯೨	೩೮೧೬	೩೯೧೨	೩೯೭೮	೪೦೧೨	೪೦೪೫	೨೭೩೨೧
೫	ಗೋಕಾಕ	ಘ. ಸಂ.	೨೪೪	೨೫೪	೨೬೫	೨೭೫	೩೪೮	೩೫೬	೩೭೮	೨೧೨೦
		ಉ. ಸಂ	೧೩೪೯	೧೪೫೭	೧೪೭೮	೧೫೧೨	೧೫೬೨	೧೫೮೯	೧೬೦೧	೧೦೫೪೮
೬	ಹುಕ್ಕೇರಿ	ಘ. ಸಂ.	೯೯೦	೧೦೦೨	೧೦೧೦	೧೦೧೪	೧೦೨೫	೧೦೩೨	೧೧೧೭	೭೧೯೦
		ಉ. ಸಂ	೩೯೮೦	೩೯೮೦	೪೦೦೫	೪೦೫೦	೪೦೮೦	೪೦೯೮	೪೧೨೦	೨೮೩೧೩
೭	ಖಾನಾಪೂರ	ಘ. ಸಂ.	೨೬೩	೨೭೭	೨೮೫	೨೯೦	೩೫೦	೩೫೪	೩೭೫	೨೧೯೪
		ಉ. ಸಂ	೨೮೭೦	೨೮೯೯	೨೯೧೬	೨೯೬೬	೩೦೧೫	೩೦೬೫	೩೦೮೦	೨೦೮೧೧
೮	ರಾಯಬಾಗ	ಘ. ಸಂ.	೩೨೧	೩೩೫	೩೪೩	೩೪೩	೩೯೪	೪೦೫	೪೩೫	೨೫೭೬
		ಉ. ಸಂ	೨೦೪೨	೨೦೬೨	೨೦೮೮	೨೧೩೮	೨೧೫೭	೨೨೫೬	೨೨೭೨	೧೫೦೧೫
೯	ರಾಮದುರ್ಗ	ಘ. ಸಂ.	೩೫೪	೩೬೬	೩೭೫	೩೮೦	೩೯೭	೪೦೫	೪೧೫	೨೬೯೨
		ಉ. ಸಂ	೧೧೦೪	೧೧೩೮	೧೧೪೦	೧೧೯೫	೧೨೨೫	೧೨೩೫	೧೨೮೧	೮೩೧೮
೧೦	ಸವದತ್ತಿ	ಘ. ಸಂ.	೩೬೩	೩೮೨	೩೮೯	೩೯೦	೪೧೫	೪೨೨	೪೩೬	೨೭೯೭
		ಉ. ಸಂ	೧೦೭೪	೧೦೭೪	೧೧೨೫	೧೧೫೫	೧೨೦೦	೧೨೩೮	೧೨೫೮	೮೧೨೪
	ಒಟ್ಟು	ಘ. ಸಂ.	೫೮೯೮	೬೦೦೯	೬೦೮೮	೬೧೮೧	೬೬೧೧	೬೬೭೬	೭೦೧೮	೪೪೪೮೧
		ಉ. ಸಂ	೨೬೧೧೫	೨೬೪೮೬	೨೬೭೨೫	೨೭೨೧೭	೨೭೮೭೦	೨೯೨೩೩	೨೯೯೪೪	೧೯೩೫೯೦

ಘ. ಸಂ.: ಘಟಕಗಳ ಸಂಖ್ಯೆ   ಉ. ಸಂ: ಉದ್ಯೋಗಿಗಳ ಸಂಖ್ಯೆ

(ಮೂಲ : ಬೆಳಗಾವಿ ಜಿಲ್ಲೆಯ ಅಂಕಿ ಅಂಶಗಳ ನೋಟ, ೨೦೦೪ ರಿಂದ ೨೦೧೧, ಕ್ರೋಢಿಕೃತ)

(೨೦೦೪ ರಿಂದ ಕೈಗಾರಿಕೆಗಳನ್ನು ಮೇಲಿನಂತೆ ವರ್ಗೀಕರಿಸಿ, ಅಂಕಿ ಸಂಖ್ಯೆಗಳು ಲಭ್ಯವಿವೆ)


ಇತರೆ ಉದ್ಯೋಗಗಳಲ್ಲಿಯೂ ಕೂಡಾ ಬೆಳಗಾವಿ ತಾಲೂಕಿನದೆ ಮಹತ್ವದ ಸ್ಥಾನವಿದ್ದು ೨೦೦೪ ಮತ್ತು ೨೦೧೧ ರಲ್ಲಿ ಅದೇ ಸ್ಥಾನ ಹೊಂದಿದೆ. ಆದರೆ , ಅಥಣಿ ತಾಲೂಕು ಕೊನೆಯ ಸ್ಥಾನದಲ್ಲಿದ್ದುದು ಕಂಡು ಬರುತ್ತದೆ.

ಕೋಷ್ಟಕ: ೪.೩೪


ಕ್ರ ಸಂ	ಉದ್ಯಮಗಳು	೨೦೦೪				೨೦೧೧			
		ಘಟಕಗಳ ಸಂಖ್ಯೆ	ಘಟಕಗಳ ಪ್ರತಿಶತ ಪ್ರಮಾಣ	ಉದ್ಯೋಗಿಗಳ ಸಂಖ್ಯೆ	ಘಟಕಗಳ ಪ್ರತಿಶತ ಪ್ರಮಾಣ	ಘಟಕಗಳ ಸಂಖ್ಯೆ	ಘಟಕಗಳ ಪ್ರತಿಶತ ಪ್ರಮಾಣ	ಉದ್ಯೋಗಿಗಳ ಸಂಖ್ಯೆ	ಘಟಕಗಳ ಪ್ರತಿಶತ ಪ್ರಮಾಣ
೧	ಆಟೋಮೊಬೈಲ್ಸ್	೮೫	೦.೩೧	೪೪೨	೦.೩೮	೧೩೪	೦.೩೮	೭೦೮	೦.೪೯
೨	ಎಲೆಕ್ಟ್ರಾನಿಕ್ಸ್ ಮತ್ತು ಎಲೆಕ್ಟ್ರಿಕಲ್ಸ್	೧೧೫೭	೪.೨೪	೩೫೪೯	೩.೦೮	೧೪೦೨	೩.೯೬	೪೧೬೧	೨.೮೬
೩	ಕೆಮಿಕಲ್ಸ್	೧೧೮	೦.೪೩	೭೬೬	೦.೬೬	೨೦೩	೦.೫೭	೧೩೮೧	೦.೯೫
೪	ಫೆರಸ್ ಮತ್ತು ನಾನ್-ಫೆರಸ್	೧೨೬	೦.೪೬	೭೭೫	೦.೬೭	೧೬೨	೦.೪೬	೧೧೧೧	೦.೭೬
೫	ಆಹಾರ ಮತ್ತು ಮಾದಕ ವಸ್ತುಗಳ	೨೮೦೦	೧೦.೨೭	೧೫೮೪	೧.೩೭	೩೪೩೬	೯.೭೦	೧೯೫೬೮	೧೩.೪೪
೬	ಗ್ಲಾಸ್ ಮತ್ತು ಸಿರಾಮಿಕ್ಸ್	೨೩೬೫	೮.೬೭	೯೨೯೦	೮.೦೬	೨೮೦೨	೭.೯೧	೧೧೫೨೬	೭.೯೧
೭	ಜಾಬ್ ವರ್ಕ್ಸ್ ಮತ್ತು ರಿಪೇರಿ	೨೯೯೪	೧೦.೯೮	೧೨೮೬೭	೧೧.೦೬	೩೭೨೯	೧೦.೫೩	೧೬೭೫೨	೧೧.೫೦
೮	ಚರ್ಮೋದ್ಯಮ	೨೨೨೯	೮.೧೭	೫೭೭೩	೫.೦೦	೩೦೯೭	೮.೭೫	೭೪೯೭	೫.೧೪
೯	ಮೆಕ್ಯಾನಿಕಲ್ ಇಂಜಿನೀಯರಿಂಗ್	೩೪೬೫	೧೨.೭೧	೧೭೩೫೩	೧೫.೦೬	೩೯೬೬	೧೧.೨೦	೨೧೮೮೦	೧೫.೦೨
೧೦	ಕಾಗದ ಮತ್ತು ಮುದ್ರಣ	೪೭೮	೧.೭೫	೨೮೭೫	೨.೪೯	೫೬೪	೧.೫೯	೩೨೪೧	೨.೨೩
೧೧	ರಬ್ಬರ್ ಮತ್ತು ಪ್ಲಾಸ್ಟಿಕ್	೧೬೧	೦.೫೯	೬೬೭	.೫೮	೨೫೬	೦.೭೩	೧೨೬೨	೦.೮೭
೧೨	ಟೆಕ್ಸ್‌ಟೈಲ್ಸ್	೨೫೧೭	೯.೨೩	೯೩೨೩	೮.೦೯	೪೨೭೬	೧೨.೦೭	೧೩೮೦೦	೯.೪೮
೧೩	ಮರ	೩೨೮೫	೧೨.೦೫	೯೬೦೩	೮.೩೩	೪೩೬೮	೧೨.೩೩	೧೨೮೦೪	೮.೭೯
೧೪	ಇತರೆ	೫೮೯೮	೨೧.೬೩	೨೬೧೧೫	೨೨.೬೬	೭೦೧೮	೧೯.೮೨	೨೯೯೪೪	೨೦.೫೬
		೨೭೨೬೮	೧೦೦.೦೦	೧೧೫೨೫೨	೧೦೦.೦೦	೩೫೪೧೩	೧೦೦.೦೦	೧೪೫೬೩೫	೧೦೦.೦೦

ನಕ್ಷೆ ೪.೮ ಜಿಲ್ಲೆಯ ವಿವಿಧ ಸಣ್ಣ ಕೈಗಾರಿಕಾ ಘಟಕಗಳ ಪ್ರತಿಶತ ಪ್ರಮಾಣ


(೨೦೦೪ರಲ್ಲಿ ಇದ್ದಂತೆ)




ನಕ್ಷೆ ೪.೯ ಜಿಲ್ಲೆಯ ವಿವಿಧ ಸಣ್ಣ ಕೈಗಾರಿಕಾ ಘಟಕಗಳಲ್ಲಿನ ಕಾರ್ಮಿಕರ ಪ್ರತಿಶತ ಪ್ರಮಾಣ (೨೦೦೪ರಲ್ಲಿ ಇದ್ದಂತೆ)



ನಕ್ಷೆ ೪.೧೦ ಜಿಲ್ಲೆಯ ವಿವಿಧ ಸಣ್ಣ ಕೈಗಾರಿಕೆ ಘಟಕಗಳ ಪ್ರತಿಶತ ಪ್ರಮಾಣ (೨೦೧೧ರಲ್ಲಿ ಇದ್ದಂತೆ)	ನಕ್ಷೆ ೪.೧೧ ಜಿಲ್ಲೆಯ ವಿವಿಧ ಸಣ್ಣ ಕೈಗಾರಿಕೆ ಘಟಕಗಳಲ್ಲಿನ ಕಾರ್ಮಿಕರ ಪ್ರತಿಶತ ಪ್ರಮಾಣ (೨೦೧೧ರಲ್ಲಿ ಇದ್ದಂತೆ)





ಒಟ್ಟಾರೆಯಾಗಿ , ಬೆಳಗಾವಿ ತಾಲೂಕು ಕ್ಷೇತ್ರದಲ್ಲಿ ಏಳನೇಯ ಸ್ಥಾನ ಹೊಂದಿದ್ದರೂ ಸಹ ಬಹುತೇಕ ಸಣ್ಣ ಉದ್ದಿಮೆಗಳು ಅಲ್ಲಿಯೇ ಕೇಂದ್ರೀಕೃತಗೊಂಡಿವೆ. ಗ್ಯಾಸ್ ಉದ್ದಿಮೆಯಲ್ಲಿ ಚಿಕ್ಕೋಡಿ, ಚರ್ಮೋದ್ದಿಮೆಯಲ್ಲಿ ಅಥಣಿ, ಮರದ ಕ್ಷೇತ್ರದಲ್ಲಿ ಬೈಲಹೊಂಗಲ ಮುಂಚೂಣಿಯಲ್ಲಿದ್ದುದು ಮುಖ್ಯವೆನಿಸುತ್ತದೆ. ಆದ್ದರಿಂದ ಜಿಲ್ಲೆಯಲ್ಲಿ ಕೇಂದ್ರಿತಗೊಳ್ಳುತ್ತಿರುವ ಉದ್ದಿಮೆಗಳನ್ನು ಇನ್ನಿತರ ತಾಲೂಕುಗಳಿಗೆ ವಿಕೇಂದ್ರಿಕರಣಗೊಳಿಸುವ ಅವಶ್ಯಕತೆ ಕಂಡು ಬರುತ್ತದೆ.

ಈ ನಿಟ್ಟಿನಲ್ಲಿ ಇನ್ನಿತರ ತಾಲೂಕುಗಳಲ್ಲಿ ವಿಶೇಷ ಆರ್ಥಿಕ ವಲಯಗಳು ಸ್ಥಾಪನೆಗೊಂಡು , ಜಿಲ್ಲೆಯ ಎಲ್ಲ ತಾಲೂಕುಗಳ ಪ್ರಗತಿ ಸಾಧಿಸುವಂತಹ ಕ್ರಮಕೈಗೊಂಡು, ಪ್ರಾದೇಶಿಕ ಸಮತೋಲನ ಕಾಯ್ದುಕೊಳ್ಳುವ ಪ್ರಯತ್ನಗಳು ಮಹತ್ವವೆನಿಸುತ್ತವೆ.





ಕರ್ನಾಟಕ ಸರ್ಕಾರದ ಹೊಸ ನೀತಿಯ ಪ್ರೇರಣಾಂಶಗಳು

ಕೈಗಾರಿಕಾ ಹೂಡಿಕೆಯನ್ನು ವೃದ್ಧಿಸುವದು :

೧. ೨೦೦೬ -೨೦೦೭ರ ಹೊಸ ಹಾಗೂ ಚೇತೋಹಾರಿ ಕೈಗಾರಿಕಾ ನೀತಿಯಿಂದಾಗಿ ಸಾರ್ವಜನಿಕ-ಖಾಸಗಿ ಪಾಲುಗಾರಿಕೆ ಉತ್ತೇಜನ, ತಾಂತ್ರಿಕ ಬೆಲೆ ನೀಡುವದು, ಜ್ಞಾನಾಧಾರಿತ ಉದ್ದಿಮೆಗೆ ಉತ್ತೇಜನ, ರಾಜ್ಯ ಹೂಡಿಕೆ ಸಬ್ಸಿಡಿ ಮತ್ತು ಪ್ರವೇಶ ತೆರಿಗೆ - ವಿನಾಯ್ತಿ, ಕೃಷಿಯೇತರ ಪರಿವರ್ತನಾ ದಂಡದ ವಿನಾಯ್ತಿಯಂತಹ ಪ್ರೇರಣಾತ್ಮಕ ಬೆಂಬಲದಿಂದ ಗುಣಮಟ್ಟದ ಮೂಲಸೌಕರ್ಯಗಳನ್ನು ನೀಡುವದು.

೨. ನಿರ್ಯಾತ ವೃದ್ಧಿಸುವದಕ್ಕಾಗಿಯೆ ವಿಶೇಷವಾದ ೨೦೦೨-೦೭ರ ನೀತಿಯಿಂದ ರಫ್ತು ಹೆಚ್ಚಿಸಲು ಬೆಂಬಲ ನೀಡುವದು, ಉದ್ದಿಮೆಗಳು ರಫ್ತುಗೊಳಿಸುವಂತೆ ಪ್ರೇರಣೆ, ಅವುಗಳ ಸಾಮರ್ಥ್ಯ ಹೆಚ್ಚಿಸುವದು.

೩. ಕೃಷಿ ಆಹಾರ ಸಂಸ್ಕರಣೆ ಉದ್ದಿಮೆಗಳಿಗಾಗಿ ಪ್ರತ್ಯೇಕ ಕೈಗಾರಿಕಾ ಉತ್ತೇಜನಾ ನೀತಿ.

೪. ಜೈವಿಕ ತಂತ್ರಜ್ಞಾನ ಉದ್ದಿಮೆಯ ಬೆಳವಣಿಗೆಗೆ ದಶಕದ ಹೊಸ ಜೈವಿಕ ತಂತ್ರಜ್ಞಾನ ನೀತಿ.

೫. ರೋಗಗ್ರಸ್ತ ಉದ್ದಿಮೆಗಳ ಪುನಶ್ಚೇತನ ಮತ್ತು ಪುನರ್ವಸತಿಗಾಗಿ ಪರಿಹಾರ ಮತ್ತು ಸವಲತ್ತುಗಳ ಪ್ಯಾಕೇಜ ನೀಡುವದು.

೬. ಮುಖ್ಯ ಮಂತ್ರಿಗಳವರ ಅಧ್ಯಕ್ಷತೆಯಲ್ಲಿ ಬೃಹತ್, ಮಧ್ಯಮ ಮತ್ತು ಚಿಕ್ಕ ಪ್ರಮಾಣದ ಉದ್ದಿಮೆ ಮತ್ತು ಮೂಲ ಸೌಕರ್ಯ ಅಭಿವೃದ್ಧಿಗಾಗಿ ಸಲಹಾ ಸಮೀತಿಯನ್ನು ರಚಿಸುವದು.

೭. ಹೊಸ ಪ್ರಕಲ್ಪಗಳಿಗೆ ಮನ್ನಣೆ ನೀಡಲು ಸ್ಟೇಟ್ ಹೈಲೇವಲ್ ಕ್ಲೀಯರನ್ಸ್ ಕಮೀಟಿ (ಎಸ್ ಎಚ್ ಎಲ್ ಸಿಸಿ), ಸ್ಟೇಟ ಲೇವಲ್ ಸಿಂಗಲ್ ವಿಂಡೋ ಕ್ಲೀಯರನ್ಸ ಕಮೀಟಿ (ಎಸ್ ಎಲ್ ಸಿಸಿ) ಮತ್ತು ಡಿಸ್ಟ್ರಿಕ್ಟ ಲೇವಲ್ ಸಿಂಗಲ್ ವಿಂಡೋ ಎಜೆನ್ಸಿ (ಡಿ ಎಲ್ ಎಸ್ ಡಬ್ಲೂ ಎ)ಗಳನ್ನು ರಚಿಸುವದು.

೮. ಒಂದೇ ಪ್ರಯತ್ನದಲ್ಲಿ ಎಲ್ಲ ಕ್ಲೀಯರನ್ಸಗಳನ್ನು ನೀಡುವುದಕ್ಕಾಗಿ ಒಂದು ಸಹಜ ಸಂಯುಕ್ತ ಅರ್ಜಿ ಫಾರ್ಮವನ್ನು ಕರ್ನಾಟಕ ಇಂಡಸ್ಟ್ರೀಯಲ್ ಫ್ಯಾಸಿಲೀಟೇಶನ್ ಆ್ಯಕ್ಟ್ ೨೦೦೩-೦೪ನ್ನು ಪಾಸು ಮಾಡುವದು.

೯. ಜಿಲ್ಲೆಗಳಲ್ಲಿ ಮೂಲಸೌಕರ್ಯಗಳನ್ನು ಸುಧಾರಿಸಲು ಕೈಗಾರಿಕಾ ಮೂಲಸೌಕರ್ಯ ನಿಧಿಯೊಂದಿಗೆ ಕೈಗಾರಿಕಾ ಪಟ್ಟಣಗಳ ಕಾಯ್ದೆ ಕಾರ್ಯಗತಗೊಳಿಸುವದು.

ಬೆಳಗಾವಿಯ ಅಭಿವೃದ್ಧಿಗಾಗಿ ಸರಕಾರ ರೂಪಿಸಿದ ಯೋಜನೆಗಳು :

೧. ರೂ. ೧೫ ಕೋಟಿ ವೆಚ್ಚದಿಂದ ವಿಮಾನ ನಿಲ್ದಾಣ ಸುಧಾರಣೆ.

೨. BOOT ಆಧಾರದ ಮೇಲೆ ರಿಂಗ್ ರೋಡ ಯೋಜನೆ.

೩. ಬೆಳಗಾವಿ ನಗರದಲ್ಲಿ ೨೪ x ೭ ಯೋಜನೆಯಡಿಯಲ್ಲಿ ನಿರಂತರ ನೀರು ಪೂರೈಕೆ ಮತ್ತು ಚರಂಡಿ ವ್ಯವಸ್ಥೆ.

೪. ರೂ. ೧೮.೫೦ ಕೋಟಿಗಳಷ್ಟು ವೆಚ್ಚದಿಂದ ಉದ್ಯಮಭಾಗ ಮತ್ತು ಇತರ ಕೇಂದ್ರಗಳಲ್ಲಿ ೧೧೦ ಕೆ.ವಿ.ಯ ಹೊಸ ವಿದ್ಯುತ್ ವಿತರಣಾ ಕೇಂದ್ರ.

೫. ಸ್ಟೇಟ್ ಆಫ್ ಆರ್ಟ ಟೆಕ್ನಾಲಾಜಿಯನ್ನು ಬಳಸಿಕೊಂಡು ಉತ್ತಮ ಶೆಲ್ ಪ್ರದೇಶ ಒಳಗೊಳ್ಳಲು ಇನ್ನೂ ೬೨ ಗೋಪುರಗಳನ್ನು ಜೋಡಿಸುವದು ಮತ್ತು ಆಪ್ಟಿಕಲ್ ಫೈಬರ್ ಮತ್ತು ವೈ-ಫೈ ಜೋಡಣೆಯಿಂದ ಮುಖ್ಯ ಕಟ್ಟಡಗಳಿಗೆ ಸಂಪರ್ಕ ಸಾಧಿಸುವ ಯೋಜನೆ ಬಿಎಸ್‌ಎನ್‌ಎಲ್ ಕಂಪನಿಯದಾಗಿದೆ.

೬. ಆಹಾರ ಸಂಸ್ಕರಣಾ ಪಾರ್ಕ ಮತ್ತು ಪುಷ್ಪೋದ್ಯಾನ ಪಾರ್ಕ.

೭. ಜವಳಿ ಪಾರ್ಕ.

೮. ವಿಶೇಷ ಆರ್ಥಿಕ ವಲಯದ ಘೋಷಣೆ.

೯. ವಿಶ್ವಮಟ್ಟದ ಸೌಕರ್ಯಗಳನ್ನು ಹೊಂದಿದ ೧೦೦ ಎಕರೆ ಪ್ರದೇಶದಲ್ಲಿ ಪಿಡಿ ಪಾರ್ಕ ಸ್ಥಾಪನೆ.

೧೦. ವಿಶ್ವ ದರ್ಜೆಯ ಶಾಶ್ವತ ಕೈಗಾರಿಕಾ ಪ್ರದರ್ಶನ ಕೇಂದ್ರ.

ಈ ವಿಸ್ತೃತವಾದ ಅಂಕಿ-ಅಂಶಗಳನ್ನು ವಿಶ್ಲೇಷಿಸಿದಾಗ, ಜಿಲ್ಲೆಯ ಕೆಲವು ದೊಡ್ಡ ಉದ್ದಿಮೆಗಳು ಮುಂಚೂಣಿಯಲ್ಲಿದ್ದು, ಅವುಗಳು ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಬೆಳವಣಿಗೆಯಾಗುವ ಅವಶ್ಯಕತೆ ಕಂಡು ಬರುತ್ತದೆ. ಅಲ್ಲದೆ, ಚಿಕ್ಕ ಉದ್ದಿಮೆ ಘಟಕಗಳು ಸಾಕಷ್ಟು ಪ್ರಗತಿ ಸಾಧಿಸಿವೆ. ಆದರೆ, ಜಿಲ್ಲೆಯಾದ್ಯಂತ ಸಮನಾಗಿ ಹಂಚಿಕೆಗೊಂಡಿರುವದು ಕಂಡುಬರುತ್ತಿಲ್ಲ. ಅದರಿಂದ ಜಿಲ್ಲೆಯಲ್ಲಿ ಪ್ರಾದೇಶಿಕ ಅಸಮಾನತೆ ಕಂಡುಬರುತ್ತದೆ.

****

ಅಧ್ಯಾಯ : ಐದು

ಉದ್ದಿಮೆಗಳ ಪ್ರವರ್ತನೆ, ಕಾರ್ಯಕ್ಷಮತೆ, ಸಮಸ್ಯೆಗಳು; ಪ್ರತಿಸ್ಪಂದಿಗಳ ಅಭಿಪ್ರಾಯ ವಿಶ್ಲೇಷಣೆ

ಅಧ್ಯಾಯ : ಐದು

ಉದ್ದಿಮೆಗಳ ಪ್ರವರ್ತನೆ, ಕಾರ್ಯಕ್ಷಮತೆ, ಸಮಸ್ಯೆಗಳು; ಪ್ರತಿಸ್ಪಂದಿಗಳ ಅಭಿಪ್ರಾಯ ವಿಶ್ಲೇಷಣೆ

೫.೧ ಪೀಠಿಕೆ:

ಭಾರತ ದೇಶದಲ್ಲಿ ಪ್ರಚಲಿತವಾಗಿರುವ ವ್ಯವಹಾರ ಸಂಘಟನೆಗಳನ್ನು ಏಕಸ್ವಾಮ್ಯ ಸಂಸ್ಥೆ (Sole Trading Concern) , ಪಾಲುಗಾರಿಕೆ ಸಂಸ್ಥೆ (Partnership Firm), ಹಿಂದೂ ಅವಿಭಕ್ತ ಕುಟುಂಬ (Joint Hindu Family), ಸಹಕಾರ ಸಂಘ (Cooperative Society) ನ್ಯಾಸ (Trust) ಮತ್ತು ಕೂಡು ಬಂಡವಾಳ ಸಂಸ್ಥೆ (Joint Stock Company)ಗಳ ರೂಪದಲ್ಲಿ ಸಂಘಟಿಸಬಹುದು.

ಮಿತವಾದ ಬಂಡವಾಳ ಹೂಡಿ, ತಾನೇ ಎಲ್ಲವನ್ನು ನಿರ್ವಹಿಸುವುದಕ್ಕಾಗಿ ಸ್ಥಾಪಿಸಿದ ವ್ಯವಹಾರವೇ ಏಕ ಸ್ವಾಮ್ಯ ಸಂಸ್ಥೆಯಾಗಿದೆ. ಅದರಿಂದ ದೊರೆಯುವ ಆದಾಯವನ್ನು ತಾನೇ ಅನುಭೋಗಿಸುತ್ತಾನೆ. ಪಾಲುಗಾರಿಕೆ ಸಂಸ್ಥೆಯಲ್ಲಿ ಇಬ್ಬರಿಗಿಂತ ಹೆಚ್ಚಿನ ಸದಸ್ಯರು ಒಪ್ಪಂದದ ಮೂಲಕ ಸೇರಿ, ಬಂಡವಾಳ ಕೂಡಿಸಿ, ಆದಾಯವನ್ನು ಹಂಚಿಕೊಳ್ಳುತ್ತಾರೆ. ಒಂದು ಕುಟುಂಬದ ಸದಸ್ಯರೆಲ್ಲರಿಗೆ ಸೇರಿದ ವ್ಯವಹಾರ ಸಂಸ್ಥೆಯು ಹಿಂದೂ ಅವಿಭಕ್ತ ಕುಟುಂಬದ ಸಂಸ್ಥೆಯಾಗಿದ್ದು, ಕರ್ತಾ ಅಥವಾ ಕುಟುಂಬದ ಹಿರಿಯನು ಅದರ ನಿರ್ವಹಣೆಯ ಜವಾಬ್ದಾರಿಯನ್ನು ಹೊಂದಿರುತ್ತಾನೆ. ಸಹಕಾರಿ ಸಂಘವು ಪ್ರಜಾಪ್ರಭುತ್ವದಂತೆ ನಿರ್ವಹಣೆಗೊಳ್ಳುತ್ತದೆ. ಸದಸ್ಯರೆಲ್ಲರೂ ಪರಸ್ಪರ ಸಹಕಾರದಿಂದ ಪ್ರತಿಯೊಬ್ಬರ ಲಾಭಕ್ಕಾಗಿ ಕಾರ್ಯ ನಿರ್ವಹಿಸುತ್ತಾರೆ. ನ್ಯಾಸವು (ವಿಶ್ವಸ್ಥ ಸಂಸ್ಥೆ) ಕಾನೂನು ಮಾನ್ಯತೆ ಹೊಂದಿದ ಅಸ್ತಿತ್ವವಾಗಿದ್ದು, ಇನ್ನೊಬ್ಬರ ಆಸ್ತಿಯನ್ನು ಫಲಾನುಭವಿಯ ಲಾಭಕ್ಕಾಗಿ ನಿರ್ವಹಿಸಲಾಗುತ್ತದೆ. ಇವೆಲ್ಲಕ್ಕೂ ಮಿಗಿಲಾದ- ವಿಭಿನ್ನವಾದ ಸಂಘಟನೆಯು ಕೂಡು ಬಂಡವಾಳ ಸಂಸ್ಥೆ (ಕಂಪನಿ)ಯು ಆಧುನಿಕ ಪ್ರಾಮುಖ್ಯವಾದ ವ್ಯವಹಾರ-ಉದ್ದಿಮೆಯ ಸಂಘಟನೆಯಾಗಿದೆ. ವ್ಯವಹಾರಗಳು ಎಲ್ಲ ಸಂಘಟನೆಗಳ ಲಕ್ಷಣಗಳನ್ನು ಹೊಂದಿದ್ದು, ಅಲ್ಪ-ವ್ಯತ್ಯಾಸಗಳು ಮಹತ್ವದ್ದಾಗಿವೆ. ಇಂದಿನ ಜಗತ್ತಿನ ಪರಿಸ್ಥಿತಿಗೆ ಅತ್ಯಂತ ಸೂಕ್ತವಾದ ಸಂಸ್ಥೆಯೇ ಕಂಪನಿರೂಪದ ಸಂಘಟನೆಯಾಗಿದೆ.

ಈ ಎಲ್ಲ ಸಂಸ್ಥೆ - ಸಂಘಟನೆಗಳನ್ನು ಪ್ರಾರಂಭಿಸಲು ಹಲವಾರು ತರಹದ ಹಂತಗಳನ್ನು ಕ್ರಮಿಸಿ, ಯೋಜನೆಗಳನ್ನು ರೂಪಿಸಿ, ನೋಂದಣಿಗೊಳಿಸಿ, ಮಾರುಕಟ್ಟೆಯಲ್ಲಿ ಯಶಸ್ವಿಯಾಗಿ ಕಾರ್ಯಗೈಯ್ಯುವ ಕ್ಷಮತೆಯನ್ನು ಸಾಧಿಸುವದು ಸುಲಭದ ಕೆಲಸವೇನಲ್ಲ!

೫.೨ ಉದ್ದಿಮೆಗಳ ಪ್ರವರ್ತನೆ :

ಯಾವುದೊಂದು ವ್ಯವಹಾರ ಘಟಕವನ್ನು ಸ್ಥಾಪಿಸಲು ವಿವಿಧ ಹಂತಗಳನ್ನು ಪರಿಪೂರ್ಣ ಗೊಳಿಸಬೇಕಾಗುತ್ತದೆ. ಅವುಗಳು ಬೇರೆ-ಬೇರೆ ತರನಾದ ಸಂಘಟನೆಗಳಲ್ಲಿ ಬೇರೆ ತರಹದ ಹಂತಗಳಾಗಿ ರುತ್ತವೆ. ಆದರೂ ಸಹ ಈ ಎಲ್ಲ ವ್ಯವಹಾರಗಳಲ್ಲಿ ಸಾಮಾನ್ಯ ಹಂತಗಳು ಕಂಡು ಬರುತ್ತವೆ.

ಉದಾಹರಣೆಗಾಗಿ, ಏಕವ್ಯಕ್ತಿ ಸಂಸ್ಥೆಯಲ್ಲಿ ಪ್ರವರ್ತನೆ, ಬಂಡವಾಳ ಸಂಗ್ರಹಣೆ, ನೋಂದಣಿ ಪ್ರಕ್ರಿಯೆ ಮತ್ತು ವ್ಯವಹಾರದ ಪ್ರಾರಂಭದ ಹಂತಗಳನ್ನು ಸಾಮಾನ್ಯವಾಗಿ ಕಾಣಬಹುದು. ಇವುಗಳನ್ನೇ ಮತ್ತೆ ಪಾಲುಗಾರಿಕೆ ಸಂಸ್ಥೆ ಮತ್ತು ಸಹಕಾರಿ ಸಂಘಗಳಲ್ಲಿಯೂ ಕಾರ್ಯಗತಗೊಳಿಸಬೇಕಾಗುತ್ತದೆ. ಕಂಪನಿಗಳ ಸ್ಥಾಪನೆಗೆ ಹಲವಾರು ಕಾನೂನು ವಿಧಿ ವಿಧಾನಗಳನ್ನು ಪೂರ್ಣಗೊಳಿಸಬೇಕಾಗುತ್ತದೆ. ಹೀಗಾಗಿ ಅವುಗಳು ಸ್ಥಾಪನೆಗೊಳ್ಳಲು ನಾಲ್ಕು ಮುಖ್ಯ ಹಂತಗಳನ್ನು ಕ್ರಮಿಸಬೇಕಾಗುತ್ತದೆ.

ಕಂಪನಿ ಪ್ರಾರಂಭದ ಪ್ರಮುಖ ಹಂತಗಳು :

೧) ಪ್ರವರ್ತನೆ

೨) ನೋಂದಾವಣೆ

೩) ಬಂಡವಾಳ ಸಂಗ್ರಹ

೪) ವ್ಯವಹಾರ ಪ್ರಾರಂಭ

ಒಂದು ವ್ಯವಹಾರೋದ್ದಿಮೆಯ ಯಶಸ್ಸು ಅದು ಎಷ್ಟು ಬಲವಾಗಿ ಹಾಗೂ ಶಕ್ತಿಯುತವಾಗಿ ಪ್ರವರ್ತನ ಹಂತವನ್ನು ಪೂರ್ತಿಗೊಳಿಸುತ್ತದೆ ಎಂಬುದರ ಮೇಲೆ ಅವಲಂಬನವಾಗಿರುತ್ತದೆ. ವ್ಯವಹಾರ ಘಟಕವು ದಿನವೊಂದು ಕಳೆಯುವುದರಲ್ಲಿ ಜನ್ಮ ತಾಳಲಾರದು. ಅದರ ಪ್ರಸವ ವೇದನೆ ಘಟಕ ಸ್ಥಾಪನೆಯಲ್ಲಿ ಶ್ರಮಿಸಿದ ಪ್ರವರ್ತಕರಿಗೆ ಮಾತ್ರ ಅನುಭವಕ್ಕೆ ಬಂದಿರುತ್ತದೆ. ಏಕೆಂದರೆ ಹಲವಾರು ರೀತಿಯ ಕಾಗದ ಪತ್ರಗಳನ್ನು ಮತ್ತು ದಾಖಲಾತಿಗಳನ್ನು ಸಿದ್ಧಗೊಳಿಸಬೇಕಾಗುತ್ತದೆ. ಸಮಯದ ಮಿತಿಯೊಳಗೆ ಸಂಬಂಧಿಸಿದ ಅಧಿಕಾರಿಗಳಿಗೆ ಸಲ್ಲಿಸುವುದು ಮತ್ತು ಅನುಮತಿ ಪಡೆಯುವುದು ಪ್ರಸ್ತುತ ಸ್ಥಿತಿಯಲ್ಲಿ ಕಷ್ಟದ ಕೆಲಸ. ಇವುಗಳಲ್ಲಿ ಹಲವಾರು ವಿಧಿ-ವಿಧಾನಗಳನ್ನು ಪಾಲಿಸುವುದು ಅವಶ್ಯಕವಾಗಿ-ರುತ್ತದೆ.

ಯಾವುದೇ ತರಹದ ವ್ಯವಹಾರದಲ್ಲಿ ಪ್ರವರ್ತನೆಯು ಪ್ರಥಮ ಹಂತವಾಗಿರುತ್ತದೆ. ವ್ಯವಹಾರ ಪ್ರಾರಂಭಿಸಬೇಕೆಂಬ ಕಲ್ಪನೆಯು ಮನಸ್ಸಿನಲ್ಲಿ ಬೀಜಾಂಕುರವಾದಾಗಿನಿಂದಲೇ ಅದು ಪ್ರಾರಂಭ-ಗೊಂಡಿರುತ್ತದೆ. ಗೆರೆಸ್ಟನ್ ಬರ್ಗ್ ಇವರು ಪ್ರವರ್ತನೆಯು ವ್ಯವಹಾರದ ಸುಸಂಧಿಗಳನ್ನು ಶೋಧಿಸುವುದಾಗಿದೆ ಮತ್ತು ನಂತರ ನಿಧಿಯ ಸಂಗ್ರಹಣೆ, ಆಸ್ತಿಗಳ ಕ್ರೋಢೀಕರಣ ಮತ್ತು ನಿರ್ವಹಣೆಯ ಕೌಶಲ್ಯಗಳನ್ನು ಅಳವಡಿಸಿ ವ್ಯವಹಾರ ನಡೆಸುವುದಾಗಿದೆ ಎಂದು ವ್ಯಾಖ್ಯಾನಿಸುತ್ತಾರೆ.

ಈ ವ್ಯಾಖ್ಯೆಯನ್ನಾಧರಿಸಿ ಪ್ರವರ್ತನೆಯಲ್ಲಿ ಕೆಳಗಿನ ನಾಲ್ಕು ಅಂಶಗಳನ್ನು ಗಮನಿಸಬಹುದು.

(ಅ) ವ್ಯವಹಾರದ ಅವಕಾಶಗಳನ್ನು ಶೋಧಿಸುವುದು :

ವ್ಯವಹಾರದ ಪ್ರವರ್ತನೆ ಹಂತವು ಅತ್ಯಂತ ಲಾಭದಾಯಕವಾದ ಸುಸಂಧಿಗಳನ್ನು ಹುಡುಕಿ ತೆಗೆಯುವುದರಿಂದ ಪ್ರಾರಂಭಗೊಳ್ಳುತ್ತದೆ. ಇದರಲ್ಲಿ ಯಾವ ವ್ಯವಹಾರ ಕೈಗೊಳ್ಳಬೇಕು ಎಂಬುವುದಕ್ಕೆ ಉತ್ತರ ಸ್ಪಷ್ಟವಾಗಿ ರೂಪಗೊಳ್ಳಬೇಕು. ಹೊಸ ವ್ಯವಹಾರವು ಒಂದು ಮನಸ್ಸಿನಲ್ಲಿ ಹುಟ್ಟಿದ ಕಲ್ಪನೆಯ

ರೂಪದಲ್ಲಿದ್ದು, ಅವುಗಳ ಕುರಿತು ದೀರ್ಘ ಸಮಾಲೋಚನೆ ಮಾಡುತ್ತಾ, ಪೋಷಣೆ ನೀಡಿ, ಅಭಿವೃದ್ಧಿಯ ಕಾರ್ಯ ನಡೆಯುತ್ತದೆ. ವ್ಯವಹಾರ ಪ್ರಾರಂಭಿಸಬೇಕೆನ್ನುವವರು, ಹೊಸ ಕಲ್ಪನೆ ಹೊಂದಿರಬೇಕು ಇಲ್ಲವೇ ಬೇರೆಯವರಿಂದ ಕಲ್ಪನೆಗಳನ್ನು ಸಂಗ್ರಹಿಸಬೇಕು. ಇದಕ್ಕಾಗಿ ಸಧ್ಯದ ಸ್ಥಿತಿ-ವಿದ್ಯಮಾನ, ಹಿಂದಿನ ಘಟನೆಗಳನ್ನು ಅಧ್ಯಯನಕ್ಕೊಳಪಡಿಸಿ, ಭವಿಷ್ಯದ ಚಿತ್ರಣವನ್ನು ಸಿದ್ಧಗೊಳಿಸಬೇಕಾಗುತ್ತದೆ. ಕಲ್ಪನೆಗೆ ಸಂಬಂಧಿಸಿದ ಎಲ್ಲ ತರ್ಕ-ವಿತರ್ಕಗಳನ್ನು ಸಮಾಲೋಚನೆಗೆ ಒಳಪಡಿಸಿ ಸಂಸ್ಕರಿಸಬೇಕು.

(ಬ) ವಿಸ್ತೃತ ಶೋಧನೆ :

ವ್ಯವಹಾರ ಸ್ಥಾಪನೆಗೊಂಡಿರುವ ಕಲ್ಪನೆಯಲ್ಲಿ ವಿಚಾರವನ್ನು ಮತ್ತಷ್ಟು ಸುಧೀರ್ಘ ತನಿಖೆಗೊಳಪಡಿಸಬೇಕು. ತನಿಖೆಯಲ್ಲಿ ಕಲ್ಪನೆಯನ್ನು ಕಾರ್ಯಗತಗೊಳಿಸುವುದರಿಂದ ಆಗಬಹುದಾದ ವಾಣಿಜ್ಯಕ ಲಾಭ-ನಷ್ಟಗಳನ್ನು ಮುಂಚಿತವಾಗಿ ಅಂದಾಜಿಸುವದು ಮುಖ್ಯವಾಗಿರುತ್ತದೆ. ಹೊಸ ವಿಚಾರವು ಕಾರ್ಯ ಸಾಧುವೆ(?) ಎಂಬುದನ್ನು ಅಧ್ಯಯನ ಮಾಡುವರು. ಮಾರುಕಟ್ಟೆಯ ದೃಷ್ಟಿಕೋನ, ಹಣಕಾಸಿನ ಮತ್ತು ಉತ್ಪಾದನೆಯ ದೃಷ್ಟಿಕೋನಗಳಿಂದ ವಿಚಾರಕ್ಕೊಳಪಡಿಸಿ, ಹೊಸ ವ್ಯವಹಾರ ಘಟಕವು ಎಷ್ಟೊಂದು ಕಾರ್ಯ ಸಾಧು(?) ಎಂಬುದನ್ನು ನಿರ್ಧರಿಸಬೇಕು. ಇವುಗಳ ಕುರಿತು ನಿರ್ಧರಿಸಬೇಕಾದಾಗ ಆಯಾ ಕ್ಷೇತ್ರಗಳಲ್ಲಿಯ ಪರಿಣಿತರ ಸಲಹೆ - ಸೇವೆಗಳನ್ನು ಪಡೆಯಬೇಕು. ಎಲ್ಲವುಗಳನ್ನು ತುಲನಾತ್ಮಕವಾಗಿ ಮೌಲ್ಯಮಾಪನಗೊಳಿಸಬೇಕು.

(ಕ) ಅವಶ್ಯಕ ಸಂಘಟನೆ :

ಹೊಸ ಕಲ್ಪನೆಗೆ ಅಂತಿಮ ರೂಪಕೊಟ್ಟನಂತರ ಅದನ್ನು ಸಾಕಾರಗೊಳಿಸಲು ಅವಶ್ಯಕ ಸಂಪನ್ಮೂಲಗಳ ಸಂಗ್ರಹಣೆಯ ಬಗ್ಗೆ ಚಿಂತಿಸಬೇಕು ಮತ್ತು ವ್ಯವಸ್ಥಿತವಾಗಿ ಯೋಜಿಸಬೇಕಾಗುತ್ತದೆ. ಏಕ ವ್ಯಕ್ತಿ ಸಂಸ್ಥೆಯಾಗಲಿ, ಪಾಲುದಾರಿಕೆಯಾಗಲಿ ಅಥವಾ ಕಂಪನಿಗಳಾಗಲಿ ಅವುಗಳ ಗಾತ್ರಗಳಿಗೆ ಅನುಗುಣವಾಗಿ ಬಂಡವಾಳ, ಭೂಮಿ, ಸ್ಥಾವರ, ಮಾನವ ಸಂಪನ್ಮೂಲ ಇತ್ಯಾದಿಗಳ ಪರಿಮಾಣಗಳನ್ನು ಲೆಕ್ಕಿಸುವುದು, ಅವುಗಳನ್ನು ಪೂರೈಸುವ ಲಭ್ಯ ಮೂಲಗಳ ಹುಡುಕಾಟ, ಅವುಗಳನ್ನು ಪೂರೈಸುವ ಏಜೆನ್ಸಿ ಸಂಸ್ಥೆಗಳೊಂದಿಗೆ ವ್ಯವಹರಿಸುವುದು ಮತ್ತು ಸಮರ್ಪಕ ಪ್ರಯೋಜನಭರಿತ ಒಪ್ಪಂದಗಳನ್ನು ಮಾಡಿಕೊಳ್ಳುವುದು ಮಹತ್ವದ ಹೆಜ್ಜೆಗಳಾಗುತ್ತವೆ. ಎಲ್ಲ ಮೂಲಗಳಿಂದ ಬೆಂಬಲ ಪಡೆಯುವ ಎಲ್ಲ ಕ್ರಮಗಳನ್ನು ಕೈಕೊಳ್ಳಬೇಕು. ಇವುಗಳಲ್ಲಿ ಹಣಕಾಸು ಪಡೆಯುವ ಮೂಲಗಳನ್ನು ನಿಶ್ಚಿತವಾಗಿ ನಿರ್ಧರಿಸಬೇಕು. ಭವಿಷ್ಯದ ಯಶಸ್ಸು ಈ ಹಂತದಲ್ಲಿಯ ಯಶಸ್ವಿ ಒಪ್ಪಂದಗಳ ಮೇಲೆ ಅವಲಂಬಿತವಾಗಿದೆ.

(ಡ) ವ್ಯವಹಾರ ಸಂಸ್ಥೆಯ ನಿರ್ಮಾಣ :

ಇದೇ ಹಂತದಲ್ಲಿ ವ್ಯವಹಾರದ ನೀಲ ನಕ್ಷೆ ಸಿದ್ಧವಾಗುತ್ತದೆ. ಇದರಲ್ಲಿ ಅವಶ್ಯವಿರುವ ಹಣಕಾಸು ಪಡೆಯುವ ಮೂಲಗಳ ಮತ್ತು ರೀತಿ-ನೀತಿಗಳನ್ನು ಅಂತಿಮಗೊಳಿಸಲಾಗುತ್ತದೆ. ವಿವಿಧ ಸಂಪನ್ಮೂಲಗಳ ಪೂರೈಕೆದಾರರೊಂದಿಗೆ ಪ್ರಾಥಮಿಕ ಒಪ್ಪಂದಗಳನ್ನು ಪೂರ್ತಿಗೊಳಿಸಲಾಗುತ್ತದೆ. ಎಲ್ಲವುಗಳನ್ನು ಸರಿಯಾದ ಸಮಯಕ್ಕೆ ಕಲೆ ಹಾಕುವ ಬಗ್ಗೆ ಖಾತ್ರಿ ಪಡಿಸಲಾಗುತ್ತದೆ.

ಪ್ರವರ್ತಕರು - ಯಾರು?

ನ್ಯಾಯಾಧೀಶ ಕಾಕ್‌ಬರ್ನ್ ಅವರು ಪ್ರವರ್ತಕರ ವ್ಯಾಖ್ಯೆ ನೀಡುತ್ತಾ ಪ್ರವರ್ತಕನೆಂದರೆ ವ್ಯವಹಾರ ಘಟಕವನ್ನು ಸ್ಥಾಪಿಸುವ ಕಾರ್ಯಮಾಡುತ್ತಾನೆ ಮತ್ತು ಒಂದು ಪ್ರಕಲ್ಪಕ್ಕೆ ಸಂಬಂಧಿಸಿದಂತೆ ಅದು ಸ್ಥಾಪನೆಗೊಂಡು, ಕಾರ್ಯಗೈಯ್ಯುವದನ್ನು ವೀಕ್ಷಿಸುತ್ತಾನೆ. ಅದರ ಉದ್ದೇಶ ಈಡೇರುವವರೆಗೆ ಎಲ್ಲ ಅವಶ್ಯಕ ಕಾರ್ಯಗಳನ್ನು ನಿಭಾಯಿಸುತ್ತಾನೆ ಎಂದು ಅಭಿಪ್ರಾಯಿಸಿದ್ದಾರೆ.

ಆದ್ದರಿಂದ ವ್ಯವಹಾರ ಉದ್ದಿಮೆ ಪ್ರಾರಂಭಿಸುವ ಹಂತದ ಪ್ರವರ್ತನ ಕಾರ್ಯಗಳನ್ನು ನಿರ್ವಹಿಸುವವನೇ ಪ್ರವರ್ತಕನು. ಇವರು ವ್ಯವಹಾರದ ಹೊಸ ಕಲ್ಪನೆ ವಿಚಾರಗಳಿಗೆ ನಾಂದಿ ಹಾಡುತ್ತಾರೆ ಅಥವಾ ಮತ್ತೋರ್ವರ ವಿಚಾರ-ಕಲ್ಪನೆಗಳಿಗೆ ಹೊಸ ರೂಪ ನೀಡುತ್ತಾರೆ. ಅವರು ನಿಜವಾಗಿಯೂ ಧೈರ್ಯವಂತರು, ಸಾಹಸದಿಂದ ಕಾರ್ಯಗಳನ್ನು ಸಾಕಾರಗೊಳಿಸುವವರು. ಗಂಡಾಂತರಗಳನ್ನು ಎದುರಿಸುವವರು. ಯಾವುದೇ ವ್ಯವಹಾರ ಸಂಸ್ಥೆಗೆ ಅವರೇ ಚಾಲನೆ ನೀಡುವ ಪ್ರಥಮ ವ್ಯಕ್ತಿಗಳು. ವ್ಯವಹಾರ ಸಂಸ್ಥೆಯ ಹುಟ್ಟಿಗೆ ಕಾರಣೀಕರ್ತರು.

ಪ್ರವರ್ತಕರು ಕಲ್ಪನೆ ಮತ್ತು ವಿಚಾರಗಳನ್ನು ಶೋಧಿಸುವವರು. ನಂತರ ಅದರ ಕಾರ್ಯರೂಪಕ್ಕೆ ಅವಶ್ಯವಿರುವ ನಿಧಿ ಸಂಗ್ರಹಿಸುವವರು. ಅವಶ್ಯಕ ಆಸ್ತಿಗಳನ್ನು ಸಂಗ್ರಹಿಸಿ ಘಟಕವನ್ನು ಸ್ಥಾಪಿಸುವವರೇ ಪ್ರವರ್ತಕರು. ಸರಕು ಉತ್ಪಾದಿಸಿ ಇಲ್ಲವೇ ಉತ್ಪಾದಿತ ಸರಕುಗಳನ್ನು ಅಥವಾ ಸೇವೆಗಳನ್ನು ನೀಡುವ ಸಂಸ್ಥೆಯನ್ನು ಹುಟ್ಟುಹಾಕಿ, ಲಾಭಗಳಿಸುವ ಘಟಕವಾಗಿ ಹೊರಹೊಮ್ಮುವ ಜವಾಬ್ದಾರಿಯುತ ಕಾರ್ಯಗಳನ್ನು ಸಾಕಾರಗೊಳಿಸುತ್ತಾರೆ.

ಪ್ರವರ್ತಕರು
- ವ್ಯವಹಾರದ ಕಲ್ಪನೆಗಳನ್ನು ಹುಟ್ಟುಹಾಕುತ್ತಾರೆ.
- ಕಲ್ಪನೆ-ವಿಚಾರಗಳನ್ನು ತನಿಖೆಗೆ ಒಳಪಡಿಸುತ್ತಾರೆ.
- ಸಂಪನ್ಮೂಲಗಳನ್ನು ಸಂಘಟಿಸುತ್ತಾರೆ.
- ಘಟಕದ ನೋಂದಣಿ ಮಾಡಿಸುತ್ತಾರೆ.
- ಸ್ವಂತದ/ಇತರರಿಂದ/ಸಂಸ್ಥೆಗಳಿಂದ ಬಂಡವಾಳ ಕ್ರೋಢೀಕರಿಸುವ ಕ್ರಮಕೈಗೊಳ್ಳುತ್ತಾರೆ.
- ವ್ಯವಹಾರವನ್ನು ಪ್ರಾರಂಭಿಸುತ್ತಾರೆ.
- ವ್ಯವಹಾರವು ಯಶಸ್ವಿಯಾಗಿ ನಡೆಯುವಂತೆ ನೋಡಿಕೊಳ್ಳುತ್ತಾರೆ.

ಪ್ರವರ್ತಕರಲ್ಲಿ ಎರಡು ವಿಧಗಳಿವೆ.

೧) ಆಕಸ್ಮಿಕ :- ಇವರು ತಕ್ಷಣವೇ ವ್ಯವಹಾರದ ವಿಚಾರಗಳನ್ನು ಕಂಡುಕೊಂಡು, ಅದರ ಕಾರ್ಯ ಸಾಧಿಸುವಲ್ಲಿ ಪ್ರಯತ್ನ ಮಾಡುತ್ತಾರೆ. ತಮ್ಮ ವಿಚಾರ - ಕಲ್ಪನೆಗಳಿಗೆ ಕಾರ್ಯ ಸ್ಪರ್ಶ ನೀಡುತ್ತಾರೆ. ಅದರಿಂದ ಲಾಭ ಪಡೆಯುತ್ತಾ ಮುಂದುವರೆಯುತ್ತಾರೆ. ಬಹುತೇಕ ಆಧುನಿಕ ಪ್ರವರ್ತಕರು ಆಕಸ್ಮಿಕವಾಗಿಯೇ ಹೊಸ ಕಲ್ಪನೆಗಳನ್ನು ಕಂಡುಕೊಳ್ಳುತ್ತಾರೆ.

೨) ವೃತ್ತಿಪರರು:- ಇವರು ತಮ್ಮ ವೃತ್ತಿಪರತೆಯಿಂದ ಹಾಗೂ ಪರಿಣತಿಯಿಂದ ಹೊಸ ವ್ಯವಹಾರದ ಕಲ್ಪನೆಗಳನ್ನು ಹುಟ್ಟುಹಾಕಿ, ಮತ್ತೋರ್ವರಿಗೆ ಮಾರಾಟಗೊಳಿಸುತ್ತಾರೆ. ಅದನ್ನು ಖರೀದಿ ಪಡೆದವರು

ವ್ಯವಹಾರದ ರೂಪಕೊಟ್ಟು, ಸಂಘಟನೆಗೊಳಿಸುತ್ತಾರೆ. ಇಂತಹ ಪ್ರವರ್ತಕರು ತಮ್ಮ ವಿಚಾರಗಳನ್ನು ಸಾಕಾರಗೊಳಿಸಲು ತಾವೇ ವ್ಯವಹಾರ ಪ್ರಾರಂಭಿಸುವುದಿಲ್ಲ. ತಮ್ಮ ಕಲ್ಪನೆ-ಯೋಜನೆಗಳ ಪ್ರಕಾರ ಮತ್ತೊಬ್ಬರು ವ್ಯವಹಾರ ಪ್ರಾರಂಭಿಸುವಂತೆ ಪ್ರೇರಣೆ ನೀಡುತ್ತಾರೆ. ಹೀಗಾಗಿ ಅವರು ಸತತವಾಗಿ ಇಂತಹ ಹೊಸ ಕಲ್ಪನೆಗಳನ್ನು ಹುಟ್ಟುಹಾಕುತ್ತಾ, ವ್ಯವಹಾರ-ಉದ್ದಿಮೆಗಳ ಸ್ಥಾಪನೆಗೆ ಪ್ರೇರಕವಾಗಿ ರುತ್ತಾರೆ. ಅದುವೇ ಅವರ ವೃತ್ತಿಯಾಗಿರುತ್ತದೆ.

ವಿವಿಧ ವ್ಯವಹಾರಗಳ ಪ್ರವರ್ತಕರು:

ವ್ಯವಹಾರ ಸಂಘಟನೆ-ಸಂಸ್ಥೆಗಳಲ್ಲಿ ಹಲವಾರು ಪ್ರಕಾರಗಳಿವೆ. ಅವುಗಳೆಲ್ಲವು ಪ್ರಾರಂಭದ ಹಂತದಲ್ಲಿ ಯಾರಾದರನ್ನು ಪ್ರವರ್ತಕರ ರೂಪದಲ್ಲಿ ಹೊಂದಿದ್ದರಿಂದಲೇ ಸಂಸ್ಥೆಗಳು ರೂಪಗೊಂಡಿ-ರುತ್ತವೆ. ಹೀಗಾಗಿ ಕೆಳಗಿನ ಪ್ರಕಾರದ ವ್ಯವಹಾರಗಳಲ್ಲಿ ಕಂಡು ಬರುವ ಪ್ರವರ್ತಕರನ್ನು ಗುರುತಿಸಬಹುದು.

೧) **ಏಕ ಸ್ವಾಮ್ಯ ವ್ಯವಹಾರ ಸಂಸ್ಥೆ :**

ಈ ವ್ಯವಹಾರ ಘಟಕವು ಒಬ್ಬನೇ ವ್ಯಕ್ತಿಯಿಂದ ಸ್ಥಾಪನೆಗೊಂಡು, ಬಹುತೇಕ ಎಲ್ಲ ಕಾರ್ಯಗಳನ್ನು ಅವನೇ ನಡೆಯಿಸಿಕೊಂಡು ಹೋಗುತ್ತಿರುತ್ತಾನೆ. ತನ್ನ ಕಾರ್ಯಗಳಲ್ಲಿ ಸಹಾಯಕರನ್ನು ನೇಮಿಸಿಕೊಂಡಿರಬಹುದು. ಆದರೆ ಅದರ ಮಾಲಿಕತ್ವ ಮಾತ್ರ ಒಬ್ಬನೇ ಹೊಂದಿರುತ್ತಾನೆ. ಹೀಗಾಗಿ ಇಂತಹ ಸಂಸ್ಥೆಗಳನ್ನು ಪ್ರಾರಂಭಿಸುವ ಒಬ್ಬ ವ್ಯಕ್ತಿಯನ್ನು ಪ್ರವರ್ತಕನೆಂದು ಹೇಳಲಾಗುತ್ತದೆ. ವ್ಯವಹಾರವನ್ನು ಹುಟ್ಟು ಹಾಕಬೇಕೆಂಬ ಕಲ್ಪನೆ ಅವನಲ್ಲಿಯೇ ಅಂಕುರಗೊಳ್ಳುತ್ತದೆ. ತಾನೇ ಮುಂದಾಳತ್ವವಹಿಸಿ, ವ್ಯವಹಾರವನ್ನು ಪ್ರಾರಂಭಿಸುತ್ತಾನೆ.

೨) **ಪಾಲುಗಾರಿಕೆ ಸಂಸ್ಥೆ :**

ಯಾವ ವ್ಯವಹಾರ ಸಂಸ್ಥೆಯಲ್ಲಿ ಇಬ್ಬರು ಅಥವಾ ಇಬ್ಬರಿಗಿಂತ ಹೆಚ್ಚಿನ ಸಂಖ್ಯೆಯ ಮಾಲಿಕತ್ವ ಹೊಂದಿರುವರೋ ಅದು ಪಾಲುಗಾರಿಕೆ ಸಂಸ್ಥೆಯೆನಿಸುತ್ತದೆ. ಇವುಗಳಲ್ಲಿ ವ್ಯವಹಾರ ಸಂಸ್ಥೆಯನ್ನು ಹುಟ್ಟುಹಾಕಬೇಕೆಂಬ ಕಲ್ಪನೆ ಸಮಾನ ಮನಸ್ಕ ವ್ಯಕ್ತಿಗಳಲ್ಲಿ ಚರ್ಚಿತವಾಗಿ, ತಮ್ಮ ಮುಂದಾಳತ್ವದಲ್ಲಿಯೇ ಘಟಕವು ಸ್ಥಾಪನೆಗೊಳ್ಳುತ್ತದೆ. ಒಬ್ಬರ ವಿಚಾರಕ್ಕೆ ಮತ್ತೊಬ್ಬರ ಬೆಂಬಲ ದೊರೆತು, ಇನ್ನಿತರ ಸಮಾನ ಮನಸ್ಕರನ್ನು ಸೇರಿಸಿ, ಅವರ ಬಂಡವಾಳವನ್ನು ಆಹ್ವಾನಿಸಿ, ಪಾಲುಗಾರರಿಗೆ ಆಹ್ವಾನಿಸಿ, ಪಾಲುಗಾರಿಕೆ ಸಂಸ್ಥೆಯ ಹುಟ್ಟಿಗೆ ಕಾರಣೀಭೂತರಾಗುತ್ತಾರೆ. ಕೆಲವೊಮ್ಮೆ ಒಬ್ಬರಲ್ಲಿಯೇ ಕಲ್ಪನೆ ಹುಟ್ಟಿದರೂ ಸಹ, ಮತ್ತೇ ಇನ್ನೂ ಹಲವರು ಸೇರಿ ಘಟಕ ಸ್ಥಾಪನೆ ಮಾಡುತ್ತಾರೆ. ಆದ್ದರಿಂದ ಇಬ್ಬರು ಅಥವಾ ಹೆಚ್ಚಿನ ಸಂಖ್ಯೆಯ ವ್ಯಕ್ತಿಗಳನ್ನು ಇಲ್ಲಿ ಪ್ರವರ್ತಕರೆಂದು ಪರಿಗಣಿಸಲಾಗುತ್ತದೆ.

೩) **ಕೂಡುಬಂಡವಾಳ ಸಂಸ್ಥೆ ಅಥವಾ ಕಂಪನಿ :**

ಕಂಪನಿಗಳಲ್ಲಿ ಪ್ರಮುಖವಾಗಿ ಸಾರ್ವಜನಿಕ, ಸರ್ಕಾರಿ ಮತ್ತು ಖಾಸಗಿ ಕಂಪನಿಗಳೆಂದು ಗುರುತಿಸುತ್ತಾರೆ. ಸಾರ್ವಜನಿಕ ಕಂಪನಿಗಳಲ್ಲಿ ಕನಿಷ್ಠ ೭ ಜನರು ಸೇರಿ, ನಂತರ ಅಸಂಖ್ಯಾತ ಜನರು ಶೇರುದಾರರಾಗಿ (ಮಾಲೀಕರಾಗಿ) ಸೇರ್ಪಡೆಯಾಗುತ್ತಾರೆ. ಆದ್ದರಿಂದ ಈ ಪ್ರಾರಂಭದ ೭ ಜನರನ್ನು ಪ್ರವರ್ತಕರೆಂದು ಪರಿಗಣಿಸಲಾಗುತ್ತದೆ. ಅದರಂತೆಯೇ ಖಾಸಗಿ ಕಂಪನಿಗಳನ್ನು ಕನಿಷ್ಠ ಇಬ್ಬರು ಕೂಡಿಕೊಂಡು ಗರಿಷ್ಠ ೫೦ ಜನರನ್ನು ಖಾಸಗಿಯಾಗಿ ಶೇರುದಾರರೆಂದು (ಮಾಲೀಕರೆಂದು)

ಸೇರಿಕೊಳ್ಳಬಹುದು. ಆದ್ದರಿಂದ ಪ್ರಾರಂಭದ ಇಬ್ಬರು ಅಥವಾ ಅದಕ್ಕಿಂದ ಹೆಚ್ಚಿನ ಜನರು ಪ್ರವರ್ತಕರೆನಿಸಿಕೊಳ್ಳುತ್ತಾರೆ.

ಇನ್ನು, ಸರ್ಕಾರಿ ಕಂಪನಿಗಳೆಂದರೆ ಯಾವುದೊಂದು ಸಾರ್ವಜನಿಕ ಕಂಪನಿಯಲ್ಲಿ ಪ್ರತಿಶತ ೫೧ಕ್ಕಿಂತ ಕಡಿಮೆ ಇರದಷ್ಟು ಶೇರುಗಳನ್ನು ಸರ್ಕಾರವು ಹೊಂದಿರುವದೋ ಅದುವೇ ಸರ್ಕಾರಿ ಕಂಪನಿಯೆನಿಸಿಕೊಳ್ಳುತ್ತದೆ. ಅಂದರೆ ಸರ್ಕಾರವೇ ಪ್ರವರ್ತಕವಾಗಿರದೇ ಸ್ಥಾಪನೆಗೊಂಡ ಕಂಪನಿಯಲ್ಲಿ ಬಹುಪಾಲಿನ ಶೇರುಗಳನ್ನು ಸರ್ಕಾರ (ಕೇಂದ್ರ/ರಾಜ್ಯ)ವು ಪಡೆದುಕೊಂಡಿರುತ್ತದೆ. ಆದ್ದರಿಂದ ಇಂತಹ ಕಂಪನಿಗಳಲ್ಲಿ ಸಾರ್ವಜನಿಕ ಕಂಪನಿಗಳಲ್ಲಿಯ ಪ್ರಾರಂಭದ ೭ ಜನರನ್ನು ಪ್ರವರ್ತಕರೆಂದು ಗುರುತಿಸಬಹುದು.

೫.೩ ಪ್ರವರ್ತನೋತ್ತರ ಚಟುವಟಿಕೆಗಳು :

ಪ್ರವರ್ತನೋತ್ತರದ ಚಟುವಟಿಕೆಗಳು ಬೃಹತ್ ಪ್ರಮಾಣದ ಮತ್ತು ಚಿಕ್ಕ-ಅತಿ ಚಿಕ್ಕ ಘಟಕಗಳಲ್ಲಿ ಒಂದೇ ತೆರನಾಗಿದ್ದರೂ ಸಹ, ಅವುಗಳು ನಿರ್ವಹಿಸುವ ಪದ್ಧತಿ-ಎದುರಿಸುವ ಸಮಸ್ಯೆಗಳು ಭಿನ್ನವಾಗಿ-ರುವುದರಿಂದ ಅವುಗಳನ್ನು ಬೇರೆಯಾಗಿ ವಿಶ್ಲೇಷಿಸಲಾಗಿದೆ.

೫.೩ (ಅ) ಬೆಳಗಾವಿ ಜಿಲ್ಲೆಯ ಬೃಹತ್ ಘಟಕಗಳು ಮತ್ತು ಮಧ್ಯಮ ಗಾತ್ರದ ಘಟಕಗಳು :

ವ್ಯವಹಾರ ಘಟಕದ ಪ್ರವರ್ತನದ ನಂತರ, ಅದರ ಯಶಸ್ವಿಯಾದ ಕಾರ್ಯ ನಿರ್ವಹಣೆಗಾಗಿ ಹಣಕಾಸು, ಉತ್ಪಾದನೆ, ಮಾರುಕಟ್ಟೆ-ಮಾರಾಟ ಚಟುವಟಿಕೆ, ಮಾನವ ಸಂಪನ್ಮೂಲ ನಿರ್ವಹಣೆ ಮತ್ತು ಇತರೆ ಚಟುವಟಿಕೆಗಳು ಬೃಹತ್ ಗಾತ್ರದ ಘಟಕಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.

ಜಿಲ್ಲೆಯಲ್ಲಿಯ ಒಟ್ಟು ೩೩ ಬೃಹತ್ ಗಾತ್ರದ ಘಟಕಗಳಲ್ಲಿ ಅಧ್ಯಯನಕ್ಕಾಗಿ ಆಯ್ದ ಹತ್ತು ಘಟಕಗಳಿಗೆ ವಿಶೇಷವಾಗಿ ರಚಿಸಿದ ಪ್ರಶ್ನಾವಳಿಯನ್ನು ನೀಡಿ, ಸಾಕಷ್ಟು ಸಮಯಾವಕಾಶದೊಂದಿಗೆ ಘಟಕಗಳಲ್ಲಿಯ ಪ್ರಮುಖ ಜವಾಬ್ದಾರಿಯ ಅಧಿಕಾರಿಯು ನೀಡಿದ ಮಾಹಿತಿಯನ್ನು ಈ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ. ಅವರ ಅಭಿಪ್ರಾಯಗಳು, ಬೃಹತ್ ಘಟಕಗಳ ಪ್ರವರ್ತನೆಯ ಹಂತದಿಂದ ಹಲವಾರು ಕ್ಷೇತ್ರಗಳ ನಿರ್ವಹಣೆಗೆ ಸಂಬಂಧಿಸಿದ ತಂತ್ರಗಳು, ರೀತಿ-ನೀತಿ ಪದ್ಧತಿಗಳು ಮತ್ತು ಎದುರಿಸುತ್ತಿರುವ ಸಂಗತಿ-ಸಮಸ್ಯೆಗಳು ಈ ಪ್ರಶ್ನಾವಳಿಯ ಉತ್ತರಗಳಲ್ಲಿ ಲಭ್ಯವಾಗಿವೆ. ಅವುಗಳ ವಿಶ್ಲೇಷಣೆಯಿಂದ ಹಲವಾರು ಸಮಸ್ಯೆಗಳು ಕಂಡು ಬರುತ್ತವೆ. ಅಲ್ಲದೇ ಹಲವಾರು ಪರಿಹಾರಗಳು ಸಹ ಲಭ್ಯವಾಗಿರುತ್ತವೆ. ಅವು ಇತರರಿಗೆ ಮಾರ್ಗದರ್ಶನ ನೀಡುತ್ತವೆ. ಘಟಕಗಳ ದಕ್ಷ- ಉತ್ತಮ ನಿರ್ವಹಣೆಯಲ್ಲಿ ಸಹಕಾರಿಯಾಗುತ್ತವೆ.

ಇಲ್ಲಿಯ ಒಟ್ಟು ೮೯ ಪ್ರಶ್ನೆಗಳಲ್ಲಿ ಮೊದಲಿನ ೫ ಪ್ರಶ್ನೆಗಳು ಘಟಕದ ಹೆಸರು, ವಿಳಾಸ, ನೋಂದಣಿ ಸಂಖ್ಯೆ ಇತ್ಯಾದಿ ವಿವರಗಳನ್ನು ಪಡೆಯಲು ರಚಿತಗೊಂಡಿವೆ. ನಂತರದಲ್ಲಿ ಪ್ರವರ್ತಕನ ಮಾಹಿತಿ ಪಡೆಯುವ ೧೧ ಪ್ರಶ್ನೆಗಳು, ನೋಂದಣಿಯ ೪, ಹಣಕಾಸು ನಿರ್ವಹಣೆಯ ೧೩, ಉತ್ಪಾದನೆ ಚಟುವಟಿಕೆಗಳ-೬, ಮಾರುಕಟ್ಟೆಯ-೮, ಮಾನವ ಸಂಪನ್ಮೂಲದ ೧೭ ಮತ್ತು ಇನ್ನಿತರ ವಿಷಯಗಳಿಗೆ ಸಂಬಂಧಿಸಿದ ೨೦ ಪ್ರಶ್ನೆಗಳನ್ನು ರೂಪಿಸಿ **ಅಭಿಪ್ರಾಯವನ್ನು ಖುದ್ದಾಗಿ ಭೇಟಿ ನೀಡಿ ಸಂಗ್ರಹಿಸಿದ್ದು, ಕೋಷ್ಟಕಗಳನ್ನು ಸಿದ್ಧಪಡಿಸಿದ್ದು ಅದರ ವಿಸ್ತೃತ ವಿಶ್ಲೇಷಣೆ** ಇಲ್ಲಿದೆ.

೧) ಪ್ರವರ್ತನ ಹಂತ :

೫.೩.೧- ಪ್ರವರ್ತಕರಾಗಲು ಕಾರಣಗಳು :

ಬೃಹತ್ ಕಂಪನಿಗಳ ಸ್ಥಾಪನೆಯಲ್ಲಿ ಪ್ರವರ್ತನೆ ಹಂತವು ಅತ್ಯಂತ ಪ್ರಾಮುಖ್ಯ. ಅದು ಎಷ್ಟು ತೀವ್ರವಾಗಿ, ಯಶಸ್ವಿಯಾಗಿ ಪೂರ್ತಿಗೊಳ್ಳುವುದೋ ಅಷ್ಟು ಕಡಿಮೆ ಅವಧಿಯಲ್ಲಿ ಮಾರುಕಟ್ಟೆಯಲ್ಲಿ ನೆಲೆಯೂರಲು ಸಾಧ್ಯವಾಗುತ್ತದೆ. ಈ ಹಂತದಲ್ಲಿ ಪ್ರವರ್ತಕರಲ್ಲಿ ವ್ಯವಹಾರ ಸ್ಥಾಪನೆಯ ವಿಚಾರ ಹೊಳೆದದ್ದು ಹೇಗೆ? ಎಂಬುದನ್ನು ತಿಳಿಯುವುದರಿಂದ ಉದ್ಯಮಶೀಲರನ್ನು ಹೇಗೆ ನಿರ್ಮಿಸಬಹುದೆಂದು ತಿಳಿಯುತ್ತದೆ. ಕೆಲವೊಮ್ಮೆ ಸರ್ಕಾರ ಘೋಷಿಸುವ ಸೌಕರ್ಯಗಳನ್ನು ಬಳಸಿಕೊಳ್ಳಲು ಅಥವಾ ಆಯಾ ಸಂದರ್ಭದಲ್ಲಿರುವ ಪರಿಸ್ಥಿತಿಯ ಲಾಭ ಪಡೆಯಲು ಅಥವಾ ವಿಪುಲ ಅವಕಾಶಗಳಿರುವ ಪ್ರೇರಣೆಯಿಂದ ಮತ್ತು ಇತರ ಯಾವ ಕಾರಣದಿಂದ ಪ್ರವರ್ತನಕಾರರು ರೂಪಗೊಂಡರೆಂದು ತಿಳಿಯುವ ಪ್ರಯತ್ನ ಮಾಡಲಾಗಿದೆ.

ಕೋಷ್ಟಕದಲ್ಲಿ ೫.೧ : ಪ್ರವರ್ತಕರಾಗಲು ಕಾರಣಗಳು

ಅ.ಸಂ.	ವಿವರ	ಪ್ರತಿಸ್ಪಂದಿಗಳು	ಪ್ರತಿಶತ
೧	ಪ್ರವರ್ತಕರ ಸ್ವ-ವಿಚಾರ	೦೯	೮೨
೨	ಸರಕಾರದ ನೀತಿ	-	-
೩	ಈ ತೆರನಾದ ಅಸ್ತಿತ್ವದ ಘಟಕಗಳು	-	-
೪	ವಿಫುಲ ಸೌಕರ್ಯಗಳು	೦೧	೯
೫	ಪರಿಸ್ಥಿತಿಯ ಪ್ರಯೋಜನ ಪಡೆಯಲು	-	-
೬	ಇತರೆ ಕಾರಣಗಳು	೦೧	೯
	ಒಟ್ಟು	೧೧	೧೦೦

ಈ ಕೋಷ್ಟಕದಲ್ಲಿ ಆಯ್ದ ಕಂಪನಿಗಳಲ್ಲಿಯ ಪ್ರವರ್ತಕರು ಯಾವ ಕಾರಣಗಳಿಂದ ಉತ್ತೇಜಿತರಾದರೆಂಬುದು ಸ್ಪಷ್ಟವಾಗಿ ಕಂಡು ಬರುತ್ತದೆ. ಒಟ್ಟು ಹತ್ತು ಪ್ರತಿಸ್ಪಂದಿಗಳಲ್ಲಿ ಅತ್ಯಧಿಕ ಪ್ರವರ್ತಕರು ತಮ್ಮ ಸ್ವಂತ ವಿಚಾರ ಮತ್ತು ಕಲ್ಪನೆಗಳಿಂದಲೇ ಘಟಕಗಳ ಸ್ಥಾಪನೆಗೆ ಮನಸ್ಸು ಮಾಡಿ, ಅದನ್ನು ಯಶಸ್ವಿಯಾಗಿ ಸ್ಥಾಪಿಸಿದವರಿದ್ದಾರೆ. ನಂತರ ವಿರಳ ಸಂಖ್ಯೆಯ ಪ್ರತಿಸ್ಪಂದಿಗಳು ವಿಫುಲ ಸೌಕರ್ಯಗಳಿದ್ದುದು ಮತ್ತು ಸರ್ಕಾರವು ಘೋಷಿಸಿರುವ ಸೌಕರ್ಯಗಳ ಪ್ರಯೋಜನ ಪಡೆಯಬೇಕೆಂಬುದು ಪ್ರೇರಕಗಳಾಗಿವೆ.

ಆದ್ದರಿಂದ ಸಾಕಷ್ಟು ಪ್ರವರ್ತಕರಿಗೆ ಅವರಲ್ಲಿರುವ ವಿಚಾರ-ಯೋಜನೆ ಕಲ್ಪನೆಗಳು ಮುಖ್ಯವಾದದ್ದೆಂದು ವಿಹಿತವಾಗುತ್ತದೆ. ಯುವ ಜನತೆಯಲ್ಲಿ ಉದ್ದಯಮಶೀಲತೆಯ ತರಬೇತಿಗಳನ್ನು ನೀಡುವದರಿಂದ ಘಟಕಗಳ ಬಗ್ಗೆ ವಿಚಾರದಲ್ಲಿ ತೊಡಗುವಂತೆ ಮಾಡಬಹುದು.

೫.೩.೨ ಕಾಗದ ಪತ್ರಗಳನ್ನು ಸಿದ್ಧ ಪಡಿಸುವುದು :

ಕಂಪನಿಯೊಂದನ್ನು ಹುಟ್ಟುಹಾಕಬೇಕೆಂಬ ಕಲ್ಪನೆ ಮನದೊಳಗೆ ಮೂಡಿದಾಗ ಅದಕ್ಕೆ ಪೂರಕವಾಗಿ ಕಾರ್ಯ ನಿರ್ವಹಿಸುವುದು ಮತ್ತು ಸ್ಥಾಪನೆಯ ಬಗ್ಗೆ ಯೋಜನೆಗಳನ್ನು ಸಿದ್ಧಪಡಿಸುವದು

ಅತ್ಯಂತ ಮಹತ್ವದ ಹೆಜ್ಜೆ. ಅತ್ಯುತ್ತಮವಾಗಿ ಪ್ರಾರಂಭಗೊಳ್ಳುವದು ಅರ್ಧದಷ್ಟು ಯಶಸ್ಸನ್ನು ಸಾಧಿಸಿದಂತೆಯೆ ಸರಿ! ಇದರಲ್ಲಿ ನೋಂದಣಿಯ ತಯಾರಿಯು ಮಹತ್ವದ್ದು. ಅದಕ್ಕೆ ಸಂಬಂಧಿಸಿದ ಕಾಗದ ಪತ್ರಗಳನ್ನು ವ್ಯವಸ್ಥಿತವಾಗಿ ತಯಾರುಗೊಳಿಸುವುದು, ಸಂಬಂಧಿಸಿದ ಕಾನೂನು ಪರಿಚ್ಛೇದಗಳ ಪಾಲನೆ, ಇಲಾಖೆಗಳ ಅನುಮತಿ ಇತ್ಯಾದಿಗಳನ್ನು ಪೂರ್ತಿಗೊಳಿಸಲು ಸರಿಯಾದ ಜ್ಞಾನವಿರಬೇಕು. ಸ್ವಜ್ಞಾನ ಇರದಿದ್ದ ಪಕ್ಷದಲ್ಲಿ ಇಂತಹ ಸೇವೆಗಳನ್ನು ಪೂರೈಸುವ ವೃತ್ತಿಪರ ವ್ಯಕ್ತಿಗಳು ಅಥವಾ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿದ್ದಾರೆ. ಅವರ ಸೇವೆಯೊಂದಿಗೆ ಮುಂದುವರೆಯಬಹುದು. ಈ ಕುರಿತು ಅಭಿಪ್ರಾಯ ತಿಳಿಯಲು ರಚಿಸಿದ ಪ್ರಶ್ನೆಗೆ ಪ್ರತಿಸ್ಪಂದಿಗಳ ಉತ್ತರವನ್ನು **ಕೋಷ್ಟಕ ೫.೨**ರಲ್ಲಿ ಕಾಣಬಹುದು.

ಕೋಷ್ಟಕ ೫.೨ : ಕಾಗದ ಪತ್ರಗಳನ್ನು ಸಿದ್ಧಪಡಿಸಿದ ರೀತಿ

ಅ.ಸಂ.	ವಿವರ	ಪ್ರತಿಸ್ಪಂದಿಗಳು	ಪ್ರತಿಶತ
೧	ಪ್ರವರ್ತಕರ ಸ್ವ-ಜ್ಞಾನ	೦೫	೩೬
೨	ವೃತ್ತಿಪರ-ಸಲಹಾಗಾರರು	೦೪	೨೯
೩	ಅಭಿವೃದ್ಧಿ ಬ್ಯಾಂಕುಗಳು	೦೧	೦೭
೪	ವರ್ತಕ (ಮರ್ಚಂಟ್) ಬ್ಯಾಂಕುಗಳು	-	-
೫	ಬ್ಯಾಂಕಿನ ವರ್ತಕ ಬ್ಯಾಂಕುಗಳು	-	-
೬	ಸರ್ಕಾರದ ಇಲಾಖೆಗಳು	೦೪	೨೮
೭	ಇತರೆ	-	-
	ಒಟ್ಟು	೧೪	೧೦೦

ಈ ಕೋಷ್ಟಕವನ್ನು ಅಭ್ಯಸಿಸಿದಾಗ ಪ್ರತಿಸ್ಪಂದಿಗಳು ಒಂದಕ್ಕಿಂತ ಹೆಚ್ಚಿನ ಮೂಲಗಳ ಸಹಾಯ ಪಡೆದದ್ದು ಸ್ಪಷ್ಟವಾಗುತ್ತದೆ. ಏಕೆಂದರೆ ಹತ್ತು ಪ್ರತಿಸ್ಪಂದಿಗಳು ಹದಿನಾಲ್ಕು ಅಭಿಪ್ರಾಯಗಳನ್ನು ನೀಡಿದ್ದಾರೆ. ಇವರಲ್ಲಿ ತಮ್ಮ ಸ್ವ-ಜ್ಞಾನದಿಂದ ಕಾಗದ ಪತ್ರಗಳನ್ನು ಸಿದ್ಧಪಡಿಸುವಾಗ ವೃತ್ತಿಪರರ ಸಹಾಯವನ್ನು ಪಡೆಯುವ ಸಾಧ್ಯತೆಯಿದೆ. ಇಲ್ಲವೇ ಸರ್ಕಾರದ ಇಲಾಖೆ ಅಧಿಕಾರಿಗಳ ಸಲಹೆಯನ್ನು ಪಡೆದಿದ್ದಾರೆ. ಒಟ್ಟು ಪ್ರತಿಸ್ಪಂದಿಗಳಲ್ಲಿ ಹೆಚ್ಚಿನ ಪತ್ರವರ್ತಕರು ತಮ್ಮ ಸ್ವ-ಜ್ಞಾನದಿಂದಲೇ ಕಾಗದ ಪತ್ರಗಳನ್ನು ತಯಾರಿಗೊಳಿಸಿದ್ದಾರೆ. ಹೆಚ್ಚು ಕಡಿಮೆ ಅಷ್ಟೇ ಸಂಖ್ಯೆಯ ಪ್ರತಿಸ್ಪಂದಿಗಳು ಕ್ರಮವಾಗಿ ವೃತ್ತಿಪರಿಣಿತರ ಸಹಾಯ ಮತ್ತು ಸರ್ಕಾರದ ಇಲಾಖೆಗಳ ಮೊರೆಹೋಗಿದ್ದು ಕಂಡು ಬರುತ್ತದೆ. ಅಭಿವೃದ್ಧಿ ಬ್ಯಾಂಕುಗಳಿಂದ ಸಹಾಯ ಪಡೆದವರಲ್ಲಿ ಕೆಲವರು ಮಾತ್ರ. ಯಾವ ಪ್ರತಿಸ್ಪಂದಿಗಳು ಖಾಸಗಿ ವರ್ತಕ(ಮರ್ಚ್‌ಂಟ್) ಬ್ಯಾಂಕುಗಳಿಂದಾಗಲಿ ಅಥವಾ ಬ್ಯಾಂಕಿನ ವರ್ತಕ ಸೇವೆಯ ಸಲಹೆಗಳನ್ನು ಪಡೆದಿರುವದಿಲ್ಲ. ಬಹುಶ: ಇವುಗಳ ಸೌಲಭ್ಯ ಅವರ ಸ್ಥಾಪನಾ ಹಂತದಲ್ಲಿ ಲಭ್ಯವಿರದಿರಬಹುದು.

ಕಂಪನಿಗಳ ಸ್ಥಾಪನೆಯಲ್ಲಿ ವರ್ತಕ ಬ್ಯಾಂಕುಗಳ ಸೇವೆ ಎಷ್ಟು ಸರಳ ಮತ್ತು ಸಾಕಷ್ಟು ಚಲನಾಶೀಲವಾಗಿ ಲಭ್ಯವಿರುವುವೋ, ಅಷ್ಟು ಹೆಚ್ಚು ಸಂಖ್ಯೆಯ ಕಂಪನಿಗಳು ಸ್ಥಾಪನೆಗೊಳ್ಳುವ ಸಾಧ್ಯಗಳಿರುತ್ತವೆ. ಇವರ ಕೊರತೆಯು ಉದ್ದಿಮೆ ಅಭಿವೃದ್ಧಿಗೆ ಅಡೆ-ತಡೆಯಾಗಿರುವ ವಿಷಯ ಸ್ಪಷ್ಟಗೊಳ್ಳುತ್ತದೆ.

೫.೩.೩ ಪ್ರವರ್ತಕರ ಹಿನ್ನೆಲೆ :

ಪ್ರವರ್ತಕರಾಗಿ ಹೊರಹೊಮ್ಮಬೇಕಾದರೆ ಅವರಿಗೆ ಯಾವುದಾದರೂ ಮೂಲದಿಂದ ಪ್ರೇರಣೆ ದೊರಕಿರಬೇಕಾಗುತ್ತದೆ. ಪ್ರಾಥಮಿಕ ಹಂತದಲ್ಲಿ ಅದರ ಕುರಿತು ಏನಾದರೂ ಮಾಹಿತಿ, ಅನುಭವ ಚಿಂತನೆಗೆ ಗ್ರಾಸವಾಗಿರುತ್ತದೆ. ಇದರ ಬಗ್ಗೆ ಅಭಿಪ್ರಾಯ ಸಂಗ್ರಹಿಸಿದ್ದನ್ನು **ಕೋಷ್ಟಕ ೫.೩**ರಲ್ಲಿ ನೀಡಲಾಗಿರುತ್ತದೆ.

ಕೋಷ್ಟಕ ೫.೩ ಪ್ರವರ್ತಕರ ಹಿನ್ನೆಲೆ

ಅ.ಸಂ.	ವಿವರ	ಪ್ರತಿಸ್ಪಂದಿಗಳು	ಪ್ರತಿಶತ
೧	ಸರ್ಕಾರದ ಇಲಾಖೆಯಿಂದ ತರಬೇತಿ	೦೨	೨೦
೨	ಇತರ ಉದ್ದಿಮೆಗಳಲ್ಲಿ ನಿರ್ವಾಹಣೆ ಅನುಭವ	೦೪	೪೦
೩	ಸಂಪೂರ್ಣ ಹೊಸ ವಿಚಾರ	೦೪	೪೦
೪	ತಮ್ಮ ಉದ್ದಿಮೆಯಲ್ಲಿನ ಅನುಭವ	-	-
	ಒಟ್ಟು	೧೦	೧೦೦

ಈ ಅಭಿಪ್ರಾಯಗಳ ವಿಶ್ಲೇಷಣೆಯಿಂದ ಸ್ಪಷ್ಟಗೊಳ್ಳುವ ಅಂಶವೇನೆಂದರೆ ಜಿಲ್ಲೆಯ ಉದ್ದಿಮೆದಾರರು ತಾವು ಪ್ರವರ್ತಕರಾಗುವ ಮೊದಲೇ ಉದ್ದಿಮೆಯಲ್ಲಿ ನಿರ್ವಹಣೆಯ ಅನುಭವ ಹೊಂದಿದ್ದರೆಂಬುದು ತಿಳಿಯುತ್ತದೆ. ಅಲ್ಲದೇ ಸಂಪೂರ್ಣವಾಗಿ ತಮ್ಮ ಸ್ವಂತ ವಿಚಾರದಿಂದಲೇ ಹೊಸ ಕಂಪನಿಗಳ ಕನಸು ಕಂಡು, ಅದರ ಸ್ಥಾಪನೆಗೆ ಮುಂದಾಗಿದ್ದು ಕಂಡು ಬರುತ್ತದೆ. ಆದರೆ ಸರ್ಕಾರದ ಇಲಾಖೆಗಳಿಂದ ತರಬೇತಿ ಹೊಂದಿ ಉದ್ದಿಮೆದಾರರಾದವರು ಅಲ್ಪ ಪ್ರಮಾಣದಲ್ಲಿದ್ದಾರೆ.

ಆದ್ದರಿಂದ ಸರ್ಕಾರದ ಉದ್ದಿಮೆ ತರಬೇತಿ ಸಂಸ್ಥೆಗಳು ಇನ್ನೂ ಹೆಚ್ಚಿನ ಉದ್ಯಮಶೀಲತೆಯನ್ನು ವೃದ್ಧಿಸುವುದು ಅವಶ್ಯವೆನಿಸುತ್ತದೆ.

೫.೩.೪ ಪೂರಕ ಸೇವೆಗಳ ಲಭ್ಯತೆ :

ಘಟಕಗಳು ಹೆಚ್ಚಿನ ಸಂಖ್ಯೆಯಲ್ಲಿ ಸರಾಗವಾಗಿ ಸ್ಥಾಪನೆಗೊಳ್ಳಬೇಕಾದರೆ ಅದಕ್ಕೆ ಸಂಬಂಧಿಸಿದ ಪೂರಕ ಸೇವೆಗಳ ಲಭ್ಯತೆಯು ಹೆಚ್ಚಾಗಿರಬೇಕು. ಅವುಗಳ ಕೊರತೆಯಿದ್ದರೆ ಜನರಲ್ಲಿ ಹಿಂಜರಿಕೆಯುಂಟಾಗುತ್ತದೆ. ಜಿಲ್ಲೆಯ ಪ್ರವರ್ತಕರನ್ನು ಈ ಕುರಿತು ಪ್ರಶ್ನಿಸಿದಾಗ, ಅವರ ಅಭಿಪ್ರಾಯ-ಗಳು ಸಕಾರಾತ್ಮಕವಾಗಿ ಕಂಡು ಬರಲಿಲ್ಲ. ಇದನ್ನು **ಕೋಷ್ಟಕ ೫.೪**ರಲ್ಲಿ ಸ್ಪಷ್ಟಗೊಳಿಸಲಾಗಿದೆ.

ಕೋಷ್ಟಕ ೫.೪ : ಪೂರಕ ಸೇವೆಗಳ ಕುರಿತು ಅಭಿಪ್ರಾಯ

ಅ.ಸಂ.	ವಿವರ	ಪ್ರತಿಸ್ಪಂದಿಗಳು	ಪ್ರತಿಶತ
೧	ಪರಿಣಿತ ಸಲಹೆಗಾರರ ಅಲಭ್ಯತೆ	೦೫	೫೦
೨	ವರ್ತಕ ಬ್ಯಾಂಕರುಗಳ ಕಾಳಜಿಯ ಕೊರತೆ	೦೨	೨೦
೩	ವರ್ತಕ ಬ್ಯಾಂಕರುಗಳು ನಗರ ಕೇಂದ್ರಿತ	೦೨	೨೦
೪	ಉತ್ತಮ ಪರಿಣತ ಸೇವೆ	೦೧	೧೦
	ಒಟ್ಟು	೧೦	೧೦೦

ಜಿಲ್ಲೆಯಲ್ಲಿ ಪರಿಣಿತ ಸಲಹೆಗಾರರು- ವೃತ್ತಿಪರಿಣಿತರು ಲಭ್ಯವಿರುವದಿಲ್ಲವೆಂದು ಶೇ. ೫೦ರಷ್ಟು ಪ್ರತಿಸ್ಪಂದಿಗಳು ಅಭಿಪ್ರಾಯಿಸುತ್ತಾರೆ. ಅದರಂತೆ ವರ್ತಕ ಬ್ಯಾಂಕರುಗಳು ಉದ್ದಿಮೆಗಳ ಸ್ಥಾಪನೆಗೆ ಪ್ರಾರಂಭದ ಹಂತದಿಂದ ಸ್ಥಾಪನೋತ್ತರದ ಹಂತಗಳಲ್ಲಿಯೂ ಎಲ್ಲ ತರಹದ ಸೇವೆಗಳನ್ನು ನೀಡುವ ಭರವಸೆಯನ್ನು ನೀಡುತ್ತಾರೆ. ಅವರು ಅದೇ ಕ್ಷೇತ್ರದಲ್ಲಿ ವೃತ್ತಿಪರರಾಗಿ ತೊಡಗಿಕೊಂಡವರು. ಇಂತಹ ಖಾಸಗಿ ಸೇವೆಯ ವರ್ತಕ ಬ್ಯಾಂಕರುಗಳ ಕಾಳಜಿಯ ಸೇವೆಗಳ ಕೊರತೆಯಿದೆಯೆಂದು ಕೆಲವು ಪ್ರತಿಸ್ಪಂದಿಗಳು ಹೇಳಿದ್ದಾರೆ.

ಬ್ಯಾಂಕುಗಳು ನೀಡುವ ವರ್ತಕ ಬ್ಯಾಂಕಿನ ಸೇವೆಗಳು ಎಲ್ಲೆಡೆ ಲಭ್ಯವಿರದೇ ಕೇವಲ ನಗರ ಕೇಂದ್ರಿತವಾಗಿವೆಯೆಂದು ಇನ್ನುಳಿದ ಪ್ರತಿಸ್ಪಂದಿಗಳು ಅಭಿಪ್ರಾಯಿಸುತ್ತಾರೆ. ಕನಿಷ್ಠ ಸಂಖ್ಯೆಯ ಪ್ರತಿಸ್ಪಂದಿಗಳು ಅವರ ಸೇವೆಯು ಉತ್ತಮವಾಗಿದೆಯೆಂದು ಹೇಳುತ್ತಾರೆ.

ಒಟ್ಟಾರೆ, ಶೇ. ೯೦ರಷ್ಟು ಪ್ರತಿಸ್ಪಂದಿಗಳ ಪ್ರಕಾರ ಪೂರಕ ಸೇವೆಗಳು ಸಮರ್ಪಕವಾಗಿಲ್ಲವೆಂದು ಕಂಡು ಬರುತ್ತದೆ.

೫.೩.೫ : ಪ್ರವರ್ತನೆಯ ವೆಚ್ಚ :

ಕಂಪನಿಗಳು ಸ್ಥಾಪನೆಯಾಗಲು ಪ್ರಾರಂಭದಲ್ಲಿಯ ಕಾರ್ಯಗಳನ್ನು ಪೂರ್ತಿಗೊಳಿಸಲು ಸಾಕಷ್ಟು ವೆಚ್ಚ ತಗಲುತ್ತದೆ. ಅದು ಅನಿವಾರ್ಯ, ಇಲ್ಲದಿದ್ದರೆ ಕಂಪನಿಗಳ ಹುಟ್ಟು ಅಸಾಧ್ಯ. ಈ ವೆಚ್ಚಗಳ ಸ್ವರೂಪ ಕುರಿತು ಪಡೆದ ಅಭಿಪ್ರಾಯಗಳನ್ನು **ಕೋಷ್ಟಕ- ೫.೫**ರಲ್ಲಿ ನೀಡಲಾಗಿದೆ.

ಕೋಷ್ಟಕ ೫.೫ : ಪ್ರವರ್ತನಾ ವೆಚ್ಚದ ಸ್ವರೂಪ

ಅ.ಸಂ.	ವಿವರ	ಪ್ರತಿಸ್ಪಂದಿಗಳು	ಪ್ರತಿಶತ
೧	ಸಮಂಜಸವಾಗಿದೆ	೦೮	೮೦
೨	ಕಡ್ಡಾಯ ವೆಚ್ಚ	೦೨	೨೦
೩	ಅಸಮಂಜಸ, ಅತೀ ಭಾರ	-	-
	ಒಟ್ಟು	೧೦	೧೦೦

ಒಟ್ಟು ಪ್ರತಿಸ್ಪಂದಿಗಳ ಪೈಕಿ, ಬಹುತೇಕ ಪ್ರತಿಸ್ಪಂದಿಗಳು ಪ್ರವರ್ತನಾ ವೆಚ್ಚಗಳು ಭಾರವೆನಿಸಿಲ್ಲವೆಂಬ ಅಭಿಪ್ರಾಯ ನೀಡಿದ್ದಾರೆ. ಅವರು ತಮ್ಮ ಕಂಪನಿ ಸ್ಥಾಪನೆಗಾಗಿ ಮಾಡಿದ ವೆಚ್ಚವು ಸಮಂಜಸವಾಗಿದೆಯೆಂದು ಸ್ಪಷ್ಟಗೊಳಿಸಿದ್ದಾರೆ. ಅದರಂತೆಯೇ, ಈ ವೆಚ್ಚಗಳು ಅನಿವಾರ್ಯವಾಗಿದ್ದು ಅವುಗಳನ್ನು ತೊಡೆದು ಹಾಕುವದು ಸಾದ್ಯವೇ ಇಲ್ಲವೆಂದು ಇನ್ನುಳಿದ ಪ್ರತಿಸ್ಪಂದಿಗಳು ತಿಳಿಸುತ್ತಾರೆ. ಯಾರೊಬ್ಬರು ಸಹ ಈ ವೆಚ್ಚಗಳು ಅಸಮಂಜಸವಾಗಿವೆ ಇಲ್ಲವೇ ಅತೀ ಭಾರವಾಗಿವೆಯೆಂದು ಹೇಳಿರುವುದಿಲ್ಲ. ಹೀಗಾಗಿ, ಸ್ಥಾಪನೆಯ ಹಂತದ ಪ್ರವರ್ತನಾ ವೆಚ್ಚಗಳು ಅನಿವಾರ್ಯವಾಗಿ ಎಲ್ಲರೂ ಭರಿಸಬೇಕಾದ್ದು ಸರ್ವವಿಹಿತ.

ಈ ಹಿಂದಿನ ಕೋಷ್ಟಕದಲ್ಲಿ ಪ್ರತಿಸ್ಪಂದಿಗಳು ಸೂಚಿಸಿದಂತೆ ಪ್ರವರ್ತನೆಯ ವೆಚ್ಚಗಳು ಯಾರಿಗೂ ಬಿಟ್ಟಿದ್ದಿಲ್ಲವೆಂದು ಅರಿತುಕೊಂಡಿದ್ದೇವೆ. ಅದರ ಗಾತ್ರವನ್ನು ಅಂದಾಜಿಸಿ, ಅದನ್ನು ಸಕಾಲಕ್ಕೆ ಭರಿಸುವ ಹಣಕಾಸಿನ ವ್ಯವಸ್ಥೆಯನ್ನು ಮಾಡಿಕೊಂಡಿರಬೇಕಾಗುತ್ತದೆ.

ಕೋಷ್ಟಕ ೫.೬ : ಸ್ಥಾಪನಾ ವೆಚ್ಚವನ್ನು ವ್ಯವಸ್ಥೆಗೊಳಿಸಿದ ಬಗ್ಗೆ

ಅ.ಸಂ.	ವಿವರ	ಪ್ರತಿಸ್ಪಂದಿಗಳು	ಪ್ರತಿಶತ
೧	ಹಣಕಾಸು ಸಂಸ್ಥೆಗಳಿಂದ ಸಹಾಯ	೦೮	೩೬
೨	ಬ್ಯಾಂಕುಗಳು ಪ್ರವರ್ತನಾ ಸಾಲ	೦೫	೨೩
೩	ವರ್ತಕ ಬ್ಯಾಂಕುಗಳಿಂದ ಹಣಕಾಸು	-	-
೪	ಪ್ರವರ್ತಕ ವಂತಿಗೆ	೦೫	೨೩
೫	ಸರ್ಕಾರದ ಹಣಕಾಸು	೦೩	೧೪
೬	ಶೇರು ಬಂಡವಾಳ	೦೧	೦೪
	ಒಟ್ಟು	೨೨	೧೦೦

ಈ ಕೋಷ್ಟಕದಲ್ಲಿಯ ಪ್ರತಿಸ್ಪಂದಿಗಳ ನೀಡಿದ ಉತ್ತರಗಳು ಅಧಿಕ ಸಂಖ್ಯೆಯಲ್ಲಿವೆ. ಅಂದರೆ ವ್ಯವಸ್ಥಾಪನಾ ವೆಚ್ಚಗಳನ್ನು ಭರಿಸಲು ಕೇವಲ ಒಂದೊಂದು ಮೂಲಗಳ ಮೇಲೆ ಅವಲಂಬಿತರಾಗದೇ, ಒಬ್ಬೊಬ್ಬರು ಹಲವಾರು ಮೂಲಗಳಿಂದ ವೆಚ್ಚ ಭರಿಸುವ ದಾರಿಯನ್ನು ಕಂಡುಕೊಂಡಿದ್ದು ತಿಳಿದು ಬರುತ್ತದೆ.

ಹೆಚ್ಚಿನ ಸಂಖ್ಯೆ ಪ್ರತಿಸ್ಪಂದಿಗಳು ಹಣಕಾಸು ಸಂಸ್ಥೆಗಳಿಂದ ಸಾಲವನ್ನು ಪಡೆದಿದ್ದಾರೆ. ಅದರಂತೆ ಇನ್ನು ಕೆಲವು ಪ್ರತಿಸ್ಪಂದಿಗಳು ಬ್ಯಾಂಕುಗಳಿಂದ ಸಾಲ ಪಡೆದರೆ, ಅಷ್ಟೇ ಸಂಖ್ಯೆಯ ಪ್ರತಿಸ್ಪಂದಿಗಳು ಪ್ರವರ್ತಕರ ವಂತಿಗೆಯೆಂದು ಹಣ ಸಂಗ್ರಹಣೆ ಮಾಡಿ ಸ್ಥಾಪನಾ ವೆಚ್ಚಗಳನ್ನು ನಿಭಾಯಿಸಿದ್ದಾರೆ. ಕೆಲವು ಪ್ರತಿಸ್ಪಂದಿಗಳು ಸರಕಾರದಿಂದ ಹಣಕಾಸನ್ನು ಪಡೆದರೆ, ಶೇರು ಬಂಡವಾಳದ ಹಣವನ್ನು ಇದ್ದಕ್ಕಾಗಿ ಬಳಸಿದವರು ಅತೀ ಕನಿಷ್ಠ ಸಂಖ್ಯೆಯಲ್ಲಿದ್ದಾರೆ.

ಆದ್ದರಿಂದ ಹಣಕಾಸಿನ ಸಂಸ್ಥೆಗಳು ಸ್ಥಾಪನಾ ವೆಚ್ಚಕ್ಕಾಗಿ ಹಣಕಾಸು ನೀಡಿದ್ದು ಪ್ರಶಂಸನೀಯವೆನಿಸುತ್ತದೆ.

೫.೩.೭ : ಸ್ಥಾಪನಾ ವೆಚ್ಚ ತೊಡೆದು ಹಾಕುವ ಅವಧಿ :

ಘಟಕಗಳ ಸ್ಥಾಪನೆಗೆ ಮಾಡಿದ ವೆಚ್ಚವನ್ನು ಕಂಪನಿಯು ಕಾರ್ಯಗೈಯ್ಯುವದನ್ನು ಪ್ರಾರಂಭಿಸಿದ ಒಂದು ಅಥವಾ ಎರಡು ವರ್ಷಗಳಲ್ಲಿ ಲಾಭ-ನಷ್ಟ ಖಾತೆಗೆ ಖರ್ಚು ಹಾಕಲಾಗದು. ಈ ಹೆಚ್ಚಿನ ವೆಚ್ಚವನ್ನು ಹಲವಾರು ವರ್ಷಗಳವರೆಗೆ ಅಲ್ಪ-ಪ್ರಮಾಣದಲ್ಲ ಖರ್ಚು ಹಾಕುತ್ತಾ, ನಿಧಾನವಾಗಿ ಸಂಪೂರ್ಣವಾಗಿ ಖಾತೆಯಿಂದ ತೊಡೆದು ಹಾಕಲಾಗುತ್ತದೆ. ಪ್ರಸ್ತುತ ಪ್ರತಿಸ್ಪಂದಿಗಳು ಪಾಲಿಸುವ ನೀತಿಯ ಬಗ್ಗೆ ಕೇಳಿದ ಪ್ರಶ್ನೆಗೆ ಅವರು ನೀಡಿದ ಅಭಿಪ್ರಾಯಗಳನ್ನು **ಕೋಷ್ಟಕ ೫.೭**ರಲ್ಲಿ ನೀಡಲಾಗಿದೆ.

ಕೋಷ್ಟಕ ೫.೭ : ಸ್ಥಾಪನಾ ವೆಚ್ಚ ತೊಡೆದು ಹಾಕುವ ಅವಧಿ

ಅ.ಸಂ.	ವಿವರ	ಪ್ರತಿಸ್ಪಂದಿಗಳು	ಪ್ರತಿಶತ
೧	ಐದು ವರ್ಷ	೦೧	೧೦
೨	ಐದರಿಂದ ಹತ್ತು ವರ್ಷ	೦೫	೫೦
೩	ಹತ್ತು ವರ್ಷಕ್ಕಿಂತ ಹೆಚ್ಚು	೦೪	೪೦
	ಒಟ್ಟು	೧೦	೧೦೦

ಮೇಲಿನ ಕೋಷ್ಟಕವನ್ನು ಅವಲೋಕಿಸಿದಾಗ ತಿಳಿದು ಬರುವ ಅಂಶವೇನೆಂದರೆ ಹೆಚ್ಚಿನ ಪ್ರತಿಸ್ಪಂದಿಗಳು ಸ್ಥಾಪನಾ ವೆಚ್ಚವನ್ನು ೫ ರಿಂದ ೧೦ ವರ್ಷಗಳವರೆಗೆ (ಮಧ್ಯಮ ಅವಧಿಯಲ್ಲಿ) ತೊಡೆದು ಹಾಕುತ್ತಾರೆಂದು ತಿಳಿಯುತ್ತದೆ. ಇನ್ನೂ ಹಲವು ಪತ್ರಿಸ್ಪಂದಿಗಳು ದೀರ್ಘಾವಧಿಯವರೆಗೆ, ಅಂದರೆ ಹತ್ತು ವರ್ಷಕ್ಕೂ ಹೆಚ್ಚಿನ ಅವಧಿಯಲ್ಲಿ ಅಲ್ಪವಾಗಿ ತೊಡೆದುಹಾಕುತ್ತಾರೆ. ಆದರೆ ಕೆಲವೆ ಪ್ರತಿಸ್ಪಂದಿಗಳು ಮಾತ್ರ ಐದು ವರ್ಷದೊಳಗಾಗಿ ಅಲ್ಪಾವಧಿಯಲ್ಲಿ ಖರ್ಚು ಹಾಕುತ್ತಾರೆ.

ಕೆಲವೊಂದು ವರ್ಷಗಳಲ್ಲಿ ಅಧಿಕ ಲಾಭವಾಗುವ ನಿರೀಕ್ಷೆಯಿದ್ದಾಗ, ಪಾವತಿಸಬೇಕಾದ ತೆರಿಗೆಯನ್ನು ಕಡಿಮೆಗೊಳಿಸಲು ಹೆಚ್ಚಿನ ಮೊತ್ತದ ವೆಚ್ಚಗಳನ್ನು ಖರ್ಚು ಹಾಕುವ ನಿರ್ಧಾರ ಕೈಗೊಳ್ಳಬಹುದು.

೫.೩.೮ : ಸ್ಥಾಪನಾ ವೆಚ್ಚದ ಪರಿಣಾಮ :

ಭಾರವಾದ ಸ್ಥಾಪನಾವೆಚ್ಚವು ಕಂಪನಿಯು ಗಳಿಸುವ ಲಾಭ ಮತ್ತು ಶೇರುದಾರರಿಗೆ ನೀಡುವ ಲಾಭಾಂಶದ ಮೇಲೆ ಪರಿಣಾಮ ಬೀರುವ ಸಾಧ್ಯತೆಗಳಿರುತ್ತವೆ. ಕೆಲವೇ ವರ್ಷಗಳಲ್ಲಿ ಸ್ಥಾಪನಾ ವೆಚ್ಚವನ್ನು ತೊಡೆದು ಹಾಕುವ ನಿರ್ಣಯಮಾಡಿದರೆ, ಪ್ರತಿ ವರ್ಷ ಹೆಚ್ಚು- ಹೆಚ್ಚು ವೆಚ್ಚವನ್ನು ಖರ್ಚು ಹಾಕಬೇಕಾಗುತ್ತದೆ. ಅದು ಲಾಭವನ್ನು ತಗ್ಗಿಸಿ, ನೀಡುವ ಲಾಭಾಂಶದ ಮೇಲೆ ಪರಿಣಾಮ ಬೀರುತ್ತದೆ. ಅಥವಾ ದೀರ್ಘಾವಧಿಯವರೆಗೆ ತೊಡೆದು ಹಾಕುವಂತಾದರೆ ಪ್ರತಿ ವರ್ಷವೂ ಅಲ್ಪ ಪರಿಣಾಮ ಹೊಂದಿರುತ್ತದೆ. ಆ ಕುರಿತು ಪ್ರತಿಸ್ಪಂದಿಗಳ ಅಭಿಪ್ರಾಯ ಮತ್ತು ಸ್ಥಾಪನಾ ವೆಚ್ಚವನ್ನು ಪ್ರಾರಂಭಲ್ಲಿ ಭರಿಸುವ ಸಾಮರ್ಥ್ಯ ಇರಬೇಕಾಗುತ್ತದೆ. ಸಾಕಷ್ಟು ಸಂಪನ್ಮೂಲ ಇರಲಾರದ್ದಕ್ಕೆ ಸ್ಥಾಪನೆಗೆ ಅಡೆತಡೆಯಾಗುವ ಸಾಧ್ಯತೆಗಳೂ ಇರುತ್ತವೆ. ಇದರ ಕುರಿತು ಕೇಳಿದ ಪ್ರಶ್ನೆಗಳಿಗೆ ಪ್ರತಿಸ್ಪಂದಿಗಳ ಅಭಿಪ್ರಾಯ **ಕೋಷ್ಟಕ ೫.೮**ರಲ್ಲಿ ನೀಡಿದಂತೆ ಕಂಡುಬರುತ್ತದೆ.

ಕೋಷ್ಟಕ ೫.೮ : ಸ್ಥಾಪನಾ ವೆಚ್ಚದ ಪರಿಣಾಮ

ಅ.ಸಂ.	ವಿವರ	ಪ್ರತಿಸ್ಪಂದಿಗಳು	ಪ್ರತಿಶತ
೧	ಬೀರಿದೆ	೦೬	೬೦
೨	ಬೀರಿಲ್ಲ	೦೪	೪೦
	ಒಟ್ಟು	೧೦	೧೦೦

ಈ ಕೋಷ್ಟಕದ ವಿಶ್ಲೇಷಣೆ ಮಾಡಿದಾಗ, ಗರಿಷ್ಟ ಸಂಖ್ಯೆಯ ಪ್ರತಿಸ್ಪಂದಿಗಳ ಅಭಿಪ್ರಾಯದಲ್ಲಿ ಸ್ಥಾಪನಾ ವೆಚ್ಚಗಳು ಅತ್ಯಧಿಕವಾಗಿವೆ. ಆದ್ದರಿಂದ ಅದು ಲಾಭದ ಪರಿಮಾಣ ಮತ್ತು ಲಾಭಾಂಶದ ಮೇಲೆ ಪರಿಣಾಮ ಬೀರಿದೆಯೆಂದು ಅಭಿಪ್ರಾಯಿಸಿದ್ದಾರೆ. ತದ್ವಿರುದ್ಧವಾಗಿ ಶೇ. ೪೦ರಷ್ಟು ಪ್ರತಿಸ್ಪಂದಿಗಳಿಗೆ ಅದು ಅಷ್ಟೇನು ಪರಿಣಾಮ ಬೀರಿಲ್ಲವೆಂದು ಗೊತ್ತಾಗುತ್ತದೆ.

ಇದರ ಜೊತೆಗೆ ಸ್ಥಾಪನಾ ವೆಚ್ಚಗಳು ಕಂಪನಿಗಳು ಹುಟ್ಟುವಿಕೆಯನ್ನು ತಡೆಯುವಷ್ಟು ಭಾರವಾಗಿವೆಯೆ(?) ಎಂಬುದನ್ನು ತಿಳಿಯಲು ಪ್ರಶ್ನಿಸಿದಾಗ, ಅಧಿಕ ಪ್ರತಿಸ್ಪಂದಿಗಳು ಇಲ್ಲವೆಂದು ಅಭಿಪ್ರಾಯ ನೀಡಿದ್ದಾರೆ. ಆದರೆ ಕೆಲವರು ಇದನ್ನು ಒಪ್ಪುತ್ತಾರೆ.

ಏನೇ ಇರಲಿ, ಕಂಪನಿಗಳನ್ನು ಸ್ಥಾಪಿಸಬೇಕೆಂಬ ಬಲವಾದ ಉತ್ಕಟ ಇಚ್ಛೆಯಿದ್ದರೆ, ಸ್ಥಾಪನಾ ವೆಚ್ಚಗಳನ್ನು ಕ್ರೋಢೀಕರಿಸುವದು ಕಷ್ಟದ ಕೆಲಸವೆನಿಸಲಾರದು. ಅಲ್ಲದೇ, ಅವುಗಳನ್ನು ಜಾಣಾಕ್ಷತನದಿಂದ ಮಿತಿಯಲ್ಲಿ ವ್ಯಯಿಸಿದರೆ ಭಾರವೂ ಎನಿಸಲಾರದು ಮತ್ತು ಲಾಭ-ಲಾಭಾಂಶದ ಮೇಲೆ ಅಷ್ಟೇನೂ ಪರಿಣಾಮವನ್ನು ಬೀರಲಾರದು.

ಹೀಗಾಗಿ, ಘಟಕ ಪ್ರವರ್ತನೆ ಕುರಿತಂತೆ ಪ್ರತಿಸ್ಪಂದಿಗಳು ಕಾಗದ ಪತ್ರ ತಯಾರಿಕೆಯ, ಅವಶ್ಯಕ ಪೂರಕ ಸೇವೆಗಳ ಅಲಭ್ಯತೆಯ ಕುರಿತು ಅಲ್ಪ ಸಮಾಧಾನ ಹೊಂದಿದ್ದು ಕಂಡು ಬರುತ್ತದೆ. ಇವು ಲಭ್ಯವಾದಷ್ಟು ಉದ್ದಿಮೆರಂಗ ಚೇತೋಹಾರಿಯಾಗುತ್ತದೆ.

ಸಮಾಜದಲ್ಲಿಯ ಜನರು ಉದ್ಯಮಶೀಲರಾಗಬೇಕು. ಹೊಸ ತಂತ್ರಜ್ಞಾನಗಳು ಹುಟ್ಟುವ ಇಂದಿನ ದಿನಗಳಲ್ಲಿ ಸಾಕಷ್ಟು ಅನುಭವ ಪಡೆದು, ಪೂರ್ವಭಾವಿ ಅಧ್ಯಯನ ಕೈಕೊಂಡು ಹೆಜ್ಜೆಯನ್ನಿಟ್ಟರೆ ಸುಲಭವಾಗಿ ಕಂಪನಿಗಳನ್ನು ಹುಟ್ಟು ಹಾಕಬಹುದು.

೨) ನೋಂದಣಿ :

೫.೩.೯ ನೋಂದಣಿ ಪ್ರಕ್ರಿಯೆ :

ಸಾಮಾನ್ಯವಾಗಿ ಉದ್ದಿಮೆಯ ಪ್ರವರ್ತಕರು ಘಟಕಗಳ ನೋಂದಣಿಗಾಗಿ ಪಾಲಿಸಬೇಕಾದ ಪದ್ಧತಿಯ ಬಗ್ಗೆ ಬೇಸರಗೊಂಡಿರುತ್ತಾರೆ. ಏಕೆಂದರೆ ಕಾನೂನು ರಿತ್ಯ ಹಲವಾರು ಕಾಗದ ಪತ್ರಗಳನ್ನು ಸಿದ್ಧಗೊಳಿಸುವುದು, ಹಲವಾರು ಸರ್ಕಾರಿ ಕಛೇರಿಗಳಿಗೆ ಅಲೆದಾಡುವುದು, ಅಧಿಕಾರಿಗಳನ್ನು ಭೇಟ್ಟಿಯಾಗುವದು ಇತ್ಯಾದಿಗಳಿಂದ ಕಷ್ಟಕ್ಕೆ ಒಳಗಾಗಿರುತ್ತಾರೆ. ಆದರೆ ಈ ತೊಂದರೆಗಳನ್ನು ಅರಿತ ಸರ್ಕಾರಗಳು, ಪ್ರವರ್ತಕರ ಕಾರ್ಯಗಳನ್ನು ಸುಲಭಗೊಳಿಸಲು ಏಕಗವಾಕ್ಷಿಯಂತಹ ಕ್ರಮಗಳನ್ನು ಜರುಗಿಸಿದ್ದು ಕಂಡು ಬರುತ್ತದೆ. ಈ ಕುರಿತು ಪ್ರತಿಸ್ಪಂದಿಗಳಿಗೆ ವಿಚಾರಿಸಿದಾಗ ಅತ್ಯಧಿಕ ಪ್ರತಿಸ್ಪಂದಿಗಳು ನೋಂದಣಿಯ ಕಾರ್ಯವು ಸಾಮಾನ್ಯ ರೀತಿಯದಾಗಿದ್ದು, ಸರಳವಾಗಿದೆಯೆಂದು ಸ್ಪಷ್ಟಗೊಳಿಸಿದ್ದು ಆಶಾದಾಯಕವಾಗಿದೆ. ಏಕೆಂದರೆ ಇದೇ ಕಷ್ಟದ ಕಾರ್ಯದಿಂದ ಉದ್ದಿಮೆ ಸ್ಥಾಪನೆಯಿಂದ ಹಿಂಜರಿಯುವ ಸಾಧ್ಯತೆಗಳನ್ನು ಈ ಅಭಿಪ್ರಾಯವು ಕಡಿಮೆಗೊಳಿಸುತ್ತದೆ.

ಆದರೆ ಇನ್ನುಳಿದ ಕನಿಷ್ಠ ಸಂಖ್ಯೆಯ ಪ್ರತಿಸ್ಪಂದಿಗಳು ತಾವು ಅನುಭವಿಸಿದ ಅಡೆತಡೆಗಳಿಂದಾಗಿ ನೋಂದಣಿಯು ಕಷ್ಟದಾಯಕ ಪ್ರಕ್ರಿಯೆ ದೀರ್ಘವಾದದ್ದೆಂದೂ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಹೀಗಾಗಿ, ಅವರನ್ನು ಮರುಪ್ರಶ್ನಿಸಿ, ಯಾವ ತರಹದ ಕಷ್ಟಗಳನ್ನು ನೋಂದಣಿಯ ಸಮಯದಲ್ಲಿ ಎದುರಿಸಿದ್ದಾರೆಂಬುದಕ್ಕೆ ನೀಡಿದ ಉತ್ತರಗಳನ್ನು **ಕೋಷ್ಟಕ ೫.೯**ರಲ್ಲಿ ತೋರಿಸಲಾಗಿದೆ.

ಕೋಷ್ಟಕ ೫.೯ : ನೋಂದಣಿಯಲ್ಲಿ ಎದುರಿಸಿದ ಕಷ್ಟಗಳು

ಅ.ಸಂ.	ವಿವರ	ಪ್ರತಿಸ್ಪಂದಿಗಳು	ಪ್ರತಿಶತ
೧	ಕಾನೂನು ಕಟ್ಟಳೆಗಳು	೦೩	೨೩
೨	ವಿವಿಧ ಇಲಾಖೆಗಳಿಗೆ ಸಲ್ಲಿಸುವ ಕಾಗದಪತ್ರಗಳು	೦೧	೦೮
೩	ಪದ್ಧತಿಯು ತೀರ ದೀರ್ಘ	೦೩	೨೩
೪	ಕಛೇರಿಗಳಲ್ಲಿ ವಿಳಂಬ	೦೧	೦೮
೫	ನಿಜವಾದ ಬೆಂಬಲವಿಲ್ಲ	೦೧	೦೭
೬	ಮಾರ್ಗದರ್ಶನ ನೀಡುವ ಮನಸ್ಸಿಲ್ಲ	-	-
೭	ರಾಜಕೀಯ ಹಸ್ತಕ್ಷೇಪ	೦೪	೩೧
೮	ವೃತ್ತಿಪರರ ಅಲಭ್ಯತೆ	-	-
೯	ಇತರೆ	-	-
	ಒಟ್ಟು	೧೩	೧೦೦

ಇಬ್ಬರು ಪ್ರತಿಸ್ಪಂದಿಗಳು ನೀಡಿದ ಹಲವಾರು ಉತ್ತರಗಳಿಂದಾಗಿ ಸದರಿ ಅಭಿಪ್ರಾಯಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಅವರ ಅಭಿಪ್ರಾಯದಲ್ಲಿ ನೋಂದಣಿಯು ದೀರ್ಘ ಪದ್ಧತಿಯದಾಗಿದೆ, ಕಾನೂನಿನ ಕಟ್ಟಳೆಗಳು ಹೆಚ್ಚಾಗಿವೆ, ರಾಜಕೀಯ ಹಸ್ತಕ್ಷೇಪವು ತೊಂದರೆದಾಯಜವಾಗಿದೆ.

ಇವುಗಳ ಜೊತೆಗೆ ಅವರು ಸರ್ಕಾರಿ ಕಛೇರಿಗಳ ಕೆಂಪು ಪಟ್ಟಿಯ ಧೋರಣೆಯನ್ನು ಆಕ್ಷೇಪಿಸುತ್ತಾರೆ. ಸರ್ಕಾರದ ಅಧಿಕಾರಿಗಳ ನಿಜವಾದ ಕಳಕಳಿಯು ಇಲ್ಲವೆಂಬುದು ಅವರ ಅಭಿಮತ.

ಒಟ್ಟಿನಲ್ಲಿ ಇವರ ಅಭಿಪ್ರಾಯಗಳನ್ನು ಗಂಭೀರವಾಗಿ ಪರಿಗಣಿಸುವದು ಅವಶ್ಯವಾಗಿದೆ.

ಈ ಅಭಿಪ್ರಾಯಕ್ಕೆ ಪೂರಕವಾಗಿ ಸರ್ಕಾರದ ನೀತಿ-ಧೋರಣೆಯ ಬಗ್ಗೆ ಪ್ರಶ್ನಿಸಿದಾಗ, ಸಾಕಷ್ಟು ಪ್ರತಿಸ್ಪಂದಿಗಳು ಅದು ಪ್ರೋತ್ಸಾಹದಾಯಕವಾಗಿದೆಯೆಂದು ತಿಳಿಸುತ್ತಾರೆ. ಇಂತಹ ಅಭಿಪ್ರಾಯವು ನೋಂದಣಿಯು ಸಾಮಾನ್ಯ-ಸರಳವಾಗಿದೆಯೆಂದು ಹೇಳಿದ ಪ್ರತಿಸ್ಪಂದಿಗಳಿಂದ ಬಂದಿದೆ. ಅದರಂತೆಯೇ, ಇನ್ನುಳಿದ ಪ್ರತಿಸ್ಪಂದಿಗಳು ಸರ್ಕಾರದ ಧೋರಣೆಯಲ್ಲಿ ನೈಜ ಕಳಕಳಿ ಕಾಣುತ್ತಿಲ್ಲವೆಂದು ಹೇಳುತ್ತಾರೆ.

ಇವೆಲ್ಲ ಅಭಿಪ್ರಾಯಗಳನ್ನು ವಿಶ್ಲೇಷಿಸಿದಾಗ ಹೆಚ್ಚಿನ ಪ್ರತಿಸ್ಪಂದಿಗಳು ಸರ್ಕಾರದ ಧೋರಣೆಯು ಪ್ರೋತ್ಸಾಹದಾಯಕವೆಂದು ಅಭಿಪ್ರಾಯಿಸುತ್ತಾರೆ.

೫.೩.೧೦ - ಪ್ರವರ್ತನ ಮತ್ತು ನೋಂದಣಿಗೆ ತಗುಲಿದ ಸಮಯ :

ಕಂಪನಿಗಳ ಪ್ರವರ್ತನ ಮತ್ತು ನೋಂದಣಿಯಲ್ಲಿ ಸಾಕಷ್ಟು ಸಿದ್ಧತೆಗಳು ಮತ್ತು ರೀತಿ-ಪದ್ಧತಿಗಳ ಪಾಲನೆಯಾಗಬೇಕು. ಅದಕ್ಕಾಗಿ ಹೆಚ್ಚು ಸಮಯ ತಗಲುವದು ಸಹಜ. ಕೆಲವರಿಗೆ ಈ ದೀರ್ಘ ಅವಧಿಯೇ ಹಿಂಜರಿಕೆಗೆ ಕಾರಣವಾಗುತ್ತದೆ. ಆದ್ದರಿಂದ ಪ್ರಸ್ತುತ ಪ್ರತಿಸ್ಪಂದಿಗಳ ಅನುಭವದಂತೆ ಅದಕ್ಕೆ ತಗುಲಿದ ಸಮಯವನ್ನು ಈ ಕೆಳಗಿನಂತೆ ಕಂಡುಕೊಳ್ಳಬಹುದು.

ಕೋಷ್ಟಕ ೫.೧೦ : ಪ್ರವರ್ತನ ಮತ್ತು ನೋಂದಣಿಯ ಸಮಯ

ಅ.ನಂ	ವಿವರ	ಪ್ರತಿಸ್ಪಂಧಿಗಳು	ಪ್ರತಿಶತ
೧	೬ ತಿಂಗಳು	೦೩	೩೦
೨	೧೨ ತಿಂಗಳು	೦೪	೪೦
೩	೧೮ ತಿಂಗಳು	೦೧	೧೦
೪	೨೪ ತಿಂಗಳು	೦೨	೨೦
೫	ಇತರೆ	-	-
	ಒಟ್ಟು	೧೦	೧೦೦

ಈ ಕೋಷ್ಠಕವನ್ನು ವಿಶ್ಲೇಷಿಸಿದಾಗ ಒಂದು ಕಂಪನಿಯನ್ನು ಪ್ರವರ್ತನಗೊಳಿಸಿ, ನೋಂದಣಿ ಗೊಳಿಸುವುದಕ್ಕೆ ೬ ರಿಂದ ೧೨ ತಿಂಗಳು ಸಮಯಾವಕಾಶ ಬೇಕಾಗುತ್ತದೆಯೆಂದು ಅಧಿಕ ಸಂಖ್ಯೆಯ ಪ್ರತಿಸ್ಪಂದಿಗಳು ಅಭಿಪ್ರಾಯಿಸುತ್ತಾರೆ. ಅದರಂತೆ ಶೇ. ೨೦ ರಷ್ಟು ಪ್ರವರ್ತರಿಗೆ ೨೪ ತಿಂಗಳು ತಗುಲಿದೆಯೆಂದಾದರೆ, ಇನ್ನು ಕೇವಲ ಶೇ. ೧೦ ರಷ್ಟು ಪ್ರತಿಸ್ಪಂದಿಗಳಿಗೆ ೧೮ ತಿಂಗಳು ಬೇಕಾಗಿದ್ದು ಕಂಡು ಬರುತ್ತದೆ.

ಆದ್ದರಿಂದ ಗರಿಷ್ಠ ಸಂಖ್ಯೆಯ ಪ್ರತಿಸ್ಪಂದಿಗಳಿಗೆ ಒಂದು ವರ್ಷದ ಸಮಯ ತಗುಲಿದ್ದು ಸ್ಪಷ್ಟಗೊಳ್ಳುತ್ತದೆ.

೩) ಬಂಡವಾಳ ಸಂಗ್ರಹ (ಹಣಕಾಸು) :

ಕಂಪನಿ ವ್ಯವಹಾರ ಅಥವಾ ಯಾವುದೇ ಸಂಘಟನೆಗಳಲ್ಲಿ ಹಣಕಾಸು ಜೀವರಕ್ಷಕ ರಕ್ತ ಪೂರೈಕೆಯಿದ್ದಂತೆ. ಸಮಯಾನುಸಾರ ಅವಶ್ಯಕ ಪರಿಮಾಣಗಳಲ್ಲಿ ಹಣದ ಅಥವಾ ಹಣದ ರೂಪದ ಯಾವುದೇ ನಿಧಿಯ ಪೂರೈಕೆಗೊಳಿಸುವುದೇ ಹಣಕಾಸು ಎಂದು ಅರ್ಥೈಸಲಾಗುತ್ತದೆ. ಯಾವ ಘಟಕಗಳಲ್ಲಿ ಹಣಕಾಸು ನಿರ್ವಹಣೆಯು ಶಿಸ್ತಿನಿಂದ ನೆರವೇರುವುದೋ ಆ ಘಟಕವು ಯಶಸ್ವಿಯಾಗಿ ತನ್ನ ಹೊಣೆಗಾರಿಕೆಗಳನ್ನು ಎದುರಿಸುತ್ತಾ ಅಭಿವೃದ್ಧಿ ಕಾರ್ಯಗಳನ್ನು ಸಾಧಿಸಲು ಸಾಧ್ಯವಾಗುತ್ತದೆ.

೫.೩.೧೧ ಹಣಕಾಸು ನಿರ್ವಹಣೆ :

ಸ್ಥಾಪನೆಯಲ್ಲಿ ಬಂಡವಾಳ ಸಂಗ್ರಹಣೆಯ ಹಂತವು ಪ್ರಮುಖವಾದುದು. ಬಂಡವಾಳ ಮಾರುಕಟ್ಟೆ ಪ್ರವೇಸಿಸುವ ಮುನ್ನ ಸಾಕಷ್ಟು ತಾರ್ಕಿಕವಾಗಿ ಯೋಜನೆಗಳನ್ನು ರೂಪಿಸಿ, ಘಟಕಕ್ಕೆ ಬೇಕಾಗುವ ಬಂಡವಾಳವೆಷ್ಟು, ಯಾವ ಮೂಲಗಳಿಂದ ಸಂಗ್ರಹಿಸಬೇಕು, ಹೆಚ್ಚುವರಿ ಬಂಡವಾಳದ ಅವಶ್ಯಕತೆ, ಅದರ ಉದ್ದೇಶ, ಬಂಡವಾಳ ಹೂಡಿಕೆ ಮೇಲಿನ ಗಳಿಕೆ, ಆಧುನಿಕ ಸೇವೆಗಳ ಬಳಕೆ ಮುಂತಾದ ವಿಷಯಗಳು ಮಹತ್ವದ ನಿರ್ಧಾರಗಳಾಗುತ್ತವೆ.

೫.೩.೧೨ : ಬಂಡವಾಳ ಸಂಗ್ರಹಣೆಯ ವಿಧ :

ಬಂಡವಾಳ ಸಂಗ್ರಣೆಯ ವಿಧಗಳು ಹಲವಾರು. ಅದನ್ನು ಸಾಮಾನ್ಯ ಶೇರುಗಳು, ಸಾಮಾನ್ಯ ಶೇರುಗಳ ಪ್ರಾಶಸ್ತ್ಯದ ಶೇರುಗಳು, ಸಾಲಪತ್ರಗಳು, ಸರ್ಕಾರದಿಂದ ನೆರವು, ಪಾಲುಗಾರಿಕೆ ಸಂಸ್ಥೆಯಲ್ಲಿ ಪಾಲುದಾರರಿಂದ ಮುಂತಾದವುಗಳ ಮೂಲಕ ಕ್ರೋಢೀಕರಿಸಬಹುದು.

ಅಧ್ಯಯನಕ್ಕೆ ಆಯ್ಕೆ ಆದ ಪ್ರತಿಸ್ಪಂದಿಗಳು ವಿವಿಧ ಮೂಲಗಳಿಂದ ಬಂಡವಾಳವನ್ನು ಸಂಗ್ರಹಿಸಿದ ವಿವರಗಳನ್ನು ಕೋಷ್ಟಕ ನೀಡಿದೆ.

ಕೋಷ್ಟಕ ೫.೧೧ : ಬಂಡವಾಳ ಸಂಗ್ರಹಿಸಿದ ವಿಧ

ಕ್ರ.ಸಂ.	ವಿವರ	ಪ್ರತಿಸ್ಪಂದಿಗಳು	ಪ್ರತಿಶತ
೧	ಸ್ವಂತ ಹಣ	೦೨	೨೦
೨	ಹಣ ಮತ್ತು ಸ್ನೇಹಿತರು	-	-
೩	ಹಣ ಮತ್ತು ಸಂಬಂಧಿಕರು	-	-
೪	ಹಣ, ಸ್ನೇಹಿತರು ಮತ್ತು ಸಂಬಂಧಿಕರು	-	-
೫	ಹಣ ಮತ್ತು ವಾಣಿಜ್ಯ ಬ್ಯಾಂಕುಗಳು	೦೬	೬೦
೬	ಪಾಲುದಾರರಿಂದ (ಪಾಲುದಾರಿಕೆ ಸಂಸ್ಥೆಗಳಲ್ಲಿ)	-	-
೭	ಪಾಲುದಾರರು ಮತ್ತು ವಾಣಿಜ್ಯ ಬ್ಯಾಂಕುಗಳು	೦೧	೧೦
೮	ಸರ್ಕಾರದಿಂದ	೦೧	೧೦
	ಒಟ್ಟು	೧೦	೧೦೦

ಈ ಕೋಷ್ಟಕವನ್ನು ಅವಲೋಕಿಸಿದಾಗ ಹೆಚ್ಚಿನ ಪ್ರತಿಸ್ಪಂದಿಗಳು ತಮ್ಮ ಬಂಡವಾಳದ ಅವಶ್ಯಕತೆಯನ್ನು, ಸ್ವಂತ ಹಣದಿಂದ ಮತ್ತು ವಾಣಿಜ್ಯ ಬ್ಯಾಂಕುಗಳಿಂದ ಸಂಗ್ರಹಿಸಿದ್ದಾರೆ. ಅದರಂತೆಯೇ ಕೆಲವೇ ಘಟಕಗಳು ಬಂಡವಾಳವನ್ನು, ಸ್ವಂತ (ಹಣ) ಶೇರುಗಳ ರೂಪದಲ್ಲಿಯೇ ಸಂಗ್ರಹಿಸಿವೆ. ಹಾಗೆಯೇ ಸಮ ಸಂಖ್ಯೆಯ ಪ್ರತಿಸ್ಪಂದಿಗಳು ಸರ್ಕಾರದಿಂದ ಮತ್ತು ಪಾಲುದಾರರ ಜೊತೆಗೂಡಿ ವಾಣಿಜ್ಯ ಬ್ಯಾಂಕ್ ರೂಪದಲ್ಲಿ ಬಂಡವಾಳ ಸಂಗ್ರಹಿಸುತ್ತಿರುವುದು ಕಂಡುಬರುತ್ತದೆ.

ಇನ್ನೊಂದು ಗಮನಿಸಬೇಕಾದ ಅಂಶವೆಂದರೆ ಅಧ್ಯಯನ ಪ್ರತಿಸ್ಪಂದಿಗಳಲ್ಲಿ ಯಾರೂ ಖಾಸಗಿ ಶೇರುಗಳನ್ನಾಗಲಿ, ಸಾಲಪತ್ರಗಳನ್ನಾಗಲಿ ಬಳಸಿದ್ದು ಕಂಡುಬರುತ್ತಿಲ್ಲ. ಹೆಚ್ಚಿನ ಪ್ರತಿಸ್ಪಂದಿಗಳು ಸ್ವಂತ ಹಣವನ್ನು ಮತ್ತು ವಾಣಿಜ್ಯ ಸಾಲಗಳನ್ನು ಬಳಸಿದ್ದು ಕಂಡು ಬರುತ್ತದೆ. ಇದರಿಂದ ಹಣಕಾಸು ಸಂಸ್ಥೆಗಳು ಉದ್ದಿಮೆಯ ಬೆಳವಣಿಗೆಯಲ್ಲಿ ಮಹತ್ವದ ಪಾತ್ರವಹಿಸುತ್ತಿವೆಯೆಂದು ಹೇಳಬಹುದು.

೫.೩.೧೨ : ಹೆಚ್ಚುವರಿ ಬಂಡವಾಳ ಮತ್ತು ಎಷ್ಟು ಸಾರಿ ಹಾಕಿದ್ದು :

ಘಟಕಗಳು ಪ್ರಾರಂಭದ ಯೋಜನೆಗಳಂತೆ ಬೇಕಾಗುವ ಬಂಡವಾಳವನ್ನು, ಯೋಜಿಸಿ ವಿವಿಧ ಮೂಲಗಳಿಂದ ಸಂಗ್ರಹಿಸುತ್ತವೆ. ಅದರ ನಂತರ, ಘಟಕಗಳು ಕಾರ್ಯಾರಂಭಗೊಂಡಾಗ ತಮ್ಮ ಹೆಚ್ಚಿನ ಯೋಜನೆಗಳಾಗಿ ಮತ್ತೆ ಹೆಚ್ಚುವರಿ ಬಂಡವಾಳವನ್ನು ಸಂಗ್ರಹಿಸುವ ಸಂದರ್ಭಗಳು ಬರುತ್ತವೆ. ಅಂತಹ ಸಂದರ್ಭಗಳೇನಾದರೂ ಉದ್ಭವಿಸಿದ್ದು, ಅವುಗಳನ್ನು ನಿಭಾಯಿಸಿದ ಕುರಿತು ಪ್ರತಿಸ್ಪಂದಿಗಳಿಂದ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ಒಟ್ಟು ಸಂದರ್ಶಿಸಿದ ಪ್ರತಿಸ್ಪಂದಿಗಳಲ್ಲಿ ಅತ್ಯಧಿಕ ಪ್ರತಿಸ್ಪಂದಿಗಳು ವ್ಯವಹಾರದಲ್ಲಿ ಅವಕಾಶಗಳು ಉದ್ಭವಾದಾಗ-ಅವಶ್ಯವೆನಿಸಿದಷ್ಟು ಹೆಚ್ಚಿನ ಬಂಡವಾಳವನ್ನು ಸಂಗ್ರಹಿಸಿದ್ದೇವೆಂದು ಅಭಿಪ್ರಾಯಿಸಿದ್ದಾರೆ. ಇನ್ನುಳಿದ ಪ್ರತಿಸ್ಪಂದಿ ಗಳಿಗೆ ಹೆಚ್ಚುವರಿ ಬಂಡವಾಳದ ಅವಶ್ಯಕತೆ ಉಂಟಾಗಿಲ್ಲವೆಂದು ತಿಳಿಸುತ್ತಾರೆ.

೫.೩.೧೪ : ಹೆಚ್ಚಿನ ಬಂಡವಾಳ ಸಂಗ್ರಹಿಸಿದ ಮೂಲ :

ಕಂಪನಿಗಳು ಹೆಚ್ಚಿನ ಬಂಡವಾಳವನ್ನು ಸಂಗ್ರಹಿಸಲು ಹಲವಾರು ಮೂಲಗಳು ಲಭ್ಯವಿರುತ್ತವೆ. ಪ್ರಾರಂಭದಲ್ಲಿ ವಿಷೇಶವಾಗಿ ಸಾಮಾನ್ಯ ಶೇರುಗಳ ಮೇಲೆ ಅವಲಂಬಿತರಾಗಿ, ನಂತರದ ಅವಧಿಯಲ್ಲಿ ಇನ್ನುಳಿದ ಮೂಲಗಳಿಂದ ಬಂಡವಾಳ ಪಡೆಯುವ ಸಾಧ್ಯತೆ ಇರುತ್ತದೆ. ಏಕೆಂದರೆ ಈಕ್ವಿಟಿಗಳೊಂದಿಗೆ ಇತರ ಸಾಲಗಳನ್ನು ಬಂಡವಾಳವಾಗಿ ಬಳಸಿದರೆ ಸಾಮಾನ್ಯ ಶೇರುಗಳ ಮೇಲೆ ಅಧಿಕ ಲಾಭಾಂಶ ನೀಡಿ, ಅವರ ಸಂಪತ್ತಿನ ಗರಿಷ್ಠೀಕರಣ ಸಾಧ್ಯವಾಗುತ್ತದೆ. ಪ್ರಸ್ತುತ ಪ್ರತಿಸ್ಪಂಧಿಗಳು ಹೆಚ್ಚುವರಿ ಬಂಡವಾಳಕ್ಕೆ ಬಳಸಿದ ಮೂಲಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

ಕೋಷ್ಟಕ : ೫.೧೨ ಹೆಚ್ಚಿನ ಬಂಡವಾಳ ಸಂಗ್ರಹಿಸಿದ ರೀತಿ

೧	ಎಲ್ಲವೂ ಈಕ್ವಿಟಿ	೦೬	೪೬
೨	ಹೆಚ್ಚುವರಿ ಪ್ರಾಶಸ್ತ ಶೇರುಗಳು	೦೧	೦೮
೩	ಹೆಚ್ಚುವರಿ ಸಾಲಪತ್ರಗಳು	೦೧	೦೮
೪	ಹೆಚ್ಚುವರಿ ಸಾಂಸ್ಥಿಕ ಸಾಲಗಳು	೦೫	೩೮
		೧೩	೧೦೦

ಈ ಕೋಷ್ಟಕದಲ್ಲಿ ದಾಖಲಿಸಿದ್ದನ್ನು ಅವಲೋಕಿಸಿದಾಗ, ಅಧಿಕ ಸಂಖ್ಯೆಯ ಪ್ರತಿಸ್ಪಂದಿಗಳು ಹೆಚ್ಚುವರಿ ಬಂಡವಾಳವನ್ನು ಸಾಮಾನ್ಯ ಶೇರುಗಳಿಂದ ಪಡೆದದ್ದು ಸ್ಪಷ್ಟವಾಗುತ್ತದೆ. ಅದರ ನಂತರ, ಸಾಂಸ್ಥಿಕ ಸಾಲಗಳಿಂದ ಸಮ ಪ್ರಮಾಣದಲ್ಲಿ ಪ್ರಾಶಸ್ತ್ಯದ ಶೇರುಗಳಿಂದ ಮತ್ತು ಸಾಲಪತ್ರಗಳನ್ನು ನೀಡುವದರಿಂದ ಪಡೆದಿದ್ದಾಗಿ ಪ್ರತಿಸ್ಪಂದಿಗಳು ಅಭಿಪ್ರಾಯಿಸುತ್ತಾರೆ.

ಅದರಂತೆಯೇ, ಹೆಚ್ಚುವರಿ ಬಂಡವಾಳವನ್ನು ಹೆಚ್ಚಿನ ಪ್ರತಿಸ್ಪಂದಿಗಳು ಎರಡು ಸಾರಿ ಸಂಗ್ರಹಿಸಿ ಕೆಲವರು ಒಂದೇ ಸಾರಿ ಮತ್ತು ಕಡಿಮೆ ಸಂಖ್ಯೆಯ ಪ್ರತಿಸ್ಪಂದಿಗಳು ಎರಡಕ್ಕಿಂತ ಹೆಚು ಬಾರಿ ಸಂಗ್ರಹಿಸಿದ್ದಾಗಿ ಸೂಚಿಸುತ್ತಾರೆ.

೫.೩.೧೫ : ಹೆಚ್ಚುವರಿ ಬಂಡವಾಳದ ಸಂಗ್ರಹಣೆಯ ಉದ್ದೇಶ :

ವ್ಯವಹಾರದಲ್ಲಿ ಕಾರ್ಯಪ್ರಮಾಣ ಹೆಚ್ಚಿಸುವದು, ಉತ್ಪನ್ನ ವೈವಿಧ್ಯೀಕರಣ, ವಿಸ್ತಾರೀಕರಣ, ಹೊಸ ಮಾರುಕಟ್ಟೆ-ಘಟಕ, ನವೀಕರಣ, ಸ್ಥಿರಾಸ್ತಿಗಳ ಬದಲಾಯಿಸುವ, ವಿಲೀನೀಕರಣ ಮುಂತಾದ ಪ್ರತಿಕ್ರಿಯೆಗಳು ನಿರಂತರವಾಗಿ ನಡೆಯುತ್ತಿರುತ್ತವೆ. ಇವುಗಳನ್ನು ಆಂತರಿಕವಾಗಿ ಸೃಷ್ಟಿಸಿದ ನಿಧಿಗಳಿಂದ ಮತ್ತು ಬಾಹ್ಯ ಮೂಲಗಳಿಂದ ಸಂಪನ್ಮೂಲ ಸಂಗ್ರಹಣೆಯಿಂದಲೂ ಪೂರೈಸಬಹುದು.

ಕೋಷ್ಟಕ ೫.೧೩ : ಹೆಚ್ಚುವರಿ ಬಂಡವಾಳ ಸಂಗ್ರಹಣೆಯ ಉದ್ದೇಶ

ಅ.ಸಂ.	ವಿವರ	ಪ್ರತಿಸ್ಪಂದಿಗಳು	ಪ್ರತಿಶತ
೧	ಕಾರ್ಯಚಟುವಟಿಕೆಗಳನ್ನು ಇನ್ನೂ ಹೆಚ್ಚಿಸುವದು	೦೯	೮೨
೨	ಬೇರೆ ಸ್ಥಳಗಳಲ್ಲಿ ಹೊಸ ಘಟಕ ಸ್ಥಾಪನೆ	೦೧	೦೯
೩	ಉತ್ಪನ್ನಗಳ ವೈವಿಧ್ಯೀಕರಣ	-	-
೪	ಹಳೆಯದವುಗಳನ್ನು ನವೀಕರಿಸಲು	-	-
೫	ಆಸ್ತಿಗಳನ್ನು ಬದಲಾಯಿಸುವದು	೦೧	೦೯
೬	ವಿಲೀನೀಕರಣ ಮತ್ತು ಕ್ರಮಿಸಿಕೊಳ್ಳುವುದು	-	-
೭	ಇತರೆ	-	-
	ಒಟ್ಟು	೧೧	೧೦೦

ಪ್ರಸ್ತುತ ಪ್ರತಿಸ್ಪಂದಿಗಳಲ್ಲಿ ಹೆಚ್ಚಿನವರು ಎರಡು ಸಾರಿ ಹೆಚ್ಚಿನ ಬಂಡವಾಳ ಸಂಗ್ರಹಿಸಿದ್ದಾರೆ. ಅವರು ಕಾರ್ಯಚಟುವಟಿಕೆಗಳ ಹೆಚ್ಚಳ, ಹೊಸ ಘಟಕ ಸ್ಥಾಪನೆ ಇಲ್ಲವೇ ವಿಸ್ತರಣೆ ಹಾಗೂ ಆಸ್ತಿ ಬದಲಾವಣೆಗೆ ಮಾತ್ರ ಹೆಚ್ಚಿನ ಬಂಡವಾಳ ಸಂಗ್ರಹಿಸಿದ್ದು ತಿಳಿಯುತ್ತದೆ.

೫.೩.೧೬ : ಬಂಡವಾಳ ಹೂಡಿಕೆ ಮತ್ತು ಗಳಿಕೆ :

ಉದ್ದಿಮೆಗಳು ಯಶಸ್ವಿಯಾಗಿ ದೀರ್ಘಕಾಲದವರೆಗೆ ಕಾರ್ಯಗೈಯ್ಯುತ್ತಿರಬೇಕಾದರೆ ಅದರ ಬಂಡವಾಳ ಹೂಡಿಕೆ ಮೇಲಿನ ಗಳಿಕೆಯು ಸಮಾಧಾನಕರವಾಗಿರಬೇಕು. ಹೂಡಿದ ಬಂಡವಾಳವನ್ನು ವ್ಯವಸ್ಥಿತವಾಗಿ ನಿರ್ವಹಣೆಗೊಳಿಸಬೇಕು. ಹಣಕಾಸಿನ ಯೋಜನೆಗಳಿಂದ ಗಳಿಕೆಯ ಗರಿಷ್ಠೀಕರಣದತ್ತ ಆಸಕ್ತಿ ವಹಿಸಬೇಕು. ಈ ಕುರಿತು ಆಯ್ದ ಪ್ರತಿಸ್ಪಂದಿಗಳಿಗೆ ಕೆಲವು ಪ್ರಶ್ನೆಗಳನ್ನು ಕೇಳಿದಾಗ ಒಟ್ಟು ಪ್ರತಿಸ್ಪಂದಿಗಳಲ್ಲಿ ಸಮನಾದ ಅಭಿಪ್ರಾಯಗಳನ್ನು ನೀಡಿದ್ದಾರೆ. ಒಂದರ್ಧ ಕಂಪನಿಯವರು ಹೂಡಿಕೆ ಮೇಲಿನ ಗಳಿಕೆಯು ಸಮಾಧಾನಕರವಾಗಿದೆಯೆಂದರೆ, ಇನ್ನರ್ಧ ಪ್ರತಿಸ್ಪಂದಿಗಳು ಸಮಾಧಾನಕರವಾಗಿ ಲ್ಲವೆಂದು ಅಭಿಪ್ರಾಯಿಸುತ್ತಾರೆ.

ಈ ಪ್ರಶ್ನೆಗೆ ಪೂರಕವಾಗಿ, ಸಮಾಧಾನವಿರಲಾರದ್ದಕ್ಕೆ ಕಾರಣಗಳನ್ನು ಪಡೆಯಲಾಗಿದೆ. ಅವುಗಳನ್ನು **ಕೋಷ್ಟಕ ೫.೧೪**ರಲ್ಲಿ ನೀಡಲಾಗಿದೆ.

ಕೋಷ್ಟಕ ೫.೧೪ : ಗಳಿಕೆಯು ಸಮಾಧಾನ ಇರಲಾರದ್ದಕ್ಕೆ ಕಾರಣಗಳು

ಅ.ಸಂ.	ವಿವರ	ಪ್ರತಿಸ್ಪಂದಿಗಳು	ಪ್ರತಿಶತ
೧	ಸ್ಥಿರ ಬಂಡವಾಳ ವೆಚ್ಚಗಳ ಭಾರ	೦೧	೧೭
೨	ಸಾಲ ಮರುಪಾವತಿಯ ಒತ್ತಡ	೦೧	೧೭
೩	ಹೆಚ್ಚಿನ ಉತ್ಪಾದನಾ ವೆಚ್ಚ	೦೪	೬೬
೪	ಹೆಚ್ಚಿನ ಮಾರಾಟದ ವೆಚ್ಚ	-	-
೫	ಸಾಲಗಾರರಿಂದ ವಿಳಂಬದ ವಸೂಲಾತಿ	-	-
೬	ಮೇಲುಸ್ತುವಾರಿ ಹೆಚ್ಚಿನ ವೆಚ್ಚ	-	-
೭	ಬಂಡವಾಳದ ಅದಕ್ಷ ಬಳಕೆ	-	-
	ಒಟ್ಟು	೦೬	೧೦೦

ಹೂಡಿಕೆ ಮೇಲಿನ ಗಳಿಕೆಯು ಸಮಾಧಾನಕರ ಆಗಿರಲಾರದ್ದಕ್ಕೆ ನೀಡಿದ ಒಟ್ಟು ಏಳು ಕಾರಣಗಳಲ್ಲಿ, ಪ್ರತಿಸ್ಪಂದಿಗಳು ಕೇವಲ ಮೂರು ಕಾರಣಗಳನ್ನು ಆಯ್ಕೆ ಮಾಡಿದ್ದಾರೆ. ಅದರಲ್ಲಿ ಹೆಚ್ಚುತ್ತಿರುವ ಉತ್ಪಾದನಾ ವೆಚ್ಚವು ಪ್ರಮುಖವಾಗಿದೆ. ನಂತರ ಸಮ ಪ್ರಮಾಣದಲ್ಲಿ ಸ್ಥಿರ ಬಂಡವಾಳ ವೆಚ್ಚಗಳ ಭಾರ ಮತ್ತು ಸಾಲ ಮರುಪಾವತಿಯ ಒತ್ತಡಗಳು ಕಾರಣವಾಗಿವೆ. ಇನ್ನುಳಿದ ಕಾರಣಗಳನ್ನು ಪ್ರತಿಸ್ಪಂದಿಗಳು ನೀಡಿಲ್ಲ. ಏಕೆಂದರೆ ಉಳಿದವು ಅವರ ಮೇಲೆ ಪ್ರಭಾವ ಬೀರಿಲ್ಲ.

ಬಂಡವಾಳ ಮಾರುಕಟ್ಟೆಯಲ್ಲಿ ಹಣಕಾಸು ಹಾಗೂ ಹಣಕಾಸಿನ ಸೇವೆಗಳನ್ನು ಪೂರೈಸುವ ಹಲವಾರು ಸಂಸ್ಥೆಗಳಿವೆ. ಜಾಗತೀಕರಣದ ಪರಿಣಾಮದಿಂದಾಗಿ ಹೊಸ-ಹೊಸ ಸೇವೆಗಳು ಪರಿಚಯಗೊಳ್ಳುತ್ತಿವೆ. ಇವುಗಳಲ್ಲಿ ಮುಖ್ಯವಾಗಿ ಸ್ಥಿರಾಸ್ತಿಗಳನ್ನು ಬಾಡಿಗೆಗೆ ನೀಡುವ ಗೇಣಿ ಸೇವೆಯ ಸಂಸ್ಥೆಗಳು, ಫ್ಯಾಕ್ಟರಿಂಗ್ ಮತ್ತು ಫಾರ್‌ಫೇಟಿಂಗ್, ಭದ್ರತಾ ಪತ್ರಗಳ ಸೃಷ್ಟೀಕರಣ ಇತ್ಯಾದಿ ಸೇವೆಗಳಾಗಿವೆ.

ಈ ಸೇವೆಗಳನ್ನು ಪ್ರತಿಸ್ಪಂದಿ ಕಂಪನಿಗಳು ಬಳಸಿಕೊಂಡಿದ್ದರ ಬಗ್ಗೆ ವಿಚಾರಿಸಲಾಗಿ ಲೀಸಿಂಗ್ ಸೇವೆಯನ್ನು ಪಡೆದ ಪ್ರತಿಸ್ಪಂದಿಗಳು ಯಾರೂ ಇಲ್ಲ, ಫ್ಯಾಕ್ಟರಿಂಗ್ ಸೇವೆಯನ್ನು ಮತ್ತು ಭದ್ರತಾ ಪತ್ರ ಸೃಷ್ಟೀಕರಣ (ಸೆಕ್ಯುರಿಟೈಜೇಶನ್)ದ ಸೇವೆಗಳನ್ನು ತಲಾ ಒಬ್ಬೊಬ್ಬರು ಪಡೆದುಕೊಂಡಿದ್ದಾರೆ.

ಖಾಸಗಿ ಸಂಸ್ಥೆಗಳು ಮತ್ತು ರಾಷ್ಟ್ರೀಕೃತ ಬ್ಯಾಂಕುಗಳು ಫ್ಯಾಕ್ಟರಿಂಗ್ ಸೇವೆಗಳನ್ನು ನೀಡುತ್ತಿರುವದು ಸಾಮಾನ್ಯವಾಗಿದೆ. ಪ್ರಸ್ತುತ ಸೇವೆಯನ್ನು ಬಳಸಿಕೊಂಡ ಪ್ರತಿಸ್ಪಂದಿಗಳು ಅದನ್ನು ರಾಷ್ಟ್ರೀಕೃತ ಬ್ಯಾಂಕಿನಿಂದ ಪಡೆದಿದ್ದಾಗಿ ಉತ್ತರಿಸಿದ್ದಾರೆ. ಅದರೂ ಈ ಸೇವೆಯು ಇನ್ನೂ ಸುಧಾರಿಸಬೇಕೆಂದೂ ಸಹ ಹಂಚಿಕೊಂಡಿದ್ದಾರೆ.

ಒಟ್ಟು ಹೂಡಿಕೆಯ ಆಸ್ತಿಗಳಲ್ಲಿ ಶೇ. ೨೫ ರಿಂದ ಶೇ. ೫೦ ರಷ್ಟು ದುಡಿಯುವ ಬಂಡವಾಳದ ರೂಪದಲ್ಲಿ ಹೂಡಿಕೆಯಾಗುತ್ತದೆಯೆಂದು ಅಭಿಪ್ರಾಯಿಸುತ್ತಾರೆ.

ಈ ಅಧ್ಯಯನದಲ್ಲಿ ಆಯ್ದ ಪ್ರತಿಸ್ಪಂದಿಗಳಲ್ಲಿ ಬಹಳಷ್ಟು ಉದ್ದಿಮೆದಾರರು ಕಾರ್ಮಿಕರು ಅಪೇಕ್ಷಣೀಯವೆಂದೂ ಮತ್ತೆ ಕೆಲವರು ಬಂಡವಾಳ ಅಪೇಕ್ಷಣೀಯವೆಂದೂ ಅಭಿಪ್ರಾಯಿಸುತ್ತಾರೆ.

೪) ಉತ್ಪಾದನೆ (ವ್ಯವಹಾರ ಪ್ರಾರಂಭ) :

ಉತ್ಪಾದನಾ ಚಟುವಟಿಕೆಗಳಲ್ಲಿನ ದಕ್ಷತೆಯು ಕಂಪನಿಯ ಇಡಿಯ ವ್ಯವಹಾರಗಳ ಮೇಲೆ ಪರಿಣಾಮ ಬೀರುವಂತಹದು. ಉತ್ಪಾದನೆಯು ನಿರಂತರವಾಗಿ ಸಾಗಬೇಕಾದರೆ ಕಚ್ಚಾ ಸಾಮಗ್ರಿಗಳ ಪೂರೈಕೆಯು ಸರಾಗವಾಗಿರಬೇಕು. ಕಚ್ಚಾ ಸಾಮಗ್ರಿಯ ಸಾಗಾಣಿಕೆಯು ಅತೀ ಕಷ್ಟದಾಯಕ, ಇಲ್ಲವೆ ಅತೀ ವೆಚ್ಚದಾಯಕವಾಗಿರಬಾರದು. ಉತ್ಪಾದನಾ ಘಟಕವು ಕಚ್ಚಾ ಸಾಮಗ್ರಿಯು ದೊರೆಯುವ ಸಮೀಪವೇ ಸ್ಥಾಪಿತವಾಗಿದ್ದರೆ ಒಳ್ಳೆಯದು ಉತ್ಪಾದನಾ ಚಟುವಟಿಕೆಗಳಲ್ಲಿ ಹಲವಾರು ಸಮಸ್ಯೆಗಳಿರುತ್ತವೆ. ಅವುಗಳಿಂದಾಗಿ ಉತ್ಪಾದನೆಗೆ ಅಡೆ-ತಡೆಯಾಗುತ್ತದೆ. ಈ ಉತ್ಪಾದನಾ ಚಟುವಟಿಕೆಗಳ ಕುರಿತಾಗಿ ಪ್ರತಿಸ್ಪಂದಿಗಳಿಂದ ಪಡೆದ ಅಭಿಪ್ರಾಯಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

೫.೩.೧೨ : ಉತ್ಪಾದನೆಗೆ ಬೇಕಾಗುವ ಸಾಮಗ್ರಿ :

ಉತ್ಪಾದನೆಗೆ ಕೃಷಿಯ ಉತ್ಪನ್ನವು ಅಥವಾ ನೈಸರ್ಗಿಕ ಕಚ್ಚಾ ಸಾಮಗ್ರಿ ಅಥವಾ ಬೇಕಾದ ಘಟಕದ ಸರಕು ಮೂಲವಾಗಿರಬಹುದು. ಈ ಜಿಲ್ಲೆಯಲ್ಲಿ ನೀರಾವರಿ ಸೌಲಭ್ಯವಿದೆ. ಕೃಷಿ ಮುಖ್ಯವಾದದ್ದು. ಕೃಷಿಯ ಉತ್ಪನ್ನವು ಉದ್ದಿಮೆಗಳಿಗೆ ಮೂಲ ಸಾಮಗ್ರಿಯಾಗಿರುವ ಸಾಧ್ಯತೆಯಿದೆ. ಈ ಕುರಿತಾದ ಉತ್ತರಗಳನ್ನು **ಕೋಷ್ಟಕ ೫.೧೫**ರಲ್ಲಿ ನೀಡಿದೆ.

ಕೋಷ್ಟಕ ೫.೧೫ : ಉತ್ಪಾದನೆಗೆ ಮೂಲ ಸಾಮಗ್ರಿ

ಅ.ಸಂ.	ವಿವರ	ಪ್ರತಿಸ್ಪಂದಿಗಳು	ಶೇಕಡಾ
೧	ನೈಸರ್ಗಿಕ ಕಚ್ಚಾ ಸಾಮಗ್ರಿ ಆಧರಿಸಿದ್ದು	೦೧	೧೦
೨	ಕೃಷಿ ಆಧರಿಸಿದ್ದು	೦೯	೯೦
೩	ಬೇರೆ ಘಟಕಗಳ ಉತ್ಪನ್ನಗಳ ಆಧರಿಸಿದ್ದು	-	-
	ಒಟ್ಟು	೧೦	೧೦೦

ಈ ಮೇಲಿನ ಕೋಷ್ಟಕವನ್ನು ವಿಶ್ಲೇಷಿಸಿದಾಗ ಒಟ್ಟು ಪ್ರತಿಸ್ಪಂದಿಗಳಲ್ಲಿ ಸಾಕಷ್ಟು ಉದ್ದಿಮೆಗಳು ಕೃಷಿಯ ಸರಕನ್ನು ಆಧರಿಸಿದ್ದಾಗಿವೆ. ಇನ್ನುಳಿದ ಕೆಲವು ನೈಸರ್ಗಿಕ ಸಾಮಗ್ರಿಯನ್ನು ಬಳಸುತ್ತಿವೆ. ಆದರೆ ಯಾವ ಪ್ರತಿಸ್ಪಂದಿಗಳು ಮತ್ತೊಂದು ಘಟಕದ ಉತ್ಪನ್ನವನ್ನು ಸಾಮಗ್ರಿಯಾಗಿ ಬಳಸುತ್ತಿಲ್ಲ. ಆದ್ದರಿಂದ ಬಹುತೇಕ ಉದ್ದಿಮೆಗಳಿಗೆ ಕೃಷಿಯ ಸರಕು ಸಾಮಗ್ರಿಯಾಗಿದ್ದು ಕಂಡು ಬರುತ್ತದೆ.

ಉದ್ದಿಮೆಗಳು ತಮ್ಮ ಕಾರ್ಯಸ್ಥಳವನ್ನು ಕಚ್ಚಾ ಸಾಮಗ್ರಿ ಸ್ಥಳದ ಸಮೀಪ ಅಥವಾ ಮಾನವ ಸಂಪನ್ಮೂಲ ದೊರೆಯುವ ಸ್ಥಳದಲ್ಲಿ ಅಥವಾ ಮಾರುಕಟ್ಟೆ ಕೇಂದ್ರಿತ ಸ್ಥಳದಲ್ಲಿ ಆಯ್ಕೆ ಮಾಡಿಕೊಳ್ಳುತ್ತವೆ. ಈ ಮೇಲಿನ ಕೋಷ್ಟಕದ ವಿಶ್ಲೇಷಣೆಯಲ್ಲಿ ಕಂಡುಕೊಂಡಂತೆ, ಬಹುತೇಕ ಘಟಕಗಳು ಕೃಷಿಯ ಸರಕನ್ನು ಆಧರಿಸಿದ್ದಾಗಿವೆ. ಅದಕ್ಕೆ ಅನುಗುಣವಾಗಿಯೇ ಪ್ರಸ್ತುತ ಆಯ್ದ ಉದ್ದಿಮೆಗಳಲ್ಲಿ ಗರಿಷ್ಠ ಘಟಕಗಳು ಕಚ್ಚಾ ಸಾಮಗ್ರಿಯು ಲಭ್ಯವಿರುವಲ್ಲಿ ಸ್ಥಾಪನೆಗೊಂಡಿದ್ದು ಕಂಡು ಬರುತ್ತದೆ. ಅದರಂತೆಯೇ ಇನ್ನುಳಿದ ಘಟಕಗಳು ಮಾನವ ಸಂಪನ್ಮೂಲ ಕೇಂದ್ರಿತವಾಗಿರುವ ಸ್ಥಳದಲ್ಲಿ ಸ್ಥಾಪನೆಯಾಗಿವೆ. ಮಾರುಕಟ್ಟೆಯನ್ನರಸಿ ತಮ್ಮ ಘಟಕವನ್ನು ಸ್ಥಾಪನೆ ಮಾಡಿದ ಉದಾಹರಣೆ ಪ್ರತಿಸ್ಪಂದಿಗಳಲ್ಲಿ ಕಂಡು ಬರುವುದಿಲ್ಲ.

೫.೩.೧೯ : ಕಚ್ಚಾ ಸಾಮಗ್ರಿಯ ಲಭ್ಯತೆ :

ಉತ್ಪಾದನೆಯ ಕಾರ್ಯ ನಿರಂತರವಾಗಿ ಸಾಗಬೇಕಾದರೆ ಕಚ್ಚಾ ಸಾಮಗ್ರಿಯ ಲಭ್ಯತೆಯು ಅಷ್ಟೇ ಸರಾಗವಾಗಿರಬೇಕಾಗುತ್ತದೆ. ಪ್ರಸ್ತುತ ಒಟ್ಟು ಪ್ರತಿಸ್ಪಂದಿಗಳಲ್ಲಿ ಶೇ. ೮೦ ರಷ್ಟು ಘಟಕಗಳವರು ಕಚ್ಚಾ ಸಾಮಗ್ರಿಯ ಪೂರೈಕೆಯು ನಿಯಮಬದ್ಧವಾಗಿದ್ದು, ಕೆಲವೊಂದು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆಂದು ಅಭಿಪ್ರಾಯಿಸುತ್ತಾರೆ. ಅದರಂತೆ ಇನ್ನುಳಿದ ಪ್ರತಿಸ್ಪಂದಿಗಳಲ್ಲಿ ಮಾತ್ರ ಕಚ್ಚಾ ಸಾಮಗ್ರಿಯು ನಿರಂತರವಾಗಿ ಪೂರೈಕೆಯಿದ್ದು, ಸಮಾಧಾನಕರವಾಗಿದೆಯೆಂದು ಸೂಚಿಸಿದ್ದಾರೆ.

೫.೩.೨೦ : ಉತ್ಪಾದನಾ ಚಟುವಟಿಕೆಯಲ್ಲಿ ತೊಂದರೆಗಳು :

ಉತ್ಪಾದನೆಯ ಚಟುವಟಿಕೆಯು ನಿರಾಯಾಸವಾಗಿ ಪೂರ್ತಿಗೊಳ್ಳುವಂತದ್ದಲ್ಲ. ಅದು ಏನೆಲ್ಲ ಸಮಸ್ಯೆಗಳನ್ನು ತಂದೊಡ್ಡುತ್ತದೆ. ಅವುಗಳನ್ನು ಸಮಪರ್ಕವಾಗಿ ಎದುರಿಸುವ ತಂತ್ರಗಳನ್ನು ರೂಪಿಸಬೇಕಾಗುತ್ತದೆ. ಆಯ್ದ ಬೃಹತ್ ಉದ್ದಿಮೆದಾರರು ಎದುರಿಸುತ್ತಿರುವ ತೊಂದರೆಗಳನ್ನು **ಕೋಷ್ಟಕ ೫.೧೬**ರಲ್ಲಿ ಪ್ರಚುರ ಪಡಿಸಲಾಗಿದೆ.

ಕೋಷ್ಟಕ ೫.೧೬ : ಉತ್ಪಾದನಾ ಚಟುವಟಿಕೆಯಲ್ಲಿಯ ತೊಂದರೆಗಳು

ಅ.ಸಂ.	ವಿವರ	ಪ್ರತಿಸ್ಪಂದಿಗಳು	ಪ್ರತಿಶತ
೧	ಕಚ್ಚಾ ಸಾಮಗ್ರಿ ಕೊರತೆ	೦೩	೨೦
೨	ಇತರ ಸ್ಥಳಗಳಿಂದ ಪಡೆದುಕೊಳ್ಳಬೇಕು	೦೩	೨೦
೩	ಕಚ್ಚಾ ಸಾಮಗ್ರಿ ಹೆಚ್ಚಿನ ವೆಚ್ಚದ ಭಾರ	೦೨	೧೩
೪	ಗುಣಮಟ್ಟದ ಕಚ್ಚಾ ಸಾಮಗ್ರಿ ಸಮಸ್ಯೆ	೦೩	೨೦
೫	ಕಾರ್ಮಿಕ ಶಕ್ತಿಯ ಕೊರತೆ	೦೪	೨೭
೬	ಮೇಲುಸ್ತುವಾರಿ ವೆಚ್ಚದ ಭಾರ	-	-
೭	ವಿದ್ಯುತ್ ಕೊರತೆ	-	-
೮	ಕಚ್ಚಾ ಸಾಮಗ್ರಿ ಉಗ್ರಾಣದ ಸಮಸ್ಯೆ	-	-
೯	ಯಂತ್ರೋಪಕರಣಗಳ ಅಲಭ್ಯತೆ	-	-
೧೦	ದುರಸ್ತಿ/ಸುಸ್ಥಿರತೆ ಸಮಸ್ಯೆ	-	-
೧೧	ಮೂಲ ಸೌಕರ್ಯಗಳ ಅಲಭ್ಯತೆ	-	-
	ಒಟ್ಟು	೧೫	೧೦೦

ಈ ಕೋಷ್ಟಕವನ್ನು ವಿಶ್ಲೇಷಿಸಿದಾಗ ಕಂಡು ಬರುವದೇನೆಂದರೆ ಕೆಲವು ಪ್ರತಿಸ್ಪಂದಿಗಳಿಗೆ ಕಾರ್ಮಿಕ ಶಕ್ತಿಯ ಕೊರತೆಯ ಸಮಸ್ಯೆಯಾಗುತ್ತಿದೆ. ನಂತರ ಸಮ ಸಂಖ್ಯೆಯ ಪ್ರತಿಸ್ಪಂದಿಗಳಿಗೆ ಮೂರು ಸಮಸ್ಯೆಗಳಾದ ಕಚ್ಚಾ ಸಾಮಗ್ರಿ ಕೊರತೆ, ಗುಣಮಟ್ಟದ ಕಚ್ಚಾ ಸಾಮಗ್ರಿಯ ಮತ್ತು ಅವುಗಳನ್ನು ಇತರ ಸ್ಥಳಗಳಿಂದ ಪಡೆಯಬೇಕಾದ ಸಮಸ್ಯೆಗಳು ಎದುರಾಗುತ್ತದೆ. ನಂತರ ಇನ್ನುಳಿದ ಹಲವು ಪ್ರತಿಸ್ಪಂದಿಗಳಿಗೆ ಕಚ್ಚಾ ಸಾಮಗ್ರಿಯ ವೆಚ್ಚ ಹೆಚ್ಚಾಗುತ್ತಿರುವದು ತೊಂದರೆಯಾಗಿದೆ.

ಆದರೆ ಆಯ್ದ ಪ್ರತಿಸ್ಪಂದಿಗಳು ಇನ್ನುಳಿದ ಮೇಲುಸ್ತುವಾರಿ ಖರ್ಚಿನ ಭಾರ, ವಿದ್ಯುತ್ ಕೊರತೆ, ಉಗ್ರಾಣದ ಸಮಸ್ಯೆ, ಯಂತ್ರೋಪಕರಣಗಳ ಅಲಭ್ಯತೆ, ದುರಸ್ತಿಯ ಮತ್ತು ಮೂಲಸೌಕರ್ಯಗಳ ಸಮಸ್ಯೆಗಳನ್ನು ಸೂಚಿಸಿಲ್ಲ.

೫.೩.೨೧ : ಉತ್ಪಾದನೆಯ ನಿರಂತರತೆ :

ಪ್ರಸಕ್ತ ಪ್ರತಿಸ್ಪಂದಿಗಳಲ್ಲಿ ಉತ್ಪಾದನೆಯು ನಿರಂತರವಾಗಿ ವರ್ಷದುದ್ದಕ್ಕೂ ನಡೆಯುತ್ತಿದೆಯೆ? ಎಂಬುದನ್ನು ವಿಚಾರಿಸಿದಾಗ ಗರಿಷ್ಠ ಪ್ರತಿಸ್ಪಂದಿಗಳು ಇಲ್ಲವೆಂದರೆ ಕಡಿಮೆ ಸಂಖ್ಯೆಯ ಪ್ರತಿಸ್ಪಂದಿಗಳು ಒಪ್ಪುತ್ತಾರೆ. ಆ ಪ್ರತಿಸ್ಪಂದಿಗಳು ಉತ್ಪಾದನೆಯು ನಿರಂತರವಾಗಿಲ್ಲದ್ದಕ್ಕೆ ನೀಡಿದ ಕಾರಣಗಳನ್ನು **ಕೋಷ್ಟಕ ೫.೧೭**ರಲ್ಲಿ ನೀಡಲಾಗಿದೆ.

ಕೋಷ್ಟಕ ೫.೧೨ : ಉತ್ಪಾದನೆ ಅಡೆತಡೆಗೆ ಕಾರಣಗಳು

ಅ.ಸಂ.	ವಿವರ	ಪ್ರತಿಸ್ಪಂದಿಗಳು	ಪ್ರತಿಶತ
೧	ಋತುಮಾನದ ಉತ್ಪಾದನೆ	೦೯	೯೦
೨	ಕಚ್ಚಾ ಸಾಮಗ್ರಿ ದೊರೆಯಲಾರದ್ದಕ್ಕೆ	೦೧	೧೦
೩	ಕಾರ್ಮಿಕರ ಸಮಸ್ಯೆ	-	-
೪	ವಿದ್ಯುತ್ ಸಮಸ್ಯೆ	-	-
೫	ಮಾರುಕಟ್ಟೆ ಅಸ್ಥಿರತೆ	-	
೬	ದುಡಿಯುವ ಬಂಡವಾಳದ ಕೊರತೆ	-	-
	ಒಟ್ಟು	೧೦	೧೦೦

ಇದನ್ನು ಅಭ್ಯಸಿಸಿದಾಗ ಗೊತ್ತಾಗುವ ವಿಷಯವೆಂದರೆ ಒಟ್ಟು ಆರು ಸಮಸ್ಯೆಗಳಲ್ಲಿ ಪ್ರತಿಸ್ಪಂದಿಗಳು ಕೇವಲ ಎರಡು ಕಾರಣಗಳನ್ನು ನೀಡುತ್ತಾರೆ. ಅವರಲ್ಲಿ ಶೇ. ೯೦ ರಷ್ಟು ಋತುಮಾನದ ಉತ್ಪಾದನೆಯೆಂದರೆ ಉಳಿದ ಪ್ರತಿಸ್ಪಂದಿಗಳು ಕಚ್ಚಾ ಸಾಮಗ್ರಿ ದೊರೆಯಲಾರದ ಕಾರಣವನ್ನು ಹಂಚಿಕೊಳ್ಳುತ್ತಾರೆ. ಇನ್ನುಳಿದ ಕಾರ್ಮಿಕರ ಸಮಸ್ಯೆ, ವಿದ್ಯುತ್ ಸಮಸ್ಯೆ, ಮಾರುಕಟ್ಟೆ, ಅಸ್ಥಿರತೆ ದುಡಿಯುವ ಬಂಡವಾಳದ ಕೊರತೆ ಉತ್ಪಾದನೆಯ ಅಡೆತಡೆಗೆ ಕಾರಣವಾಗಿಲ್ಲ.

೫) ಮಾರುಕಟ್ಟೆ - ಮಾರಾಟ ಪ್ರಕ್ರಿಯೆ :

ಉದ್ಯಮಕ್ಕೆ ಮಾರಾಟವು ಚಾಲನಾಶಕ್ತಿಯಿದ್ದಂತೆ. ಉತ್ಪಾದನೆಗೊಂಡ ಸರಕುಗಳು ಸಕಾಲಕ್ಕೆ ಮಾರಾಟಗೊಳ್ಳುತ್ತಿದ್ದರೆ ಅದರಲ್ಲಿ ತೊಡಗಿದ ಬಂಡವಾಳವು ಮರಳಿ ಬರುತ್ತದೆ. ಕಂಪನಿಯು ಪಾವತಿಯನ್ನು ಸಮಯಾನುಸಾರ ಮಾಡಲು ಸಾಧ್ಯವಾಗುತ್ತದೆ. ಉತ್ಪಾದಿತ ಸರಕುಗಳನ್ನು ಮಾರಾಟಗೊಳಿಸಲು ಮಾರುಕಟ್ಟೆಯ ಗಾತ್ರ, ಮಾರಾಟ ರೀತಿ ಮತ್ತು ನಿರ್ಯಾತದ ಸಾಧ್ಯತೆಯಿದ್ದರೆ ಅದರಲ್ಲಿ ಎದುರಾಗುವ ಸಮಸ್ಯೆಗಳು ಮುಂತಾದ ವಿಷಯಗಳನ್ನು ಮಾರಾಟ ವಿಭಾಗವು ನಿರ್ಣಯಿಸಬೇಕಾಗುತ್ತದೆ.

ಈ ಪ್ರತಿಸ್ಪಂದಿಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಕಂಡುಕೊಳ್ಳಲಿಕ್ಕೆ ಪ್ರತಿಸ್ಪಂದಿಗಳಿಗೆ ಆವಶ್ಯಕ ಪ್ರಶ್ನೆಗಳನ್ನು ಕೇಳಲಾಗಿತ್ತು. ಅದರ ವಿಶ್ಲೇಷಣೆ ಈ ಕೆಳಗಿನಂತಿದೆ.

೫.೩.೨೨ : ಮಾರಾಟಗೊಳಿಸುತ್ತಿರುವ ಸರಕುಗಳು :

ಘಟಕವು ತನ್ನ ಸಾಮರ್ಥ್ಯದ ಅನುಸಾರ ಮತ್ತು ಯೋಜನೆಯ ಪ್ರಕಾರ ಸರಕುಗಳ ಉತ್ಪಾದನೆಯಲ್ಲಿ ತೊಡಗಿಕೊಳ್ಳುತ್ತದೆ. ಆದ್ದರಿಂದ ಘಟಕವೊಂದು ಒಂದೇ ಸರಕು ಅಥವಾ ಎರಡು, ಮೂರು ಸರಕುಗಳನ್ನು ಉತ್ಪಾದನೆಗೊಳಿಸಿ ಮಾರಾಟದಲ್ಲಿ ತೊಡಗುತ್ತದೆ. ಇದರ ಮೇಲೆ ಅದರ ಗಳಿಕೆ ಅವಲಂಬಿತವಾಗಿರುತ್ತದೆ.

ಕ್ಷೇತ್ರ ಸಮೀಕ್ಷೆಗೆ ಒಳಪಡಿಸಿದ ಹತ್ತು ಘಟಕಗಳಲ್ಲಿ ಯಾವ ಕಂಪನಿಯೂ ಒಂದೇ ಸರಕನ್ನು ಮಾರಾಟಗೊಳಿಸುತ್ತಿಲ್ಲ. ಅವುಗಳಲ್ಲಿ ಕಡಿಮೆ ಘಟಕಗಳು ಎರಡು ಸರಕುಗಳನ್ನು ಉತ್ಪಾದಿಸುತ್ತಾ ಮಾರಾಟ ಮಾಡುತ್ತವೆ. ಆದರೆ ಇನ್ನುಳಿದ ಹೆಚ್ಚಿನ ಪ್ರತಿಸ್ಪಂದಿಗಳು ಎರಡಕ್ಕಿಂತ ಹೆಚ್ಚಿನ ಸರಕುಗಳನ್ನು ಉತ್ಪಾದಿಸುತ್ತಿದ್ದು, ಅವುಗಳನ್ನು ಮಾರಾಟಗೊಳಿಸಿ ಗಳಿಕೆಯನ್ನು ವೃದ್ಧಿಸುವ ಪ್ರಯತ್ನದಲ್ಲಿ ತೊಡಗಿದ್ದು ಸ್ಪಷ್ಟಗೊಳ್ಳುತ್ತದೆ.

ಯಾವ ಪ್ರತಿಸ್ಪಂದಿಯೂ ತಮ್ಮ ಮಾರುಕಟ್ಟೆಯನ್ನು ರಾಜ್ಯಕ್ಕೆ ಸೀಮಿತಗೊಳಿಸಿಲ್ಲ. ಅವುಗಳಲ್ಲಿ ಶೇ. ೬೦ ರಷ್ಟು ಪ್ರತಿಸ್ಪಂದಿಗಳು ರಾಷ್ಟ್ರಾದ್ಯಂತ ತಮ್ಮ ಮಾರುಕಟ್ಟೆಯ ವ್ಯಾಪ್ತಿಯನ್ನು ಹೊಂದಿದ್ದರೆ, ಇನ್ನುಳಿದ ಪ್ರತಿಸ್ಪಂದಿಗಳು ತಮ್ಮ ಮಾರುಕಟ್ಟೆಯನ್ನು ವಿದೇಶಗಳಿಗೂ ವಿಸ್ತರಿಸಿದ್ದಾರೆ.

೫.೩.೨೩ : ಸರಕು ಮಾರಾಟಗೊಳಿಸುವ ಪದ್ಧತಿ :

ಸರಕುಗಳನ್ನು ಎಷ್ಟು ವಿಸ್ತಾರದ ಮಾರುಕಟ್ಟೆಯನ್ನು ಆಧರಿಸಿ ಮಾರಾಟಗೊಳಿಸಲಾಗುತ್ತದೆಯೋ ಅಷ್ಟೊಂದು ಮಧ್ಯವರ್ತಿಗಳನ್ನು ಬಳಸಿಕೊಳ್ಳುವುದು ಅನಿವಾರ್ಯವಾಗುತ್ತದೆ. ಕಾಲಾನುಕ್ರಮದಿಂದ ವಿತರಣಾ ವ್ಯವಸ್ಥೆಯಲ್ಲಿ ಅಗಾಧ ರೀತಿಯ ನವೀನ ಮಾಧ್ಯಮಗಳು ಹುಟ್ಟಿಕೊಳ್ಳುತ್ತಿವೆ. ಅಂತರ್ಜಾಲದ ಮಾರುಕಟ್ಟೆಯು ನೇರ ಮಾರಾಟದ ಪದ್ಧತಿಯಲ್ಲಿ ಮುಖ್ಯವಾಗುತ್ತಿದೆ. ಈ ಕುರಿತಾದ ಪ್ರಶ್ನೆಗಳಿಗೆ ಪ್ರತಿಸ್ಪಂದಿಗಳಿಂದ ಪಡೆದ ಅಭಿಪ್ರಾಯಗಳನ್ನು **ಕೋಷ್ಟಕ ೫.೧೮**ರಲ್ಲಿ ತೋರಿಸಲಾಗಿದೆ.

ಕೋಷ್ಟಕ ೫.೧೮ : ಸರಕು ಮಾರಾಟದ ಪದ್ಧತಿ

ಅ.ಸಂ.	ವಿವರ	ಪ್ರತಿಸ್ಪಂದಿಗಳು	ಪ್ರತಿಶತ
೧	ಸ್ವತಂತ್ರ/ನೇರ ಮಾರಾಟ	೦೧	೦೮
೨	ಏಕ ವ್ಯಕ್ತಿ ವಿತರಕರ ಮೂಲಕ	೦೩	೨೫
೩	ಮತ್ತೊಬ್ಬ ಉತ್ಪಾದಕರಿಗೆ ನೇರ ಮಾರಾಟ	-	-
೪	ನೇರ ಮತ್ತು ಮಧ್ಯವರ್ತಿಗಳ ಮೂಲಕ ಮಾರಾಟ	೦೮	೬೭
	ಒಟ್ಟು	೧೨	೧೦೦

ಪ್ರಸ್ತುತ ಕೋಷ್ಟಕದ ಅವಲೋಕನವು ಹೆಚ್ಚಿನ ಪ್ರತಿಸ್ಪಂದಿಗಳು ತಮ್ಮ ಸರಕು ಮಾರಾಟಕ್ಕೆ ನೇರವಾಗಿ ಗ್ರಾಹಕರಿಗೆ ಮಾರಾಟಗೊಳಿಸುವ ಜೊತೆಗೆ ಮಧ್ಯವರ್ತಿಗಳನ್ನು ಹೊಮದಿರುವುದನ್ನು ಎತ್ತಿ ತೋರಿಸುತ್ತದೆ. ಇದರಂತೆಯೇ ಕೆಲವು ಪ್ರತಿಸ್ಪಂದಿಗಳು ವಿತರಣೆಗಾಗಿ ಒಬ್ಬ ಮಧ್ಯವರ್ತಿಯನ್ನು ಅಳವಡಿಸಿಕೊಂಡಿದ್ದು ಮತ್ತು ಕೆಲವೆ ಪ್ರತಿಸ್ಪಂದಿಗಳು ತಾವೇ ನೇರವಾಗಿ ಮಾರಾಟ ಮಾಡುತ್ತಿರುವರಾಗಿ ಹೇಳುತ್ತಾರೆ.

ಬೆಲೆಯಾಧಾರಿತ ಸ್ಪರ್ಧೆಯಲ್ಲಿ ಮಾರಾಟಕ್ಕೆ ಬಳಸುವ ಮಧ್ಯವರ್ತಿಗಳು ಹೆಚ್ಚಾದರೆ ವೆಚ್ಚ ಹೆಚ್ಚಾಗಿ ಸ್ಪರ್ಧಾತ್ಮಕತೆ ಕಡಿಮೆಯಾಗುವ ಸಾಧ್ಯತೆಯಿರುತ್ತದೆ. ಆದ್ದರಿಂದ ಈ ಕುರಿತಾಗಿ ನಿರ್ಣಯ ಕೈಗೊಳ್ಳುವಾಗ ಎಚ್ಚರಿಕೆ ಕ್ರಮಗಳನ್ನು ಅನುಸರಿಸಬೇಕಾಗುತ್ತದೆ.

ಇನ್ನೊಂದು ಮಹತ್ವದ ಮತ್ತು ಹೆಮ್ಮೆಪಡುವಂತಹ ಸಂಗತಿಯೆಂದರೆ ಒಟ್ಟಾರೆ ಪ್ರತಿಸ್ಪಂದಿಗಳಲ್ಲಿ ಶೇ. ೮೦ರಷ್ಟು ಮಾಹಿತಿದಾರರ ಉತ್ಪನ್ನಗಳು ನಿರ್ಯಾತಗೊಂಡು ವಿದೇಶಿ ವಿನಿಮಯ ಗಳಿಸುತ್ತಿದ್ದಾರೆ. ಇನ್ನುಳಿದ ಪ್ರತಿಸ್ಪಂದಿಗಳು ತಮ್ಮ ಮಾರಾಟವನ್ನು ದೇಶೀಯ ಗಡಿಗೆ ಮಿತಿಗೊಳಿಸಿವೆ. ಹೀಗಾಗಿ ವಿದೇಶಿ ವಿನಿಮಯ ಗಳಿಕೆಯಲ್ಲಿ ಬೆಳಗಾವಿ ಜಿಲ್ಲೆಯ ಉದ್ದಿಮೆಯು ಭಾಗಿಯಾಗಿದೆಯೆಂಬುದು ಸಂತೋಷದ ಸಂಗತಿ.

ದೇಶದ ಗಡಿಯೊಳಗೆ ಸರಕುಗಳನ್ನು ಮಾರಾಟಗೊಳಿಸಲು ಎರಡು ಮುಖ್ಯ ವಿಧಾನಗಳನ್ನು ಅಳವಡಿಸಿಕೊಳ್ಳಬಹುದು. ಹೊರದೇಶದ ಗ್ರಾಹಕರ ವಿವರಗಳನ್ನು ಪಡೆದುಕೊಂಡು ನೇರವಾಗಿ ಅವರಿಗೆ ನಿರ್ಯಾತಗೊಳಿಸುವದು ಒಂದು ಮಾರ್ಗವಾದರೆ, ದೇಶದಲ್ಲಿರುವ ನಿರ್ಯಾತಕ್ಕೆ ಸಹಾಯ-ಸೇವೆ ನೀಡುವ ಸಂಸ್ಥೆಗಳ ಮೂಲಕ ವ್ಯವಹರಿಸುವದು ಇನ್ನೊಂದು ಮಾರ್ಗ. ಏಕೆಂದರೆ ಇದರಲ್ಲಿ ಪಾಲಿಸಬೇಕಾದ ಶಾಸನೀಯ ಮತ್ತು ವ್ಯವಹಾರದ ವಿಧಿ-ವಿಧಾನಗಳು ಹೆಚ್ಚಾಗಿರುತ್ತವೆ.

ಆದ್ದರಿಂದ ಆಯ್ದ ಪ್ರತಿಸ್ಪಂದಿಗಳ ಪೈಕಿ ನಿರ್ಯಾತದಲ್ಲಿ ತೊಡಗಿದ ಶೇ. ೮೦ ಪ್ರತಿಸ್ಪಂದಿಗಳಲ್ಲಿ, ಬೆರಳೆಣಿಕೆಯಷ್ಟು ಪ್ರತಿಸ್ಪಂದಿಗಳು ಮಾತ್ರ ಆಯಾತದಾರರೊಂದಿಗೆ ನೇರ ಸಂಪರ್ಕಹೊಂದಿ, ನಿರ್ಯಾತ ಗೊಳಿಸುತ್ತಿದ್ದಾರೆ. ಆದರೆ ಅದರ ಪ್ರಕ್ರಿಯೆ, ವಿಧಿ-ವಿಧಾನಗಳ ತೊಡಕಿನಿಂದಾಗಿ ಅತ್ಯಧಿಕ ಪ್ರತಿಸ್ಪಂದಿಗಳು ನಿರ್ಯಾತನಿರತ ಸಂಸ್ಥೆಗಳ ಮೂಲಕವೆ ವ್ಯವಹರಿಸುತಿರುವದು ಅಧ್ಯಯನದಿಂದ ಕಂಡುಬರುತ್ತದೆ.

ಕುತೂಹಲಕ್ಕಾಗಿ ಉದ್ದಿಮೆಯು ಎದುರಿಸುವ ಮಾರಾಟದ ಸಮಸ್ಯೆಗಳ ಬಗ್ಗೆ ಕೇಳಿದ್ದಕ್ಕೆ ಯಾರೂ ಯಾವ ಸಮಸ್ಯೆಗಳನ್ನೂ ಹೇಳಿಕೊಂಡಿಲ್ಲ. ಬಹುಶ: ಸಮಸ್ಯೆಗಳನ್ನು ಹೇಳಿಕೊಳ್ಳುವದರಿಂದ ಪರಿಹಾರ ಸಿಗಲಾರದೆಂಬ ಹತಾಶ ಭಾವನೆ ಅವರದಿರಬಹುದು.

೫.೩.೨೪ : ಸರಕು ನಿರ್ಯಾತದ ಸಮಸ್ಯೆಗಳು :

ತಮ್ಮ ಉದ್ದಿಮೆಯ ಸರಕುಗಳ ಮಾರಾಟದ ಸಮಸ್ಯೆಗಳನ್ನು ಕೇಳಿದಾಗ ಸಾಮಾನ್ಯವಾಗಿ ಯಾವ ಸಮಸ್ಯೆಗಳಿಲ್ಲವೆಂದು ಹಂಚಿಕೊಂಡಿದ್ದಾರೆ. ಆದರೆ ವಿಶೇಷವಾಗಿ ನಿರ್ಯಾತಕ್ಕೆ ಸಂಬಂಧಿಸಿದ ತೊಂದರೆಗಳನ್ನು ಪ್ರಶ್ನಿಸಿದಾಗ ಕೆಲವೊಂದು ನೇರ ಸಮಸ್ಯೆಗಳನ್ನು ಎತ್ತುತ್ತಾರೆ. ಅವುಗಳನ್ನು **ಕೋಷ್ಟಕ ೫.೧೯**ರಲ್ಲಿ ತೋರಿಸಲಾಗಿದೆ.

ಕೋಷ್ಟಕ ೫.೧೯ ಸರಕು ನಿರ್ಯಾತದಲ್ಲಿ ಸಮಸ್ಯೆಗಳು

ಅ.ಸಂ.	ವಿವರ	ಪ್ರತಿಸ್ಪಂದಿಗಳು	ಪ್ರತಿಶತ
೧	ದೀರ್ಘ ಪರಿಕ್ರಮಗಳು	೦೬	೪೦
೨	ಸರ್ಕಾರದ ನಿಯಂತ್ರಣಗಳು	೦೪	೨೩
೩	ಹೆಚ್ಚಿನ ನಿರ್ಯಾತ ವೆಚ್ಚ	೦೨	೧೩
೪	ಬೆಲೆಯ ಏರು-ಪೇರು	೦೩	೨೦
	ಒಟ್ಟು	೧೫	೧೦೦

ಈ ಕೋಷ್ಟಕದಲ್ಲಿಯ ಸಮಸ್ಯೆಗಳನ್ನು ವಿಶ್ಲೇಷಿಸಿದಾಗ ಪ್ರತಿಶತ ೪೦ರಷ್ಟು ಪ್ರತಿಸ್ಪಂದಿಗಳು ನಿರ್ಯಾತದ ದೀರ್ಘ ವಿಧಿವಿಧಾನವು ಅಡೆತಡೆಯಾಗಿದೆಯೆಂದು ಸೂಚಿಸುತ್ತಾರೆ. ಅದರಂತೆಯೇ ಸರ್ಕಾರದ ನಿಯಂತ್ರಣದ ಬಗ್ಗೆ, ಬೆಲೆಯಲ್ಲಿಯ ಅಸ್ಥಿರತೆ (ವಿದೇಶಿ ವಿನಿಮಯ ದರ) ನಿರ್ಯಾತ ವೆಚ್ಚದ ಬಗ್ಗೆ ತೊಂದರೆಯಾಗುತ್ತಿದೆಯೆಂದು ಕೆಲವರು ಹೇಳುತ್ತಾರೆ.

ಹೀಗಾಗಿ ದೇಶಕ್ಕೆ ವಿದೇಶಿ ವಿನಿಮಯ ಗಳಿಸುತ್ತಿರುವ ಈ ಘಟಕಗಳ ನಿರ್ಯಾತದ ಸಮಸ್ಯೆಗಳೆಡೆಗೆ ಸರ್ಕಾರ ಗಮನಹರಿಸುವದು ಅವಶ್ಯವೆನಿಸುತ್ತದೆ.

ಸರಕು ಮಾರಾಟ ವಿಷಯದ ಕೊನೆಯಲ್ಲಿ ಪ್ರತಿಸ್ಪಂದಿಗಳು ಸರ್ಕಾರದಿಂದ ಬಯಸುವ ಅಪೇಕ್ಷೆಗಳಲ್ಲಿ ಮುಖ್ಯವಾಗಿ :

೧) ನಿರ್ಯಾತಕ್ಕೆ ಮೂಲ ಸೌಕರ್ಯಗಳ ಲಭ್ಯತೆ, ಸಬ್ಸಿಡಿ ನೀಡಿಕೆ ಇತ್ಯಾದಿ

೨) ನಿರ್ಯಾತದ ನಿಯಮಗಳನ್ನು ಸರಳಗೊಳಿಸುವದು

೩) ವಿಧಿ-ವಿಧಾನಗಳಲ್ಲಿ ಸಡಿಲಿಕೆ

೪) ಪರಿಸ್ಥಿತಿಗೆ ಹೊಂದಾಣಿಕೆಯಾಗುವ ನಿಯಮಗಳು

೫) ಮುಕ್ತ ಮಾರಾಟಕ್ಕೆ ಅವಕಾಶ

ಇವು ಅವರ ಪ್ರಮುಖ ಅಪೇಕ್ಷೆಗಳು.

೬) ಮಾನವ ಸಂಪನ್ಮೂಲ ನಿರ್ವಹಣೆ :

ಕೌಶಲ್ಯಯುಕ್ತ - ಶಕ್ತಿ ಸಾಮರ್ಥ್ಯದ ಮಾನವ ಸಂಪನ್ಮೂಲ ಕೈಗಾರಿಕಾ ಘಟಕಗಳ ಅಮೂಲ್ಯ ಬಂಡವಾಳ. ಯಾವುದೇ ಒತ್ತಡಗಳನ್ನು ನಿಭಾಯಿಸುವ ಪರಿಣಿತ ಕೌಶಲಗಳ ಮಾನವ ಸಂಪನ್ಮೂಲ ಸಂಸ್ಥೆಗೆ ಲಭ್ಯವಾಗುವದು ಸುದೈವ ಎನ್ನಬೇಕು. ಈ ಸಂದರ್ಭದಲ್ಲಿ ಮಾಲಿಕರು ಮತ್ತು ಕಾರ್ಮಿಕರು ಎಂಬ ಎರಡು ಗುಂಪುಗಳು ನಿರ್ಮಾಣವಾಗುತ್ತವೆ. ಇವರೀರ್ವರ ಮಧ್ಯೆ ಸೌಹಾರ್ದಯುತ ಸಂಬಂಧ ಎಲ್ಲಿಯವರೆಗೆ ವ್ಯವಸ್ಥಿತವಾಗಿರುವುದೋ ಅಲ್ಲಿಯವರೆಗೆ ಉದ್ದಿಮೆಯು ಯಶಸ್ವಿಯಾಗಿ ಮುಂದುವರೆಯುತ್ತದೆ.

ಕಾರ್ಮಿಕ ವರ್ಗವನ್ನು ಸಮಾಧಾನ - ಸಂತುಷ್ಟತೆಯಿಂದ ಇಡಲು ಸುಲಭ ಮಾರ್ಗಗಳಲ್ಲಿ ಒಂದೆಂದರೆ ಅವರ ಸಂಬಳ ಪಾವತಿಯಲ್ಲಿ ಸಮಯ ಪಾಲನೆಯಾಗಿದೆ. ಅವರಿಗೆ ನಿಗದಿತ ಮತ್ತು ನಿಯಮಿತವಾಗಿ ಸಂಬಳ ನೀಡುವದು ಅವಶ್ಯ. ನಂತರ ಅವರವರ ದಕ್ಷತೆಗೆ ತಕ್ಕಂತೆ ಪ್ರೋತ್ಸಾಹಕಗಳು, ವಾರ್ಷಿಕ ಬೋನಸ್ ಇತ್ಯಾದಿಗಳನ್ನು ನೀಡಬೇಕಾಗುತ್ತದೆ.

ಸಮಾಧಾನ ಪಟ್ಟುಕೊಳ್ಳಬೇಕಾದ ಸಂಗತಿಯೆಂದರೆ ಒಟ್ಟು ಪ್ರತಿಸ್ಪಂದಿಗಳಲ್ಲಿ ಗರಿಷ್ಠ ಪ್ರತಿಸ್ಪಂದಿಗಳು ಮಾನವ ಸಂಪನ್ಮೂಲ ನಿರ್ವಹಣೆಯಲ್ಲಿ ಯಾವ ಸಮಸ್ಯೆಗಳಿಲ್ಲವೆಂದು ಅಭಿಪ್ರಾಯಿಸುತ್ತಾರೆ. ಶೇ. ೨೦ ಉದ್ದಿಮೆದಾರರಲ್ಲಿ ಕೆಲವೊಂದು ತೊಂದರೆಗಳು ಉದ್ಭವಿಸಿದ್ದಿದೆ.

೫.೩.೨೫ : ಮಾನವ ಸಂಪನ್ಮೂಲ ನಿರ್ವಹಣೆ ಸಮಸ್ಯೆಗಳು :

ಬಹುತೇಕ ಪ್ರತಿಸ್ಪಂದಿಗಳಲ್ಲಿ ಸಮಸ್ಯೆಗಳಿಲ್ಲವೆಂಬುದು ಸಮೀಕ್ಷೆಯಿಂದ ಕಂಡು ಬಂದರೂ ಸಹ, ಇನ್ನೂ ಕೆಲವರು ಸಮಸ್ಯೆಗಳನ್ನು ಎದುರಿಸಿತ್ತಿರುವದು ಕಂಡು ಬಂದಿದೆ. ಆದ್ದರಿಂದ ಅವರ ಪ್ರಾತಿನಿಧ್ಯ ಕಡಿಮೆಯಿದ್ದರು ಕೂಡಾ, ಸೂಚಿಸಿದ ಸಮಸ್ಯೆಗಳೆಡೆಗೆ ದೃಷ್ಟಿ ಹಾಯಿಸುವುದು ಅವಶ್ಯವೆನಿಸುತ್ತದೆ. **ಕೋಷ್ಟಕ ೫.೨೦**ರಲ್ಲಿ ಅವುಗಳನ್ನು ಪ್ರದರ್ಶಿಸಲಾಗಿದೆ.

ಕೋಷ್ಟಕ ೫.೨೦ : ಮಾನವ ಸಂಪನ್ಮೂಲ ನಿರ್ವಹಣೆ ಸಮಸ್ಯೆಗಳು

ಅ.ಸಂ.	ವಿವರ	ಪ್ರತಿಸ್ಪಂದಿಗಳು	ಪ್ರತಿಶತ
1	ಬೇಕಾದ ಕೌಶಲ ಲಭ್ಯವಿರದ ಸಮಸ್ಯೆ	೦೨	೨೯
2	ತರಬೇತಿ ನೀಡುವ ಅವಶ್ಯಕತೆ	೦೨	೨೯
3	ಸಂಬಳ ಹೆಚ್ಚಿಸಲು ನಿರಂತರ ಬೇಡಿಕೆ	೦೧	೧೪
4	ಕಾರ್ಮಿಕರು ಗೈರು ಉಳಿಯುವದು	೦೧	೧೪
5	ಅತಿ ಹೆಚ್ಚಿನ ಕಾರ್ಮಿಕರ ಬದಲಾಗುವಿಕೆ	೦೧	೧೪
6	ಕಾರ್ಮಿಕರ ಒತ್ತಡ	-	-
7	ಕಾರ್ಮಿಕರ ಕಾಯ್ದೆಗಳ ದುಷ್ಪರಿಣಾಮ	-	-
8	ಇತರೆ	-	-
	ಒಟ್ಟು	೦೭	೧೦೦

ತರಬೇತುಗೊಳ್ಳದ ಮಾನವ ಸಂಪನ್ಮೂಲ ಉದ್ದಿಮೆದಾರರಿಗೆ ಸಮಸ್ಯೆಯಾಗಿದೆ. ಕಾರ್ಮಿಕರ ಸಂಬಳ ಹೆಚ್ಚಳದ ಬೇಡಿಕೆ, ಗೈರು ಹಾಜರಿ, ವರ್ಗಾವಣೆ, ಕಡಿಮೆ ಪ್ರಮಾಣದಲ್ಲಿ ಬಾಧಿಸಿದೆ.

ಸಮಾಧಾನದ ಸಂಗತಿಯೆಂದರೆ ಕಾರ್ಮಿಕರ ಸಂಘಗಳಿದ್ದರೂ ಉದ್ದಿಮೆದಾರರಿಗೆ ತೊಂದರೆಯಾಗದಿರುವುದು. ಅವುಗಳ ಜೊತೆಗೆ ಎಲ್ಲರೂ ಸೌಹಾರ್ದಯುತ ಸಂಬಂಧವಿದೆಯೆಂದು ಹೇಳಿದ್ದಾರೆ. ಸಾಮಾನ್ಯವಾಗಿ, ಯುನಿಯನ್‌ಗಳು ಅಸ್ತಿತ್ವದಲ್ಲಿದ್ದರೆ ಶಾಂತಿ ಕದಡುತ್ತದೆ., ವಾಗ್ವಾದಗಳು, ಅಸಹಕಾರ, ಒತ್ತಡ ತಂತ್ರಗಳು ಇತ್ಯಾದಿ ತಕರಾರುಗಳನ್ನು ಮಾಲಿಕವರ್ಗ ಆಡಳಿತ ವರ್ಗದವರು ಹೇಳುವುದುಂಟು. ಆದರೆ ಇಲ್ಲಿನ ಯಾವ ಪ್ರತಿಸ್ಪಂದಿಗಳು ಇಂತಹ ತೊಂದರೆಗಳನ್ನು ಹೇಳಿಕೊಂಡಿಲ್ಲ.

ಹಾಗೆಯೇ ಎಲ್ಲ ಪ್ರತಿಸ್ಪಂದಿಗಳು ತಮ್ಮ ಕಾರ್ಮಿಕ ಸಿಬ್ಬಂದಿಯವರಿಗೆ ಕಾಲಕಾಲಕ್ಕೆ ತರಬೇತಿ ನೀಡುತ್ತಿರುವುದಾಗಿ ಮತ್ತು ಬದಲಾಗುವ ತಂತ್ರಜ್ಞಾನಕ್ಕೆ ತಕ್ಕಂತೆ ಅವರನ್ನು ಅಭಿವೃದ್ಧಿಗೊಳಿ-ಸುತ್ತಿರುವುದಾಗಿ ಹೇಳುತ್ತಾರೆ. ತರಬೇತಿ ಪಡೆದುಕೊಂಡು ಗಳಿಕೆಯನ್ನು ಹೆಚ್ಚಿಸುವ ನಿಶ್ಚಿತತೆ ಇರುವದರಿಂದ ತರಬೇತಿಯ ವೆಚ್ಚವು ನಗಣ್ಯ ಎನಿಸುತ್ತದೆ.

ಗರಿಷ್ಠ ಪ್ರತಿಸ್ಪಂದಿಗಳು ತಮ್ಮ ಸಿಬ್ಬಂದಿಯವರಿಗೆ ಪ್ರೋತ್ಸಾಹಧನ ಮತ್ತು ಬೋನಸ್‌ಗಳನ್ನು ನೀಡುತ್ತಿರುವರು. ಸಿಬ್ಬಂದಿಯವರು ತನು-ಮನದಿಂದ ಸೇವೆ-ನೀಡುವದನ್ನು ಬಯಸುವದಾದರೆ ಇಂತಹ ಪ್ರೋತ್ಸಾಹಕಗಳನ್ನು ವಿವಿಧ ಯೋಜನೆಗಳ ಮೂಲಕ ನೀಡುವಂತಿರಬೇಕು. ಸಂಸ್ಥೆಯ ಗಳಿಕೆಗೆ ಬಹುಪಾಲು ಕೊಡುಗೆಯು ಶ್ರದ್ಧಾವಂತ ಕಾರ್ಮಿಕ ವರ್ಗದವರಿಂದಲೇ ಎನ್ನುವುದು ಅಷ್ಟೇ ಸತ್ಯ. ಇದು ಕಾರ್ಮಿಕ ವರ್ಗದವರೊಂದಿಗಿನ ಸೌಹಾರ್ದಯುತ ಸಂಬಂಧಕ್ಕೂ ನಾಂದಿಯಾಗುತ್ತದೆ.

ಬಹುಶ: ಇದೇ ಪ್ರೇರಣೆಯಿಂದಾಗಿ ಸಿಬ್ಬಂದಿಯು ಕಂಪನಿಯ ಚಟುವಟಿಕೆಗಳಲ್ಲಿ ಸಹಾಯಕವಾಗಿ ಎಲ್ಲ ರೀತಿಯ ಸಹಕಾರ ನೀಡುವರೆಂದು ಪ್ರತಿಸ್ಪಂದಿಗಳು ಹಂಚಿಕೊಳ್ಳುತ್ತಾರೆ. ವಿಶೇಷವಾಗಿ ಕಂಪನಿಯು ಹೊಸ ತಂತ್ರಜ್ಞಾನ, ಹೊಸ ವಿಧಾನ, ನವೀನ ರೀತಿಯ ಉತ್ಪಾದನೆ ಅಳವಡಿಕೆ ಅನಿರೀಕ್ಷಿತವಾಗಿ ಉದ್ಭವಗೊಳ್ಳುವ ಸಮಸ್ಯೆಗಳ ಪರಿಹಾರ ಮುಂತಾದ ಪರಿಸ್ಥಿತಿಗಳಲ್ಲಿ ಕಾರ್ಮಿಕ ವರ್ಗದ ಸಂಪೂರ್ಣ ಬೆಂಬಲ ಸಹಕಾರ ಅತ್ಯವಶ್ಯಕವಾಗುತ್ತದೆ.

ಆದ್ದರಿಂದ, ಪ್ರಸ್ತುತ ಪ್ರತಿಸ್ಪಂದಿಗಳಲ್ಲಿ ಸಿಬ್ಬಂದಿ-ಕಾರ್ಮಿಕ ವರ್ಗದ ಸಮಸ್ಯೆ ಉದ್ಭವಿಸಿಲ್ಲ.

೭) ಇತರ ಸಂಗತಿಗಳು :

ಈವರೆಗೆ ಚರ್ಚಿಸಲಾದ ಪ್ರಮುಖವಾದ ನಿರ್ದಿಷ್ಟ ಕಾರ್ಯ ಚಟುವಟಿಕೆಗಳಿಗೆ ಸಂಬಂಧಿಸಿದ ಮಾಹಿತಿಯನ್ನು ವಿಶ್ಲೇಷಿಸಿಲಾಗಿದೆ. ಇವುಗಳನ್ನು ಹೊರತು ಪಡಿಸಿ ಕೆಲವು ಅನುಷಂಗಿಕ ವಿಷಯಗಳು ಅಷ್ಟೇ ಮಹತ್ವದ್ದು ಮತ್ತು ಪೂರಕವಾಗಿದ್ದೆಂದು ಕಂಡು ಬರುತ್ತವೆ.

ಇವುಗಳಲ್ಲಿ ಲಾಭ ಗಳಿಕೆ ಪ್ರಮಾಣ, ಅದರ ಕುರಿತ ಅಭಿಪ್ರಾಯ, ಸಮಾಧಾನಕ್ಕೆ ಮತ್ತು ಅಸಮಾಧಾನಕ್ಕೆ ಕಾರಣಗಳು, ಉದ್ದಿಮೆದಾರರಾಗಿ ನೀಡಿದ ಕೊಡುಗೆ, ಜಾಗತೀಕರಣದ ಪರಿಣಾಮ, ಘಟಕದ ಸಾಮರ್ಥ್ಯ ವೃದ್ಧಿಸುವ ಯೋಜನೆ, ರೀತಿ-ನೀತಿ, ಕಂಪನಿ ಸಂಬಂಧಿತ ಸಮಸ್ಯೆಗಳ ಪರಹಾರಕ್ಕೆ ಕಂಡುಕೊಳ್ಳುವ ಮಾರ್ಗ ಇತ್ಯಾದಿಯಾದ ಮಾಹಿತಿಯು ಇತರೆಲ್ಲ ಉದ್ದಿಮೆದಾರರಿಗೆ ಮಾರ್ಗದರ್ಶನವಾಗಬಹುದೆಂದು ಪರಿಗಣಿಸಿ ಹಲವು ನೇರ-ಸಂಕ್ಷಿಪ್ತ ಪ್ರಶ್ನೆಗಳನ್ನು ಪ್ರತಿಸ್ಪಂದಿಗಳ ಮುಂದಿಡಲಾಗಿತ್ತು. ಅವುಗಳಿಗೆ ನೀಡಿದ ಉತ್ತರಗಳ ಸಾರಾಂಶವನ್ನು ಈ ಕೆಳಗಿನ ವಿವರಣೆಯಲ್ಲಿ ಪ್ರಚುರ ಪಡಿಸಲಾಗಿದೆ.

೫.೩.೨೬ : ಲಾಭದ ಪ್ರಮಾಣ :

ಲಾಭವೇ ಉದ್ದಿಮೆದಾರರಿಗೆ ಮುಖ್ಯವಾದದ್ದು. ಲಾಭದಿಂದಲೇ ಯಶಸ್ಸಿನ ನಿರ್ಧಾರ. ಇನ್ನುಳಿದ ವಿಷಯಗಳು ಅನುಷಂಗಿಕವೆನಿಸಿವೆ. ಘಟಕದ ಎಲ್ಲ ವಿಭಾಗಗಳಲ್ಲಿ ಸುವ್ಯವಸ್ಥಿತ ನಿರ್ವಹಣೆಯಾಗಿದ್ದು ಗಳಿಸಿದ ಲಾಭದ ಪ್ರಮಾಣ ಮತ್ತು ಅದರ ಗತಿಯಲ್ಲಿ ಪ್ರದರ್ಶಿತಗೊಳ್ಳುತ್ತದೆ. ಆದ್ದರಿಂದ ಆಯ್ದ ಪ್ರತಿಸ್ಪಂದಿಗಳಲ್ಲಿ ಗಳಿಸುತ್ತಿರುವ ಲಾಭದ ಪ್ರಮಾಣ ಮಾಹಿತಿಯನ್ನು ಕೇಳಿದ್ದು, ಅದನ್ನು **ಕೋಷ್ಟಕ ೫.**೨೧ರಲ್ಲಿ ನೀಡಲಾಗಿದೆ.

ಕೋಷ್ಟಕ ೫.೨೧ ಲಾಭದ ಗಳಿಕೆ

ಅ.ಸಂ.	ವಿವರ	ಪ್ರತಿಸ್ಪಂದಿಗಳು	ಪ್ರತಿಶತ
೧	ಲಾಭದ ಪ್ರಮಾಣ ಪ್ರತಿಶತ ೧೦% ಕ್ಕಿಂತ ಕಡಿಮೆ	೦೨	೨೦
೨	ಪ್ರತಿಶತ ೧೦ - ೨೦	೦೭	೭೦
೩	ಪ್ರತಿಶತ ೨೧ - ೩೦	೦೧	೧೦
೪	ಪ್ರತಿಶತ ೩೧ - ೪೦	-	-
೫	ಪ್ರತಿಶತ ೪೦ ಕ್ಕಿಂತ ಹೆಚ್ಚು	-	-
	ಒಟ್ಟು	೧೦	೧೦೦

ಈ ಕೋಷ್ಟಕದ ಪ್ರಕಾರ ಯಾವ ಉದ್ದಿಮೆದಾರರು ಶೇ. ೩೦ಕ್ಕಿಂತ ಅಧಿಕ ಲಾಭವನ್ನು ಗಳಿಸುತ್ತಿಲ್ಲವೆಂಬುದು ಸ್ಪಷ್ಟ. ಅವರಲ್ಲಿ ಹೆಚ್ಚಿನ ಪ್ರತಿಸ್ಪಂದಿಗಳು ಶೇ. ೧೦ ರಿಂದ ಶೇ. ೨೦ ರಷ್ಟು ಲಾಭಗಳಿಸಿದರೆ, ಕೆಲವರು ಕಡಿಮೆಯೆನಿಸುವ ಶೇ. ೧೦ ರವರೆಗೆ ಗಳಿಸುತ್ತಾರೆ, ಇನ್ನುಳಿದ ಅತಿ ಕಡಿಮೆಯ ಅಂದರೆ ಪ್ರತಿಶತ ೧೦ರಷ್ಟು ಪ್ರತಿಸ್ಪಂದಿಗಳು ಅಧಿಕವೆನಿಸುವ ಪ್ರತಿಶತ ೩೦ ರವರೆಗೆ ಲಾಭಗಳಿಸುತ್ತಿದ್ದಾರೆ.

ಇವರಲ್ಲಿ ಕೇವಲ ಶೇ. ೩೦ರಷ್ಟು ಪ್ರತಿಸ್ಪಂದಿಗಳಿಗೆ ಸಮಾಧಾನಕರವೆನಿಸಿದೆ. ಆದರೆ ಬಹಳಷ್ಟು ಉದ್ದಿಮೆದಾರರಿಗೆ ತಾವು ಗಳಿಸುತ್ತಿರುವ ಲಾಭದ ಪ್ರಮಾಣ ಸಮಾಧಾನಕರವಾಗಿಲ್ಲ. ಇನ್ನೂ ಹೆಚ್ಚಿನ ಲಾಭ ಅಪೇಕ್ಷಿಸುತ್ತಾರೆ. ಆ ನಿಟ್ಟಿನಲ್ಲಿ ಮುನ್ನಡೆಯುವ ಧೋರಣೆಯನ್ನು ತಾವು ಹೊಂದಿರುವುದಾಗಿ ಹೇಳಿರುವರು.

೫.೩.೨೭ : ಉದ್ದಿಮೆದಾರರ ಜೀವನ-ವೃತ್ತಿ :

ಮಾನವನು ಜೀವನ ಸಾಗಿಸಲು ಯಾವುದಾದರೂ ವೃತ್ತಿ-ವ್ಯವಹಾರ-ಸೇವೆಯ ಕ್ಷೇತ್ರದಲ್ಲಿ ತೊಡಗುತ್ತಾನೆ. ಇವೆಲ್ಲವೂ ಅವರವರ ಜೀವನ ಗುರಿ-ಆಕಾಂಕ್ಷೆ-ಸಾಮರ್ಥ್ಯ-ದೂರದರ್ಶಿತ್ವ-ಸಂಪನ್ಮೂಲ ಮುಂತಾದ ಅಂಶಗಳ ಮೇಲೆ ನಿರ್ಧಾರಗೊಳ್ಳುತ್ತವೆ. ಉದ್ದಿಮೆದಾರರ ತೃಪ್ತಿ-ಸಂತೃಪ್ತಿ-ಹೆಮ್ಮೆ-ಅನುಭವಗಳ ಕುರಿತು ಪ್ರಶ್ನಿಸಿದಾಗ ಬಹುಪಾಲು ಪ್ರತಿಸ್ಪಂದಿಗಳು ತಾವು ಉದ್ದಿಮೆದಾರರಾಗಿದ್ದಕ್ಕೆ ಅಭಿಮಾನಪಡುತ್ತಾರೆ.

ಒಟ್ಟು ಪ್ರತಿಸ್ಪಂದಿಗಳಲ್ಲಿ ಅತ್ಯಧಿಕ ಪ್ರತಿಸ್ಪಂದಿಗಳಿಗೆ ಉದ್ದಿಮೆದಾರರಾಗಿದ್ದು ಸಂಪೂರ್ಣ ಸಂತೃಪ್ತಿಯಾಗಿದೆಯೆಂದು ಅಭಿಪ್ರಾಯಿಸುತ್ತಾರೆ. ಯಾವುದೋ ಕಾರಣಕ್ಕಾಗಿ ಅತಿ ಕಡಿಮೆ ಪ್ರತಿಸ್ಪಂದಿಗಳಿಗೆ ಅತೃಪ್ತಿಯಿದೆ.

೫.೩.೨೮ : ಉದ್ದಿಮೆದಾರರಾಗಿದ್ದಕ್ಕೆ ಸಮಾಧಾನ ನೀಡಿದ ಅಂಶಗಳು :

ಪ್ರತಿಯೊಬ್ಬ ಉದ್ದಿಮೆದಾರನಿಗೆ ಸಮಾಧಾನ ನೀಡುವ ಸಾಕಷ್ಟು ಅಂಶಗಳು ಇರುತ್ತವೆ. ಆತ್ಮ ತೃಪ್ತಿ ಬಹಳ ಮುಖ್ಯವಾಗುತ್ತದೆ. ಅದರಲ್ಲಿ ಸ್ವಾವಲಂಬನೆ ದೇಶಕ್ಕಾಗಿ ಸೇವೆ ನೀಡಿದ ಸಾರ್ಥಕತೆ, ಸಮಾಜಕ್ಕೆ ಬೆಂಬಲವಾಗಿದ್ದು, ಹಲವರಿಗೆ ಜೀವನೋಪಾಯದ ಕೆಲಸ ನೀಡಿದ ತೃಪ್ತಿ ಮುಂತಾದ ಕಾರಣಗಳಿಂದ ಅವರು ಸಮಾಧಾನ ಸೂಚಿಸುವರು.

ಕೋಷ್ಟಕ ೫.೨೨ : ಉದ್ದಿಮೆದಾರರಾಗಿದ್ದಕ್ಕೆ ಸಮಾಧಾನ

ಅ.ಸಂ.	ವಿವರ	ಪ್ರತಿಸ್ಪಂದಿಗಳು	ಪ್ರತಿಶತ
೧	ದೇಶ ಪ್ರಗತಿಯಲ್ಲಿ ಭಾಗಿ	೦೮	೩೮
೨	ಇತರರಿಗೆ ಕೆಲಸ ನೀಡಿದಕ್ಕೆ ಸಂತಸ	೦೬	೨೯
೩	ಉದ್ದಿಮೆಯ ಪ್ರಗತಿಯ ಭಾಗ	೦೬	೨೯
೪	ನನಸಾದ ಕನಸು	-	-
೫	ಮಾಲಿಕನಾಗಿದ್ದರ ಸಂತಸ	-	-
೬	ಸ್ವಾವಲಂಬನೆಯ ಬದುಕಿನ ಸಂತೋಷ	೦೧	೦೪
	ಒಟ್ಟು	೨೧	೧೦೦

ಈ ಕೋಷ್ಟಕವನ್ನು ಅವಲೋಕಿಸಿದಾಗ ದೇಶದ ಪ್ರಗತಿಯಲ್ಲಿ ಭಾಗಿಯಾದ ಸಂತಸ ಪ್ರತಿಶತ ೩೮ ರಷ್ಟು ಉದ್ದಿಮೆದಾರರದು. ಉದ್ದಿಮೆಗಳ ಪ್ರಗತಿಯಲ್ಲಿ ಭಾಗಿಯಾಗಿ, ಸಮಾಜದ ಕೆಲವರಿಗೆ ಕೆಲಸ ನೀಡಿದ್ದು ಸಮಾಧಾನಕ್ಕೆ ಕಾರಣಗಳೆಂದು ಕೆಲವು ಪ್ರತಿಸ್ಪಂದಿಗಳು ಹಂಚಿಕೊಂಡಿದ್ದಾರೆ. ಕೆಲವೇ ಪ್ರತಿಸ್ಪಂದಿಗಳಿಗೆ ಸ್ವಾವಲಂಬನೆಯ ಸಮಾಧಾನವಿದೆ.

ಉದ್ದಿಮೆದಾರರಿಗೆ ಸಮಾಜದಲ್ಲಿ ಒಂದು ಗೌರವವಾದ ಸ್ಥಾನವಿದೆ. ಏಕೆಂದರೆ ಉದ್ದಿಮೆದಾರ ತಾನು ತನ್ನ ಲಾಭಕ್ಕಾಗಿ ಶ್ರಮಿಸುತ್ತಿದ್ದರೂ ಇನ್ನಿತರರಿಗೆ ಸರಕು-ಸೇವೆ ನೀಡುತ್ತಿರುತ್ತಾನೆ.

ಅದರಂತೆಯೇ ಕೆಲವು ಉದ್ದಿಮೆದಾರರು ಅಸಮಾಧಾನ ಹೊಂದಿರುದಕ್ಕೆ ರಾಜಕೀಯ ನೀತಿಗಳು ಕಾರಣವೆನ್ನುತ್ತಾರೆ.

೫.೩.೨೯ : ಯಶಸ್ವಿ ಉದ್ದಿಮೆದಾರರಾಗಿ ಕೊಡುಗೆಗಳು :

ಪ್ರತಿಯೊಬ್ಬ ಉದ್ದಿಮೆದಾರರು ಆರ್ಥಿಕತೆ ವ್ಯವಸ್ಥೆಗೆ ಕೊಡುಗೆ ನೀಡಿದವರು. ಅದಕ್ಕಾಗಿಯೇ ಕೆಲವರಿಗೆ ಹೆಮ್ಮೆಯ ವಿಷಯವೆನಿಸುತ್ತದೆ. ಒಬ್ಬ ಉದ್ದಿಮೆದಾರನು ಕೆಲವು ವರ್ಷಗಳಲ್ಲಿ ತೊಡಗಿ ಕೊಂಡಿರುವದರಿಂದ ಅತ್ಯಮೂಲ್ಯ ಪರಿಣತಿ ಮತ್ತು ಅನುಭವವನ್ನು ಗಳಿಸಿರುತ್ತಾನೆ. ಇದರಿಂದ ಮುಂಬರುವ ಯುವ ಉದ್ದಿಮೆದಾರರಿಗೆ ಮಾರ್ಗದರ್ಶನ ನೀಡುವ ಸಾಧ್ಯತೆ ಇರುತ್ತದೆ. ಆಯ್ದ ಪ್ರತಿಸ್ಪಂದಿಗಳು ಉದ್ದಿಮೆದಾರರಾಗಿ ನೀಡಿದ ಕೊಡುಗೆಗಳನ್ನು **ಕೋಷ್ಟಕ ೫.೨೩**ರಲ್ಲಿ ನೀಡಲಾಗಿದೆ.

ಕೋಷ್ಟಕ ೫.೨೩ ಉದ್ದಿಮೆದಾರರಾಗಿ ನೀಡಿದ ಕೊಡುಗೆಗಳು

ಅ.ಸಂ.	ವಿವರ	ಪ್ರತಿಸ್ಪಂದಿಗಳು	ಪ್ರತಿಶತ
೧	ಯುವಕರಿಗೆ ಪ್ರೇರಣೆ	೦೭	೪೭
೨	ನವ ಉದ್ದಿಮಶೀಲರಿಗೆ ತರಬೇತಿ	-	-
೩	ಉದ್ದಿಮೆ ತರಬೇತಿ ಸಂಸ್ಥೆಗಳಿಗೆ ಮಾರ್ಗದರ್ಶನ	-	-
೪	ಹೊಸ ಸರಕು ಸೇವೆಗಳ ಪೂರೈಕೆ	೦೫	೩೩
೫	ನಿರ್ಯಾತದಿಂದ ದೇಶಕ್ಕೆ ವಿದೇಶಿ ವಿನಿಮಯದ ಗಳಿಕೆ	೦೩	೨೦
	ಒಟ್ಟು	೧೫	೧೦೦

ಕೋಷ್ಟಕದ ವಿಶ್ಲೇಷಣೆಯಿಂದ ತಿಳಿದು ಬರುವದೇನೆಂದರೆ ಸಾಕಷ್ಟು ಪ್ರತಿಸ್ಪಂದಿ ಉದ್ದಿಮೆದಾರರು ಹೊಸದಾಗಿ ಸೇರ್ಪಡೆಗೊಳ್ಳುವವರಿಗೆ ಪ್ರೇರಣೆ ನೀಡುವದು ಉತ್ತಮ ಕೊಡುಗೆಯ ಅವಕಾಶ ದೊರೆತಿದೆಯೆಂದು ಹೇಳುತ್ತಾರೆ. ಜೊತೆಗೆ ಸಮಾಜಕ್ಕೆ ಹೊಸ ಸರಕು-ಸೇವೆ ಪರಿಚಯಿಸುವ ಸುಸಂಧಿಯೆಂದೂ ಮತ್ತು ಕಡಿಮೆ ಪ್ರತಿಸ್ಪಂದಿಗಳಿಗೆ ನಿರ್ಯಾತದೊಂದಿಗೆ ದೇಶಕ್ಕೆ ವಿದೇಶಿ ವಿನಿಮಯ ಸಂಗ್ರಹಿಸುವ ಸದವಕಾಶ ದೊರೆತಿದೆಯೆಂದೂ ಅಭಿಪ್ರಾಯಿಸುತ್ತಾರೆ.

ಒಟ್ಟಿನಲ್ಲಿ ಉದ್ದಿಮೆದಾರರಾಗುವದರಿಂದ ಸ್ವಂತಿಕೆಯನ್ನು ತೋರ್ಪಡಿಸುವ ಅವಕಾಶವು ದೊರೆಯುವುದಲ್ಲದೆ ಅವಕಾಶಗಳನ್ನು ಹುಟ್ಟುಹಾಕುವ ಸಾಧ್ಯತೆ ಇರುವದು ಪ್ರಶಂಸನೀಯವಾಗಿದೆ.

೫.೩.೩೦ : ಜಾಗತೀಕರಣದ ಪರಿಣಾಮ :

ಸಮಾಜದ ಎಲ್ಲ ಕಡೆಗಳಿಂದಲೂ ಜಾಗತೀಕರಣದ ಚರ್ಚೆ ಸಾಮಾನ್ಯವಾಗಿತ್ತು. ಅದರ ಪರ-ವಿರೋಧ ಅಭಿಪ್ರಾಯಗಳು ಸಾಮಾನ್ಯವಾಗಿದ್ದವು. ಇವು ಎಲ್ಲ ಕ್ಷೇತ್ರದ ಮೇಲೂ ಪರಿಣಾಮ ಬೀರುವದು ನಿಶ್ಚಿತ. ಇದಕ್ಕೆ ಉದ್ದಿಮೆರಂಗವು ಮುಖ್ಯವಾಗಿ ಪರಿಣಾಮಕ್ಕೊಳಗಾಗುವ ಕ್ಷೇತ್ರ. ಏಕೆಂದರೆ ವಿದೇಶಿಯವರು ಉತ್ಪಾದನಾ ಸರಕುಗಳೊಂದಿಗೆ ಆಂತರಿಕ ಮಾರುಕಟ್ಟೆಯ ಮೇಲೆ ಲಗ್ಗೆ ಇಡುತ್ತಾರೆ. ಈ ಕುರಿತಾಗಿ ಕೆಲವು ಮಾಹಿತಿಯನ್ನು ಸಂಗ್ರಹಿಸಿ ವಿಶ್ಲೇಷಿಸಿದ್ದಾಗಿದೆ.

ಅಧ್ಯಯನಕ್ಕೆ ಒಳಪಡಿಸಿದ ಎಲ್ಲ ಪ್ರತಿಸ್ಪಂದಿಗಳಿಂದ ಒಂದೇ ಅಭಿಪ್ರಾಯ- 'ಜಾಗತೀಕರಣವು ತಮ್ಮ ಉದ್ದಿಮೆಯ ಮೇಲೆ ಸಕಾರಾತ್ಮಕ ಪರಿಣಾಮ ಬೀರಿದೆ'. ಸ್ಪರ್ಧೆಯನ್ನು ಸಕಾರಾತ್ಮಕವಾಗಿ ಸ್ವೀಕರಿಸಿದರೆ ಬದಲಾವಣೆಯೊಂದಿಗೆ ಮುಂದುವರೆಯುವ ಸಾಧ್ಯವಿದೆ. ಆದ್ದರಿಂದ ಎಲ್ಲ ಪ್ರತಿಸ್ಪಂದಿಗಳು ಅದನ್ನು ಹಾಗೆಯೇ ಸ್ವೀಕರಿಸಿದ್ದಾರೆ.

೫.೩.೩೧ : ಜಾಗತೀಕರಣದ ಸಕಾರಾತ್ಮಕ ಪರಿಣಾಮಗಳು :

ಜಾಗತೀಕರಣವು ಅನಿವಾರ್ಯವಾಗಿದ್ದು, ಅದನ್ನು ಎಲ್ಲ ಪ್ರತಿಸ್ಪಂದಿಗಳು ಏಕಾಭಿಪ್ರಾಯದಿಂದ ಒಪ್ಪಿದ್ದಾರೆ. ಅದು ಸಕಾರಾತ್ಮಕ ಪರಿಣಾಮ ಬೀರಿ, ಹಲವಾರು ರೀತಿಯ ಬದಲಾವಣೆಗಳನ್ನು ತರವುದೆಂಬ ಅಭಿಪ್ರಾಯ ಅವರದು. ಅದನ್ನು **ಕೋಷ್ಟಕ ೫.೨೪**ರಲ್ಲಿ ನೀಡಲಾಗಿದೆ.

ಕೋಷ್ಟಕ ೫.೨೪ : ಜಾಗತೀಕರಣದ ಸಕಾರಾತ್ಮಕ ಪರಿಣಾಮಗಳು

ಅ.ಸಂ.	ವಿವರ	ಪ್ರತಿಸ್ಪಂದಿಗಳು	ಪ್ರತಿಶತ
೧	ಸ್ಪರ್ಧೆ ಎದುರಿಸಿದರೆ ಪ್ರಗತಿ ಸಾಧ್ಯ	೦೭	೨೭
೨	ಕಾರ್ಯ ದಕ್ಷತೆ ಹೆಚ್ಚಿಸುವುದು	೦೨	೦೮
೩	ಬಹು ರಾಷ್ಟ್ರೀಯ ಕಂಪನಿಗಳೊಂದಿಗೆ ಬೆಳೆಯುವುದು	೦೨	೦೮
೪	ಗುಣಮಟ್ಟ ಆಧರಿಸಿ ಸ್ಪರ್ಧೆ	೦೨	೦೮
೫	ಹೊಸ ತಲೆಮಾರಿನ ಉದ್ಯಮಶೀಲರಿಗೆ ಅವಕಾಶ	೦೪	೧೫
೬	ಉದ್ದಿಮೆ ರಂಗದ ಪ್ರಗತಿ	೦೬	೨೪
೭	ಸೇವಾ ವಲಯದ ಉದಯ	೦೩	೧೦
	ಒಟ್ಟು	೨೬	೧೦೦

ಪ್ರಸುತ್ತ ಕೋಷ್ಟಕವನ್ನು ವಿಶ್ಲೇಷಿಸಿದಾಗ ಜಾಗತೀಕರಣದಿಂದ ಗರಿಷ್ಠವಾಗಿ ಉದ್ದಿಮೆ ರಂಗದ ಬೆಳವಣಿಗೆಯಾಗಲು ಅವಕಾಶ ದೊರೆಯುತ್ತದೆಯೆಂದು ತಿಳಿಯುವುದು. ಆರ್ಥಿಕತೆಯ ದ್ವಿತೀಯ ರಂಗವಾದ ಉದ್ದಿಮೆಯ ಪ್ರಗತಿಯು ಇನ್ನುಳಿದ ಕ್ಷೇತ್ರದ ಬೆಳವಣಿಗೆಗೆ ಕಾರಣವಾಗುತ್ತದೆ. ಅದರಂತೆಯೇ ಹೊಸ ತಲೆಮಾರಿನ ಉದ್ದಿಮೆದಾರರಿಗೆ ಉತ್ತಮ ಅವಕಾಶಗಳು ಲಭ್ಯವಾಗಿವೆ. ಬಹು ರಾಷ್ಟ್ರೀಯ ಕಂಪನಿಗಳೊಂದಿಗೆ ಬೆಳೆಯುವ, ಗುಣಮಟ್ಟ ಆಧರಿಸಿ ಪ್ರಗತಿಯಾಗುವ ವಿಚಾರಗಳನ್ನು ಅವರು ಹಂಚಿಕೊಳ್ಳುತ್ತಾರೆ.

ಇವೆಲ್ಲಕ್ಕೂ ಮಿಗಿಲಾಗಿ ಸ್ಪರ್ಧೆಯನ್ನು ಎದುರಿಸಿ ಅವರೊಂದಿಗೆ ಬೆಸೆದುಕೊಂಡು ಬೆಳವಣಿಯಾಗಲು ಉತ್ತಮ ಅವಕಾಶ ದೊರೆಯುವದೆಂದು ಗರಿಷ್ಠ ಪ್ರತಿಸ್ಪಂದಿಗಳ ಅಭಿಪ್ರಾಯವಾಗಿದೆ.

೫.೩.೩೨ : ಉದ್ದಿಮೆಯ ಕುರಿತು ಆಶಯ-ಯೋಜನೆ ಇತ್ಯಾದಿ :

ಉದ್ದಿಮೆಯು ಸದಾಕಾಲ ಒಂದೇ ಪ್ರಮಾಣದಲ್ಲಿ ಒಂದೇ ಗಾತ್ರದಲ್ಲಿ ಮುಂದುವರೆಯುವದಲ್ಲ. ಪ್ರಗತಿಯು ಸರ್ವಸಾಮಾನ್ಯ. ಯಶಸ್ವಿಯಾಗಿ ಮಾರುಕಟ್ಟೆಯಲ್ಲಿ ಸ್ಥಾಪಿತಗೊಂಡ ನಂತರ ಹಂತ-ಹಂತವಾಗಿ ಪ್ರಗತಿಯಾಗುವದು, ವಿಸ್ತರಿಸುವದು ಸಹಜವಾಗುತ್ತವೆ.

ಪ್ರತಿಸ್ಪಂದಿಗಳು ತಮ್ಮ ಕಾರ್ಯಸಾಮರ್ಥ್ಯವನ್ನು ಹೆಚ್ಚಿಸಬೇಕೆಂಬ ಅಭಿಪ್ರಾಯ ಹೊಂದಿರುವುದು ಸ್ಪಷ್ಟ. ಆದ್ದರಿಂದ ಅದನ್ನು ಅವರೇ ಹೀಗೆ ಕಾರ್ಯಗತಗೊಳಿಸಲು ಯೋಜಿಸಿದ್ದಾರೆಂದು ಅರಿಯಲು ಅವರಿಗೆ ಪ್ರಶ್ನೆಗಳನ್ನು ಕೇಳಲಾಯಿತು. ಅವರು ನೀಡಿದ ಅಭಿಪ್ರಾಯಗಳನ್ನು **ಕೋಷ್ಟಕ ೫.೨೫**ರಲ್ಲಿ ವ್ಯವಸ್ಥಿತಗೊಳಿಸಿದೆ.

ಕೋಷ್ಟಕ ೫.೨೫ : ಸಾಮರ್ಥ್ಯ ಹೆಚ್ಚಿಸುವ ಬಗೆ

ಅ.ಸಂ.	ವಿವರ	ಪ್ರತಿಸ್ಪಂದಿಗಳು	ಪ್ರತಿಶತ
೧	ಸ್ವೀಕರಿಸುವದರಿಂದ ಬೃಹತ್ ಆಗಿ ಬೆಳೆಯುವದು	೦೨	೧೫
೨	ಸೇರ್ಪಡೆಗೊಳ್ಳುವುದರಿಂದ ಬೃಹತ್ ಆಗಿ ಬೆಳೆಯುವದು	೦೧	೦೯
೩	ಹೆಚ್ಚುವರಿ ಬಂಡವಾಳದಿಂದ ವಿಸ್ತಾರಗೊಳ್ಳುವದು	೦೫	೩೮
೪	ಹೆಚ್ಚುವರಿ ಬಂಡವಾಳದಿಂದ ವೈವಿಧ್ಯತೆ ಸಾಧಿಸುವುದು	೦೫	೩೮
೫	ಸಂಸ್ಥೆಯನ್ನು ಕಂಪನಿಯಾಗಿ ಪರಿವರ್ತಿಸುವದು	-	-
	ಒಟ್ಟು	೧೩	೧೦೦

ಈ ಕೋಷ್ಟಕದಲ್ಲಿಯ ಅಭಿಪ್ರಾಯಗಳನ್ನು ಅಭ್ಯಸಿಸಿದಾಗ ಪ್ರತಿಸ್ಪಂದಿಗಳು ತಮ್ಮ ಘಟಕಗಳ ವೃದ್ಧಿಗೆ ಎರಡು ವಿಧಗಳನ್ನು ಅಂದರೆ ಹೆಚ್ಚುವರಿ ಬಂಡವಾಳವನ್ನು ಸಂಗ್ರಹಿಸಿ ಮತ್ತು ವೈವಿಧ್ಯತೆಗಳನ್ನು ಉತ್ಪಾದಿಸುವ ಯೋಜನೆ ಹೊಂದಿದ್ದಾರೆ. ನಂತರ ಕಾರ್ಯಗೈಯ್ಯುತ್ತಿರುವ ಬೇರೆ ಘಟಕಗಳನ್ನು ಸ್ವೀಕರಿಸುವದರಿಂದ ಸಾಮರ್ಥ್ಯ ಹೆಚ್ಚಿಸುವದಾಗಿ ಇನ್ನೂ ಕೆಲವು ಪ್ರತಿಸ್ಪಂದಿಗಳು ಹೇಳುತ್ತಾರೆ. ಕೊನೆಯಲ್ಲಿ ಅತಿ ಕಡಿಮೆ ಪ್ರತಿಸ್ಪಂದಿಗಳು ಬೇರೆ ಘಟಕಗಳೊಂದಿಗೆ ಸೇರ್ಪಡೆಗೊಳ್ಳುವ ಯೋಜನೆ ರೂಪಿಸಿದ್ದಾರೆ.

೫.೩.೩೩ : ಸಾಮರ್ಥ್ಯ ಹೆಚ್ಚಳದ ಯೋಜನೆ :

ಪ್ರತಿಸ್ಪಂದಿಗಳು ಯಾವ ತರಹದ ಸಾಮರ್ಥ್ಯ ಹೆಚ್ಚಿಸುವ ವಿಚಾರ ಹೊಂದಿರುವರೆಂಬುದನ್ನು ಕೋಷ್ಟಕ **೫.೨೫**ರಲ್ಲಿ ವಿವರಿಸುತ್ತದೆ. ಅದಕ್ಕೆ ಪೂರಕವಾದ ಯೋಜನೆಯು ಯಾವ ಹಂತದಲ್ಲಿದೆಯೆಂಬ ಪ್ರಶ್ನೆಗೆ ಅರ್ಧಷ್ಟು ಪ್ರತಿಸ್ಪಂದಿಗಳು ತಮ್ಮ ಯೋಜನೆ ಇನ್ನೂ ಸಿದ್ಧವಾಗಿಲ್ಲವೆಂದೂ, ಅದನ್ನು ಪ್ರಾರಂಭಿಸಬೇಕಾಗಿದೆಯೆಂದೂ ಹೇಳಿದ್ದಾರೆ. ಆದರೆ ಶೇ. ೩೦ ರಷ್ಟು ಪ್ರತಿಸ್ಪಂದಿಗಳು ಯೋಜನೆ ಸಿದ್ಧವಾಗಿದೆಯೆಂದೂ, ಇನ್ನುಳಿದ ಕೆಲವೆ ಪ್ರತಿಸ್ಪಂದಿಗಳೂ ಅದು ಇನ್ನೂ ಹೊಸ ವಿಚಾರವಾಗಿದ್ದು, ಅದರ ತಯಾರಿ ಪ್ರಾರಂಭಗೊಳ್ಳಬೇಕೆಂದು ಅಭಿಪ್ರಾಯಿಸುತ್ತಾರೆ.

ಅದರಂತೆ ಯೋಜನೆ ಸಿದ್ಧವಿರುವ ಪ್ರತಿಸ್ಪಂದಿಗಳು ಅದನ್ನು ಕಾರ್ಯಗತಗೊಳಿಸಲು ಎರಡು ವರ್ಷ ತಗಲುವದೆಂದೂ, ಒಂದೇ ವರ್ಷದೊಳಗೆ ಕಾರ್ಯರೂಪಕ್ಕೆ ತರಲಾಗುವುದೆಂದೂ ಮೂರನೆಯ ಒಂದರಷ್ಟು ಜನ ಮತ್ತು ಮೂರು ವರ್ಷಕ್ಕಿಂತಲೂ ಅಧಿಕ ಅವಧಿ ಬೇಕಾಗುವದೆಂದೂ ಕಡಿಮೆ ಸಂಖ್ಯೆಯ ಪ್ರತಿಸ್ಪಂದಿಗಳು ಅಭಿಪ್ರಾಯಿಸುತ್ತಾರೆ.

೫.೩.೩೪ : ಹೊಸ ಉದ್ದಿಮೆಯ ಯೋಜನೆ :

ಸಾಮಾನ್ಯವಾಗಿ ಯಶಸ್ವಿಯಾಗಿ ಸ್ಥಾಪಿತಗೊಂಡ ಉದ್ದಿಮೆದಾರರು, ತಮ್ಮ ವರ್ಚಸ್ಸು ಮತ್ತು ಸುನಾಮೆಯನ್ನು ಬಂಡವಾಳವನ್ನಾಗಿಸಿಕೊಂಡು ಮತ್ತೆ ಹೊಸ-ಹೊಸ ಉದ್ದಿಮೆ ಘಟಕಗಳನ್ನು ಸ್ಥಾಪಿಸುವ ವಿಚಾರಗಳನ್ನು ಹೊಂದಿರುತ್ತಾರೆ.

ಪ್ರಸುತ್ತ ಅಧ್ಯಯನದ ಪ್ರತಿಸ್ಪಂದಿಗಳಲ್ಲಿ ಗರಿಷ್ಠ ಉದ್ದಿಮೆದಾರರು ಈ ಯೋಜನೆಗಳನ್ನು ಹೊಂದಿದ್ದು, ಇನ್ನುಳಿದ ಪ್ರತಿಸ್ಪಂದಿಗಳು ತಮ್ಮಲ್ಲಿ ಅಂತಹ ಯಾವ ವಿಚಾರಗಳಿಲ್ಲವೆಂದು ಅಭಿಪ್ರಾಯಿಸಿದ್ದಾರೆ.

ಅವರಲ್ಲಿ ಬಹುಮತದ ಪ್ರತಿಸ್ಪಂದಿಗಳು ಹೊಸ ಘಟಕ ಸ್ಥಾಪನೆಯ ಯೋಜನೆಯನ್ನು ಹೊಂದಿದ್ದು, ಯಾವ ತರಹದ ಘಟಕಗಳನ್ನು ಹೊಂದುವರೆಂಬ ಅಭಿಪ್ರಾಯವನ್ನು **ಕೋಷ್ಟಕ ೫.೨೬**ರಲ್ಲಿ ನೀಡಲಾಗಿದೆ.

ಕೋಷ್ಟಕ ೫.೨೬ ಹೊಸ ಉದ್ದಿಮೆ ಸ್ಥಾಪನೆಯ ವಿಧ

ಅ.ಸಂ.	ವಿವರ	ಪ್ರತಿಸ್ಪಂದಿಗಳು	ಪ್ರತಿಶತ
೧	ಹೊಸ ಕಂಪನಿ	೦೧	೧೪
೨	ತಮ್ಮದೇ ಅಂಗ/ಸಹ ಕಂಪನಿ	೦೫	೭೨
೩	ಸ್ವೀಕರಿಸುವದರಿಂದ	೦೧	೧೪
೪	ಇತರ	-	-
	ಒಟ್ಟು	೦೭	೧೦೦

ಇದನ್ನು ವಿಶ್ಲೇಷಿಸಿದಾಗ, ಕೆಲವರಲ್ಲಿ ತಮ್ಮದೆ ಅಂಗ ಅಥವಾ ಸಹವರ್ತಿ ಕಂಪನಿಯನ್ನು ಸ್ಥಾಪಿಸುವ ವಿಚಾರವಿರುವದು ಕಂಡು ಬರುತ್ತದೆ.ಸಮ ಸಂಖ್ಯೆಯ ಪ್ರತಿಸ್ಪಂದಿಗಳು ಹೊಸ ಕಂಪನಿಯನ್ನು ಸ್ಥಾಪಿಸುವ ಮತ್ತು ಬೇರೆ ಕಂಪನಿಯನ್ನು ಸ್ವೀಕರಿಸುವ ವಿಚಾರ ಹೊಂದಿದ್ದು ತಿಳಿದು ಬರುತ್ತದೆ. ಇವುಗಳನ್ನು ಹೊರತು ಪಡಿಸಿ ಬೇರಾವುದೇ ಯೋಜನೆಗಳನ್ನು ಪ್ರತಿಸ್ಪಂದಿಗಳು ಹೊಂದಿರುವುದಿಲ್ಲ.

೫.೩.೩೫ : ಸಮಸ್ಯೆಗಳಿಗೆ ಪರಿಹಾರ :

ಕಂಪನಿಯು ಕಾರ್ಯದಲ್ಲಿ ತೊಡಗಿದಾಗ ಹತ್ತಾರು ಸಮಸ್ಯೆಗಳು ಎದುರಾಗುವದುಂಟು. ಮುಂದಾಲೋಚನೆಯಿಂದ ಅಂತಹ ಸಂಭಾವ್ಯ ಸಮಸ್ಯೆಗಳಿಗೆ ಪರಿಹಾರದ ದಾರಿ ಕಂಡುಕೊಳ್ಳ-ಲಾಗುತ್ತದೆ. ಕೆಲವೊಮ್ಮೆ ವಿಭಿನ್ನ ರೀತಿಯ ಸಂಕಷ್ಟಗಳು ಹುಟ್ಟಿಕೊಳ್ಳತ್ತವೆ. ಅವುಗಳನ್ನು ಪರಿಹರಿಸಲು ವೃತ್ತಿಪರ ಸಲಹೆಗಾರರು ಲಭ್ಯವಿದ್ದರೆ ದಾರಿ ಸುಗಮವಾಗುತ್ತದೆ. ಆದರೆ ಇಂತಹ ನಿಪುಣರ ಅಲಭ್ಯತೆಯು ಚಿಂತಿಗೀಡು ಮಾಡುತ್ತದೆ. ಈ ಕುರಿತು ಪ್ರತಿಸ್ಪಂದಿಗಳಿಗೆ ವಿಚಾರಿಸಿದಾಗ ಹೆಚ್ಚಿನ ಪ್ರತಿಸ್ಪಂದಿಗಳು ಸಲಹೆಗಾರರು ಲಭ್ಯವಿದ್ದಾರೆಂದು ಹೇಳಿದರೆ ಇನ್ನುಳಿದ ಕೆಲವು ಪ್ರತಿಸ್ಪಂದಿಗಳು ಲಭ್ಯವಾಗಿಲ್ಲವೆಂದು ಹೇಳುತ್ತಾರೆ.

ಸಲಹೆಗಾರರು ಲಭ್ಯವಿರುವ ಬಹುತೇಕ ಪ್ರತಿಸ್ಪಂದಿಗಳಿಗೆ ಅವರು ಖಾಸಗಿ ವೃತ್ತಿಪರ ಸಲಹೆಗಾರರಾಗಿದ್ದಾರೆ. ಇವರಾರಿಗೂ ಸಾರ್ವಜನಿಕ ಹಣಕಾಸಿನ ಸಂಸ್ಥೆಗಳಿಂದ ಸಲಹೆಗಾರರು ದೊರೆತಿಲ್ಲವೆಂದು ಸ್ಪಷ್ಟ.

ಈ ವೃತ್ತಿಪರ ಸಲಹೆಗಾರರ ಸೇವೆ ಬಗ್ಗೆ ವಿಚಾರಿಸಿದಾಗ ಬಹುತೇಕ ಪ್ರತಿಸ್ಪಂದಿಗಳಿಗೆ ಅವರ ಸೇವೆಗಳು ಸಮಾಧಾನ ತಂದಿವೆ. ಆದರೆ ಅಲ್ಪ ಪ್ರಮಾಣದ ಪ್ರತಿಸ್ಪಂದಿಗಳಿಗೆ ಸಮಾಧಾನವಾಗಿಲ್ಲ. ಇವರಿಗೆಲ್ಲ ಅವಶ್ಯವಿದ್ದ ಸಮಯದಲ್ಲಿ ಸೇವೆಗಳು ದೊರೆಯದ ಕಾರಣಕ್ಕಾಗಿ ಸಮಾಧಾನವಾಗಿಲ್ಲವೆಂದು ಸೂಚಿಸಿದ್ದಾರೆ.

ಈ ಎಲ್ಲ ಕ್ಷೇತ್ರಗಳಿಗೂ ವಿಸ್ತರಿಸಿದ ಎಂಬತ್ತೆರಡು ಪ್ರಶ್ನೆಗಳಿಗೆ ಉದ್ದಿಮೆದಾರರು ನೀಡಿದ ಉತ್ತರಗಳನ್ನು ವಿಶ್ಲೇಷಿಸಿ, ಪರಿಸ್ಥಿಯ ಸ್ಥಿತಿ-ಗತಿಯನ್ನು ತಿಳಿದುಕೊಳ್ಳಲಾಗಿದೆ. ಕೊನೆಯಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಉದ್ದಿಮೆಗಳ ಸ್ಥಿತಿ-ಗತಿಯ ಬಗ್ಗೆ ಪ್ರತಿಸ್ಪಂದಿಗಳು ಯಾವ ಸಲಹೆಗಳನ್ನು ನೀಡುತ್ತಾರೆಂದು ಈ ಕೆಳಗಿನಂತೆ ಸಾರಾಂಶಗೊಳಿಸಲಾಗಿದೆ.

೫.೩.೩೬ : ಜಿಲ್ಲೆಯ ಉದ್ದಿಮೆಯ ಸ್ಥಿತಿಗತಿ :

೧) ಜಿಲ್ಲೆಯು ಮಹಾರಾಷ್ಟ್ರ ಗಡಿಯನ್ನು ಹೊಂದಿರುವದರಿಂದ ಗಲಭೆಗಳು ಸಾಮಾನ್ಯವಾಗಿ ಉದ್ಭವಿಸುತ್ತಿರುವವು. ಹೀಗಾಗಿ ಸರಕಾರ ಮೂಲ ಸೌಕರ್ಯ ಅಭಿವೃದ್ಧಿ ಕಡೆಗೆ ಲಕ್ಷ್ಯವಹಿಸುತ್ತಿಲ್ಲ. ಅಭಿವೃದ್ಧಿಗೊಳಿಸಲು ಬಯಸುತ್ತಿಲ್ಲ. ಇಷ್ಟಾಗಿಯೂ ಜಿಲ್ಲೆಯಲ್ಲಿ ಸಾಕಷ್ಟು ಸಂಖ್ಯೆಯ ಬೃಹತ್, ಮಧ್ಯಮ ಮತ್ತು ಚಿಕ್ಕ ಉದ್ದಿಮೆ ಘಟಕಗಳು ಕಾರ್ಯಗೈಯುತ್ತಿವೆ. ಅದು ಜಿಲ್ಲೆಯ ಸೌಭಾಗ್ಯ.

೨) ಜಿಲ್ಲೆಯಲ್ಲಿ ಉದ್ದಿಮೆ ರಂಗಕ್ಕೆ ಉತ್ತಮ ಭವಿಷ್ಯವಿದೆ.

೩) ಜಿಲ್ಲೆಯಲ್ಲಿ ಶೇ. ೨೦ ಕ್ಕಿಂತ ಅಧಿಕವಾಗಿ ಕಬ್ಬು ಬೆಳೆಯುವ ಪ್ರದೇಶ ಹೊಂದಿರುವದರಿಂದ ಸಕ್ಕರೆ ಉದ್ದಿಮೆಗೆ ಸಾಕಷ್ಟು ಅವಕಾಶಗಳಿವೆ.

೪) ಕಂಪನಿಯ ಸಂಸ್ಕೃತಿ (ಕಾರ್ಪೋರೇಟ್ ಕಲ್ಚರ್) ಬೆಳೆಯಬೇಕು. ವೃತ್ತಿಪರ ನಿರ್ವಹಣೆಯು ಬೇಕಾಗಿದೆ. ಉದ್ದಿಮೆದಾರರು ಲಭ್ಯವಿರುವ ಸಾಕಷ್ಟು ನಿಸರ್ಗ ಸಂಪತ್ತನ್ನು ಬಳಸಿಕೊಂಡು ಜಿಲ್ಲೆಯ ಹಾಗೂ ಉದ್ದಿಮೆ ರಂಗದ ಪ್ರಗತಿಗೆ ಶ್ರಮಿಸಬೇಕು.

೫) ಅವಶ್ಯಕತೆಗಳಿಗೆ ಅನುಗುಣವಾಗಿ ಉದ್ದಿಮೆಗಳು ಪ್ರಾರಂಭಗೊಂಡು, ಯುವ ಸಮುದಾಯಕ್ಕೆ ಉದ್ಯೋಗಗಳನ್ನು ಸೃಷ್ಟಿಸಬೇಕು. ಜಿಲ್ಲೆಯು ಉದ್ದಿಮೆ ರಂಗಕ್ಕೆ ಪ್ರಶಸ್ತವಾಗಿದೆ.

೬) ಕೃಷಿ ಉತ್ಪನ್ನಗಳಾಧಾರಿತ ಮುಖ್ಯ ಹಾಗೂ ಸಹ-ಉದ್ದಿಮೆಗಳನ್ನು ಇನ್ನೂ ವಿವಿಧ ರೀತಿಯಲ್ಲಿ ಬೆಳಸುವ ಅವಕಾಶವಿದೆ.

೭) ಜಿಲ್ಲೆಯ ಸದ್ಯದ ಉದ್ದಿಮೆಗಳ ಸ್ಥಿತಿಯು ಸಮಾಧಾನಕರವಾಗಿಲ್ಲ. ಸರಕಾರ ಹೊರಗಿನ ಉದ್ದಿಮೆದಾರರನ್ನು ಜಿಲ್ಲೆಯೆಡೆಗೆ ಆಕರ್ಷಿಸಬೇಕು. ಮೂಲ ಸೌಕರ್ಯ ಸುಧಾರಣೆಯೆಡೆಗೆ ಆದ್ಯತೆ ನೀಡಬೇಕು.

೮) ಕೃಷಿಯಾಧಾರಿತ ಉದ್ದಿಮೆಗೆ ಭವಿತವ್ಯವಿದೆ.

ಈ ರೀತಿಯಲ್ಲಿ ಪ್ರತಿಸ್ಪಂದಿಗಳು ನೀಡಿದ ತಮ್ಮ ಅನುಭವಗಳು ಉದ್ದಿಮೆ ರಂಗದಲ್ಲಿ ಪ್ರವೇಶಿಸಲಿರುವ ಭಾವಿ ಉದ್ದಿಮೆದಾರರಿಗೆ ಮಾರ್ಗದರ್ಶನ ನೀಡುವಂತಾಗಿವೆ.

****

ಅಧ್ಯಾಯ : ಆರು

ಚಿಕ್ಕ ಮತ್ತು ಅತೀ ಚಿಕ್ಕ ಉದ್ದಿಮೆಗಳು ಹಾಗೂ ಉದ್ದಿಮೆದಾರರು

ಅಧ್ಯಾಯ : ಆರು

ಚಿಕ್ಕ ಮತ್ತು ಅತೀ ಚಿಕ್ಕ ಉದ್ದಿಮೆಗಳು ಹಾಗೂ ಉದ್ದಿಮೆದಾರರು

೬.೧ ಪ್ರವೇಶಿಕೆ :

ದೇಶ ಹಾಗೂ ರಾಜ್ಯದ ಆರ್ಥಿಕ ಪ್ರಗತಿಯಲ್ಲಿ ಚಿಕ್ಕ ಉದ್ದಿಮೆಗಳ ಪಾತ್ರವನ್ನು ಪ್ರಶಂಸಿಸುವದು ಉತ್ಪ್ರೇಕ್ಷೆಯೆನಿಸಲಾರದು. ಪ್ರಮುಖವಾಗಿ ಆರ್ಥಿಕ ರಂಗಕ್ಕೆ ಪ್ರಮುಖ ಕೊಡುಗೆಗಳನ್ನು ನೀಡುತ್ತಿರುವ ಈ ಉದ್ದಿಮೆ ರಂಗ ಸಮಾಜದ ಸರ್ವತೋಮುಖದ ಅಭಿವೃದ್ಧಿಗೆ ಸಹಾಯಕವಾಗಿದೆ. ಸಾವಿರಾರು ವಿಧದ ಸರಕುಗಳು, ವೈವಿಧ್ಯಮಯ ಸೇವೆ, ಉದ್ಯೋಗ ಸೃಷ್ಟಿ, ನಮ್ಮನ್ನು ಚಕಿತಗೊಳಿಸುವುದು. ಸರಳ ಪ್ರಾರಂಭ, ಸಲೀಸಾಗಿ ನಿರ್ವಹಣೆ, ಕಡಿಮೆ ಬಂಡವಾಳ, ಸ್ಥಳೀಯ ಸಂಪನ್ಮೂಲಗಳ ಸದ್ಬಳಕೆ, ಸೀಮಿತ ಮಾರುಕಟ್ಟೆ, ಸ್ವಂತಿಕೆ ಮುಂತಾದ ಪ್ರಯೋಜನಗಳನ್ನು ಹೊಂದಿದೆ. ಈ ಚಿಕ್ಕ ಉದ್ದಿಮೆ ರಂಗವು ಬೃಹತ್ ಉದ್ದಿಮೆ ರಂಗಕ್ಕೆ ಪೂರಕವಾಗಿ ನಿಲ್ಲುತ್ತದೆ.

ಚಿಕ್ಕ ಉದ್ದಿಮೆಗಳು ವಿದೇಶಿ ವಿನಿಮಯ ಗಳಿಕೆಯ ಮೂಲ. ಚಿಲ್ಲರೆ ಮಾರುಕಟ್ಟೆಯ ಬಹುತೇಕ ಸರಕುಗಳು, ಬೃಹತ್ ಉದ್ದಿಮೆಗೆ ಅವಶ್ಯವಿರುವ ಬಿಡಿಭಾಗಗಳು ಈ ರಂಗದ ಕೊಡುಗೆಗಳು.

ಇಷ್ಟಾಗಿಯೂ ಈ ಚಿಕ್ಕ ಉದ್ದಿಮೆಯ ಕ್ಷೇತ್ರವು ಸಮಸ್ಯೆಯಿಂದ ಮುಕ್ತವಾಗಿಲ್ಲ. ವ್ಯವಹಾರ ನಿರ್ವಹಣೆಯ ಪ್ರತಿ ಹಂತದಲ್ಲೂ ಸಮಸ್ಯೆಗಳು ಎದುರಾಗುತ್ತಿವೆ. ಉದ್ದಿಮೆದಾರರ ತೊಂದರೆಗಳಿಂದ ಮುಕ್ತವಾಗಿಲ್ಲ. ಸಮಯಾನುಸಾರ ಸೂಕ್ತ ಸಲಹೆ, ಹಣಕಾಸು ನೆರವು, ಮಾರ್ಗದರ್ಶನಗಳ ಕೊರತೆಯಿದೆ. ಸರಕಾರಿ ಅಧಿಕಾರಿಗಳು ಉದ್ದಿಮೆದಾರರಿಗೆ ತೀವ್ರವಾಗಿ ಸ್ಪಂಧಿಸುವ ಅಗತ್ಯವಿದೆ.

ಈ ಎಲ್ಲ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಚಿಕ್ಕ ಮತ್ತು ಅತೀ ಚಿಕ್ಕ ಉದ್ದಿಮೆದಾರರನ್ನು ಮಾದರಿಯಾಧಾರದ ಮೇಲೆ ಆಯ್ದುಕೊಂಡು ಅಭಿಪ್ರಾಯ ಸಂಗ್ರಹಿಸಲು ಅವರಿಗಾಗಿಯೇ ರಚಿಸಲಾದ ಪ್ರಶ್ನಾವಳಿಗಳ ಮೂಲಕ ಪ್ರಯತ್ನಿಸಲಾಗಿದೆ. ಜಿಲ್ಲೆಯಲ್ಲಿ ಒಟ್ಟು ೧೦ ತಾಲೂಕುಗಳಲ್ಲಿ ಕಾರ್ಯಗೈಯ್ಯುತ್ತಿರುವ ಘಟಕಗಳಲ್ಲಿ ಅಂದಾಜು ಶೇ. ೨೫-೩೦ ರಷ್ಟು ಮಾದರಿಗಳನ್ನು ಆಯ್ಕೆ ಮಾಡಲಾಗಿದೆ. ಅವರಲ್ಲಿ ಅಥಣಿ ತಾಲೂಕಿನ ೩೦, ಬೈಲಹೊಂಗಲ ೩೬, ಬೆಳಗಾವಿ ೭೨, ಚಿಕ್ಕೋಡಿ ೩೩, ಗೋಕಾಕ ೩೩, ಹುಕ್ಕೇರಿ ೩೯, ಖಾನಾಪೂರ ೩೬, ರಾಯಭಾಗ ೩೦, ರಾಮದುರ್ಗ ೩೬ ಮತ್ತು ಸವದತ್ತಿ ತಾಲೂಕಿನಿಂದ ೩೬-ಹೀಗೆ ಒಟ್ಟು ೩೮೧ ಘಟಕಗಳ ಮಾಲೀಕರು ಅಥವಾ ನಿರ್ವಹಣಾದಾರರು ಅಥವಾ ಸಂಸ್ಥಾಪಕರಿಂದ ನೇರ ಮಾಹಿತಿ ಸಂಗ್ರಹಿಸಲಾಗಿದೆ.

ಇವರೆಲ್ಲರ ಅಭಿಪ್ರಾಯಗಳು ಬಹುತೇಕ ಏಕರೂಪದ್ದಾಗಿರಬಹುದು. ಆದರೂ ಕೆಲವೊಂದು ಕ್ಷೇತ್ರಗಳಿಗೆ ಸಂಬಂಧಿಸಿದಂತೆ ವಿಭಿನ್ನವಾಗಿರುವ ಮಾಹಿತಿಗಳು ಲಭ್ಯವಾಗಿವೆ. ಆದ್ದರಿಂದ ಎಲ್ಲ ಮಾಹಿತಿಯ ದತ್ತಾಂಶಗಳನ್ನು ಪ್ರತ್ಯೇಕವಾಗಿ ಕೋಷ್ಠಕಗಳಲ್ಲಿ ನೀಡಿ, ವಿಶ್ಲೇಷಿಸಲಾಗಿದೆ. ಪ್ರತಿಸ್ಪಂಧಿಗಳ ಅಭಿಪ್ರಾಯಗಳನ್ನು ಪ್ರಾದೇಶಿಕವಾಗಿ ಅಂದರೆ ತಾಲೂಕಾನುಸಾರವಾಗಿ ವಿಂಗಡಿಸಿ, ಸರಾಸರಿ ಲೆಕ್ಕದಲ್ಲಿ ಜಲ್ಲೆಯ ಉದ್ದಿಮೆದಾರರ ಅಭಿಮತಗಳೆಂದು ಪ್ರತಿಶತ ಪ್ರಮಾಣದಲ್ಲಿ ಸೂಚಿಸಲಾಗಿದೆ.

೬.೨ : ಉದ್ದಿಮೆಯ ವಿಧಗಳು :

ಚಿಕ್ಕ ಉದ್ದುಮೆದಾರರು ಹೆಚ್ಚಾಗಿ ತಮ್ಮ ಕ್ಷೇತ್ರಗಳಲ್ಲಿ ಲಭ್ಯವಿರುವ ಸಂಪನ್ಮೂಲಗಳನ್ನು ಆಧರಿಸಿ ತಮ್ಮ ಉದ್ದಿಮೆಗಳನ್ನು ಪ್ರಾರಂಭಿಸುತ್ತಾರೆ. ಕಚ್ಚಾ ಸಾಮಗ್ರಿಯ ಲಭ್ಯತೆ ಉದ್ದಿಮೆಯ ಮೇಲೆ ಪ್ರಭಾವ ಬೀರುವ ಅಂಶವಾಗಿರುತ್ತದೆ. ಜೊತೆಗೆ ಸ್ಥಳೀಯವಾಗಿ ದೊರೆಯುವ ಕೌಶಲ ಭರಿತ ಮಾನವ ಸಂಪನ್ಮೂಲವನ್ನು ಅವಲಂಬಿಸಿ ಈ ಘಟಕಗಳನ್ನು ಪ್ರಾರಂಭಿಸಬೇಕಾಗುತ್ತದೆ.

ಈ ಅಧ್ಯಯನಕ್ಕೆ ಆಯ್ದುಕೊಂಡ ಉದ್ದಿಮೆದಾರರು ಉದ್ದಿಮೆ ಪ್ರಾರಂಭಿಸಿ, ತೊಡಗಿ ಕೊಂಡಿರುವ ಮುಖ್ಯ ಚಟುವಟಿಕೆ, ಉತ್ಪಾದನೆ, ಕಸಬು ಮುಂತಾದವುಗಳನ್ನು ಸಂಕ್ಷಿಪ್ತವಾಗಿ ಇಲ್ಲಿ ತಾಲೂಕುವಾರು ಮಾಹಿತಿಯನ್ನು ನೀಡಲಾಗಿದೆ. ಈ ಸಂದರ್ಭದಲ್ಲಿ ಒಬ್ಬರಿಗಿಂತ ಅಧಿಕ ಸಂಖ್ಯೆಯ ಉದ್ದಿಮೆದಾರರು ಒಂದೇ ತರಹದ ಉತ್ಪಾದನೆ ಅಥವಾ ವೃತ್ತಿಯಲ್ಲಿದ್ದರೆ, ಅಂಥವರನ್ನು ಒಂದೇ ಬಾರಿಗೆ ಹೆಸರಿಸಲಾಗಿದೆ.

ಅ) ಅಥಣಿ ತಾಲೂಕಿನ ಉದ್ದಿಮೆ :

ತೊಗಲಿನ ಪಾದರಕ್ಷೆ	ಕಲ್ಲಿನ ಜಲ್ಲಿ	ಮರದ ಉಪಕರಣಗಳು
ಇಟ್ಟಿಗೆ	ಹಾಲಿನ ಶೇಖರಣೆ	ಸಿಹಿ ತಿಂಡಿಗಳು
ಟಾಯರ್ ರಿಟ್ರೆಡಿಂಗ್	ಝುರಾಕ್ಸ್-ಡಿಜಿಟಲ್	ಸಿದ್ಧ ಉಡುಪು

ಬ) ಬೈಲಹೊಂಗಲ ತಾಲೂಕಿನ ಉದ್ದಿಮೆ :

ತಂಪು ಪಾನೀಯ	ಸೈಕಲ್ ಮಾರ್ಟ	ಸೀರೆ ತಯಾರಿಕೆ
ಝುರಾಕ್ಸ್-ಫೋಟೋ	ನೂಲು ತಯಾರಿಕೆ	ಕೃಷಿ ಸಲಕರಣೆ
ಬೇಕರಿ	ಚಿನ್ನಾಭರಣ	

ಕ) ಬೆಳಗಾವಿ ತಾಲೂಕಿನ ಉದ್ದಿಮೆ :

ಪ್ರೀಟಿಂಗ್-ಪ್ಯಾಕಿಂಗ್ ಹೈಡ್ರಾಲಿಕ ಉಪಕರಣಗಳು ಕಟ್ಟಿಗೆಯ ಗೃಹೋಪಯೋಗಿ ವಸ್ತುಗಳು

ಸ್ಟೀಲ-ವಾಯರ್	ಫರ್ನಿಚರ್	ಸರ್ವಿಸಿಂಗ್
ಕೆಮಿಕಲ್ಸ್	ಸ್ಟೀಲ್ ಫರ್ನಿಚರ್	ನಾನ್-ಫೆರಸ್ ಉತ್ಪನ್ನ
ಟ್ಯಾಬ್ಲೆಟ್ಸ	ಗ್ರಾನೈಟ್ ಟೈಲ್ಸ್	ಪಾಲ್ಪ
ವೇ-ಬ್ರಿಡ್ಜ	ಪ್ಲಾಸ್ಟಿಕ್	ಪಾಟ್ಸ್
ಆಟೋಭಾಗಗಳು	ಕಡ್ಲೆ ಹಿಟ್ಟು	ಪ್ಯಾಕಿಂಗ್
ಉಪ್ಪಿನಕಾಯಿ-ಮಸಾಲಾ	ರೈಸ್-ಮಿಲ್	ಸೂಕ್ಷ್ಮ ಪೋಶಕಾಂಶ
ಇಂಜನೀಯರಿಂಗ್ ಸೇವೆ	ಪ್ಲಾಸ್ಟಿಕ್ ಟ್ಯಾಂಕಗಳು	ಪುಡ್ ಪ್ರೋಡಕ್ಟ್ಸ

ಡ) ಚಿಕ್ಕೋಡಿ ತಾಲೂಕಿನ ಉದ್ದಿಮೆ :

ಇಟ್ಟಿಗೆ	ಜೋಡಣಾ ಸಲಕರಣೆಗಳು	ಡ್ರೆಸ್ ಮಟಿರಿಯಲ್ಸ್
ಕುಶನ್ ವರ್ಕ್ಸ	ಸೈಬರ್ ಕೇಂದ್ರ	ಬಿದಿರು ಉತ್ಪನ್ನ
ಪೀಠೋಪಕರಣ	ಆಭರಣ-ಮೂರ್ತಿ ತಯಾರಿಕೆ	ಟ್ರ್ಯಾಕ್ಟರ್-ಟೇಲರ್ಸ್
ನೋಟ ಬುಕ್	ಪಾದರಕ್ಷೆ	

ಇ) ಗೋಕಾಕ ತಾಲೂಕಿನ ಉದ್ದಿಮೆ :

ಪೈಪ್ ತಯಾರಿಕೆ	ಮಡಿಕೆ-ಪಾತ್ರೆ	ಐಸ್‌ಕ್ರೀಮ್
ರಿಪೇಯರ್ಸ್	ಜೇಡಿ ಮಣ್ಣಿನ ವಿಗ್ರಹ	ಫೈಬರ್ ಸಿಲ್ಕ ಸ್ಪಿನ್ನಿಂಗ್
ಹಾರ್ಡವೇರ್	ಫರ್ನಿಚರ್	ಶುದ್ಧ ನೀರು
ಸಿದ್ಧ ಉಡುಪು	ಆಟೋ ರಿಪೇರಿ	ಪಾಟರಿ ವರ್ಕ್ಸ

ಫ) ಹುಕ್ಕೇರಿ ತಾಲೂಕಿನ ಉದ್ದಿಮೆ :

ಫೋಟೋಗ್ರಾಫಿ	ಬಿದಿರು ಉತ್ಪನ್ನ	ಫರ್ನಿಚರ್ ವರ್ಕ್ಸ
ಟ್ಯಾಕ್ಟರ್ ಟ್ರೇಲರ್	ಕೃಷಿ ಸಲಕರಣೆ	ಕಬ್ಬಿಣದ ಗೃಹ ಉತ್ಪನ್ನ
ಫರ್ನಿಚರ್	ಅಲಂಕಾರ ವಸ್ತುಗಳು	ಕೇಬಲ್
ಗಾದಿ ಕಾರ್ಖಾನೆ	ಟೇಲರಿಂಗ್	ಸಿಮೆಂಟ್ ಉತ್ಪನ್ನ

ಗ) ಖಾನಾಪೂರ ತಾಲೂಕಿನ ಉದ್ದಿಮೆ :

ಟೈಲ್ಸ್	ಟೇಲರಿಂಗ್	ಕಂಪ್ಯೂಟರ ಸಂಸ್ಥೆ
ಫರ್ನಿಚರ್ಸ್	ಇಟ್ಟಿಗೆ	ಬೇಕರಿ
ಪ್ಲೋರ್ ಮಿಲ್	ಸಿದ್ಧ ಉಡುಪು	ಪಶುಖಾದ್ಯ
ಪಾದರಕ್ಷೆ		

ಹ) ರಾಯಬಾಗ ತಾಲೂಕಿನ ಉದ್ದಿಮೆ :

ಗೋಧಿ ಉತ್ಪನ್ನಗಳು	ಬೆಲ್ಲ-ಉಪ ಉತ್ಪನ್ನ	ಬೆಲ್ಲದ ಉದ್ದಿಮೆ
ಕೃಷಿ ಉಪಕರಣ	ಸೈಕಲ್ ಮಾರಾಟ-ಸೇವೆ	ಬೆಳ್ಳಿ-ಚಿನ್ನ ಆಭರಣ
ಮೊಂಬತ್ತಿ	ಟೇಲರಿಂಗ್	ಉಪ್ಪಿನಕಾಯಿ-ಮಸಾಲೆ
ಅಗರಬತ್ತಿ	ಪಾದರಕ್ಷೆ	

ಹಿ) ರಾಮದುರ್ಗ ತಾಲೂಕಿನ ಉದ್ದಿಮೆ :

ಸೀರೆ ಉತ್ಪಾದನೆ	ಪವರ್‌ಲೂಮ್	ಸ್ಟೀಲ ಫರ್ನಿಚರ್
ಅಕ್ರೆಲಿಕ್ ಯಾರ್ನ	ಸಿಲ್ಕ ಸೀರೆ	ಮುದ್ರಣ
ಪಾಲಿಸ್ಟರ್	ಕೃಷಿ ಉಪಕರಣ	ಮಸರೈಜ್ಡ್ ಸೀರೆ
ಗ್ರೀನ್ ವರ್ಕ್ಸ	ಕೈಮಗ್ಗ ಬಟ್ಟೆ	ಕುಂಬಾರಿಕೆ

ಹೆ) ಸವದತ್ತಿ ತಾಲೂಕಿನ ಉದ್ದಿಮೆ :

ಟೇಲರಿಂಗ್	ಬಡಿಗತನ	ನೈಲಾನ್ ರೋಪ
ಕುಂಬಾರಿಕೆ	ಬಿದಿರು ಉತ್ಪನ್ನ	ಮೆಕ್ಯಾನಿಕ್ ವರ್ಕ್ಸ
ಸುಣ್ಣ ತಯಾರಿಕೆ	ಹೊಲಿಗೆ ಯಂತ್ರ	

೬.೩ ಬಂಡವಾಳ ಹೂಡಿಕೆ :

ಅತೀ ಚಿಕ್ಕ ಮತ್ತು ಚಿಕ್ಕ ಗಾತ್ರದ ಉದ್ದಿಮೆಗಳ ವರ್ಗೀಕರಣಕ್ಕೆ ಬಂಡವಾಳವು ಮುಖ್ಯ ಆಧಾರವಾಗಿದೆ. ಇದರ ಗರಿಷ್ಠ ಮಿತಿ ರೂ. ೨೫ ಲಕ್ಷದಿಂದ ೫ ಕೋಟಿ. ಚಿಕ್ಕ ಉದ್ದಿಮೆಗಳಿಗಿಂತ ಅತೀ ಕಡಿಮೆ ಬಂಡವಾಳ ಹೂಡಿಕೆ ಅತೀ ಚಿಕ್ಕ ಘಟಕಗಳಲ್ಲಿ ಇರುತ್ತದೆ. ಇವರು ಹೆಚ್ಚಾಗಿ ತಮ್ಮ ಮನೆತನದ ವೃತ್ತಿಗಳನ್ನು ಮುಂದುವರೆಸಿ, ಇನ್ನೂ ಕೆಲವು ಸಿಬ್ಬಂದಿಯನ್ನು ನೇಮಿಸಿಕೊಂಡು ಮಿತವಾದ ಉತ್ಪಾದನಾ ಕಾರ್ಯಗಳಲ್ಲಿ ತೊಡಗಿರುತ್ತಾರೆ.

ಜಿಲ್ಲೆಯ ಹತ್ತು ತಾಲೂಕುಗಳ ಆಯ್ದ ಘಟಕಗಳು ಹೂಡಿದ ಬಂಡವಾಳದ ದತ್ತಾಂಶಗಳ **ಕೋಷ್ಟಕ ೬.೧** ರಲ್ಲಿ ನೀಡಿದೆ. **(ಇಲ್ಲಿಯ ಕೋಷ್ಟಕಗಳು ಕ್ಷೇತ್ರ ಕಾರ್ಯದ ಸಮೀಕ್ಷೆಯನ್ನಾಧರಿಸಿವೆ)**

ಈ ಕೋಷ್ಟಕದ ವಿಶ್ಲೇಷಣೆ ಮಾಡಿದಾಗ, ತಾಲೂಕುವಾರು ಕಂಡು ಬರುವ ಅಂಶವೆಂದರೆ ಅಥಣಿ, ಬೈಲಹೊಂಗಲ, ಚಿಕ್ಕೋಡಿ, ಹುಕ್ಕೇರಿ, ಖಾನಾಪೂರ, ರಾಯಬಾಗ್, ಮತ್ತು ರಾಮದುರ್ಗ ತಾಲೂಕುಗಳಲ್ಲಿ ಗರಿಷ್ಠವಾಗಿ ರೂ. ೧ ಲಕ್ಷ ರಿಂದ ರೂ. ೪ ಲಕ್ಷದವರೆಗೆ, ಬೆಳಗಾವಿಯಲ್ಲಿ ಮತ್ತು ರೂ. ೨೫ ಲಕ್ಷದಿಂದ ರೂ. ೩೦ ಲಕ್ಷ, ಮತ್ತು ಗೋಕಾಕ ಮತ್ತು ಸವದತ್ತಿ ತಾಲೂಕುಗಳಲ್ಲಿ ಕಡಿಮೆ ಬಂಡವಾಳ ರೂ.೫೫೦೦೦/- ರವರೆಗೆ ಹೂಡಿಕೆ ಹೊಂದಿದ ಘಟಕಗಳಿವೆ.

ಈ ಎಲ್ಲ ತಾಲೂಕುಗಳಲ್ಲಿ ರೂ. ೪ ಲಕ್ಷದವರೆಗೆ ಹೂಡಿದ ಘಟಕಗಳು ಬಹುತೇಕವಾಗಿ ಕಂಡು ಬರುತ್ತದೆ. ಅಂದರೆ, ಅಥಣಿ ತಾಲೂಕಿನಲ್ಲಿ- ಶೇ.೭೦, ಬೈಲಹೊಂಗಲ-ಶೇ.೮೪, ಚಿಕ್ಕೋಡಿ- ಶೇ. ೫೫, ಗೋಕಾಕ- ಶೇ. ೫೫, ಹುಕ್ಕೇರಿ-ಶೇ. ೬೯, ಖಾನಾಪೂರ-ಶೇ. ೭೫, ರಾಯಬಾಗ್- ಶೇ. ೭೦, ರಾಮದುರ್ಗ-ಶೇ. ೬೭ ಮತ್ತು ಸವದತ್ತಿ ತಾಲೂಕಿನ ಎಲ್ಲ (ಶೇ. ೧೦೦) ಪ್ರತಿಸ್ಪಂದಿಗಳು ಗರಿಷ್ಠವೆಂದರೆ ರೂ. ೪ ಲಕ್ಷದವರೆಗೆ ಬಂಡವಾಳ ಹೂಡಿ ಚಿಕ್ಕ ಉದ್ದಿಮೆ ಘಟಕಗಳನ್ನು ನಡೆಸುತ್ತಿದ್ದಾರೆ.

ಕೇವಲ ಬೆಳಗಾವಿ ತಾಲೂಕಿನಲ್ಲಿ, ಅದೂ ಕೂಡಾ ಬೆಳಗಾವಿಯ ಉದ್ಯಮಭಾಗದ ಕ್ಷೇತ್ರದಲ್ಲಿ ಮಾತ್ರ ರೂ. ೧ ಕೋಟಿಗಿಂತಲೂ ಅಧಿಕ ಬಂಡವಾಳ ಹೂಡಿದ ಘಟಕಗಳು ಶೇ. ೧೩ ರಷ್ಟು ಸ್ಥಾಪನೆಗೊಂಡಿವೆ. ಅದರಂತೆ, ರೂ.೨೫ ಲಕ್ಷದಿಂದ ರೂ. ೧ ಕೋಟಿಯಷ್ಟು ಹೂಡಿದ ಒಟ್ಟು ಶೇ. ೪೧ ರಷ್ಟು ಘಟಕಗಳು ಕಾರ್ಯಗೈಯುತ್ತಿವೆ. ಇಷ್ಟು ಬಂಡವಾಳ ಹೂಡಿದ ಚಿಕ್ಕ ಉದ್ದಿಮೆ ಘಟಕ ಬೇರೆ ಯಾವ ತಾಲೂಕಿನಲ್ಲಿ ಕಾಣಬರುವದಿಲ್ಲ.

ಆದ್ದರಿಂದ ಬೆಳಗಾವಿ ಜಿಲ್ಲೆಯ ಒಂಬತ್ತು ತಾಲೂಕುಗಳಲ್ಲಿ ಗರಿಷ್ಠವೆಂದರೆ ರೂ. ೪ ಲಕ್ಷದಷ್ಟು ಬಂಡವಾಳ ಹೂಡಿದ ಸರಾಸರಿ ಶೇ. ೭೨ ರಷ್ಟು ಘಟಕಗಳು ಕಾರ್ಯಗೈಯ್ಯುವದು ತಿಳಿದುಬರುತ್ತದೆ. ಇದು ಕೈಗಾರಿಕೀಕರಣವು ಅಲ್ಪ ಪ್ರಮಾಣದಲ್ಲಿ ಇರುವುದರ ಲಕ್ಷಣವಾಗಿದೆ.

ಕೋಷ್ಟಕ ೬.೧ ಬಂಡವಾಳ ಹೂಡಿಕೆ

ಅ.ನಂ	ವಿವರಗಳು	ಅಥಣಿ	ಬೈಲಹೊಂಗಲ	ಬೆಳಗಾವಿ	ಚಿಕ್ಕೋಡಿ	ಗೋಕಾಕ	ಹುಕ್ಕೇರಿ	ಖಾನಾಪೂರ	ರಾಯಬಾಗ	ರಾಮದುರ್ಗ	ಸವದತ್ತಿ
೧	ರೂ .೫೦,೦೦೦ ರವರೆಗೆ	-	-	-	೦೩ (೦೯)	೧೮ (೫೫)	೦೬ (೧೫)	೦೩ (೦೮)	೦೬ (೨೦)	೦೬ (೧೭)	೨೭ (೭೫)
೨	೫೦೦೦೧ ರಿಂದ ೧ ಲಕ್ಷ	೦೩ (೧೦)	೧೫ (೪೨)	-	೦೬ (೧೮)	-	೦೬ (೧೫)	೦೬ (೧೭)	೦೩ (೧೦)	೦೩ (೦೮)	-
೩	೧ ಲಕ್ಷ - ೪ ಲಕ್ಷ	೧೮ (೬೦)	೧೫ (೪೨)	೦೩ (೦೪)	೦೯ (೨೮)	-	೧೫ (೩೯)	೧೮ (೫೦)	೧೨ (೪೦)	೧೫ (೪೨)	೦೯ (೨೫)
೪	೪ ಲಕ್ಷ - ೮ ಲಕ್ಷ	-	೦೩ (೦೮)	೦೩ (೦೪)	೦೬ (೧೮)	೦೬ (೧೮)	೦೬ (೧೫)	೦೬ (೧೭)	೦೩ (೧೦)	೦೬ (೧೭)	-
೫	೮ ಲಕ್ಷ - ೧೨ ಲಕ್ಷ	೦೩ (೧೦)	-	೧೮ (೨೫)	೦೩ (೦೯)	೦೩ (೦೯)	೦೩ (೦೮)	೦೩ (೦೮)	-	-	-
೬	೧೨ ಲಕ್ಷ - ೧೫ ಲಕ್ಷ	-	೦೩ (೦೮)	೦೯ (೧೩)	೦೩ (೦೯)	೦೩ (೦೯)	೦೩ (೦೮)	-	೦೩ (೧೦)	-	-
೭	೧೬ ಲಕ್ಷ -೨೦ ಲಕ್ಷ	-	-	-	-	-	-	-	-	-	-
೮	೨೦ ಲಕ್ಷ - ೨೫ ಲಕ್ಷ	-	-	೦೩ (೦೪)	೦೩ (೦೯)	-	-	-	-	-	-
೯	೨೫ ಲಕ್ಷ - ೫೦ ಲಕ್ಷ	೦೩ (೧೦)	-	೨೪ (೩೩)	-	೦೩ (೦೯)	-	-	-	-	-
೧೦	೫೦ ಲಕ್ಷ - ೧ ಕೋಟಿ	೦೩ (೧೦)	-	೦೩ (೦೪)	-	-	-	-	-	೦೩ (೦೮)	-
೧೧	೧ ಕೋಟಿಕಿಂತ ಅಧಿಕ	-	-	೦೯ (೧೩)	-	-	-	-	೦೩ (೧೦)	೦೩ (೦೮)	-

(*ಆವರಣದಲ್ಲಿರುವ ಸಂಖ್ಯೆಗಳು ಪ್ರತಿಶತ ಪ್ರಮಾಣವನ್ನು ಸೂಚಿಸುತ್ತವೆ)

೬.೪ : ಸಂಸ್ಥೆಯ ಸ್ವರೂಪ :

ಅತೀ ಚಿಕ್ಕ ಮತ್ತು ಚಿಕ್ಕ ಘಟಕಗಳನ್ನು ಏಕವ್ಯಕ್ತಿ ಒಡೆತನದ, ಪಾಲುಗಾರಿಕೆ, ಅವಿಭಕ್ತ ಕುಟುಂಬ, ಸಹಕಾರ ಸಂಘ, ಸ್ವ-ಸಹಾಯ ಗುಂಪು, ಖಾಸಗಿ ಕಂಪನಿಯಾಗಿ ವಿವಿಧ ಸ್ವರೂಪಗಳಲ್ಲಿ ಸ್ಥಾಪಿಸಬಹುದಾಗಿದೆ, ಹೆಚ್ಚಾಗಿ ಏಕ-ವ್ಯಕ್ತಿ ಒಡೆತನದ ಘಟಕಗಳೇ ಪ್ರಮುಖವಾಗಿವೆ, ಈ ಜಿಲ್ಲೆಯಲ್ಲಿಯ ಚಿಕ್ಕ ಉದ್ದಿಮೆ ಘಟಕಗಳ ಸ್ವರೂಪವನ್ನು **ಕೋಷ್ಟಕ ೬.೨**ರಲ್ಲಿ ನೀಡಲಾಗಿದೆ.

ಜಿಲ್ಲೆಯ ಎಲ್ಲ ತಾಲೂಕುಗಳಲ್ಲಿ ಏಕವ್ಯಕ್ತಿ ಒಡೆತನದ ಘಟಕಗಳೇ ಹೆಚ್ಚಾಗಿವೆ. ತಾಲೂಕುವಾರು ಅವುಗಳ ಪ್ರಮಾಣವು ಅಥಣಿಯಲ್ಲಿ ಶೇ.೫೦, ಬೈಲಹೊಂಗಲ ಶೇ. ೮೩, ಬೆಳಗಾವಿ ಶೇ. ೫೪, ಚಿಕ್ಕೋಡಿ ಶೇ.೯೨, ಗೋಕಾಕ ಶೇ. ೧೦೦, ಹುಕ್ಕೇರಿ - ಶೇ. ೯೨, ಖಾನಾಪೂರ - ಶೇ. ೬೭, ರಾಯಬಾಗ - ಶೇ. ೭೦, ರಾಮದುರ್ಗ - ಶೇ. ೭೫ ಮತ್ತು ಸವದತ್ತಿಯಲ್ಲಿ ಶೇ. ೯೨ರಷ್ಟು ಇವೆ. ಅಂದರೆ ಜಿಲ್ಲೆಯಲ್ಲಿ ಸರಾಸರಿ ಶೇ. ೭೮ ರಷ್ಟು ಏಕವ್ಯಕ್ತಿ ಒಡೆತನದ ಘಟಕಗಳಿವೆ.

ಪಾಲುಗಾರಿಕೆಯ ಸಂಸ್ಥೆಗಳು ಬೆಳಗಾವಿಯಲ್ಲಿ ಶೇ. ೨೫, ಖಾನಾಪೂರ - ಶೇ. ೮ ಮತ್ತು ರಾಯಬಾಗದಲ್ಲಿ ಶೇ. ೩೦ರ ಪ್ರಮಾಣದಲ್ಲಿ ಕಂಡು ಬರುತ್ತವೆ.

ಅವಿಭಕ್ತ ಕುಟುಂಬದ ವ್ಯವಹಾರ ಘಟಕಗಳು (ಗೋಕಾಕ ಮತ್ತು ರಾಯಬಾಗ ಹೊರತು ಪಡಿಸಿ) ಎಂಟು ತಾಲೂಕುಗಳಲ್ಲಿ ಕಂಡು ಬರುತ್ತವೆ. ಕೇವಲ ಸರಾಸರಿ ಶೇ. ೧೬ ರಷ್ಟು ಮಾತ್ರ ಈ ತರಹದ ಘಟಕಗಳಿವೆ.

ಜಿಲ್ಲೆಯ ಅಥಣಿ ತಾಲೂಕಿನಲ್ಲಿ ಮಾತ್ರ ತಲಾ ಶೇ. ೧೦ ರಷ್ಟು ಸಹಕಾರ ಸಂಘದ ಮತ್ತು ಸ್ವ-ಸಹಾಯ ಗುಂಪಿನ ಘಟಕಗಳು ಕಾರ್ಯಗೈಯುತ್ತಿವೆ. ಬೆಳಗಾವಿಯಲ್ಲಿ ಮಾತ್ರ ಶೇ. ೧೭ ರಷ್ಟು ಘಟಕಗಳು ಖಾಸಗಿ ಕಂಪನಿಯ ಸ್ವರೂಪದ್ದಾಗಿವೆ.

ಚಿಕ್ಕ ಉದ್ದಿಮೆ ಕ್ಷೇತ್ರದಲ್ಲಿ ರಂಗದಲ್ಲಿ ಏಕವ್ಯಕ್ತಿ ಒಡೆತನದ ಘಟಕಗಳು ಮೊದಲ ಸ್ಥಾನ ಪಡೆದಿದೆ. ಅವಿಭಕ್ತ ಕುಟುಂಬ ಮತ್ತು ಪಾಲುಗಾರಿಕೆ ಸಂಸ್ಥೆಯ ಸ್ವರೂಪದ ಘಟಕಗಳು ಕ್ರಮವಾಗಿ ದ್ವಿತೀಯ ಮತ್ತು ತೃತೀಯ ಸ್ಥಾನದಲ್ಲಿವೆ.

೬.೫ ನೋಂದಣೆ :

ಚಿಕ್ಕ ಘಟಕಗಳನ್ನು ಪ್ರಾರಂಭಿಸಲು ನೋಂದಣಿಯು ಕಡ್ಡಾಯವಾಗಿರುತ್ತದೆ. ಅದರಂತೆ, ಜಿಲ್ಲೆಯಲ್ಲಿ ಸಮೀಕ್ಷೆಗೊಳಪಡಿಸಿದ ಘಟಕಗಳು ಬಹುತೇಕವಾಗಿ ನೋಂದಣೆಯಾಗಿವೆ. ಕೆಲವು ತಾಲೂಕಿನ ಘಟಕಗಳು ನೋಂದಣೆಯಾಗದಿರುವುದು ಕಂಡು ಬಂದಿದೆ. ಇವು ನೋಂದಣೆ ಆಗದಿರುವುದಕ್ಕೆ ಹಲವು ಕಾರಣಗಳಿವೆ. ಈ ಕುರಿತಾದ ವಿವರಗಳನ್ನು **ಕೋಷ್ಟಕ ೬.೩** ರಲ್ಲಿ ತೋರಿಸಿದೆ.

ಕೋಷ್ಟಕ ೬.೨ ಸಂಸ್ಥೆಯ ಸ್ವರೂಪ

ಅ.ಸಂ.	ವಿವರಗಳು	ಅಥಣಿ	ಬೈಲಹೊಂಗಲ	ಬೆಳಗಾವಿ	ಚಿಕ್ಕೋಡಿ	ಗೋಕಾಕ	ಹುಕ್ಕೇರಿ	ಖಾನಾಪೂರ	ರಾಯಬಾಗ	ರಾಮದುರ್ಗ	ಸವದತ್ತಿ
೧	ಏಕಒಡೆತನ	೧೫ (೫೦)	೩೦ (೮೩)	೩೯ (೫೪)	೩೩ (೯೨)	೩೩ (೧೦೦)	೩೬ (೯೨)	೨೪ (೬೭)	೨೧ (೭೦)	೨೭ (೭೫)	೩೩ (೯೨)
೨	ಪಾಲುಗಾರಿಕೆ ಸಂಸ್ಥೆ	-	-	೧೮ (೨೫)	-	-	-	೦೩ (೦೮)	೦೯ (೩೦)	-	-
೩	ಅವಿಭಕ್ತ ಕುಟುಂಬ	೦೯ (೩೦)	೦೬ (೧೭)	೦೩ (೦೪)	೦೩ (೦೮)	-	೦೩ (೦೮)	೦೯ (೨೫)	-	೦೯ (೨೫)	೦೩ (೦೮)
೪	ಸಹಕಾರ ಸಂಘ	೦೩ (೧೦)	-	-	-	-	-	-	-	-	-
೫	ಸ್ವ-ಸಹಾಯ ಗುಂಪು	೦೩ (೧೦)	-	-	-	-	-	-	-	-	-
೬	ಖಾಸಗಿ ಕಂಪನಿ	-	-	೧೨ (೧೭)	-	-	-	-	-	-	-
೭	ಇನ್ನಾವುದೇ ರೀತಿ ಇದ್ದರೆ	-	-	-	-	-	-	-	-	-	-

(*ಆವರಣದಲ್ಲಿರುವ ಸಂಖ್ಯೆಗಳು ಪ್ರತಿಶತ ಪ್ರಮಾಣವನ್ನು ಸೂಚಿಸುತ್ತವೆ)

ಕೋಷ್ಟಕ : ೬.೩ ನೋಂದಣಿ ವಿಧಾನ

ಅ.ಸಂ.	ವಿವರಗಳು	ಅಥಣಿ	ಬೈಲಹೊಂಗಲ	ಬೆಳಗಾವಿ	ಚಿಕ್ಕೋಡಿ	ಗೋಕಾಕ	ಹುಕ್ಕೇರಿ	ಖಾನಾಪೂರ	ರಾಯಬಾಗ	ರಾಮದುರ್ಗ	ಸವದತ್ತಿ
೧	ಸರಳವಾಗಿದೆ	೩೦ (೧೦೦)	೩೬ (೧೦೦)	೬೬ (೯೨)	೩೦ (೯೧)	೦೬ (೧೮)	೩೯ (೧೦೦)	೦೬ (೧೭)	೦೩ (೧೦)	೧೨ (೩೩)	೦೩ (೦೮)
೨	ಕಠಿಣವಾಗಿದ	-	-	೦೬ (೦೮)	೦೩ (೦೯)	೨೭ (೯೨)	-	೩೦ (೮೩)	೨೭ (೯೦)	೨೪ (೬೭)	೩೩ (೯೨)

(*ಆವರಣದಲ್ಲಿರುವ ಸಂಖ್ಯೆಗಳು ಪ್ರತಿಶತ ಪ್ರಮಾಣವನ್ನು ಸೂಚಿಸುತ್ತವೆ)

ಸಮೀಕ್ಷೆಗೊಳಪಡಿಸಿದ ಒಟ್ಟು ಘಟಕಗಳಲ್ಲಿ ಗೋಕಾಕ, ಖಾನಾಪೂರ, ರಾಯಬಾಗ, ರಾಮದುರ್ಗ ಮತ್ತು ಸವದತ್ತಿ ತಾಲೂಕುಗಳಲ್ಲಿ ಸರಾಸರಿ ಶೇ. ೧೭ ರಷ್ಟು ಘಟಕಗಳು ನೋಂದಣಿಯಾಗದಿರುವದು ಕಂಡು ಬಂದಿದೆ. ಇನ್ನುಳಿದ ಶೇ. ೮೩ ಘಟಕಗಳೆಲ್ಲವೂ ನೋಂದಣಿಯಾಗಿವೆ.

ಬಹುಮತದ ಘಟಕಗಳ ಪ್ರತಿಸ್ಪಂದಿಗಳು ನೋಂದಣಿಯು ಸರಳವಾಗಿದೆಯೆಂದು ಅಭಿಪ್ರಾಯಿಸುತ್ತಾರೆ. ಇನ್ನುಳಿದ ಶೇ. ೭ ರಷ್ಟು ಮಾತ್ರ ನೋಂದಣಿಯ ಕಾರ್ಯವು ಕಠಿಣವಾಗಿದೆಯೆಂದು ಹೇಳುತ್ತಾರೆ. ಕಠಿಣವಾಗಿದೆಯೆಂದು ಹೇಳಿದ ಪ್ರತಿಸ್ಪಂದಿಗಳು ಬೆಳಗಾವಿ ಹಾಗೂ ಚಿಕ್ಕೋಡಿ ತಾಲೂಕಿಗೆ ಸೀಮಿತವಾಗಿದ್ದಾರೆ.

ಇವೆರಡು ತಾಲೂಕಿನ ಪ್ರತಿಸ್ಪಂದಿಗಳು ವಿಳಂಬ ನೀತಿ, ದಾಖಲಾತಿಯ ದೀರ್ಘ ಪದ್ಧತಿ, ಸಲಹೆ ಮಾರ್ಗದರ್ಶನದ ಕೊರತೆ ಮತ್ತು ಇಲಾಖೆಯ ಬೆಂಬಲವಿಲ್ಲವೆಂಬ ಕಾರಣಗಳನ್ನು ನೀಡುತ್ತಾರೆ. ಇವರ ಅಭಿಪ್ರಾಯವು ಎಲ್ಲರಿಗೂ ಅನ್ವಯಿಸುವದೆಂದು ಹೇಳಲಿಕ್ಕಾಗದು. ಒಟ್ಟಾರೆ ಪ್ರತಿಸ್ಪಂದಿಗಳಲ್ಲಿ ಇವರ ಸಂಖ್ಯೆ ಅತೀ ಕಡಿಮೆ.

೬.೬ : ಸರ್ಕಾರದ ನೀತಿ :

ಚಿಕ್ಕ ಉದ್ದಿಮೆಯ ಬೆಳವಣಿಗೆಯಾಗಬೇಕಾದರೆ ಸಾಕಷ್ಟು ಅನುಕೂಲಕರ ವಾತಾವರಣ ಅವಶ್ಯವಾಗಿ ರುತ್ತದೆ. ಅದರಲ್ಲಿ ಸರ್ಕಾರ ಅಧಿಕಾರಿಗಳು ಮತ್ತು ಸರ್ಕಾರದ ನೀತಿಯು ಪ್ರೇರಣಾತ್ಮಕ ಮತ್ತು ಸಕಾರಾತ್ಮಕವಾಗಿರಬೇಕು. ಸೂಕ್ತ ತರಬೇತಿ, ಮೂಲ ಸೌಕರ್ಯ, ನೋಂದಣಿಯ ಸರಳತೆ, ಸರ್ಕಾರದ ಕಳಕಳಿ, ಪ್ರೋತ್ಸಾಹಗಳು ಮುಂತಾದ ಅಂಶಗಳು ಪ್ರಭಾವ ಬೀರುತ್ತವೆ. ಈ ಕುರಿತಾಗಿ ಪ್ರತಿಸ್ಪಂದಿಗಳ ಅಭಿಪ್ರಾಯಗಳನ್ನು **ಕೋಷ್ಟಕ ೬.೪**ರಲ್ಲಿ ವ್ಯಕ್ತಪಡಿಸಲಾಗಿದೆ.

ಸರಕಾರದ ನಿಜವಾದ ಕಳಕಳಿಯಿಲ್ಲವೆಂಬುದು ಬಹುಮತದ ಪ್ರತಿಸ್ಪಂದಿಗಳ ಅಭಿಪ್ರಾಯ. ಉತ್ತರವು ಪ್ರಮುಖವಾಗಿದೆ. ಎಲ್ಲ ಹತ್ತು ತಾಲೂಕಿನ ಪ್ರತಿಸ್ಪಂದಿಗಳಿಂದ ಸರಾಸರಿ ಶೇ. ೭೬ ರಷ್ಟು ಉದ್ದಿಮೆದಾರರು ಈ ಉತ್ತರವನ್ನು ನೀಡುತ್ತಾರೆ. ಅದರಂತೆ ಅಡೆತಡೆ ಹಾಗೂ ಕಿರಿಕಿರಿಯು ಹೆಚ್ಚಾಗಿರುತ್ತದೆಯೆಂದು ಇನ್ನು ಕೆಲವು (ಶೇ. ೧೩ರಷ್ಟು) ಪ್ರತಿಸ್ಪಂದಿಗಳು ಹೇಳುತ್ತಾರೆ.

ಆದರೆ ಬೈಲಹೊಂಗಲ, ಹುಕ್ಕೇರಿ, ರಾಮದುರ್ಗ ಮತ್ತು ಸವದತ್ತಿ ತಾಲೂಕುಗಳನ್ನು ಹೊರತುಪಡಿಸಿ, ಉಳಿದ ಆರು ತಾಲೂಕಿನ ಪ್ರತಿಸ್ಪಂದಿಗಳ ಅಭಿಪ್ರಾಯ ವಿಭಿನ್ನವಾಗಿದೆ. ಅವರಿಗೆ ಸರಕಾರದ ನೀತಿಯು ಪ್ರೋತ್ಸಾಹದಾಯಕವಾಗಿ ಇರುವುದಾಗಿ ಅನಿಸಿದೆ. ಇವರು ಶೇ. ೨೮ ರಷ್ಟು ಆಗಿ ದ್ದಾರೆ. ಇವರಲ್ಲಿ ಕೇವಲ ಬೆಳಗಾವಿ ಮತ್ತು ರಾಯಬಾಗ ತಾಲೂಕಿನಲ್ಲಿಯೇ ಕ್ರಮವಾಗಿ ಶೇ. ೫೪ ಮತ್ತು ಶೇ. ೫೦ ರಷ್ಟು ಪ್ರತಿಸ್ಪಂದಿಗಳಿದ್ದಾರೆ.

ಒಟ್ಟಿನಲ್ಲಿ ಚಿಕ್ಕ ಉದ್ದಿಮೆಗಳ ಕುರಿತು ಸರ್ಕಾರದ ನೈಜ ಕಾಳಜಿಯು ಹೆಚ್ಚಾಗಬೇಕು ಮತ್ತು ಸರ್ಕಾರಿ ಕಛೇರಿಗಳ ಅಡೆತಡೆ ನೀತಿಯು ಬದಲಾಗಬೇಕೆಂಬ ಆಶಯ ವ್ಯಕ್ತವಾಗುತ್ತದೆ. ಅಂದಾಗಲೇ ಈ ಉದ್ದಿಮೆಯು ಬೆಳೆಯಬಲ್ಲದು.

ಕೋಷ್ಟಕ : ೬.೪ ಚಿಕ್ಕ ಉದ್ದಿಮೆಗಳೆಡೆಗೆ ಸರ್ಕಾರದ ನೀತಿ

ಅ.ಸಂ.	ವಿವರಗಳು	ಅಥಣಿ	ಬೈಲಹೊಂಗಲ	ಬೆಳಗಾವಿ	ಚಿಕ್ಕೋಡಿ	ಗೋಕಾಕ	ಹುಕ್ಕೇರಿ	ಖಾನಾಪೂರ	ರಾಯಬಾಗ	ರಾಮದುರ್ಗ	ಸವದತ್ತಿ
೧	ನಿಜವಾದ ಕಳಕಳಿಯಿಲ್ಲ	೨೭ (೮೨)	೩೬ (೯೨)	೨೪ (೩೩)	೨೪ (೭೩)	೨೧ (೬೪)	೩೬ (೯೨)	೨೭ (೭೫)	೧೫ (೫೦)	೩೬ (೧೦೦)	೩೬ (೧೦೦)
೨	ಪ್ರೋತ್ಸಾಹಕರವಾಗಿದೆ	೦೩ (೦೯)	-	೩೯ (೫೪)	೦೯ (೨೭)	೦೬ (೧೮)	-	೦೩ (೦೮)	೧೫ (೫೦)	-	-
೩	ಅಡೆತಡೆಯ ನೀತಿ	-	೦೩ (೦೮)	೦೯ (೧೩)	-	೦೬ (೧೮)	೦೩ (೦೮)	೦೬ (೧೭)	-	-	-
೪	ಇತರೆ	೦೩ (೦೯)	-	-	-	-	-	-	-	-	-

(*ಆವರಣದಲ್ಲಿರುವ ಸಂಖ್ಯೆಗಳು ಪ್ರತಿಶತ ಪ್ರಮಾಣವನ್ನು ಸೂಚಿಸುತ್ತವೆ)

೬.೨ - ಘಟಕ ಸ್ಥಾಪನೆಯ ಅವಧಿ :

ಚಿಕ್ಕ ಉದ್ದಿಮೆರಂಗದಲ್ಲಿ ಘಟಕಗಳು ಬಹಳಷ್ಟು ಏಕವ್ಯಕ್ತಿ ಒಡೆತನದ ಮತ್ತು ಅವಿಭಕ್ತ ಕುಟುಂಬ ವ್ಯವಹಾರ ತರಹದ್ದು ಇದ್ದುದರಿಂದ ಮತ್ತು ಕಂಪನಿಗಳ ಸ್ಥಾಪನೆಯಲ್ಲಿರುವ ಹತ್ತಾರು ತರಹದ ಕಾಗದ ಪತ್ರ, ವಿಧಿ-ವಿಧಾನಗಳ ಪಾಲನೆ ಇಲ್ಲದಿರುವದರಿಂದಾಗಿ ಘಟಕಗಳ ಸ್ಥಾಪನೆಗೆ ಕಡಿಮೆ ಅವಧಿ ತಗಲುವ ಸಾಧ್ಯತೆಗಳಿವೆ.

ಸಮೀಕ್ಷೆಗೊಳಪಡಿಸಿದ ಎಲ್ಲ ಪ್ರತಿಸ್ಪಂದಿಗಳ ಅಭಿಪ್ರಾಯಗಳನ್ನು **ಕೋಷ್ಟಕ ೬.೫**ರಲ್ಲಿ ವ್ಯಕ್ತಗೊಳಿಸಲಾಗಿದೆ.

ಇಡಿಯಾಗಿ ಕೋಷ್ಟಕವನ್ನು ಅಭ್ಯಸಿಸಿದರೆ, ಎಲ್ಲ ತಾಲೂಕುಗಳ ಪ್ರತಿಸ್ಫಂದಿಗಳಿಗೆ ಹೆಚ್ಚಾಗಿ ಆರು ತಿಂಗಳ ಅವಧಿ ತಗುಲಿದ್ದು ಸ್ಪಷ್ಟವಾಗುತ್ತದೆ. ಸರಾಸರಿಯಾಗಿ ಶೇ. ೪೦ರಷ್ಟು ಪ್ರತಿಸ್ಪಂದಿಗಳು ಇಷ್ಟೊಂದು ಅವಧಿ ಪಡೆದಿದ್ದಾರೆ. ಇನ್ನು ಶೇ.೨೮ರಷ್ಟು ಪ್ರತಿಸ್ಪಂದಿಗಳಿಗೆ ಕೇವಲ ಒಂದು ತಿಂಗಳ ಅವಧಿ ಸಾಕಾಗಿದೆ.

ಆದರೆ ಶೇ. ೨೫ರಷ್ಟು ಪ್ರತಿಸ್ಪಂದಿಗಳಿಗೆ ದೀರ್ಘವೆನ್ನಬಹುದಾದ ಒಂದು ವರ್ಷಕ್ಕಿಂತ ಹೆಚ್ಚಿನ ಸಮಯ ತಗುಲಿದೆ. ಬಹುಶ: ಕಂಪನಿ ರೂಪದ ಘಟಕ ಸ್ಥಾಪನೆಗೆ ಇಷ್ಟೊಂದು ದೀರ್ಘಾವಧಿ ಬೇಕಾಗುತ್ತದೆ.

ಕೋಷ್ಟಕ : ೬.೫ ಉದ್ದಿಮೆ ಪ್ರಾರಂಭಿಸಲಿಕ್ಕೆ ತಗುಲಿದ ಅವಧಿ

ಅ.ಸಂ.	ವಿವರಗಳು	ಅಥಣಿ	ಬೈಲಹೊಂಗಲ	ಬೆಳಗಾವಿ	ಚಿಕ್ಕೋಡಿ	ಗೋಕಾಕ	ಹುಕ್ಕೇರಿ	ಖಾನಾಪೂರ	ರಾಯಬಾಗ	ರಾಮದುರ್ಗ	ಸವದತ್ತಿ
೧	ಒಂದು ತಿಂಗಳು	೧೨ (೪೦)	೦೩ (೦೮)	೦೩ (೦೪)	೦೬ (೧೮)	೦೬ (೧೮)	೨೧ (೫೪)	೦೩ (೦೮)	೦೬ (೨೦)	೦೯ (೨೪)	೩೩ (೯೨)
೨	ಆರು ತಿಂಗಳು	೦೯ (೩೦)	೩೦ (೪೦)	೩೬ (೫೦)	೧೮ (೫೫)	೦೯ (೨೭)	೦೯ (೨೩)	೧೨ (೩೪)	೧೨ (೪೦)	೧೫ (೪೪)	೦೩ (೦೮)
೩	ಒಂದು ವರ್ಷ	೦೯ (೩೦)	೦೩ (೦೮)	೧೫ (೨೧)	೦೬ (೧೮)	೧೫ (೪೬)	೦೯ (೨೩)	೧೮ (೫೦)	೦೯ (೩೦)	೦೯ (೨೪)	-
೪	ಒಂದು ವರ್ಷಕ್ಕಿಂತ ಹೆಚ್ಚು	-	-	೧೮ (೨೫)	೦೩ (೦೯)	೦೩ (೦೯)	-	೦೩ (೦೮)	೦೩ (೧೦)	೦೩ (೦೮)	-


(*ಆವರಣದಲ್ಲಿರುವ ಸಂಖ್ಯೆಗಳು ಪ್ರತಿಶತ ಪ್ರಮಾಣವನ್ನು ಸೂಚಿಸುತ್ತವೆ)

೬.೮ - ಘಟಕ ಸ್ಥಾಪನೆಗೆ ಪ್ರೇರಣೆ :

ಯಾವುದೇ ತರಹದ ಉದ್ದಿಮೆಯ ಘಟಕ ಸ್ಥಾಪನೆಗೆ ಒಲವು ಹೊಂದಿರುವದು ಮತ್ತು ಈ ರಂಗದೆಡೆಗೆ ಹೆಜ್ಜೆ ಹಾಕುವಂತೆ ಮನವೊಲಿಸಿ ಪ್ರೇರಣೆ ನೀಡುವದು ಬಹಳ ಮುಖ್ಯವಾದ ಅಂಶ. ಇವುಗಳ ಹೊರತಾಗಿ, ಕುಟುಂಬದ ವ್ಯವಹಾರ ಮುಂದುವರೆಸುವ ಅನಿವಾರ್ಯತೆಯಿಂದ ಉದ್ಯಮಶೀಲರಾಗಿ ಹೊರಹೊಮ್ಮುವ ಸಾಧ್ಯತೆಗಳಿವೆ. ಈ ನಿಟ್ಟಿನಲ್ಲಿ ಪ್ರತಿಸ್ಪಂದಿಗಳ ಅಭಿಪ್ರಾಯವನ್ನು **ಕೋಷ್ಟಕ ೬.೬** ನೀಡುತ್ತದೆ.

ಕೋಷ್ಟಕದ ಪ್ರಕಾರ ಸರಾಸರಿ ಲೆಕ್ಕದಂತೆ ಸ್ವಪ್ರೇರಣೆಯಿಂದಲೇ (ಶೇ.೮೬) ತಮ್ಮ ಘಟಕಗಳನ್ನು ಪ್ರಾರಂಭಿಸಿರುವರು ಅವರಲ್ಲಿ ಶೇ. ೫೦ಕ್ಕಿಂತ ಅಧಿಕವಾಗಿ ಬೆಳಗಾವಿ, ಚಿಕ್ಕೋಡಿ, ಗೋಕಾಕ, ಖಾನಾಪೂರ, ರಾಯಬಾಗ ಮತ್ತು ರಾಮದುರ್ಗ ತಾಲೂಕಿನ ಪ್ರತಿಸ್ಪಂದಿಗಳು. ಅನಂತರದವರು ಅಸ್ತಿತ್ವದಲ್ಲಿರುವ ಬೇರೆ ಉದ್ದಿಮೆದಾರರಿಂದ ಪ್ರೇರಣೆಗೊಂಡು ತಾವೂ ಉದ್ದಿಮೆದಾರರಾಗಿದ್ದೆಂದು ಹೇಳುತ್ತಾರೆ. ಸ್ಪಷ್ಟವಾಗಿ ಒಂದೇ ಕಾರಣವಿರದ, ಇತರ ಕಾರಣಗಳಿಂದ ಪ್ರೇರಿತಗೊಂಡವರೆಂದು ಶೇ. ೮ ರಷ್ಟು ಪ್ರತಿಸ್ಪಂದಿಗಳು ಅಭಿಪ್ರಾಯಿಸುತ್ತಾರೆ. ಆದರೆ ಸರಕಾರದ ಇಲಾಖೆಯವರಿಂದ ಮಾರ್ಗದರ್ಶನ, ಸಲಹೆ - ಸೂಚನೆ - ಮಾರ್ಗಸೂಚಿಗಳಿಂದ ಘಟಕ ಸ್ಥಾಪನೆಯ ಪ್ರೇರಣೆಯನ್ನು ಕೇವಲ ಶೇ. ೨ ರಷ್ಟು ಪ್ರತಿಸ್ಪಂದಿಗಳು ಒಪ್ಪಿಕೊಂಡಿದ್ದಾರೆ. ಇದರಿಂದ ಉದ್ದಿಮೆಯ ಬೆಳವಣಿಗೆಯಲ್ಲಿ ಸರಕಾರದ ನಿರಾಸಕ್ತಿ ಎದ್ದು ಕಾಣುತ್ತದೆ.

ನಕ್ಷೆ ೬.೧ ಘಟಕ ಸ್ಥಾಪನೆಗೆ ಪ್ರೇರಣೆಗಳು



ಯಾವುದೇ ವೃತ್ತಿ ಅಥವಾ ಉದ್ದಿಮೆ ಸ್ಥಾಪಿಸಲು ತರಬೇತಿ ಅವಶ್ಯವೆನಿಸುತ್ತದೆ. ಆದ್ದರಿಂದ ಸ್ಥಾಪನಾ ಹಂತದಲ್ಲಿ ಎದುರಾಗಬಹುದಾದ ಸಮಸ್ಯೆಗಳಿಗೆ ಪರಿಹಾರ ದೊರೆತು, ಸ್ಥಾಪಕರಲ್ಲಿ ಧೈರ್ಯ ಬೆಳೆಯುತ್ತದೆ.

ಜಿಲ್ಲೆಯಲ್ಲಿ ಸರಾಸರಿಯಾಗಿ ಶೇ. ೬೧ ರಷ್ಟು ಉದ್ದಿಮೆದಾರರು ಉದ್ದಿಮೆದಾರಿಕೆಯ ಬಗ್ಗೆ ತರಬೇತಿ ಪಡೆದಿರುವರು. ಇನ್ನುಳಿದ ಶೇ. ೩೬ ರಷ್ಟು ಪ್ರತಿಸ್ಪಂದಿಗಳು ತರಬೇತಿ ಪಡೆದಿಲ್ಲ.

ಇದರಿಂದ ತಿಳಿದು ಬರುವ ಅಂಶವೆಂದರೆ ತರಬೇತಿಯು ಉದ್ದಿಮೆಯ ಸ್ಥಾಪನೆಗೆ ಒಂದು ಮಹತ್ವದ ವಾಹಕವಾಗುತ್ತದೆ.

೬.೯ : ತರಬೇತಿ ಪಡೆದ ಬಗೆ :

ಅಧಿಕ ಸಂಖ್ಯೆಯ ಪ್ರತಿಸ್ಪಂದಿಗಳು ತರಬೇತಿ ಪಡೆದ ಬಗ್ಗೆ ಅಭಿಪ್ರಾಯಿಸಿದ್ದಾರೆ. ಆದ್ದರಿಂದ ಅವರು ಪಡೆದ ತರಬೇತಿಯ ಮೂಲದ ಕುರಿತು ತಿಳಿಯುವುದು ಅವಶ್ಯವೆನಿಸುತ್ತದೆ. ಏಕೆಂದರೆ ಅವರು ಸೂಚಿಸುವ ಮಾರ್ಗವು ಇನ್ನಿತರ ಉದ್ದಿಮೆದಾರರಿಗೆ ದಾರಿ ತೋರಿಸುವ ಸಾಧ್ಯತೆಗಳು ಹೆಚ್ಚು. ಈ ಕುರಿತು ನಡೆಸಿದ ಸಮೀಕ್ಷೆಯ ಅಭಿಪ್ರಾಯಗಳನ್ನು **ಕೋಷ್ಟಕ ೬.೨**ರಲ್ಲಿ ಪ್ರಚುರ ಪಡಿಸಿದೆ.

ಉದ್ದಿಮೆದಾರರು ತರಬೇತಿಯನ್ನು ಸರಕಾರದ ಜಿಲ್ಲಾ ಕೈಗಾರಿಕಾ ಕೇಂದ್ರದಿಂದ ಅಥವಾ ಉದ್ದಿಮೆಗಳಿಗೆ ಹಣಕಾಸು ನೀಡುವ ಬ್ಯಾಂಕುಗಳಿಂದ ಇಲ್ಲವೇ ಸರಕಾರೇತರ ಸಂಸ್ಥೆಗಳಿಂದ ಅಥವಾ ವೃತ್ತಿಪರ ತರಬೇತಿದಾರರಿಂದ ಪಡೆಯುವ ಅವಕಾಶ ಇರುತ್ತದೆ.

ಪ್ರಸ್ತುತ ಹತ್ತು ತಾಲೂಕಿನ ಪ್ರತಿಸ್ಪಂದಿಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಅಂದರೆ ಸರಾಸರಿ ಶೇ. ೩೬ ರಷ್ಟು ಮೇಲೆ ವಿವರಿಸಿದ ನಾಲ್ಕು ಮೂಲಗಳಿಂದ ತರಬೇತಿ ಪಡೆಯದೆ ಬೇರೊಂದು ರೀತಿಯ ಅನುಭವ ಹೊಂದಿದ್ದಾರೆಂದು ತಿಳಿಸುತ್ತಾರೆ. ಅದರಂತೆ, ಶೇ. ೩೨ರಷ್ಟು ಪ್ರತಿಸ್ಪಂದಿಗಳು ವೃತ್ತಿಪರ ಸಲಹೆಗಾರರಿಂದ ತರಬೇತಿ ಪಡೆದಿರುವರು, ಶೇ. ೧೯ ರಷ್ಟು ಇಲಾಖೆಯವರಿಂದ, ಶೇ. ೧೦ ಸರಕಾರೇತರ ಸಂಸ್ಥೆಗಳಿಂದ ಹಾಗೂ ಕೇವಲ ಶೇ. ೮ರಷ್ಟು ಹಣಕಾಸು ನೀಡಿದ ಬ್ಯಾಂಕಿನಿಂದ ತರಬೇತಿ ಪಡೆದಿದ್ದೇವೆಂದು ಹೇಳುತ್ತಾರೆ.

ಆದ್ದರಿಂದ ಚಿಕ್ಕ ಉದ್ದಿಮೆ ಪ್ರಾರಂಭಕ್ಕೆ ಸರಕಾರದ ಇಲಾಖೆ ಹಾಗೂ ಉದ್ದಿಮೆ ಸ್ಥಾಪನೆಗೆ ಹಣಕಾಸು ಒದಗಿಸುವ ಬ್ಯಾಂಕುಗಳು ತರಬೇತಿ ವ್ಯವಸ್ಥೆ ಮಾಡುವದು ಅವಶ್ಯವಾಗಿದೆ.

ಕೋಷ್ಟಕ : ೬.೬ ಉದ್ದಿಮೆ ಪ್ರಾರಂಭಿಸಲು ಪ್ರೇರಣೆ

ಅ.ಸಂ.	ವಿವರಗಳು	ಅಥಣಿ	ಬೈಲಹೊಂಗಲ	ಬೆಳಗಾವಿ	ಚಿಕ್ಕೋಡಿ	ಗೋಕಾಕ	ಹುಕ್ಕೇರಿ	ಖಾನಾಪೂರ	ರಾಯಬಾಗ	ರಾಮದುರ್ಗ	ಸವದತ್ತಿ
೧	ಸ್ವ-ಪ್ರೇರಣೆ	೧೨ (೩೦)	೦೯ (೨೫)	೪೮ (೬೨)	೧೮ (೫೦)	೧೮ (೫೫)	೦೯ (೨೩)	೨೧ (೫೮)	೨೧ (೭೦)	೨೧ (೫೪)	೧೨ (೩೩)
೨	ಆಪ್ತರು-ಮಿತ್ರರು	೦೩ (೧೦)	೦೬ (೧೭)	೧೫ (೧೯)	-	೦೩ (೦೯)	೦೩ (೦೮)	೧೮ (೪೨)	-	೦೬ (೧೫)	-
೩	ಅಸ್ತಿತ್ವದಲ್ಲಿರುವ ಬೇರೆ ಉದ್ದಿಮೆದಾರರು	೧೫ (೫೦)	೨೧ (೫೮)	೧೨ (೧೫)	೧೫ (೪೨)	೦೯ (೨೭)	೧೫ (೩೮)	-	೦೯ (೩೦)	೦೩ (೦೮)	೧೨ (೩೩)
೪	ಚಿಕ್ಕ ಉದ್ದಿಮೆ ಇಲಾಖೆಯವರು	-	-	೦೩ (೦೪)	೦೩ (೦೮)	೦೩ (೦೯)	-	-	-	-	-
೫		೦೩ (೧೦)	-	-	-	-	೧೨ (೩೧)	-	-	೦೯ (೨೩)	೧೨ (೩೪)

(*ಆವರಣದಲ್ಲಿರುವ ಸಂಖ್ಯೆಗಳು ಪ್ರತಿಶತ ಪ್ರಮಾಣವನ್ನು ಸೂಚಿಸುತ್ತವೆ)

ಕೋಷ್ಟಕ : ೬.೭ ತರಬೇತಿ ಪಡೆದ ಬಗೆ

ಅ.ಸಂ.	ವಿವರಗಳು	ಅಥಣಿ	ಬೈಲಹೊಂಗಲ	ಬೆಳಗಾವಿ	ಚಿಕ್ಕೋಡಿ	ಗೋಕಾಕ	ಹುಕ್ಕೇರಿ	ಖಾನಾಪೂರ	ರಾಯಬಾಗ	ರಾಮದುರ್ಗ	ಸವದತ್ತಿ
೧	ಇಲಾಖೆಯವರಿಂದ	೦೬ (೨೫)	-	೦೩ (೦೬)	೦೬ (೨೨)	೦೯ (೪೩)	-	೦೬ (೨೪)	೦೬ (೩೩)	೦೬ (೪೦)	-
೨	ಹಣಕಾಸು ನೀಡಿದ ಬ್ಯಾಂಕಿನಿಂದ	-	-	೧೮ (೩೩)	೦೬ (೨೨)	೦೩ (೧೪)	-	-	-	-	-
೩	ಸರ್ಕಾರೇತರ ಸಂಸ್ಥೆಯಿಂದ	-	೦೩ (೧೭)	-	೦೩ (೧೨)	೦೩ (೧೪)	೦೩ (೨೦)	-	-	-	-
೪	ವೃತ್ತಿಪರ ಸಲಹೆಗಾರರಿಂದ	೧೨ (೫೦)	೦೬ (೩೩)	೧೮ (೩೩)	೦೬ (೨೨)	೦೬ (೨೯)	೦೩ (೨೦)	೦೯ (೩೮)	೦೩ (೧೭)	-	೦೯ (೭೫)
೫		೦೬ (೨೫)	೦೯ (೫೦)	೧೫ (೨೮)	೦೬ (೨೨)	-	೦೯ (೬೦)	೦೯ (೩೮)	೦೯ (೫೦)	೦೯ (೬೦)	೦೩ (೨೫)

(*ಆವರಣದಲ್ಲಿರುವ ಸಂಖ್ಯೆಗಳು ಪ್ರತಿಶತ ಪ್ರಮಾಣವನ್ನು ಸೂಚಿಸುತ್ತವೆ)

ಕೆಲವರು ಯಾವುದೇ ತರಹದ ತರಬೇತಿ ಪಡೆಯದೇ ಉದ್ದಿಮೆಯನ್ನು ಪ್ರಾರಂಭಿಸಿದ್ದಾಗಿ ಹೇಳಿಕೊಂಡಿದ್ದಾರೆ. ಆದ್ದರಿಂದ ಅಂತಹ ಭಾಗಶ: ಪ್ರತಿಸ್ಪಂದಿಗಳು ಉದ್ದಿಮೆಯನ್ನು ಪ್ರಾರಂಭಿಸಿದ್ದು ಹೇಗೆ (?) ಎನ್ನುವದರ ಅಭಿಪ್ರಾಯಗಳನ್ನು **ಕೋಷ್ಟಕ ೬.೮**ರಲ್ಲಿ ನೀಡಲಾಗಿದೆ.

ಪ್ರಸ್ತುತ ಕೋಷ್ಟಕವು ಸ್ಪಷ್ಟಗೊಳಿಸುವ ವಿಷಯವೆಂದರೆ ಒಟ್ಟಾರೆ ತರಬೇತಿ ಹೊಂದದೆ ಸ್ವಜ್ಞಾನದಿಂದ ವೈಯಕ್ತಿಕ ವಿವೇಚನೆಯಿಂದ ಉದ್ದಿಮೆ ಪ್ರಾರಂಭಿಸಿದವರೇ ಹೆಚ್ಚಾಗಿದ್ದಾರೆ (ಸರಾಸರಿ ಶೇ. ೪೫). ಅದರಂತೆ ತಮ್ಮ ಆಪ್ತರು ಅಥವಾ ಸಹವರ್ತಿಗಳೊಂದಿಗೆ ಚರ್ಚಿಸಿ ಘಟಕ ಪ್ರಾರಂಭಿಸಿದವರು ಶೇ. ೨೬ ರಷ್ಟು, ಮತ್ತು ತಮ್ಮದೆ ತಪ್ಪು - ತಡೆಗಳಿಂದ ಉದ್ದಿಮೆಯನ್ನು ಪ್ರಾರಂಭಿಸಿ ಮುಂದುವರೆದವರು ಶೇ. ೧೨ ರಷ್ಟು ಪ್ರತಿಸ್ಪಂದಿಗಳು.

ತರಬೇತಿಯಿಲ್ಲದ ಉದ್ದಿಮೆ ಪ್ರಾರಂಭಿಸಬಹುದು. ಆದರೆ ಸೂಕ್ತ ತರಬೇತಿ ಪಡೆದು ಘಟಕ ಪ್ರಾರಂಭಿಸಿದಲ್ಲಿ ಮಾರುಕಟ್ಟೆಯಲ್ಲಿ ಯಶಸ್ವಿಯಾಗಿ ನೆಲೆಯೂರುವದು ಸುಲಭ.

೬.೧೦ : ತರಬೇತಿಯ ಅವಧಿ ಮತ್ತು ತರಬೇತಿ ಪಡೆದ ಪ್ರತಿಸ್ಪಂದಿಗಳ ಅಭಿಪ್ರಾಯ :

ತರಬೇತಿ ಪಡೆದ ಪ್ರತಿಸ್ಪಂದಿಗಳು ಎಷ್ಟು ಅವಧಿ, ಎಷ್ಟು ಸಾರಿ ಪಡೆದರೆಂಬುದಕ್ಕೆ ಅವರ ಅಭಿಪ್ರಾಯಗಳನ್ನು ತಿಳಿಯಲಾಗಿದೆ. ಸಾಮಾನ್ಯವಾಗಿ ಪ್ರಾರಂಭದಲ್ಲಿ ತರಬೇತಿ ಹೊಂದಿದರೆ, ಘಟಕದ ಕಾರ್ಯಚಟುವಟಿಕೆಗಳಲ್ಲಿ ತೊಡಗಿಕೊಂಡಾಗ ಸ್ವ-ಅನುಭವದಿಂದ ಅವಶ್ಯಕ ಜ್ಞಾನ ಪಡೆಯಬಹುದಾಗಿದೆ. ಇನ್ನೂ ಕೆಲವು ಸಂದರ್ಭದಲ್ಲಿ ಅಂದರೆ ತಂತ್ರಜ್ಞಾನ ಬದಲಾದಾಗ, ಹೊಸ ಪ್ರಕ್ರಿಯೆ ಅಳವಡಿಸುವ ಕಾಲಕ್ಕೆ ತರಬೇತಿ ಅವಶ್ಯವೆನಿಸಸಬಹುದು. ಈ ನಿಟ್ಟಿನಲ್ಲಿ ಪ್ರತಿಸ್ಪಂದಿಗಳು ನೀಡಿದ ಅಭಿಪ್ರಾಯಗಳನ್ನು **ಕೋಷ್ಟಕ ೬.೯**ರಲ್ಲಿ ತೋರಿಸಲಾಗಿದೆ.

ಈ ಕೋಷ್ಟಕವು ಸ್ಪಷ್ಟಪಡಿಸುವದೇನೆಂದರೆ ಪ್ರತಿಸ್ಪಂದಿಗಳು ಒಂದೇ ಸಾರಿ ಮತ್ತು ಅವಶ್ಯವಿದ್ದಾಗ ಮತ್ತೊಮ್ಮೆ ತರಬೇತಿ ಪಡೆದಿರುವರು. ವರ್ಷಕ್ಕೆ ಒಂದು ಸಾರಿ ತರಬೇತಿ ಪಡೆದವರು ಯಾರೂ ಇಲ್ಲ.

ಇವುಗಳಲ್ಲಿ ಮತ್ತೇ ಅತೀ ಹೆಚ್ಚಿನ ಸಂಖ್ಯೆಯ (ಸರಾಸರಿ ಶೇ. ೮೬) ಪ್ರತಿಸ್ಪಂದಿಗಳು ಕೇವಲ ಒಂದೇ ಸಲ ತರಬೇತಿ ಪಡೆದಿದ್ದರೆಂದು ಅಭಿಪ್ರಾಯಿಸುತ್ತಾರೆ. ಅದು ಘಟಕ ಪ್ರಾರಂಭಿಸುವ ಮುಂಚೆ. ಇನ್ನುಳಿದ ಸರಾಸರಿ ಶೇ. ೧೪ರಷ್ಟು ಪ್ರತಿಸ್ಪಂದಿಗಳು ಪ್ರಾರಂಭದಲ್ಲಿ ಒಂದು ಸಲ, ಮತ್ತೇ ಅವಶ್ಯವಿದ್ದಾಗ (ನಿರಂತರವಾಗಿರದೆ) ತರಬೇತಿ ಪಡೆದಿರುವರು.

ಕೋಷ್ಟಕ : ೬.೮ ತರಬೇತಿ ಪಡೆಯದೇ ಸ್ಥಾಪಿಸಿದ ರೀತಿ

ಅ.ಸಂ.	ವಿವರಗಳು	ಅಥಣಿ	ಬೈಲಹೊಂಗಲ	ಬೆಳಗಾವಿ	ಚಿಕ್ಕೋಡಿ	ಗೋಕಾಕ	ಹುಕ್ಕೇರಿ	ಖಾನಾಪೂರ	ರಾಯಬಾಗ	ರಾಮದುರ್ಗ	ಸವದತ್ತಿ
೧	ಸ್ವ-ಜ್ಞಾನದಿಂದ	೦೬ (೫೦)	೧೮ (೬೨)	೨೧ (೬೪)	೦೩ (೫೦)	೦೯ (೨೫)	೦೯ (೩೦)	೦೩ (೨೫)	೦೬ (೩೩)	೧೫ (೫೦)	೧೨ (೪೦)
೨	ಅವರಿವರಿಂದ ಹೇಳಿ-ಕೇಳಿ	೦೬ (೫೦)	-	೧೨ (೩೬)	೦೩ (೫೦)	-	೦೩ (೧೦)	೦೩ (೨೫)	೦೯ (೫೦)	೦೯ (೩೦)	೦೩ (೧೦)
೩	ತಪ್ಪು-ತಡೆಗಳಿಂದ	-	೦೯ (೩೩)	-	-	೦೩ (೨೫)	೦೬ (೨೦)	೦೩ (೨೫)	೦೩ (೧೭)	-	-
೪	ಮತ್ತಾವುದೇ ರೀತಿಯಿದ್ದರೆ -	-	-	-	-	-	೧೨ (೪೦)	೦೩ (೨೫)	-	೦೬ (೨೦)	೧೫ (೫೦)

(*ಆವರಣದಲ್ಲಿರುವ ಸಂಖ್ಯೆಗಳು ಪ್ರತಿಶತ ಪ್ರಮಾಣವನ್ನು ಸೂಚಿಸುತ್ತವೆ)

ಕೋಷ್ಟಕ : ೬.೯ ಇಲಾಖೆ/ಬ್ಯಾಂಕಿನ ತರಬೇತಿ ಪಡೆದದ್ದು

ಅ.ಸಂ.	ವಿವರಗಳು	ಅಥಣಿ	ಬೈಲಹೊಂಗಲ	ಬೆಳಗಾವಿ	ಚಿಕ್ಕೋಡಿ	ಗೋಕಾಕ	ಹುಕ್ಕೇರಿ	ಖಾನಾಪೂರ	ರಾಯಬಾಗ	ರಾಮದುರ್ಗ	ಸವದತ್ತಿ
೧	ಒಂದೇ ಸಲ	೧೫ (೬೩)	೩೬ (೧೦೦)	೨೭ (೮೨)	೨೭ (೧೦೦)	೧೮ (೧೦೦)	೦೬ (೧೦೦)	೦೩ (೩೩)	೧೨ (೮೦)	೦೩ (೧೦೦)	೩೦ (೧೦೦)
೨	ಒಂದು ವರ್ಷದಲ್ಲಿ ಒಂದು ಸಾರಿ	-	-	-	-	-	-	-	-	-	-
೩	ಪ್ರಾರಂಭದಲ್ಲಿ ಒಂದು ಸಲ, ಮತ್ತೆ ಅವಶ್ಯವಿದ್ದಾಗಲೆಲ್ಲ	೦೯ (೩೭)	-	೦೬ (೧೮)	-	-	-	೦೬ (೬೭)	೦೩ (೨೦)	-	-

(*ಆವರಣದಲ್ಲಿರುವ ಸಂಖ್ಯೆಗಳು ಪ್ರತಿಶತ ಪ್ರಮಾಣವನ್ನು ಸೂಚಿಸುತ್ತವೆ)

ಇದಕ್ಕೆ ಪೂರಕವಾಗಿ ತರಬೇತಿಯ ತೃಪ್ತಿಯ ಬಗ್ಗೆ ವಿಚಾರಿಸಿದಾಗ ಶೇ. ೬೨ರಷ್ಟು ಪ್ರತಿಸ್ಪಂದಿಗಳು ತೃಪ್ತಿಕರವಾಗಿದೆಯೆಂದು ಹೇಳಿದರೆ, ಇನ್ನುಳಿದ ಶೇ.೩೮ ರಷ್ಟು ಅಸಮಾಧನ ಹೊಂದಿದವರಾಗಿದ್ದಾರೆ. ಇದರ ಕುರಿತು ಅಸಮಾಧಾನ ಹೊಂದಿದ ಪ್ರತಿಸ್ಪಂದಿಗಳ ಪ್ರಮಾಣ ಕಡಿಮೆಯಿದ್ದರೂ ಸಹ, ಅವರ ಅಭಿಪ್ರಾಯಕ್ಕೆ ಗಮನ ನೀಡಬೇಕಾಗುತ್ತದೆ.

ಇದಕ್ಕೆ ಹಿಂದಿನ ಚರ್ಚೆಯಲ್ಲಿ ಕಂಡುಕೊಂಡಂತೆ, ಒಟ್ಟಾರೆ ಪ್ರತಿಸ್ಪಂದಿಗಳಲ್ಲಿ ಶೇ. ೩೮ರಷ್ಟು ಪ್ರತಿಸ್ಪಂದಿಗಳಿಗೆ ತರಬೇತಿಯಲ್ಲಿ ಅತೃಪ್ತಿ. ಅಂದರೆ ಅವರು ಬಯಸಿದ ವಿಷಯಗಳ ಕುರಿತು ಅವರಿಗೆ ತರಬೇತಿ ದೊರೆತಿಲ್ಲವೆಂದು ಅರಿತುಕೊಳ್ಳಬಹುದು. ಇದರ ಬಗ್ಗೆ ಅವರಿಂದ ಪಡೆದ ಪ್ರತಿಕ್ರಿಯೆಗಳನ್ನು **ಕೋಷ್ಟಕ** ೬.೧೦ ರಲ್ಲಿ ನೀಡಲಾಗಿದೆ.

ಒಟ್ಟಾರೆ ಪ್ರಕಟಗೊಳಿಸಿದ ಆಶಯಗಳಲ್ಲಿ ಈಗಾಗಲೇ ಉದ್ದಿಮೆ ರಂಗದಲ್ಲಿ ಯಶಸ್ವಿಯಾದ ಉದ್ದಿಮೆದಾರರಿಂದ ತರಬೇತಿಯು ಇರಬೇಕೆಂದು ಹೆಚ್ಚಿನ (ಸರಾಸರಿ ಶೇ. ೩೦) ಸಂಖ್ಯೆಯ ಪ್ರತಿಸ್ಪಂದಿಗಳ ಅಭಿಪ್ರಾಯ ಬಂದಿದೆ. ಅದರಂತೆ ಘಟಕಗಳ ಯಶಸ್ಸು ಹಣಕಾಸು ನಿರ್ವಹಣೆಯನ್ನು ಅವಲಂಬಿಸಿದೆ. ಆದ್ದರಿಂದ ಹಣಕಾಸು ನಿರ್ವಹಣೆಯ ಬಗ್ಗೆ ತರಬೇತಿ ಅವಶ್ಯವೆಂದು ಶೇ. ೧೭ ರಷ್ಟು ಪ್ರತಿಸ್ಪಂದಿಗಳು ಬಯಸುತ್ತಾರೆ. ಸರಾಸರಿ ಶೇ. ೧೫ರಷ್ಟು ಪ್ರತಿಸ್ಪಂದಿಗಳು ಮಾರುಕಟ್ಟೆ ನಿರ್ವಹಣೆ ಮತ್ತು ಉತ್ಪಾದನೆ ಬಗ್ಗೆ ತರಬೇತಿಯ ವ್ಯವಸ್ಥೆಯಾಗಬೇಕೆಂದು ಅಪೇಕ್ಷಿಸುತ್ತಾರೆ. ಕೊನೆಯಲ್ಲಿ ಶೇ. ೫ರಷ್ಟು ಮಾನವ ಸಂಪನ್ಮೂಲ ಮತ್ತು ಆರ್ಥಿಕ ನೀತಿ ಬಗ್ಗೆ ತರಬೇತಿ ಅವಶ್ಯವೆಂದು ಹೇಳಿರುವರು.

ತರಬೇತಿಯು ವಸ್ತುನಿಷ್ಠವಾಗಿದ್ದು ಪ್ರಾಯೋಗಿಕ ಉದ್ದಿಮೆದಾರರಿಂದ ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದ್ದಾಗಿರಬೇಕೆಂದು ಬಹುಜನರ ಅಭಿಪ್ರಾಯ.

೬.೧೧ ಬಂಡವಾಳ ಶೇಖರಣೆ :

ಘಟಕವೊಂದರ ಜೀವ ರಕ್ಷಕದಂತೆ ಹರಿದಾಡುವ ಹಣಕಾಸು ಮತ್ತು ಬಂಡವಾಳವನ್ನು ವ್ಯವಸ್ಥಿತವಾಗಿ ನಿರ್ವಹಿಸುವದು ಅವಶ್ಯವಾಗಿದೆ. ಸಮಯಾನುಸಾರ ಸರಿಯಾದ ಪ್ರಮಾಣದಲ್ಲಿ ಹಣಕಾಸು ಲಭ್ಯವಾಗುತ್ತಿದ್ದರೆ ಮಾತ್ರ ಉದ್ದಿಮೆಯನ್ನು ಸುಗಮವಾಗಿ ನಡೆಯಿಸಿಕೊಂಡು ಹೋಗಬಹುದಾಗಿದೆ. ಹಣಕಾಸು ಯೋಜನೆಗಳನ್ನು ಸಿದ್ಧಗೊಳಿಸಿ ಅವುಗಳನ್ನು ಕಾರ್ಯ ರೂಪಕ್ಕೆ ತರುವವರು ಹಣಕಾಸು ದೊರೆಯುವ ಮೂಲಗಳನ್ನು ಶೋಧಿಸಿ, ಸಮಯಕ್ಕೆ ಲಭ್ಯವಾಗುವಂತೆ ಮಾಡುವದು ಹಣಕಾಸು ನಿರ್ವಹಣೆಯಲ್ಲಿ ಮೊದಲ ಅಂಶ. ಲಭ್ಯವಿರುವ ಹಣಕಾಸಿನ ವಿನಿಯೋಜನೆ, ಗಳಿಕೆ, ಹೂಡಿಕೆ ಸೂಕ್ತ ರೀತಿಯಲ್ಲಿ ಆಗುತ್ತಿದ್ದರೆ ಸಮಾಧಾನಕರ ಹೂಡಿಕೆ-ಗಳಿಕೆ ಸಾಧ್ಯವಾಗುತ್ತದೆ. ಆದ್ದರಿಂದ ಈ ಕುರಿತು ಪ್ರತಿಸ್ಪಂದಿಗಳಿಂದ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿದೆ.

ಕೋಷ್ಟಕ : ೬.೧೦ ತರಬೇತಿ ಪಡೆಯದ ಪ್ರತಿಸ್ಪಂದಿಗಳ ಅಭಿಪ್ರಾಯಗಳು (ಇಲ್ಲವೆಂದಾದರೆ ಬೇಕಾಗಿರುವುದೇನು?):

ಅ.ಸಂ.	ವಿವರಗಳು	ಅಥಣಿ	ಬೈಲಹೊಂಗಲ	ಬೆಳಗಾವಿ	ಚಿಕ್ಕೋಡಿ	ಗೋಕಾಕ	ಹುಕ್ಕೇರಿ	ಖಾನಾಪೂರ	ರಾಯಬಾಗ	ರಾಮದುರ್ಗ	ಸವದತ್ತಿ
೧	ಯಶಸ್ವಿ ಉದ್ದಿಮೆಗಳಲ್ಲಿ ತರಬೇತಿ	೦೩ (೨೫)	-	೦೬ (೧೦)	೦೩ (೧೦)	೦೬ (೩೩)	-	-	೦೩ (೧೧)	೦೩ (೧೪)	೦೩ (೧೩)
೨	ಯಶಸ್ವಿ ಉದ್ದಿಮೆದಾರರಿಂದ ತರಬೇತಿ	೦೩ (೨೫)	೦೯ (೪೩)	೧೨ (೧೯)	೧೫ (೫೦)	೦೬ (೩೩)	೦೩ (೧೨)	೦೩ (೫೦)	೦೬ (೨೨)	-	೧೨ (೫೦)
೩	ಹಣಕಾಸು ನಿರ್ವಹಣೆ ಬಗ್ಗೆ ತರಬೇತಿ	೦೩ (೨೫)	-	೦೯ (೧೪)	೦೬ (೨೦)	೦೩ (೧೭)	೦೬ (೨೫)	-	೦೬ (೨೨)	೦೯ (೪೩)	-
೪	ಮಾರುಕಟ್ಟೆ ನಿರ್ವಹಣೆ ಬಗ್ಗೆ ತರಬೇತಿ	-	೦೩ (೧೪)	೧೨ (೧೯)	-	-	೦೬ (೨೫)	೦೩ (೫೦)	೦೩ (೧೧)	೦೬ (೨೯)	-
೫	ಮಾನವ ಸಂಪನ್ಮೂಲದ ಬಗ್ಗೆ ತರಬೇತಿ	-	-	೦೯ (೧೪)	೦೩ (೧೦)	೦೩ (೧೭)	೦೩ (೧೩)	-	-	-	-
೬	ಆರ್ಥಿಕ ನೀತಿ ಬಗ್ಗೆ ತರಬೇತಿ	೦೩ (೨೫)	-	೦೬ (೧೦)	-	-	-	-	೦೩ (೧೨)	-	-
೭	ಉತ್ಪಾದನೆ ಬಗ್ಗೆ ತರಬೇತಿ	-	೦೯ (೪೩)	೦೯ (೧೪)	೦೩ (೧೦)	-	೦೬ (೨೫)	-	೦೬ (೨೨)	೦೩ (೧೪)	೦೯ (೩೭)

(*ಆವರಣದಲ್ಲಿರುವ ಸಂಖ್ಯೆಗಳು ಪ್ರತಿಶತ ಪ್ರಮಾಣವನ್ನು ಸೂಚಿಸುತ್ತವೆ)

ಚಿಕ್ಕ ಮತ್ತು ಅತೀ ಚಿಕ್ಕ ಉದ್ದಿಮೆದಾರರಿಗೆ ಬಂಡವಾಳ ಲಭ್ಯವಾಗುವ ಮೂಲಗಳು ಬೇರೆಯಾಗಿ ರುತ್ತವೆ. ಅವರಿಗೆ ಸಂಗ್ರಹಣೆಯು ಕಷ್ಟದಾಯಕವು ಆಗಿರುತ್ತದೆ. ವಿಶೇಷವಾಗಿ ಹಣಕಾಸು ಯೋಜನೆಗಳ ಅಳವಡಿಕೆ ಕಡಿಮೆಯಿರುವದರಿಂದ ತುರ್ತುಸ್ಥಿತಿಯ ನಿರ್ವಹಣೆಯಲ್ಲಿ ವಿಫಲರಾಗುತ್ತಾರೆ. ಕೆಲವರು ಆರ್ಥಿಕ ಸಂಕಷ್ಟದಲ್ಲಿ ಸಿಲುಕುತ್ತಾರೆ. ಘಟಕವು ಅಸ್ವಸ್ಥವಾಗುವ ಸಾಧ್ಯತೆ ಇರುತ್ತದೆ.

ಪ್ರಸ್ತುತ ಪ್ರತಿಸ್ಪಂದಿಗಳು ತಮ್ಮ ಘಟಕಗಳಿಗೆ ಸಂಗ್ರಹಿಸಿದ ಬಂಡವಾಳದ ವಿವಿಧ ಮೂಲಗಳ ವಿವರವನ್ನು **ಕೋಷ್ಟಕ ೬.೧೧**ರಲ್ಲಿ ನೀಡಲಾಗಿದೆ.

ಪ್ರಸಕ್ತ ಪ್ರಶ್ನೆಗೆ ಒಂಬತ್ತು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಪ್ರತಿಸ್ಪಂದಿಗಳು ಕೇವಲ ಐದು ಆಯ್ಕೆಗಳಿಗೆ ಮಾತ್ರ ಉತ್ತರಗಳನ್ನು ನೀಡಿದ್ದು, ಅದರಲ್ಲಿಯೇ ಗರಿಷ್ಠ ಪ್ರಮಾಣದ ಶೇ. ೭೨ರಷ್ಟು ಪ್ರತಿಸ್ಪಂದಿಗಳು ಸ್ವಂತ ಬಂಡವಾಳ ಮತ್ತು ಬ್ಯಾಂಕಿನಿಂದ ಸಾಲ ಪಡೆದು ಹೂಡಿಕೆ ಮಾಡಿದ್ದಾಗಿ ಹೇಳುತ್ತಾರೆ. ಅನಂತರ ಶೇ. ೧೯ ಪ್ರತಿಸ್ಪಂದಿಗಳು ತಮ್ಮ ಸ್ವಂತ ಉಳಿತಾಯದ ಮೂಲವನ್ನು ಅವಲಂಬಿಸಿದವರಾಗಿದ್ದಾರೆ. ಪಾಲುಗಾರಿಕೆ ಸಂಸ್ಥೆಗಳು ಕೇವಲ ಬೆಳಗಾವಿ ತಾಲೂಕಿನಲ್ಲಿದ್ದು ಇವರ ಪ್ರಮಾಣ ಶೇ. ೨ ಇನ್ನು ಕೇವಲ ಶೇ. ೧ರಷ್ಟು ಮಾತ್ರ ಸ್ವಂತ ಬಂಡವಾಳದ ಜೊತೆಗೆ ಮಿತ್ರರನ್ನು ಹಾಗೂ ಸಂಬಂಧಿಕರನ್ನು ಅವಲಂಬಿಸಿದ್ದೇವೆಂದು ಹೇಳುತ್ತಾರೆ. ನಿರ್ದಿಷ್ಟವಾಗಿ ಇವಾವು ಮೂಲಗಳಿಂದ ಅಲ್ಲದೆ ಇತರ ಮೂಲಗಳಿಂದ ಬಂಡವಾಳ ಶೇಖರಿಸಿದ್ದೇವೆಂದು ಶೇ. ೬ರಷ್ಟು ಪ್ರತಿಸ್ಪಂದಿಗಳು ಪ್ರತಿಕ್ರಿಯಿಸಿರುವರು.

ಉದ್ದಿಮೆ ರಂಗದ ಉದ್ದಿಮೆದಾರರಿಗೆ ಸ್ವಂತ ಬಂಡವಾಳ ಮತ್ತು ಜೊತೆಗೆ ಬ್ಯಾಂಕಿನ ಸಾಲದ ನೆರವುಮುಖ್ಯ (ಸರಾಸರಿ ಶೇ. ೯೧) ಮೂಲವಾಗುತ್ತದೆ.

೬.೧೨ : ಬಂಡವಾಳ ಹೂಡಿಕೆ ಮೇಲಿನ ಗಳಿಕೆ :

ಬಂಡವಾಳ ಸಂಗ್ರಹಣೆಯಲ್ಲಿ ಬಂಡವಾಳ ವೆಚ್ಚವನ್ನು ಸಾಕಷ್ಟು ತಗ್ಗಿಸುವ ಪ್ರಯತ್ನ ಮಾಡುತ್ತಾರೆ. ಅಲ್ಲದೆ ಹೂಡಿಕೆ ಮೇಲೆ ಗರಿಷ್ಠ ಗಳಿಕೆಯ ಬಗ್ಗೆ ಲಕ್ಷ್ಯವಹಿಸುತ್ತಾರೆ. ಇವೆರಡರಲ್ಲೂ ಯಶಸ್ವಿಯಾದಾಗ ಹೂಡಿಕೆಯ ಮೇಲಿನ ಗಳಿಕೆಯು ಸಮಾಧಾನಕರ ಮತ್ತು ತೃಪ್ತಿಕರವಾಗಿರುತ್ತದೆ.

ಉದ್ದಿಮೆಯ ಯಶಸ್ಸನ್ನು ನಿರ್ಧರಿಸುವ ಅಂಶಗಳಲ್ಲಿ ಹೂಡಿಕೆಯ ಮೇಲಿನ ಗಳಿಕೆಯು ಪ್ರಮುಖ ಅಂಶವಾಗುತ್ತದೆ.

ಅಧ್ಯಯನಕ್ಕೆ ಆಯ್ಕೆ ಮಾಡಿದ ಒಟ್ಟು ಪ್ರತಿಸ್ಪಂದಿಗಳಲ್ಲಿ ಸರಾಸರಿ ಶೇ. ೭೬ ರಷ್ಟು ಪ್ರತಿಸ್ಪಂದಿಗಳಲ್ಲಿ ಹೂಡಿಕೆ-ಮೇಲಿನ ಗಳಿಕೆಯು ತೃಪ್ತಿಕರವಾಗಿದೆ. ಇದರಲ್ಲಿ ಹೆಚ್ಚಾಗಿ ಒಂಬತ್ತು ತಾಲೂಕಿನ ಪ್ರತಿಸ್ಪಂದಿಗಳ ಅಭಿಪ್ರಾಯ ಸೇರಿದೆ. ಸವದತ್ತಿ ತಾಲೂಕಿನಲ್ಲಿ ಮಾತ್ರ ಶೇ. ೯೨ರಷ್ಟು ಪ್ರತಿಸ್ಪಂದಿಗಳು ಹೂಡಿಕೆಯ ಮೇಲಿನ ಗಳಿಕೆಯು ತೃಪ್ತಿದಾಯಕ ಇಲ್ಲವೆಂದು ಹೇಳುತ್ತಾರೆ. ಸರಾಸರಿ ಶೇ. ೨೪ರಷ್ಟು ಪ್ರತಿಸ್ಪಂದಿಗಳು ತೃಪ್ತಿದಾಯಕ ಇಲ್ಲವೆಂದು ಅಭಿಪ್ರಾಯಿಸಿದ್ದಾರೆ.

ಕೋಷ್ಟಕ : ೬.೧೧ ಒಟ್ಟು ಬಂಡವಾಳ ಶೇಖರಿಸಿದ ಬಗೆ

ಅ.ಸಂ.	ವಿವರಗಳು	ಅಥಣಿ	ಬೈಲಹೊಂಗಲ	ಬೆಳಗಾವಿ	ಚಿಕ್ಕೋಡಿ	ಗೋಕಾಕ	ಹುಕ್ಕೇರಿ	ಖಾನಾಪೂರ	ರಾಯಬಾಗ	ರಾಮದುರ್ಗ	ಸವದತ್ತಿ
೧	ಸ್ವಂತದ್ದು	೦೬ (೨೦)	೦೯ (೨೫)	೧೫ (೧೯)	೦೩ (೦೮)	೦೬ (೧೮)	೦೩ (೦೮)	೩೦ (೧೭)	-	೦೬ (೧೭)	೨೧ (೫೮)
೨	ಪಾಲುದಾರರಿಂದ	-	-	೧೨ (೧೬)	-	-	-	-	-	-	-
೩	ಸ್ವಂತದ್ದು + ಬ್ಯಾಂಕಿನ ಸಾಲ	೨೧ (೭೦)	೨೭ (೭೫)	೫೧ (೬೫)	೨೭ (೭೬)	೨೭ (೮೨)	೩೬ (೯೨)	೦೬ (೮೩)	೨೪ (೮೦)	೨೪ (೬೬)	೧೨ (೩೩)
೪	ಸ್ವಂತದ್ದು + ಸರ್ಕಾರದ ಸಂಸ್ಥೆಗಳಿಂದ	-	-	-	೦೩ (೦೮)	-	-	-	-	-	-
೫	ಸ್ವಂತದ್ದು+ಖಾಸಗಿ ಹಣಕಾಸು ಸಂಸ್ಥೆಗಳಿಂದ	-	-	-	-	-	-	-	-	-	-
೬	ಸ್ವಂತದ್ದು + ಲೇವಾ-ದೇವಿದಾರರಿಂದ	-	-	-	-	-	-	-	-	-	-
೭	ಸ್ವಂತದ್ದು + ಸರ್ಕಾರದ ಸಬ್ಸಿಡಿ	-	-	-	-	-	-	-	-	-	-
೮	ಸ್ವಂತದ್ದು + ಸಂಬಂಧಿಕರು + ಮಿತ್ರರು	೦೩ (೧೦)	-	-	೦೩ (೦೮)	-	-	-	೦೬ (೨೦)	೦೬ (೧೭)	೦೩ (೦೯)

(*ಆವರಣದಲ್ಲಿರುವ ಸಂಖ್ಯೆಗಳು ಪ್ರತಿಶತ ಪ್ರಮಾಣವನ್ನು ಸೂಚಿಸುತ್ತವೆ)

೬.೧೩ : ಹೂಡಿಕೆ - ಗಳಿಕೆಯ ಅತೃಪ್ತಿಗೆ ಕಾರಣಗಳು :

ಇದಕ್ಕೂ ಮುಂಚಿನ ಪ್ರಶ್ನೆ - ಹೂಡಿಕೆಯ ಮೇಲಿನ ಗಳಿಕೆಯ ತೃಪ್ತಿಗೆ ಸಂಬಂಧಿಸಿತ್ತು. ಅದರಲ್ಲಿ ಶೇ. ೨೪ ರಷ್ಟು ಪ್ರತಿಸ್ಪಂದಿಗಳಿಗೆ ಅದು ತೃಪ್ತಿಕರವಾಗಿಲ್ಲವೆಂದು ತಿಳಿದು ಬರುತ್ತದೆ. ಒಟ್ಟಿನಲ್ಲಿ ಇವರ ಪ್ರಮಾಣ ಕಡಿಮೆಯೆನಿಸಿದರೂ ಸಹ, ಅವರ ಸಮಸ್ಯೆಗಳನ್ನು ಬೆಳಕಿಗೆ ತರುವದು ಅವಶ್ಯವೆನಿಸುತ್ತದೆ. ಗಳಿಕೆಯ ಅತೃಪ್ತಿಗೆ ನೀಡಿದ ಕಾರಣಗಳನ್ನು **ಕೋಷ್ಟಕ ೬.೧೨** ರಲ್ಲಿ ಪ್ರಕಟಗೊಳಿಸಲಾಗಿದೆ.

ಹೂಡಿಕೆ ಮೇಲಿನ ಗಳಿಕೆಯು ಕಡಿಮೆಯಾಗಲು ಹಲವಾರು ಕಾರಣಗಳಿರುತ್ತವೆ. ಅದರಲ್ಲಿಯೂ ಬಂಡವಾಳ ವೆಚ್ಚದ ಹೆಚ್ಚಳಕ್ಕೆ ಕಾರಣವಾಗುವ ಸಾಲದ ಮೇಲಿನ ಬಡ್ಡಿ, ಉತ್ಪಾದನಾ ವೆಚ್ಚ, ವಿತರಣಾ ವೆಚ್ಚ, ಸಾಲಗಾರರರಿಂದ ವಸೂಲಿ ವಿಳಂಬ ಇತ್ಯಾದಿಗಳು ಮುಖ್ಯವಾಗಿರುತ್ತವೆ.

ಪ್ರಸ್ತುತ ಪ್ರತಿಸ್ಪಂದಿಗಳು ನೀಡಿದ ಕಾರಣಗಳಲ್ಲಿ ಬಂಡವಾಳಕ್ಕಾಗಿ ಪಡೆದ ಸಾಲದ ಮೇಲಿನ ಬಡ್ಡಿಯ ಹೊರೆಯು ಹೆಚ್ಚೆಂದು ಸರಾಸರಿ ಶೇ. ೩೨ ರಷ್ಟು ಪ್ರತಿಸ್ಪಂದಿಗಳು ಹೇಳುತ್ತಾರೆ. ನಂತರ ಶೇ. ೧೮ ರಷ್ಟು ಪ್ರತಿಸ್ಪಂದಿಗಳು ಪಡೆದ ಸಾಲ ಮರುಪಾವತಿಯ ಒತ್ತಡ ಮತ್ತೊಂದು ಕಾರಣವೆಂದೂ ಹೇಳುತ್ತಾರೆ.

ಇನ್ನು ಸಮನಾದ ಅಭಿಪ್ರಾಯವು ಮೂರು ಕಾರಣಗಳಾದ (ಶೇ. ೯ರಷ್ಟು) ವಿಳಂಬದ ಬಾಕಿ ವಸೂಲಿ, ಉದ್ದಿಮೆಯ ಕಡಿಮೆ ಗಳಿಕೆ ಮತ್ತು ಆದಾಯ ಹಾಗೂ ಸ್ಪರ್ಧೆಯಿಂದ ಕಡಿಮೆ ಬೆಲೆಗೆ ಮಾರಾಟಗೊಳಿಸುವದು ಕಾರಣಗಳಿಗೆ ಸಂಬಂಧಿಸಿದ್ದಾಗಿದೆ. ಅದರಂತೆಯೇ, ಸರಾಸರಿ ಶೇ. ೪ರಷ್ಟು ಪ್ರತಿಸ್ಪಂದಿಗಳು ಮಾರಾಟ ವಿತರಣಾ ಮತ್ತು ಉತ್ಪಾದನಾ ವೆಚ್ಚದ ಹೆಚ್ಚಳದ ಕಾರಣ ನೀಡುತ್ತಾರೆ.

ಹೀಗಾಗಿ ಬಹುಮತದ ಪ್ರತಿಸ್ಪಂದಿಗಳಿಗೆ ಸಾಲದ ಮೇಲಿನ ಬಡ್ಡಿಯ ಮತ್ತು ಅದರ ಮರುಪಾವತಿಯ ಒತ್ತಡಗಳು ಮುಖ್ಯವಾದ ಕಾರಣವಾಗಿವೆ. ಬೆಳಗಾವಿ ತಾಲೂಕಿನವರ ಅಭಿಪ್ರಾಯ ಇದಕ್ಕೆ ಭಿನ್ನವಾಗಿದೆ. ಇನ್ನುಳಿದ ಒಂಬತ್ತು ತಾಲೂಕಿನವರಿಗೆ ಇವೆರಡೇ ಮುಖ್ಯ ಕಾರಣಗಳು.

೬.೧೪ : ಉತ್ಪಾದನಾ ನಿರ್ವಹಣೆ :

ಯಶಸ್ವಿ ಉದ್ದಿಮೆಗೆ ಉತ್ಪಾದನೆಯ ಯಶಸ್ವಿ ನಿರ್ವಹಣೆಯು ಅವಶ್ಯಕವಾಗಿದೆ. ಉತ್ಪಾದನೆಯಲ್ಲಿ ಅವಶ್ಯವಿರುವ ಕೌಶಲಗಳನ್ನು ಒಡೆಯರು ಹೊಂದಿದ್ದರೆ ಕೌಶಲ ಭರಿತ ಸಿಬ್ಬಂಧಿಯ ನೇಮಕ ಮತ್ತು ಸಂಬಂಧಿತ ವೆಚ್ಚಗಳಲ್ಲಿ ಉಳಿತಾಯವಾಗುತ್ತದೆ. ಅಂತಹ ಸಿಬ್ಬಂದಿಯ ಮೇಲಿನ ಅತಿಯಾದ ಅವಲಂಬನೆಯು ತಪ್ಪುತ್ತದೆ. ಸಂಪೂರ್ಣವಾಗಿ ಉತ್ಪಾದನೆಗಾಗಿ ಸಿಬ್ಬಂದಿಯನ್ನೇ ಅವಲಂಬಿಸಿದರೆ ಅದರ ವೆಚ್ಚದ ಭಾರ ಹೆಚ್ಚಾಗುತ್ತದೆ.

ಕೋಷ್ಟಕ : ೬.೧೨ ಹೂಡಿಕೆ – ಗಳಿಕೆಯ ಅತೃಪ್ತಿಗೆ ಕಾರಣಗಳು

ಅ.ಸಂ.	ವಿವರಗಳು	ಅಥಣಿ	ಬೈಲಹೊಂಗಲ	ಬೆಳಗಾವಿ	ಚಿಕ್ಕೋಡಿ	ಗೋಕಾಕ	ಹುಕ್ಕೇರಿ	ಖಾನಾಪೂರ	ರಾಯಬಾಗ	ರಾಮದುರ್ಗ	ಸವದತ್ತಿ
೧	ಸಾಲದ ಮೇಲಿನ ಬಡ್ಡಿ ಹೊರೆ	-	೦೩ (೫೦)	-	-	-	೦೬ (೫೦)	೧೨ (೪೪)	-	೦೬ (೫೦)	೦೯ (೨೨)
೨	ಸಾಲ ಮರುಪಾವತಿಯ ಒತ್ತಡ	-	೦೩ (೫೦)	೦೩ (೧೪)	-	-	೦೩ (೨೫)	೦೬ (೨೩)	೦೩ (೫೦)	-	೦೬ (೧೪)
೩	ಉತ್ಪಾದನಾ ವೆಚ್ಚ ಹೆಚ್ಚಳ	-	-	೦೬ (೨೯)	-	-	-	-	-	-	೦೩ (೦೭)
೪	ಮಾರಾಟ ವಿತರಣ ವೆಚ್ಚ ಹೆಚ್ಚಳ	-	-	೦೬ (೨೯)	-	-	-	-	-	-	-
೫	ಬಾಕಿ ವಸೂಲಾತಿಯಲ್ಲಿ ವಿಳಂಬ	-	-	೦೩ (೧೪)	-	-	-	೦೩ (೧೧)	೦೩ (೫೦)	-	-
೬	ಉದ್ದಿಮೆಯ ಸರಾಸರಿ ಗಳಿಕೆಯೇ ಕಡಿಮೆ	-	-	೦೩ (೧೪)	-	-	-	೦೩ (೧೧)	-	೦೬ (೫೦)	-
೭	ಚಿಕ್ಕ ಉದ್ದಿಮೆ – ದೊಡ್ಡ ಉದ್ದಿಮೆಗಳಲಿ ವ್ಯತ್ಯಾಸವಿಲ್ಲ	-	-	-	-	-	-	-	-	-	-
೮	ಇತರೆ	-	-	-	-	-	೦೩ (೨೫)	೦೩ (೧೧)	-	-	೨೪ (೫೭)

(*ಆವರಣದಲ್ಲಿರುವ ಸಂಖ್ಯೆಗಳು ಪ್ರತಿಶತ ಪ್ರಮಾಣವನ್ನು ಸೂಚಿಸುತ್ತವೆ)

ಅತೀ ಚಿಕ್ಕ ಉದ್ದಿಮೆ ಘಟಕಗಳ ಉತ್ಪಾದನೆಯನ್ನು ಹೆಚ್ಚಾಗಿ ಮಾಲೀಕರೇ ನಿರ್ವಹಿಸುತ್ತಾರೆ. ಮತ್ತೊಂದು ಮಹತ್ವದ ವಿಷಯವೆಂದರೆ ಮನೆಯವರೂ ಸಹ ಉತ್ಪಾದನಾ ಕಾರ್ಯದಲ್ಲಿ ತೊಡಗಿ ಕೊಳ್ಳುವದಾಗಿದೆ. ಆದರೆ, ಅದನ್ನು ವೆಚ್ಚ ನಿರ್ಣಯದಲ್ಲಿ ಸೇರಿಸದೇ ಇರುವದು ವಿಪರ್ಯಾಸ. ಉತ್ಪಾದನೆ ನಿರ್ವಾಹಣೆಯ ಕುರಿತು ಪ್ರತಿಸ್ಪಂದಿಗಳ ಅಭಿಪ್ರಾಯಗಳನ್ನು ಈ ಮುಂದೆ ವಿಶ್ಲೇಷಿಸಲಾಗಿದೆ.

ಚಿಕ್ಕ ಮತ್ತು ಅತೀ ಚಿಕ್ಕ ಘಟಕಗಳ ಉತ್ಪಾದನೆಯು ಅಷ್ಟೇನು ತಾಂತ್ರಿಕತೆಯಿಂದ ಸಂಕೀರ್ಣವಾಗಿರುವದಿಲ್ಲ. ಆದ್ದರಿಂದ ಇಲ್ಲಿ ಉತ್ಪಾದನೆಯನ್ನು ಹೆಚ್ಚಾಗಿ ಮಾಲೀಕರು ಸ್ವಂತ ನಿರ್ವಹಿಸುವ ಸಾಧ್ಯತೆಯಿರುತ್ತದೆ. ಈ ಕುರಿತಾದ ಅಭಿಪ್ರಾಯಗಳನ್ನು **ಕೋಷ್ಟಕ ೬.೧೩** ರಲ್ಲಿ ನೀಡಲಾಗಿದೆ.

ಉತ್ಪಾದನಾ ನಿರ್ವಹಣೆ ಹೇಗಿರಬೇಕೆಂಬುದು ಈ ಕೋಷ್ಟಕದ ಅವಲೋಕನವು ತಿಳಿಸುವುದು. ಏಕೆಂದರೆ ಎಲ್ಲ ಘಟಕಗಳಲ್ಲಿ ಒಡೆಯನೇ ಎಲ್ಲ ಕೌಶಲಗಳನ್ನು ಹೊಂದಿರುವದು ಕಡಿಮೆ. ಇದನ್ನೇ ಇಲ್ಲಿಯ ಪ್ರತಿಕ್ರಿಯೆಗಳು ವಿಷದಗೊಳಿಸುತ್ತವೆ. ಒಟ್ಟು ಪ್ರತಿಸ್ಪಂದಿಗಳಲ್ಲಿ ಸರಾಸರಿ ಶೇ. ೬೪ರಷ್ಟು ಪ್ರತಿಸ್ಪಂದಿಗಳು ಸ್ವಂತ ತಾವಲ್ಲದೆ ಜೊತೆಗೆ ನೇಮಿಸಿಕೊಂಡ ಸಿಬ್ಬಂದಿಯ ಸಹಾಯದಿಂದ ಉತ್ಪಾದನಾ ಚಟುವಟಿಕೆ ನಡೆಸುತ್ತಿರುವದಾಗಿ ಹೇಳಿದ್ದಾರೆ.

ಅದರಂತೆಯೇ ಶೇ. ೨೩ರಷ್ಟು ಪ್ರತಿಸ್ಪಂದಿಗಳು ತಮ್ಮ ಮನೆಯವರನ್ನು ಜೊತೆಗೂಡಿಸಿ ಉತ್ಪಾದನೆ ನಿರ್ವಹಣೆ ಮಾಡುತ್ತಿರುವದಾಗಿ ಹೇಳುತ್ತಾರೆ. ಹಾಗೆಯೇ ಸಂಪೂರ್ಣವಾಗಿ ಒಬ್ಬರೇ ಮತ್ತು ಸಂಪೂರ್ಣವಾಗಿ ಸಿಬ್ಬಂದಿಯವರಿಂದಲೇ ನಿರ್ವಹಣೆ ಎಂಬುದಕ್ಕೆ (ಸಮಾನ) ಸರಾಸರಿ ಶೇ. ೬ರಷ್ಟು ಪ್ರತಿಸ್ಪಂದಿಗಳು ಅಭಿಪ್ರಾಯ ಹಂಚಿಕೊಳ್ಳುತ್ತಾರೆ.

೬.೧೪ : ಉತ್ಪಾದನೆಗೆ ಸಂಪನ್ಮೂಲ ಲಭ್ಯತೆ ಮತ್ತು ಎದುರಾದ ಸಮಸ್ಯೆಗಳು :

ಉತ್ಪಾದನೆಯು ಸರಾಗವಾಗಿ ಮತ್ತು ನಿರಂತರವಾಗಿ ನಡೆಯಬೇಕಾದರೆ ಕಚ್ಚಾ ಸಾಮಗ್ರಿ, ಸಂಪನ್ಮೂಲಗಳ ಪೂರೈಕೆಯು ಅಗತ್ಯ. ಇವು ಕೆಲವೊಮ್ಮೆ (ಋತುಮಾನಕ್ಕೆ ತಕ್ಕಂತೆ) ಹೇರಳವಾಗಿ ಲಭ್ಯವಾಗುತ್ತವೆ. ಅಂತಹ ಪ್ರಸಂಗಗಳಲ್ಲಿ ಉತ್ಪಾದನೆ ನಿರ್ವಹಣೆ ಕಷ್ಟವೆನಿಸುತ್ತದೆ. ಸರ್ವಋತುಗಳಲ್ಲಿ ಕಚ್ಚಾ ಸಾಮಗ್ರಿ ಪೂರೈಕೆ, ಕಾರ್ಮಿಕರ ಕೌಶಲ, ಯಂತ್ರೋಪಕರಣ, ವಿದ್ಯುತ್ ಮುಂತಾದವುಗಳು ಲಭ್ಯವಿದ್ದಾಗಲೇ ಉತ್ಪಾದನೆಗೆ ತಡೆಯುಂಟಾಗುವದಿಲ್ಲ.

ಈ ಕುರಿತು ಪ್ರತಿಸ್ಪಂದಿಗಳಿಗೆ ಪ್ರಶ್ನಿಸಿದಾಗ, ಸರಾಸರಿ ಶೇ. ೮೪ರಷ್ಟು ಪ್ರತಿಸ್ಪಂದಿಗಳು ಉತ್ಪಾದನೆಯ ಸಂಪನ್ಮೂಲಗಳ ಪೂರೈಕೆ ಸಮಾಧಾನಕರವಾಗಿದೆಯೆಂದೂ ಮತ್ತು ಕೇವಲ ಶೇ. ೧೬ ರಷ್ಟು ಪ್ರತಿಸ್ಪಂದಿಗಳು ಸಮಸ್ಯೆಗಳಿವೆಯೆಂದೂ ಅಭಿಪ್ರಾಯಿಸಿದ್ದಾರೆ.

ಕೋಷ್ಟಕ : ೬.೧೩ ಉತ್ಪಾದನಾ ನಿರ್ವಹಣೆಯ ಬಗೆ

ಅ.ಸಂ.	ವಿವರಗಳು	ಅಥಣಿ	ಬೈಲಹೊಂಗಲ	ಬೆಳಗಾವಿ	ಚಿಕ್ಕೋಡಿ	ಗೋಕಾಕ	ಹುಕ್ಕೇರಿ	ಖಾನಾಪೂರ	ರಾಯಬಾಗ	ರಾಮದುರ್ಗ	ಸವದತ್ತಿ
೧	ಒಬ್ಬನೆ ಸಂಪೂರ್ಣವಾಗಿ	-	೦೩ (೦೮)	೦೬ (೦೮)	-	೦೬ (೧೮)	-	೦೯ (೨೫)	-	-	-
೨	ಸ್ವತಃ ಮತ್ತು ಮನೆಯವರು	೦೬ (೨೦)	೦೩ (೦೮)	೦೬ (೦೮)	-	೦೬ (೧೮)	೨೪ (೬೨)	೦೯ (೨೫)	೧೨ (೪೦)	೧೫ (೪೨)	೦೩ (೦೮)
೩	ಸ್ವತಃ ಮತ್ತು ನೇಮಿಸಿದ ಸಿಬ್ಬಂದಿ	೨೪ (೮೦)	೩೦ (೮೪)	೫೭ (೭೬)	೩೩ (೧೦೦)	೧೮ (೫೫)	೧೫ (೩೮)	೧೨ (೩೩)	೧೫ (೫೦)	೧೫ (೪೨)	೩೩ (೯೨)
೪	ಸಂಪೂರ್ಣವಾಗಿ ಸಿಬ್ಬಂದಿಯವರು	-	-	೦೬ (೦೮)	-	೦೩ (೦೯)	-	೦೬ (೧೭)	೦೩ (೧೦)	೦೬ (೧೬) -	-

(*ಆವರಣದಲ್ಲಿರುವ ಸಂಖ್ಯೆಗಳು ಪ್ರತಿಶತ ಪ್ರಮಾಣವನ್ನು ಸೂಚಿಸುತ್ತವೆ)

ಅದನ್ನೇ ಮುಂದುವರೆಸಿ, ಸಂಪನ್ಮೂಲ ಪೂರೈಕೆಯಲ್ಲಿ ಸಮಸ್ಯೆಗಳಿವೆಯೆಂದು ಉತ್ತರಿಸಿದ ಪ್ರತಿಸ್ಪಂದಿಗಳಿಗೆ ಯಾವ ತರಹದ ಸಮಸ್ಯೆಗಳಿರುವ ಬಗ್ಗೆ ವಿಚಾರಿಸಿದಾಗ ಹಲವು ಸಮಸ್ಯೆಗಳನ್ನು ಹೇಳಿಕೊಂಡಿದ್ದಾರೆ. ಅವುಗಳನ್ನು **ಕೋಷ್ಟಕ ೬.೧೪**ರಲ್ಲಿ ತೋರ್ಪಡಿಸಲಾಗಿದೆ.

ಕೋಷ್ಟಕ ನೀಡುವ ಮಾಹಿತಿಯಂತೆ ಅಥಣಿ, ಬೈಲಹೊಂಗಲ ಮತ್ತು ಖಾನಾಪೂರ ತಾಲೂಕಿನ ಪ್ರತಿಸ್ಪಂದಿಗಳಲ್ಲಿ ಸಮಸ್ಯೆ ಇಲ್ಲವೆಂಬುದು ಸ್ಪಷ್ಟವಾಗುತ್ತದೆ. ಇನ್ನುಳಿದ ಏಳು ತಾಲೂಕಿನ ಪ್ರತಿಸ್ಪಂದಿಗಳಿಗೆ ಹೆಚ್ಚಿನ ಸಮಸ್ಯೆಯು (ಶೇ. ೨೫ ರಷ್ಟು) ಬೇರೆ ಸ್ಥಳಗಳಿಂದ ಕಚ್ಚಾ ಸಾಮಗ್ರಿ ತರುವದಾಗಿದೆ. ನಂತರ ಶೇ. ೧೫ ರಷ್ಟು ಪ್ರತಿಸ್ಪಂದಿಗಳಿಗೆ ಒಟ್ಟಾರೆ ಕಚ್ಚಾ ಸಾಮಗ್ರಿಯ ಕೊರತೆಯೇ ಸಮಸ್ಯೆಯಾಗಿದೆ. ಇದರ ನಂತರ ಸಮಸ್ಯೆಗಳನ್ನು ಇಳಿಕೆ ಕ್ರಮದಲ್ಲಿ ಹೇಳುವದಾದರೆ ವೆಚ್ಚದಾಯಕವಾದ ಕಚ್ಚಾ ಸಾಮಗ್ರಿ, ಕಚ್ಚಾ ಸಾಮಗ್ರಿ ಗುಣಮಟ್ಟ, ಯಂತ್ರೋಪಕರಣ ಸಮಸ್ಯೆ,ಇತರೇ ವೆಚ್ಚದ ಹೊರೆ, ವಿದ್ಯುತ - ಸಂಗ್ರಹಣೆ - ದುರಸ್ತಿ-ಮೂಲಸೌಕರ್ಯ ಮತ್ತು ಕಾರ್ಮಿಕರ ಕೊರತೆಯಾಗಿವೆ.

ಒಟ್ಟಿನಲ್ಲಿ ಈ ಉದ್ದಿಮೆದಾರರಿಗೂ ಉತ್ಪಾದನೆ ನಿರ್ವಹಣೆಯಲ್ಲಿ ಸಮಸ್ಯೆಗಳು ಎದುರಾಗುತ್ತಿದ್ದು, ಅವುಗಳ ಸೂಕ್ತ ಪರಿಹಾರಕ್ಕೆ ಕ್ರಮ ಕೈಗೊಳ್ಳುವದು ಅವಶ್ಯಕವಾಗಿದೆ.

೬.೧೬ : ಉದ್ದಿಮೆಯ ಸರಕುಗಳು :

ಚಿಕ್ಕ ಮತ್ತು ಅತೀ ಚಿಕ್ಕ ಉದ್ದಿಮೆದಾರರು ಯಾವ ತರಹದ ಸರಕುಗಳ ಉತ್ಪಾದನೆಯಲ್ಲಿ ತೊಡಗಿರುವರೆಂಬ ಮಾಹಿತಿ ಸಂಗ್ರಹಿಸಲಾಗಿದೆ. ಏಕೆಂದರೆ, ದೊಡ್ಡ ಪ್ರಮಾಣದ ಉದ್ದಿಮೆಗಳಿಗೆ ಅವಶ್ಯವಿರುವ ಬಿಡಿಭಾಗಗಳು, ಮೂಲ ವಸ್ತುಗಳನ್ನು ಚಿಕ್ಕ ಉದ್ದಿಮೆ ರಂಗವು ಉತ್ಪಾದಿಸಿ ಪೂರೈಸುತ್ತದೆ. ಇನ್ನು ಕೆಲವು ಸರಕುಗಳು ನೇರವಾಗಿ ಗ್ರಾಹಕರ ಉಪಭೋಗಕ್ಕೆ ಬಿಡುಗಡೆಗೊಳ್ಳುತ್ತವೆ.

ಇದರ ಕುರಿತಾಗಿ ವಿಚಾರಿಸಿದಾಗ ಸರಾಸರಿ ಶೇ ೯೦ ರಷ್ಟು ಪ್ರತಿಸ್ಪಂದಿಗಳು ಗ್ರಾಹಕರ ಸರಕುಗಳ ಉತ್ಪಾದನೆಯಲ್ಲಿ ತೊಡಗಿದ್ದಾಗಿಯೂ ಉಳಿದ ಶೇ. ೧೦ ರಷ್ಟು ಉದ್ದಿಮೆದಾರರ ಸರಕುಗಳ ಉತ್ಪಾದನೆಯಲ್ಲಿ ತೊಡಗಿದ್ದಾಗಿಯೂ ಹೇಳಿಕೊಂಡಿದ್ದಾರೆ.

ಅದರಂತೆಯೇ ಈ ಉದ್ದಿಮೆದಾರರ ಉದ್ದಿಮೆಗಳು ಹೆಚ್ಚಾಗಿ ಬಂಡವಾಳ ಪ್ರಮುಖವಾಗಿವೆಯೋ (?) ಅಥವಾ ಕಾರ್ಮಿಕ ಮುಖಿಯಾಗಿವೆಯೋ(?) ಎಂದು ಕೇಳಲಾಗಿತ್ತು. ಅಂದರೆ, ಅವರ ಉದ್ದಿಮೆಯ ಉತ್ಪಾದನೆಗೆ ಮುಖ್ಯವಾಗಿ ಹೆಚ್ಚು - ಹೆಚ್ಚು ಬಂಡವಾಳದ ಅಥವಾ ಕಾರ್ಮಿಕ ಶಕ್ತಿಯ ಅವಶ್ಯವೆ(?) ಎಂದು ಪ್ರಶ್ನಿಸಲಾಗಿತ್ತು. ಅದಕ್ಕೆ ಜಿಲ್ಲೆಯ ಸರಾಸರಿ ಶೇ. ೫೬ ರಷ್ಟು ಪ್ರತಿಸ್ಪಂದಿಗಳು ಉದ್ದಿಮೆಗಳಿಗೆ ಕಾರ್ಮಿಕ ಶಕ್ತಿಯ ಅಗತ್ಯದ ಬಗ್ಗೆ ಮತ್ತು ಶೇ. ೪೪ ರಷ್ಟು ಪ್ರತಿಸ್ಪಂದಿಗಳು ಬಂಡವಾಳದ ಸಂಪನ್ಮೂಲದ ಹೆಚ್ಚಳದ ಬಗ್ಗೆ ಒಲವು ತೋರಿದ್ದಾರೆ.

ಕೋಷ್ಟಕ : ೬.೧೪ ಸಂಪನ್ಮೂಲಗಳ ಲಭ್ಯತೆಯಲ್ಲಿ ಎದುರಾದ ಸಮಸ್ಯೆಗಳು

ಅ.ಸಂ.	ವಿವರಗಳು	ಅಥಣಿ	ಬೈಲಹೊಂಗಲ	ಬೆಳಗಾವಿ	ಚಿಕ್ಕೋಡಿ	ಗೋಕಾಕ	ಹುಕ್ಕೇರಿ	ಖಾನಾಪೂರ	ರಾಯಬಾಗ	ರಾಮದುರ್ಗ	ಸವದತ್ತಿ
೧	ಕಚ್ಚಾ ಸಾಮಗ್ರಿ ಕೊರತೆ	-	-	೧೫ (೨೬)	-	೦೩ (೧೭)	೦೯ (೧೪)	-	೦೬ (೨೩)	೦೬ (೨೫)	೦೯ (೪೩)
೨	ಕಚ್ಚಾ ಸಾಮಗ್ರಿ ಬೇರೆ ಸ್ಥಳಗಳಿಂದ	-	-	೧೨ (೨೨)	-	೧೨ (೬೬)	೦೯ (೪೩)	-	೦೩ (೧೧)	೧೫ (೬೩)	೦೯ (೪೩)
೩	ಕಚ್ಚಾ ಸಾಮಗ್ರಿ ಅತಿ ವೆಚ್ಚದಾಯಕ	-	-	೦೩ (೦೫)	-	೦೩ (೧೭)	೦೬ (೨೯)	-	೦೩ (೧೧)	-	೦೩ (೧೪)
೪	ಕಚ್ಚಾ ಸಮಗ್ರಿ ಗುಣಮಟ್ಟ ಸಮಸ್ಯೆ	-	-	೦೩ (೦೫)	-	-	೦೩ (೧೪)	-	-	-	-
೫	ಕಾರ್ಮಿಕರ ಕೊರತೆ	-	-	೧೨ (೨೨)	೦೬ (೩೩)	-	-	-	೦೬ (೨೨)	-	-
೬	ಆರ್ಥಿಕ ಇತರೆ ವೆಚ್ಚಗಳು	-	-	೦೩ (೦೫)	-	-	-	-	-	-	-
೭	ವಿದ್ಯುತ್ ಸಮಸ್ಯೆ	-	-	೦೬ (೧೦)	೦೩ (೧೭)	-	-	-	೦೬ (೨೨)	೦೩ (೧೨)	-
೮	ಸರಕು ಸಂಗ್ರಹ ಸಮಸ್ಯೆ	-	-	೦೩ (೦೫)	೦೩ (೧೭)	-	-	-	೦೩ (೧೧)	-	-
೯	ಯಂತ್ರೋಪಕರಣ ಸಮಸ್ಯೆ	-	-	-	೦೩ (೧೭)	-	-	-	-	-	
೧೦	ಯಂತ್ರೋಪಕರಣ ದುರಸ್ತಿ-ಕಾಪಾಡುವ ಸಮಸ್ಯೆ	-	-	-	೦೩ (೧೭)	-	-	-	-	-	

(*ಆವರಣದಲ್ಲಿರುವ ಸಂಖ್ಯೆಗಳು ಪ್ರತಿಶತ ಪ್ರಮಾಣವನ್ನು ಸೂಚಿಸುತ್ತವೆ)

೬.೧೩ ಮಾನವ ಸಂಪನ್ಮೂಲ ನಿರ್ವಹಣೆ :

ಉತ್ಪಾದನೆಗೆ ಅವಶ್ಯವಿರುವ ಎಲ್ಲ ಅಂಶಗಳು ಒಂದೆಡೆಯಾದರೆ ಮತ್ತೊಂದೆಡೆ ಮಾನವ ಸಂಪನ್ಮೂಲದ ಅಂಶವು ಅಷ್ಟೇ ಮುಖ್ಯವಾಗುತ್ತದೆ. ಏಕೆಂದರೆ ಉತ್ಪಾದನೆಯ ಇತರೆಲ್ಲ ಅಂಶಗಳು ಸಂಪನ್ಮೂಲಗಳು ಎಷ್ಟೇ ಹೇರಳವಾಗಿ ಲಭ್ಯವಿದ್ದರೂ ಸಹ ಅವುಗಳನ್ನು ಸದುಪಯೋಗ ಪಡಿಸಿಕೊಂಡು, ಸರಕುಗಳ ರೂಪ ಕೊಡುವ ತಂತ್ರಜ್ಞಾನ, ಕೌಶಲಗಳೆಲ್ಲ ಮಾನವ ಸಂಪನ್ಮೂಲದಲ್ಲಿರುತ್ತವೆ. ಅವುಗಳಿಗೆ ಉಪಭೋಗದ ತುಷ್ಟಿಗುಣ ತುಂಬುವದು ಮಾನವ ಸಂಪನ್ಮೂಲವಾಗಿದೆ.

ಚಿಕ್ಕ ಉದ್ದಿಮೆಗಳಲ್ಲಿಯ ಹತ್ತಾರು ಪ್ರಯೋಜನಗಳಲ್ಲಿ ಹೆಚ್ಚು ಉದ್ಯೋಗ ಸೃಷ್ಟಿಯು ಮಹತ್ವದ್ದೆಂದು ನಂಬಲಾಗಿದೆ. ಪ್ರತಿಸ್ಪಂದಿಗಳು ನೇಮಿಸಿದ ಕಾರ್ಮಿಕರು, ನೇಮಕದ ಸ್ವರೂಪ, ಅವರ ವಿಧ, ಸಮಸ್ಯೆಗಳು ಇತ್ಯಾದಿ ಕುರಿತಾಗಿ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ಚಿಕ್ಕ ಉದ್ದಿಮೆ ಘಟಕಗಳು ಒಟ್ಟಾರೆಯಾಗಿ ಹೆಚ್ಚಿನ ಉದ್ಯೋಗ ಸೃಷ್ಟಿಸುತ್ತವೆ. ಅದು ನಿಜವೂ ಕೂಡ. ಆದರೆ ಪ್ರತಿಯೊಂದು ಘಟಕಗಳ ತಲಾ ಉದ್ಯೋಗಿಗಳ ಸಂಖ್ಯೆ ಕಡಿಮೆಯಾಗಿರುತ್ತದೆ. ತಾಲೂಕುವಾರು ಘಟಕಗಳು ನೇಮಿಸಿದ ಸಿಬ್ಬಂದಿಯ ವಿವರವನ್ನು **ಕೋಷ್ಟಕ ೬.೧೫** ರಲ್ಲಿ ನೀಡಿದೆ.

ಕೋಷ್ಟಕದಲ್ಲಿಯ ಅಭಿಪ್ರಾಯಗಳನ್ನು ಅಭ್ಯಸಿಸಿದಾಗ ಬೆಳಗಾವಿ ಮತ್ತು ರಾಯಬಾಗ ತಾಲೂಕುಗಳಲ್ಲಿ ಮಾತ್ರ ಘಟಕಗಳು ಹತ್ತಕ್ಕಿಂತ ಹೆಚ್ಚಿನ ಸಂಖ್ಯೆಯ ಸಿಬ್ಬಂದಿಯನ್ನು ನೇಮಿಸಿದ್ದು ಕಂಡು ಬರುತ್ತದೆ. ಇವೆರಡು ತಾಲೂಕಿನಲ್ಲಿ ಕ್ರಮವಾಗಿ ಶೇ. ೫೪ ಮತ್ತು ಶೇ. ೫೦ ರಷ್ಟು ಪ್ರತಿಸ್ಪಂದಿಗಳು ಹೆಚ್ಚಿನ ಸಿಬ್ಬಂದಿ ಹೊಂದಿರುತ್ತಾರೆ. ಅದರಂತೆ ಅಲ್ಪ ಪ್ರಮಾಣದಲ್ಲಿ ಹತ್ತಕ್ಕಿಂತ ಹೆಚ್ಚಿನ ಸಂಖ್ಯೆಯ ಜನರಿಗೆ ಉದ್ಯೋಗ ನೀಡಿದ ತಾಲೂಕುಗಳಲ್ಲಿ ಅಥಣಿ, ಚಿಕ್ಕೋಡಿ, ಗೋಕಾಕ, ಹುಕ್ಕೇರಿ, ಖಾನಾಪೂರ ಮತ್ತು ರಾಮದುರ್ಗಗಳು ಸೇರುತ್ತವೆ.

ಗರಿಷ್ಠ ೫ ಜನರಿಗೆ ಉದ್ಯೋಗ ನೀಡಿದ್ದು ಎಲ್ಲ ತಾಲೂಕುಗಳಲ್ಲಿ (ಬೆಳಗಾವಿಯನ್ನು ಹೊರತು ಪಡಿಸಿ) ಕಂಡು ಬರುತ್ತದೆ. ಇವುಗಳಲ್ಲಿ ಸರಾಸರಿ ಶೇ. ೭೦ ರಷ್ಟು ಪ್ರತಿಸ್ಪಂದಿಗಳು ಒಂದರಿಂದ ಐದು ಜನರಿಗೆ ಉದ್ಯೋಗ ನೀಡಿದ್ದು ಕಂಡು ಬರುತ್ತದೆ. ನಂತರ, ಐದರಿಂದ ಹತ್ತು ಜನರಿಗೆ ಉದ್ಯೋಗ ಕಲ್ಪಿಸಿದ್ದು ಶೇ. ೧೧ ರಷ್ಟು ಪ್ರತಿಸ್ಪಂದಿಗಳಿಂದ ಸ್ಪಷ್ಟವಾಗುತ್ತದೆ. ಇನ್ನುಳಿದ ಶೇ.೧೯ ರಷ್ಟು ಪ್ರತಿಸ್ಪಂದಿಗಳು ಹತ್ತಕ್ಕಿಂತ ಹೆಚ್ಚಿನ ಜನರಿಗೆ ಉದ್ಯೋಗ ನೀಡಿದ್ದಾರೆ.

೬.೧೪ : ಸಿಬ್ಬಂದಿಯ ವರ್ಗೀಕರಣ :

ಒಟ್ಟಾರೆ ನೇಮಿಸಿದ ಸಿಬ್ಬಂದಿಯ ಕ್ಷಮತೆಯ ಬಗ್ಗೆಯೂ ಅಭಿಪ್ರಾಯ ಸಂಗ್ರಹಿಸಲಾಗಿದೆ. ಏಕೆಂದರೆ ಉತ್ಪಾದನೆಯು ತಾಂತ್ರಿಕತೆಯಿಂದ ಕೂಡಿದ್ದರೆ ಹೆಚ್ಚಿನ ಸಂಖ್ಯೆಯ ನೈಪುಣ್ಯ-ಕೌಶಲ್ಯಭರಿತ ಸಿಬ್ಬಂದಿಯು ಬೇಕಾಗುತ್ತಾರೆ. ಕೆಲವೊಂದು ಸಾಂಪ್ರದಾಯಕ ಸರಕುಗಳಿದ್ದಾಗ ಅರೆ-ನಿಪುಣರು ಮತ್ತು ನಿಪುಣರಲ್ಲದವರನ್ನು ಹೆಚ್ಚಿಗೆ ನೇಮಿಸಿಕೊಂಡು ಉತ್ಪಾದನೆಯ ಕಾರ್ಯವನ್ನು ಸಾಗಿಸಬಹುದು. ಈ ಕುರಿತ ಅಭಿಪ್ರಾಯಗಳನ್ನು **ಕೋಷ್ಟಕ ೬.೧೬** ರಲ್ಲಿ ತೋರಿಸಲಾಗಿದೆ.

ಕೋಷ್ಟಕ : ೬.೧೫ ನಿಮ್ಮಲ್ಲಿ ನೇಮಿಸಿದ ಸಿಬ್ಬಂದಿ ಸಂಖ್ಯೆ ಎಷ್ಟು

ಅ.ಸಂ.	ವಿವರಗಳು	ಅಥಣಿ	ಬೈಲಹೊಂಗಲ	ಬೆಳಗಾವಿ	ಚಿಕ್ಕೋಡಿ	ಗೋಕಾಕ	ಹುಕ್ಕೇರಿ	ಖಾನಾಪೂರ	ರಾಯಬಾಗ	ರಾಮದುರ್ಗ	ಸವದತ್ತಿ
೧	೧ ರಿಂದ ೫	೨೪ (೮೦)	೩೦ (೮೩)	೧೫ (೨೧)	೨೭ (೮೨)	೨೭ (೮೨)	೩೦ (೭೭)	೨೪ (೭೩)	೧೨ (೪೦)	೨೧ (೫೮)	೩೬ (೧೦೦)
೨	೬ ರಿಂದ ೧೦	-	೦೬ (೧೭)	೧೮ (೨೫)	-	೦೩ (೦೯)	೦೬ (೧೫)	೦೩ (೦೯)	೦೩ (೧೦)	೦೯ (೨೫)	-
೩	೧೦ ಕ್ಕಿಂತ ಅಧಿಕ	೦೬ (೨೦)	-	೩೯ (೫೪)	೦೬ (೧೮)	೦೩ (೦೯)	೦೩ (೦೮)	೦೬ (೧೮)	೧೫ (೫೦)	೦೬ (೧೭)	-

(*ಆವರಣದಲ್ಲಿರುವ ಸಂಖ್ಯೆಗಳು ಪ್ರತಿಶತ ಪ್ರಮಾಣವನ್ನು ಸೂಚಿಸುತ್ತವೆ)

ಕೋಷ್ಟಕ : ೬.೧೬ ಇವರಲ್ಲಿ (ಸಿಬ್ಬಂದಿ ವರ್ಗೀಕರಣ)

ಅ.ಸಂ.	ವಿವರಗಳು	ಅಥಣಿ	ಬೈಲಹೊಂಗಲ	ಬೆಳಗಾವಿ	ಚಿಕ್ಕೋಡಿ	ಗೋಕಾಕ	ಹುಕ್ಕೇರಿ	ಖಾನಾಪೂರ	ರಾಯಬಾಗ	ರಾಮದುರ್ಗ	ಸವದತ್ತಿ
೧	ನಿಪುಣರು	೩೧ (೪೫)	೩೩ (೭೩೦	೬೬ (೩೭)	೩೩ (೫೨)	೩೩ (೫೦)	೩೬ (೪೮)	೩೩ (೭೯)	೩೦ (೫೬)	೨೭ (೫೪)	೩೩ (೮೫)
೨	ಅರೆನಿಪುಣರು	೨೧ (೩೨)	೧೨ (೨೭)	೬೩ (೩೬)	೨೪ (೩೮)	೨೧ (೩೨)	೨೭ (೩೬)	೦೯ (೨೧)	೧೫ (೨೮)	೧೨ (೨೩)	೦೬ (೧೫)
೩	ನಿಪುಣರಲ್ಲದವರು	೧೫ (೨೩)	-	೪೮ (೨೭)	೦೬ (೧೦)	೧೨ (೧೮೦	೧೨ (೧೬)	-	೦೯ (೧೬)	೧೨ (೨೩)	-

(*ಆವರಣದಲ್ಲಿರುವ ಸಂಖ್ಯೆಗಳು ಪ್ರತಿಶತ ಪ್ರಮಾಣವನ್ನು ಸೂಚಿಸುತ್ತವೆ)

ಒಟ್ಟು ಪ್ರತಿಸ್ಪಂದಿಗಳಲ್ಲಿ ಸರಾಸರಿ ಶೇ. ೫೮ ರಷ್ಟು ಪ್ರತಿಸ್ಪಂದಿಗಳು ನಿಪುಣ ಸಿಬ್ಬಂದಿಯನ್ನು ಹೊಂದಿದ್ದಾರೆ. ಅಂದರೆ ಹೆಚ್ಚಾಗಿ ಉತ್ಪಾದನೆಯ ಚಟುವಟಿಕೆಗಳು ತಾಂತ್ರಿಕತೆಯಿಂದ ಕೂಡಿರುವ ಸಾಧ್ಯತೆಗಳಿವೆ. ನಂತರ ಶೇ. ೨೯ ರಷ್ಟು ಪ್ರತಿಸ್ಪಂದಿಗಳು ಅರೆ - ನಿಪುಣರನ್ನು ಮತ್ತು ಇನ್ನುಳಿದ ಶೇ. ೧೩ರಷ್ಟರಲ್ಲಿ ನಿಪುಣರಲ್ಲದವರನ್ನು ನೇಮಿಸಿದ್ದು ತಿಳಿದು ಬರುತ್ತದೆ.

ಆದ್ದರಿಂದ ಹೆಚ್ಚಿನ ಸಂಖ್ಯೆಯ ಪ್ರತಿಸ್ಪಂದಿಗಳು ನಿಪುಣ ಸಿಬ್ಬಂದಿಯವರನ್ನು ನೇಮಿಸಿಕೊಳ್ಳಬೇಕಾಗುತ್ತದೆ. ಅವರು ಮೇಲಿಂದ - ಮೇಲೆ ಉದ್ಯೋಗ ಬದಲಿಸುವ, ವೇತನಕ್ಕಾಗಿ ಒತ್ತಾಯಿಸುವ, ಅನುಪಸ್ಥಿತರಾಗುವ ಮುಂತಾದ ಸಮಸ್ಯೆಗಳನ್ನು ತಂದೊಡ್ಡುವ ಸಾಧ್ಯತೆಯಿರುತ್ತದೆ.

ಹಾಗೆಯೇ ಒಟ್ಟು ನೇಮಿಸಿದ ಸಿಬ್ಬಂದಿಯವರಲ್ಲಿ ಖಾಯಂ ನೇಮಕಾತಿ ಹೊಂದಿದವರು ಮತ್ತು ತಾತ್ಕಾಲಿಕವಾಗಿ ನೇಮಕವಾದ ಬಗ್ಗೆ ಮಾಹಿತಿ ಪಡೆಯಲಾಗಿದೆ. ಇವರಲ್ಲಿ ಸರಾಸರಿ ಶೇ. ೬೫ ರಷ್ಟು ಪ್ರತಿಸ್ಪಂದಿಗಳಲ್ಲಿ ಖಾಯಂ ಆಧಾರದ ಮೇಲೆ ನೇಮಕವಾದವರಿದ್ದರೆ ಉಳಿದ ಶೇ. ೩೫ ರಲ್ಲಿ ತಾತ್ಕಾಲಿಕವಾಗಿ ನೇಮಕಗೊಂಡವರಿದ್ದಾರೆ.

೬.೧೯ : ಕಾರ್ಮಿಕ ವೆಚ್ಚ :

ಉತ್ಪಾದಿತ ಸರಕಿನ ಬೆಲೆ ನಿಗಧಿಯಲ್ಲಿ ಪ್ರಮುಖ ವೆಚ್ಚಗಳಲ್ಲಿ ಕಾರ್ಮಿಕರ - ಸಂಬಳ ಕೂಲಿಯ ಭಾಗವು ಒಂದಾಗಿದೆ. ಚಿಕ್ಕ ಉದ್ದಿಮೆಗಳು ಹೆಚ್ಚಾಗಿ ಕಾರ್ಮಿಕ ಮುಖಿಯಾಗಿದ್ದು, ಕಾರ್ಮಿಕ ವೆಚ್ಚವು ಹೆಚ್ಚಾಗಿರುತ್ತದೆ. ಈ ಪ್ರಮಾಣವು ಎಷ್ಟು ಹೆಚ್ಚಾಗಿರುವದೋ ಅಷ್ಟು ಬೆಲೆಯ ಸ್ಪರ್ಧಾತ್ಮಕತೆಯು ಕಡಿಮೆಯಾಗುತ್ತದೆ. ಪ್ರಸಕ್ತ ಪ್ರತಿಸ್ಪಂದಿಗಳ ಘಟಕಗಳಲ್ಲಿ ಕಾರ್ಮಿಕರ ವೆಚ್ಚದ ಭಾರವೆಷ್ಟು ಎಂಬುದನ್ನು **ಕೋಷ್ಟಕ ೬.೧೩** ರಲ್ಲಿ ಪ್ರಕಟಗೊಳಿಸಿದೆ.

ಇದನ್ನು ಅವಲೋಕಿಸಿದಾಗ ಒಟ್ಟು ಪ್ರತಿಸ್ಪಂದಿಗಳಲ್ಲಿ ಶೇ. ೫೮ರಷ್ಟು ಪ್ರತಿಸ್ಪಂದಿಗಳ ಘಟಕಗಳಲ್ಲಿ ಶೇ. ೧೦ರಿಂದ ಶೇ. ೧೯ರಷ್ಟು ಕಾರ್ಮಿಕರ ವೆಚ್ಚವಾಗಿರುತ್ತದೆ. ಅದರಂತೆಯೆ ಸರಾಸರಿ ಶೇ. ೨೨ರಷ್ಟು ಪ್ರತಿಸ್ಪಂದಿಗಳಲ್ಲಿ ಅದು ಶೇ.೨೦ ರಿಂದ ಶೇ. ೨೯ರಷ್ಟು ಇರುವುದೆಂದು ಮತ್ತು ಕೇವಲ ಶೇ.೧೦ರಷ್ಟು ಪ್ರತಿಸ್ಪಂದಿಗಳಲ್ಲಿ ಘಟಕಗಳಲ್ಲಿ ಹೆಚ್ಚೆಂದರೆ ಶೇ. ೨೦ಕ್ಕಿಂತ ಅಧಿಕ ಕಾರ್ಮಿಕರ ವೆಚ್ಚವಾಗಿದೆ.

ಒಟ್ಟಿನಲ್ಲಿ ಶೇ. ೯೦ರಷ್ಟು ಘಟಕಗಳಿಗೆ ಗರಿಷ್ಠವೆಂದರೆ ಶೇ. ೨೦ರವರೆಗೆ ಕಾರ್ಮಿಕರ ವೆಚ್ಚವಾಗಿರುತ್ತದೆ. ಇದು ಒಂದರ್ಥದಲ್ಲಿ ಚಿಕ್ಕ ಘಟಕಗಳಿಗೆ ಭಾರವೆನಿಸುತ್ತದೆ. ಇದರ ಪ್ರಭಾವ ಕಡಿಮೆಗೊಳಿಸಲು ಉತ್ಪಾದಕತೆಯನ್ನು ಹೆಚ್ಚಿಸಿ, ಮಾರಾಟದ ಪ್ರಮಾಣವನ್ನು ಹೆಚ್ಚಿಸಬೇಕು.

೬.೨೦ : ಕಾರ್ಮಿಕ ಸಂಬಂಧಿತ ಸಮಸ್ಯೆಗಳು :

ಯಾವುದೇ ರಂಗವಾದರೂ ಸರಿ, ಕೆಲವು ಸಮಸ್ಯೆಗಳು ಕಾರ್ಮಿಕ ಅಥವಾ ಮಾನವ ಸಂಪನ್ಮೂಲಕ್ಕೆ ಸಂಬಂಧಿಸಿದ್ದಾಗಿರುತ್ತವೆ. ಅವು ಪರಿಮಾಣ, ಗುಣಮಟ್ಟ, ಪರಿಣಿತಿ, ಅನುಭವ, ಕೌಶಲ ಮುಂತಾದವುಗಳಿಗೆ ಸಂಬಂಧಿಸಿರಬಹುದು. ಅದು ಆರ್ಥಿಕ ಪರಿಸ್ಥಿತಿಯನ್ನು ಅವಲಂಬಿಸಿರುತ್ತದೆ.

ಕೋಷ್ಟಕ : ೬.೧೭ ಒಟ್ಟು ಉತ್ಪಾದನಾ ವೆಚ್ಚದಲ್ಲಿ ಕಾರ್ಮಿಕರ ವೆಚ್ಚ

ಅ.ಸಂ.	ವಿವರಗಳು	ಅಥಣಿ	ಬೈಲಹೊಂಗಲ	ಬೆಳಗಾವಿ	ಚಿಕ್ಕೋಡಿ	ಗೋಕಾಕ	ಹುಕ್ಕೇರಿ	ಖಾನಾಪೂರ	ರಾಯಬಾಗ	ರಾಮದುರ್ಗ	ಸವದತ್ತಿ
೧	ರೂ. ೧೦-೧೯	೧೨ (೪೦)	೩೦ (೯೧)	೩೯ (೫೪)	೨೧ (೭೮)	೧೫ (೭೨)	೩೯ (೧೦೦)	೧೨ (೩೪)	೨೧ (೭೮)	೦೯ (೩೦)	೩೩ (೧೦೦)
೨	ರೂ ೨೦-೨೯	೧೮ (೬೦)	-	೧೮ (೨೫)	೦೩ (೧೧)	೦೩ (೧೪)	-	೧೨ (೩೩)	೦೬ (೨೨)	೧೫ (೫೦)	-
೩	ರೂ ೩೦ ಕ್ಕಿಂತ ಅಧಿಕ	-	೦೩ (೦೯)	೧೫ (೨೧)	೦೩ (೧೧)	೦೩ (೧೪)	-	೧೨ (೩೩)	-	೦೬ (೨೦)	-


(*ಆವರಣದಲ್ಲಿರುವ ಸಂಖ್ಯೆಗಳು ಪ್ರತಿಶತ ಪ್ರಮಾಣವನ್ನು ಸೂಚಿಸುತ್ತವೆ)

ಸಮೀಕ್ಷಿಸಿದ ಪ್ರತಿಸ್ಪಂದಿಗಳಲ್ಲಿ ಸರಾಸರಿ ಶೇ. ೮೪ ರಷ್ಟು ಘಟಕಗಳಲ್ಲಿ ಕಾರ್ಮಿಕ ಸಂಬಂಧಿತ ಸಮಸ್ಯೆಗಳಿಲ್ಲವೆಂದೂ ಮತ್ತು ಇನ್ನುಳಿದ ಶೇ. ೧೬ ರಷ್ಟು ಪ್ರತಿಸ್ಪಂದಿಗಳು ಸಮಸ್ಯೆಗಳಿವೆಯೆಂದೂ ಹೇಳುತ್ತಾರೆ.

ಸಮಸ್ಯೆಗಳು ಇಲ್ಲವೆಂದು ಬಹುಮತದ ಪ್ರತಿಸ್ಪಂದಿಗಳು ಹೇಳಿರುವದು ಸಮಾಧಾನಕರ ಸಂಗತಿ. ಕಾರ್ಮಿಕರ ಸಮಸ್ಯೆಗಳಿಲ್ಲದಿದ್ದಲ್ಲಿ ಘಟಕಗಳ ನಿರ್ವಹಣೆಯಲ್ಲಿ ಅರ್ಧಕ್ಕಿಂತಲೂ ಹೆಚ್ಚಿಗೆ ಯಶಸ್ಸು ದೊರೆತಂತೆಯೇ ಸರಿ.

ಸಮಸ್ಯೆಗಳನ್ನು ಎದುರಿಸುತ್ತಿರುವವರ ಪ್ರಮಾಣ ಕನಿಷ್ಠ (ಶೇ. ೧೬)ವಿದ್ದರೂ ಸಹ ಅವರ ಸಮಸ್ಯೆಗಳೆಡೆಗೆ ಗಮನಹರಿಸುವುದು ಅವಶ್ಯವೆನಿಸುತ್ತವೆ. ಕಾರ್ಮಿಕರ ಸಮಸ್ಯೆಗಳನ್ನು **ನಕ್ಷೆ ೬.೨** ರಲ್ಲಿ ಸಮಸ್ಯೆಗಳ ಪ್ರತಿಶತ ಪ್ರಮಾಣವನ್ನು ಮತ್ತು **ಕೋಷ್ಟಕ ೬.೧೮**ರಲ್ಲಿ ಅವರು ಎದುರಿಸಿದ ಸಮಸ್ಯೆಗಳನ್ನು ವಿವರಿಸಲಾಗಿದೆ.

ನಕ್ಷೆ : ೬.೨ ಕಾರ್ಮಿಕ ಸಂಬಂಧಿತ ಸಮಸ್ಯೆಗಳು



ಒಟ್ಟಾರೆ ಏಳು ಸಮಸ್ಯೆಗಳಲ್ಲಿ ನಿರಂತರವಾಗಿ ಸಂಬಳ ಕೂಲಿ ಹೆಚ್ಚಳಕ್ಕಾಗಿ ಬೇಡಿಕೆ ಮುಂದಿಡುವ ಸಮಸ್ಯೆಯು ಶೇ. ೨೮ ರಷ್ಟು ಪ್ರತಿಸ್ಪಂದಿಗಳಿಗೆ ತಲೆನೋವಾಗಿದೆ. ನಂತರ ಸಮನಾಗಿ ನಿಪುಣತೆಯ ಕೊರತೆ ಮತ್ತು ಕಾರ್ಮಿಕರ ಗೈರು ಹಾಜರಿ (ತಲಾ ಶೇ. ೨೨ರಷ್ಟು ಪ್ರತಿಸ್ಪಂದಿಗಳಿಗೆ), ಕಾರ್ಮಿಕರು ತೊರೆಯುವ- ಸೇರ್ಪಡೆಗೊಳ್ಳುವ ಹೆಚ್ಚಿನ ಪ್ರಮಾಣವು ಮತ್ತೊಂದು ಸಮಸ್ಯೆಯಾಗಿದೆ. ತರಬೇತಿಯು ಇಲ್ಲದಿರುವದು ಶೇ. ೭ರಷ್ಟು ಪ್ರತಿಸ್ಪಂದಿಗಳಿಗೆ, ಕಾರ್ಮಿಕರ ನಿರಂತರವಾದ ಒತ್ತಡ ಶೇ. ೨ ಮತ್ತು ಪ್ರತಿಕೂಲ ಕಾನೂನುಗಳ ಸಮಸ್ಯೆಗಳು ಶೇ. ೧ರಷ್ಟು ಪ್ರತಿಸ್ಪಂದಿಗಳನ್ನು ಕಾಡುತ್ತಿವೆ. ಒಟ್ಟಿನಲ್ಲಿ ಪ್ರತಿಸ್ಪಂದಿಗಳ ಘಟಕಗಳ ನಿರ್ವಹಣೆಯಲ್ಲಿ ಕಾರ್ಮಿಕರ ಸಮಸ್ಯೆಯೂ ಅಷ್ಟೊಂದು ಗಂಭೀರವಾಗಿಲ್ಲದಿರುವುದು ಸಮಾಧಾನದ ಸಂಗತಿ. ಆದರೂ ಕೆಲವರಿಗೆ ಕೂಲಿ - ವೇತನ ಹೆಚ್ಚು ನೀಡುವ ಒತ್ತಡ ದೊಡ್ಡ ಸಮಸ್ಯೆಯಾಗಿರುವದು ಅಷ್ಟೇ ಗಂಭಿರವಾಗಿದೆ.

೬.೨೧ : ಮಾರುಕಟ್ಟೆ ನಿರ್ವಹಣೆ :

ಯಶಸ್ವಿ ಮಾರುಕಟ್ಟೆ ನಿರ್ವಹಣೆಯಿಂದ ಘಟಕದಲ್ಲಿ ನಗದು ಪರಿಚಲನೆ ಸರಿಯಾಗಿರುತ್ತದೆ. ಸರಕು ಮಾರಾಟವು ಸರಕಿನಲ್ಲಿ ತೊಡಗಿದ ಬಂಡವಾಳವನ್ನು ಬಿಡುಗಡೆಗೊಳಿಸುತ್ತದೆ. ಇತರೆಲ್ಲ ಚಟುವಟಿಕೆಗಳು ಸರಾಗವಾಗುವಂತೆ ನೋಡಿಕೊಳ್ಳಲು ಸಹಾಯಕವೆನಿಸುತ್ತದೆ. ಆದ್ದರಿಂದ ಸಿದ್ಧ ಸರಕು ಎಷ್ಟು ತೀವ್ರಗತಿಯಲ್ಲಿ ಮಾರಾಟಗೊಳ್ಳುತ್ತಲಿರುವುದೋ ಅಷ್ಟು ಆಂತರಿಕ ಸಂಪನ್ಮೂಲದಿಂದ ವ್ಯವಹಾರ ನಿರ್ವಹಣೆ ಸಾಧ್ಯವಾಗುತ್ತದೆ; ಬಾಹ್ಯ ಬಂಡವಾಳ ಅಥವಾ ಸಾಲಗಳ ಮೇಲಿನ ಅವಲಂಬನ ಕಡಿಮೆಯಾಗುತ್ತದೆ. ಬಂಡವಾಳ ವೆಚ್ಚ ತಗ್ಗುತ್ತದೆ. ಗಳಿಕೆ ಹೆಚ್ಚುತ್ತದೆ. ಆದ್ದರಿಂದ ಸದಾ ಚಟುವಟಿಕೆಯುಕ್ತವಾಗಿರಲು ಮಾರಾಟ ನಿರ್ವಹಣೆಯು ಶಿಸ್ತು ಬದ್ಧವಾಗಿರಬೇಕು.

ಉಳಿದ ವಿಭಾಗಗಳ ಯಶಸ್ಸು ಎಷ್ಟು ಮಹತ್ವದ್ದಾಗಿದೆಯೋ ಅಷ್ಟೇ ಮಾರಾಟ ನಿರ್ವಹಣೆಯು ಮಹತ್ವದ್ದಾಗಿದೆ. ಆದ್ದರಿಂದ, ಈ ಕುರಿತು ಕೆಲವು ಅಭಿಪ್ರಾಯಗಳನ್ನು ಪ್ರತಿಸ್ಪಂದಿಗಳಿಂದ ಕೂಡಿಹಾಕಲಾಗಿದೆ.

೬. ೨೨ : ಸರಕುಗಳ ಪ್ರಕಾರಗಳು :

ಪ್ರಾರಂಭದಲ್ಲಿ ಹೆಚ್ಚಾಗಿ ಎಲ್ಲ ಘಟಕಗಳು ಒಂದೇ ಸರಕಿನ ಉತ್ಪಾದನೆಗೊಳಿಸಿ, ಮಾರಾಟದಲ್ಲಿ ತೊಡಗಿರುತ್ತವೆ. ವ್ಯವಸ್ಥಿತವಾಗಿ ಮಾರುಕಟ್ಟೆಯಲ್ಲಿ ಸ್ಥಾಪನೆಗೊಂಡು, ಸುನಾಮೆಯನ್ನು ಗಳಿಸಿದ ನಂತರ ಉಪ ಸರಕುಗಳನ್ನು ಅಥವಾ ಸಂಬಂಧಿತ ಹೊಸ ಸರಕುಗಳನ್ನು ಜಂಟಿ - ಉತ್ಪಾದನೆಯಾಗಿ ಉತ್ಪಾದಿಸಿ ಮಾರಾಟ ಮಾಡುವ ಸಾಹಸಕ್ಕೆ ಮುಂದಾಗುತ್ತಾರೆ.

ಪ್ರಸ್ತುತ ಪ್ರತಿಸ್ಪಂದಿಗಳು ಎಷ್ಟು ತರಹದ ಸರಕುಗಳ ಉತ್ಪಾದನೆಯಲ್ಲಿ ತೊಡಗಿದ್ದಾರೆಂಬುದನ್ನು **ಕೋಷ್ಟಕ ೬.೧೯** ರಲ್ಲಿ ತೋರಿಸಲಾಗಿದೆ.

ಈ ಕೋಷ್ಟಕವು ಹೆಚ್ಚಿನ ಸಂಖ್ಯೆಯ ಪ್ರತಿಸ್ಪಂದಿಗಳು ಅಂದರೆ, ಸರಾಸರಿ ಶೇ. ೫೭ ರಷ್ಟು ಉದ್ದಿಮೆದಾರರು ಎರಡಕ್ಕಿಂತ ಹೆಚ್ಚಿನ ಸರಕುಗಳ ಉತ್ಪಾದನೆಯಲ್ಲಿ ತೊಡಗಿದ್ದಾರೆಂದು ತಿಳಿಸುತ್ತದೆ. ಆದ್ದರಿಂದ ಬಹುಮಟ್ಟಿಗೆ ಉದ್ದಿಮೆದಾರರೆಲ್ಲ ಬಹಳಷ್ಟು ವರ್ಷಗಳಿಂದ ಉತ್ಪಾದನೆಯಲ್ಲಿ ತೊಡಗಿಕೊಂಡು, ಮಾರುಕಟ್ಟೆಯಲ್ಲಿ ಯಶಸ್ವಿಯಾಗಿ ತಮ್ಮ ಭಾಗವನ್ನು ಹೊಂದಿದವರು ಇರಬಹುದೆಂದು ಭಾವಿಸಬಹುದು.

ಅದರಂತೆಯೇ ಶೇ. ೨೬ರಷ್ಟು ಪ್ರತಿಸ್ಪಂದಿಗಳು ಕೇವಲ ಒಂದೇ ಸರಕು ಉತ್ಪಾದನೆ ಮತ್ತು ಮಾರಾಟದ ಮೇಲೆ ಕೇಂದ್ರೀಕೃತರಾಗಿದ್ದಾರೆ. ಇನ್ನುಳಿದ ಕೇವಲ ಶೇ. ೧೭ರಷ್ಟು ಪ್ರತಿಸ್ಪಂದಿಗಳು ಎರಡು ಸರಕುಗಳ ಉತ್ಪಾದನೆಯಲ್ಲಿ ತೊಡಗಿಕೊಂಡಿದ್ದು ಕಂಡು ಬರುತ್ತದೆ. ಎರಡು ಸರಕುಗಳ ಉತ್ಪಾದನೆಯಲ್ಲಿ ತೊಡಗಿದ ಘಟಕಗಳಲ್ಲಿ ಕೆಲವು ತಾಲೂಕುಗಳಲ್ಲಿ (ಗೋಕಾಕ, ಬೆಳಗಾವಿ, ಹುಕ್ಕೇರಿ, ಮತ್ತು ಸವದತ್ತಿ ತಾಲೂಕು) ಶೇ. ೧೦ ಕ್ಕಿಂತ ಕಡಿಮೆ ಉದ್ದಿಮೆದಾರರು ಕಂಡು ಬರುತ್ತಾರೆ.

ಕೋಷ್ಟಕ : ೬.೧೯ ಸರಕುಗಳ ಪ್ರಕಾರಗಳು

ಅ.ಸಂ.	ವಿವರಗಳು	ಅಥಣಿ	ಬೈಲಹೊಂಗಲ	ಬೆಳಗಾವಿ	ಚಿಕ್ಕೋಡಿ	ಗೋಕಾಕ	ಹುಕ್ಕೇರಿ	ಖಾನಾಪೂರ	ರಾಯಬಾಗ	ರಾಮದುರ್ಗ	ಸವದತ್ತಿ
೧	ಒಂದೇ ಸರಕು ಉತ್ಪಾದನೆ	೦೯ (೩೦)	೦೬ (೧೭)	೨೪ (೩೩)	೦೯ (೩೦)	೧೮ (೫೫)	೧೨ (೩೧)	೦೩ (೦೮)	೦೯ (೨೭)	೦೬ (೧೭)	೦೬ (೧೬)
೨	ಎರಡು ಸರಕುಗಳ ಉತ್ಪಾದನೆ	೦೩ (೧೦)	೦೬ (೧೭)	೦೩ (೦೪)	೦೩ (೧೦)	-	೦೩ (೦೭)	೨೪ (೬೭)	೦೯ (೨೭)	೦೬ (೧೭)	೦೩ (೦೮)
೩	ಎರಡಕ್ಕಿಂತ ಹೆಚ್ಚು ಉತ್ಪಾದನೆ	೧೮ (೬೦)	೨೪ (೬೬)	೪೫ (೬೩)	೧೮ (೬೦)	೧೫ (೪೫)	೨೪ (೬೨)	೦೯ (೨೫)	೧೫ (೪೬)	೨೪ (೬೬)	೨೭ (೭೬)

(*ಆವರಣದಲ್ಲಿರುವ ಸಂಖ್ಯೆಗಳು ಪ್ರತಿಶತ ಪ್ರಮಾಣವನ್ನು ಸೂಚಿಸುತ್ತವೆ)

೬.೨೩ : ಮಾರುಕಟ್ಟೆಯ ವ್ಯಾಪ್ತಿ :

ಚಿಕ್ಕ ಮತ್ತು ಅತೀ ಚಿಕ್ಕ ಉದ್ದಿಮೆಗಳು ಹೆಚ್ಚಾಗಿ ಉಪಭೋಗಕರ ಸರಕುಗಳನ್ನು ಉತ್ಪಾದಿಸುತ್ತವೆ. ಅವುಗಳ ಮಾರುಕಟ್ಟೆಯ ವ್ಯಾಪ್ತಿಯು ಹೆಚ್ಚಾಗಿ ಸ್ಥಳೀಯ, ತಾಲೂಕು ಮತ್ತು ಜಿಲ್ಲಾ ಮಟ್ಟಕ್ಕೆ ವಿಸ್ತರಿಸಬಹುದಾಗಿದೆ. ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಾರುಕಟ್ಟೆ ಪ್ರವೇಶ ವಿರಳವಾಗಿ ರಬಹುದು. ಆದರೂ ಸಹ ಈ ರಂಗದಿಂದ ವಿದೇಶಿ ವಿನಿಮಯ ಗಳಿಕೆಯು ಸಂಗ್ರಹವಾಗುತ್ತಿರುವದನ್ನು ಅಲ್ಲಗಳೆಯುವಂತಿಲ್ಲ. ಪ್ರಸ್ತುತ ಪ್ರತಿಸ್ಪಂದಿಗಳ ಮಾರುಕಟ್ಟೆಯ ವ್ಯಾಪ್ತಿಯನ್ನು **ಕೋಷ್ಟಕ ೬.೨೦** ರಲ್ಲಿ ಪ್ರಕಟಗೊಳಿಸಲಾಗಿದೆ.

ಈ ಅಭಿಪ್ರಾಯಗಳಿಂದ ಸ್ಪಷ್ಟಗೊಳ್ಳುವದೇನೆಂದರೆ ಅತೀ ಹೆಚ್ಚು (ಸರಾಸರಿ ಶೇ. ೪೧) ಪ್ರತಿಸ್ಪಂದಿಗಳು ತಮ್ಮ ಉತ್ಪನ್ನಗಳನ್ನು ಜಿಲ್ಲಾ ಮಟ್ಟಕ್ಕೆ ಸೀಮಿತಗೊಳಿಸಿದ್ದಾರೆ. ಇನ್ನು ಶೇ. ೩೬ ರಷ್ಟು ಪ್ರತಿಸ್ಪಂದಿಗಳು ತಮ್ಮ ಸ್ಥಳೀಯ ಮಾರುಕಟ್ಟೆಗೆ ಮಾತ್ರ ಸೀಮಿತಗೊಂಡಿದ್ದಾರೆ. ಆದರೆ ರಾಷ್ಟ್ರಮಟ್ಟದ ಮಾರಾಟವನ್ನು ಶೇ. ೧೩ ರಷ್ಟು ಪ್ರತಿಸ್ಪಂದಿಗಳು ಹೊಂದಿದ್ದರೆ ಶೇ. ೯ ರಷ್ಟು ಪ್ರತಿಸ್ಪಂದಿಗಳು ರಾಜ್ಯ-ಮಟ್ಟದವರೆಗೆ ವಿಸ್ತಾರ ಹೊಂದಿದ್ದಾರೆ. ವಿಶೇಷವೆಂದರೆ ಶೇ. ೧ರಷ್ಟು ಪ್ರತಿಸ್ಪಂದಿಗಳು ಅಂತಾರಾಷ್ಟ್ರೀಯ ಮಾರುಕಟ್ಟೆ ಪ್ರವೇಶಿಸಿದ್ದು, ವಿದೇಶಿ ವಿನಿಮಯ ಗಳಿಸುವಲ್ಲಿ ಯಶಸ್ವಿಯಾಗಿದ್ದಾರೆ.

೬.೨೪ : ಸರಕು ಮಾರಾಟದ ಪದ್ಧತಿ :

ಈಗಾಗಲೇ ಚರ್ಚಿಸಿದಂತೆ ಚಿಕ್ಕ ಉದ್ದಿಮೆಯ ಸರಕುಗಳು ಉಪಭೋಗಕರ ಮತ್ತು ಉದ್ದಿಮೆಯ ಸರಕುಗಳಾಗಿರಬಹುದು. ಬಹಳಷ್ಟು ಉಪಭೋಗಕರ ಸರಕುಗಳನ್ನು ನೇರವಾಗಿ ಗ್ರಾಹಕರಿಗೆ ಮಾರಾಟಗೊಳಿಸುತ್ತಾರೆ. ಕೆಲವು ಸಾರಿ ಸರಕುಗಳನ್ನು ಮಧ್ಯವರ್ತಿ, ಠೋಕ ಮತ್ತು ಕಿರುಕುಳ ಮಾರಾಟಗಾರರ ಮೂಲಕ ಗ್ರಾಹಕರಿಗೆ ತಲುಪಿಸಲಾಗುತ್ತದೆ. ಪ್ರಸಕ್ತ ಪ್ರತಿಸ್ಪಂದಿಗಳ ಅಭಿಪ್ರಾಯಗಳನ್ನು **ಕೋಷ್ಟಕ ೬.೨೧**ರಲ್ಲಿ ನೀಡಲಾಗಿದೆ.

ಕೋಷ್ಟಕ ೬.೨೧ : ಸರಕು ಮಾರಾಟ ರೀತಿ :

ಇದರಲ್ಲಿ ಸರಾಸರಿ ಶೇ. ೬೭ ರಷ್ಟು ಪ್ರತಿಸ್ಪಂದಿಗಳು ನೇರವಾಗಿ ತಾವೇ ಗ್ರಾಹಕರಿಗೆ ಮಾರಾಟ ಮಾಡಿದ್ದಾರೆಂಬುದು ಸ್ಪಷ್ಟಗೊಳ್ಳುತ್ತದೆ. ಇದರಿಂದ ಮಾರಾಟದ ವೆಚ್ಚವನ್ನು ಸಾಕಷ್ಟು ನಿಯಂತ್ರಣದಲ್ಲಿಡಬಹುದಾಗಿದೆ. ಬಹುಶ: ಇದು ಮಾರಾಟದಿಂದ ಗ್ರಾಹಕರ ಗರಿಷ್ಠೀಕರಣ ಸಾಧ್ಯವಾಗದು. ಆದ್ದರಿಂದ ಶೇ. ೨೩ ರಷ್ಟು ಪ್ರತಿಸ್ಪಂದಿಗಳು ಸಗಟುದಾರರನ್ನು, ಕಿರುಕುಳದಾರರ ಮೂಲಕ ಗ್ರಾಹಕರನ್ನು ತಲುಪುವ ರೀತಿಯನ್ನು ಅಳವಡಿಸಿದ್ದಾರೆ. ಆದರೆ ಕೇವಲ ಶೇ. ೧೦ ರಷ್ಟು ಪ್ರತಿಸ್ಪಂದಿಗಳು ಮಧ್ಯವರ್ತಿಗಳನ್ನೇ ಅವಲಂಬಿಸಿ ಮಾರಾಟಗೊಳಿಸುತ್ತಿದ್ದಾರೆ.

ಕೋಷ್ಟಕ : ೬.೨೦ ಮಾರಾಟ ಕ್ಷೇತ್ರ

ಅ.ಸಂ.	ವಿವರಗಳು	ಅಥಣಿ	ಬೈಲಹೊಂಗಲ	ಬೆಳಗಾವಿ	ಚಿಕ್ಕೋಡಿ	ಗೋಕಾಕ	ಹುಕ್ಕೇರಿ	ಖಾನಾಪೂರ	ರಾಯಬಾಗ	ರಾಮದುರ್ಗ	ಸವದತ್ತಿ
೧	ಸ್ಥಳೀಯ ಮಾರುಕಟ್ಟೆಗೆ ಸೀಮಿತ	೦೩ (೦೯)	೧೫ (೪೨)	೦೯ (೧೧)	೧೨ (೩೬)	೦೯ (೨೭)	೧೮ (೪೬)	೧೫ (೪೨)	೧೫ (೫೦)	೧೫ (೪೨)	೨೧ (೫೮)
೨	ತಾಲೂಕು +ಜಿಲ್ಲೆಗೆ ಸೀಮಿತ	೧೫ (೪೫)	೨೧ (೫೮)	೧೫ (೧೮)	೧೮ (೫೫)	೧೨ (೫೫)	೨೧ (೫೪)	೧೮ (೫೦)	೦೩ (೧೦)	೦೯ (೨೪)	೧೫ (೪೨)
೩	ರಾಜ್ಯಕ್ಕೆ ಸೀಮಿತ	೦೯ (೨೮)	-	೨೭ (೩೨)	-	೦೩ (೦೯)	-	-	-	೦೬ (೧೭)	-
೪	ಅಂತರ್‌ರಾಜ್ಯ+ರಾಷ್ಟ್ರಕ್ಕೆ ಸೀಮಿತ	೦೩ (೦೯)	-	೩೦ (೩೬)	೦೩ (೦೯)	೦೩ (೦೯)	-	೦೩ (೦೮)	೧೨ (೪೦)	೦೬ (೧೭)	-
೫	ಹೊರ ದೇಶಕ್ಕೆ	೦೩ (೦೯)	-	೦೩ (೦೩)	-	-	-	-	-	-	-

(*ಆವರಣದಲ್ಲಿರುವ ಸಂಖ್ಯೆಗಳು ಪ್ರತಿಶತ ಪ್ರಮಾಣವನ್ನು ಸೂಚಿಸುತ್ತವೆ)

೬.೨೧ ಸರಕು ಮಾರಾಟದ ಬಗೆ

ಅ.ಸಂ.	ವಿವರಗಳು	ಅಥಣಿ	ಬೈಲಹೊಂಗಲ	ಬೆಳಗಾವಿ	ಚಿಕ್ಕೋಡಿ	ಗೋಕಾಕ	ಹುಕ್ಕೇರಿ	ಖಾನಾಪೂರ	ರಾಯಬಾಗ	ರಾಮದುರ್ಗ	ಸವದತ್ತಿ
೧	ಸ್ವತಂತ್ರವಾಗಿದೆ	೧೮ (೬೦)	೩೬ (೯೨)	೪೮ (೬೬)	೩೩ (೧೦೦)	೨೭ (೨೫)	೩೬ (೯೨)	೩೦ (೮೩)	೨೪ (೮೦)	೩೩ (೯೨)	೩೬ (೧೦೦)
೨	ದೊಡ್ಡ ಉದ್ದಿಮೆದಾರರಿಗೆ ನೇರ ಮಾರಾಟ	-	-	೧೨ (೧೭)	-	-	-	-	-	೦೩ (೦೮)	-
೩	ಎರಡೂ ತರಹದ ಮಾರಾಟ	೧೨ (೪೦)	೦೩ (೦೮)	೧೨ (೧೭)	-	೦೯ (೨೫)	೦೩ (೦೮)	೦೬ (೧೭)	೦೬ (೨೦)	-	-

(*ಆವರಣದಲ್ಲಿರುವ ಸಂಖ್ಯೆಗಳು ಪ್ರತಿಶತ ಪ್ರಮಾಣವನ್ನು ಸೂಚಿಸುತ್ತವೆ)

೬.೨೫ : ಮಾರಾಟದ ಸ್ವರೂಪ :

ಉದ್ದಿಮೆದಾರರು ತಮ್ಮ ಸರಕುಗಳ ಮಾರಾಟವನ್ನು ವಿವಿಧ ಬಗೆಗಳಲ್ಲಿ ಕೈಕೊಳ್ಳಬಹುದಾಗಿದೆ. ಅವರು ಉತ್ಪಾದನೆಯ ಚಟುವಟಿಕೆಗಳಂತೆಯೇ, ಮಾರಾಟದ ಚಟುವಟಿಕೆಗಳನ್ನು ತಮ್ಮದೆಯಾದ ವ್ಯವಸ್ಥಿತ ಜಾಲದಿಂದ ಸ್ವತಂತ್ರವಾಗಿ ಮಾರಾಟಗೊಳಿಸಬಹುದು. ಇಲ್ಲವೇ ಮಾರಾಟದ ತೊಂದರೆಗಳನ್ನು ದೂರವಿಡಲು ಮತ್ತು ನೇರವಾಗಿ ಉಪಭೋಗಕರನ್ನು ತಲುಪದೆ, ದೊಡ್ಡ ಉದ್ದಿಮೆದಾರರಿಗೆ ಒಟ್ಟಾರೆಯಾಗಿ ನೇರ ಮಾರಾಟಗೊಳಿಸುವದು. ಅವರಿಗೆ ಕಿರುಕುಳ ಮಾರಾಟದ ವಿಚಾರವನ್ನೇ ಮಾಡುವ ಅವಶ್ಯಕತೆ ಇರುವದಿಲ್ಲ. ಇನ್ನು ಕೆಲವರು ಇವೆರಡೂ ಮಾರಾಟದ ವ್ಯವಸ್ಥೆಯನ್ನು ಹೊಂದಿ, ಗರಿಷ್ಠ ಮಾರಾಟದ ಗುರಿ ಹೊಂದಿರಬಹುದು. ಇಲ್ಲಿಯ ಪ್ರತಿಸ್ಪಂದಿಗಳ ಅಭಿಪ್ರಾಯಗಳನ್ನು **ಕೋಷ್ಟಕ ೬.೨೨** ರಲ್ಲಿ ತೋರಿಸಿದೆ.

ಇದನ್ನು ಕೂಲಂಕಷವಾಗಿ ಗಮನಿಸಿದರೆ ಗರಿಷ್ಠ ಸರಾಸರಿ ಶೇ. ೮೪ ರಷ್ಟು ಪ್ರತಿಸ್ಪಂದಿಗಳು ತಮ್ಮದೆಯಾದ ಸ್ವತಂತ್ರವಾಗಿ ಮಾರಾಟದ ವ್ಯವಸ್ಥೆಯನ್ನು ಹೊಂದಿ ನೇರ ಗ್ರಾಹಕರನ್ನು ತಲುಪುತ್ತಿವೆ. ಆದರೆ ಮಾರಾಟವನ್ನು ಸ್ವತಂತ್ರವಾಗಿ ಮತ್ತು ದೊಡ್ಡ ಉದ್ದಿಮೆದಾರರಿಗೆ ನೇರ ಮಾರಾಟದಂತಹ ಎರಡೂ ತರಹದ ಪದ್ಧತಿಯನ್ನು ಶೇ. ೧೩ರಷ್ಟು ಪ್ರತಿಸ್ಪಂದಿಗಳು ಹಂಚಿಕೊಂಡಿದ್ದು ತಿಳಿಯುತ್ತದೆ. ಆದರೆ ಕೇವಲ ಶೇ. ೨ರಷ್ಟು ಪ್ರತಿಸ್ಪಂದಿಗಳು ಮಾತ್ರ ದೊಡ್ಡ ಉದ್ದಿಮೆದಾರರಿಗೆ ನೇರವಾಗಿ ಮಾರಾಟ ಮಾಡುವ ವ್ಯವಸ್ಥೆಯನ್ನು ಹೊಂದಿದ್ದಾರೆ.

ಆದ್ದರಿಂದ, ಚಿಕ್ಕ ಉದ್ದಿಮೆ ಘಟಕಗಳಲ್ಲಿ ಸ್ವತಂತ್ರ ಮಾರಾಟದ ವ್ಯವಸ್ಥಿತ ಜಾಲವನ್ನು ಹೊಂದಿದ್ದು ಗಮನಾರ್ಹವಾಗಿದೆ.

೬.೨೬ : ಮಾರಾಟದ ವೆಚ್ಚ :

ಸರಕು ಮಾರಾಟದ ವೆಚ್ಚವು ಲಾಭಗಳಿಕೆಯಲ್ಲಿ ಪರಿಣಾಮ ಬೀರುವ ಮಹತ್ವದ ಅಂಶವಾಗುತ್ತದೆ. ಇದರಲ್ಲಿಯ ಮಿತವ್ಯಯವು ಗಳಿಕೆಯನ್ನು ಹೆಚ್ಚಿಸುವ ಸಾಧ್ಯತೆ ಹೆಚ್ಚು. ಅಷ್ಟೇ ಮಹತ್ವದ ವಿಷಯವೆಂದರೆ ಈ ವೆಚ್ಚವನ್ನು ಸಂಪೂರ್ಣವಾಗಿ ತೊಡೆದು ಹಾಕುವದು ಅಸಾಧ್ಯ. ಆದ್ದರಿಂದ ಮಾರಾಟದ ವೆಚ್ಚದ ಮೇಲೆ ನಿಯಂತ್ರಣ ಹೊಂದಿರುವದು ಅವಶ್ಯ. ಈ ಕುರಿತು ಪ್ರಶ್ನಿಸಿ ಪಡೆದ ಅಭಿಪ್ರಾಯಗಳನ್ನು **ಕೋಷ್ಟಕ ೬.೨೩** ರಲ್ಲಿ ಪ್ರಕಟಗೊಳಿಸಿದೆ.

ಒಟ್ಟು ಪ್ರತಿಸ್ಪಂದಿಗಳಲ್ಲಿ ಸರಾಸರಿ ಶೇ. ೮೯ ರಷ್ಟು ಪ್ರತಿಸ್ಪಂದಿಗಳು ತಮ್ಮ ಮಾರಾಟ ವೆಚ್ಚಗಳನ್ನು ಕನಿಷ್ಠವೆನ್ನಬಹುದಾದ ಶೇ. ೫ ರಿಂದ ಶೇ. ೧೦ರ ಮಿತಿಯೊಳಗೆ ನಿಯಂತ್ರಿತಗೊಳಿಸಿದ್ದಾರೆ. ಇದು ಉತ್ತಮ ನಿರ್ವಹಣೆಯ ಲಕ್ಷಣವಾಗಿದೆ.

ಕೋಷ್ಟಕ : ೬.೨೨ ಸರಕು ಮಾರಾಟ ಮಾಡುವ ರೀತಿ

ಅ.ಸಂ.	ವಿವರಗಳು	ಅಥಣಿ	ಬೈಲಹೊಂಗಲ	ಬೆಳಗಾವಿ	ಚಿಕ್ಕೋಡಿ	ಗೋಕಾಕ	ಹುಕ್ಕೇರಿ	ಖಾನಾಪೂರ	ರಾಯಬಾಗ	ರಾಮದುರ್ಗ	ಸವದತ್ತಿ
೧	ನೇರವಾಗಿ ಗ್ರಾಹಕರಿಗೆ	೧೮ (೬೦)	೧೮ (೫೦)	೪೮ (೫೫)	೨೪ (೭೩)	೧೮ (೫೫)	೩೬ (೯೨)	೩೦ (೮೪)	೧೨ (೪೦)	೨೪ (೬೬)	೩೩ (೯೨)
೨	ಮಧ್ಯವರ್ತಿಗಳ ಮೂಲಕ ಗ್ರಾಹಕರಿಗೆ	-	೦೩ (೦೮)	೩೦ (೩೪)	-	೦೩ (೦೯)	-	೦೩ (೦೮)	೦೬ (೨೦)	೦೬ (೧೭)	೦೩ (೦೮)
೩	ಸಗಟುದಾರರು+ಕಿರುಕುಳದಾರರು +ಗ್ರಾಹಕರು	೧೨ (೪೦)	೧೫ (೪೨)	೦೯ (೧೧)	೦೯ (೨೭)	೧೨ (೩೬)	೦೩ (೦೮)	೦೩ (೦೮)	೧೨ (೪೦)	೦೬ (೧೭)	-

(*ಆವರಣದಲ್ಲಿರುವ ಸಂಖ್ಯೆಗಳು ಪ್ರತಿಶತ ಪ್ರಮಾಣವನ್ನು ಸೂಚಿಸುತ್ತವೆ)

ಕೋಷ್ಟಕ : ೬.೨೩ ಒಟ್ಟು ವೆಚ್ಚದಲ್ಲಿನ ಮಾರಾಟ ವೆಚ್ಚದ ಪ್ರತಿಶತ ಪ್ರಮಾಣ

ಅ.ಸಂ.	ವಿವರಗಳು	ಅಥಣಿ	ಬೈಲಹೊಂಗಲ	ಬೆಳಗಾವಿ	ಚಿಕ್ಕೋಡಿ	ಗೋಕಾಕ	ಹುಕ್ಕೇರಿ	ಖಾನಾಪೂರ	ರಾಯಬಾಗ	ರಾಮದುರ್ಗ	ಸವದತ್ತಿ
೧	ಶೇ. ೦೫-೧೦	೩೦ (೧೦೦)	೩೦ (೮೩)	೫೭ (೭೯)	೨೪ (೮೮)	೨೪ (೮೦)	೩೦ (೯೧)	೨೭ (೮೨)	೧೫ (೧೦೦)	೩೦ (೧೦೦)	೩೩ (೯೨)
೨	ಶೇ ೧೧-೧೫	-	-	-	-	೦೩ (೧೦)	೦೩ (೦೯)	-	-	-	೦೩ (೦೮)
೩	ಶೇ ೧೫ ಕ್ಕಿಂತ ಅಧಿಕ	-	೦೬ (೧೭)	೧೫ (೨೧)	೦೩ (೧೨)	೦೩ (೧೦)	-	೦೬ (೧೮)	-	-	-

(*ಆವರಣದಲ್ಲಿರುವ ಸಂಖ್ಯೆಗಳು ಪ್ರತಿಶತ ಪ್ರಮಾಣವನ್ನು ಸೂಚಿಸುತ್ತವೆ)

ಆದರೆ ಅಧಿಕವೆನ್ನಬಹುದಾದ ಶೇ. ೧೫ ಕ್ಕಿಂತ ಹೆಚ್ಚು ಮಾರಾಟದ ವೆಚ್ಚವನ್ನು ಮಾಡುತ್ತಿದ್ದಾರೆ. ಅವರು ಅವುಗಳ ನಿಯಂತ್ರಣಗೊಳಿಸುವ ಬಗ್ಗೆ ವಿವೇಚಿಸಬೇಕು. ಇವೆರಡರ ಮಧ್ಯೆ ಶೇ. ೧೦ರಿಂದ ಶೇ. ೧೫ ರವರೆಗೆ ಈ ವೆಚ್ಚವನ್ನು ಅತೀ ಕಡಿಮೆ ಶೇ. ೩ ರಷ್ಟು ಪ್ರತಿಸ್ಪಂದಿಗಳು ಹೊಂದಿದ್ದಾರೆ.

ಆದ್ದರಿಂದ ಮಾರಾಟದ ವೆಚ್ಚ ಮಿತಿ ಶೇ. ೧೦ರವರೆಗೆ ನಿಯಂತ್ರಣಗೊಳಿಸಿದ್ದು ಪ್ರಶಂಸನೀಯವೆನಿಸುತ್ತದೆ.

೬.೨೭ : ಮಾರಾಟದ ಮೊತ್ತ :

ಹೂಡಿಕೆ - ಉತ್ಪಾದನೆ - ಮಾರಾಟಗಳು ಉದ್ದಿಮೆಯ ಚಟುವಟಿಕೆಯ ಪ್ರಮಾಣವನ್ನು ನಿರ್ಧರಿಸುವ ಅಂಶಗಳು. ಮಾರಾಟದ ಪ್ರಮಾಣವು ಗಳಿಕೆಯ ಮೇಲೆ ಪರಿಣಾಮ ಬೀರುವಂತದ್ದು. ಪ್ರಸಕ್ತ ಸಮೀಕ್ಷೆಯ ಪ್ರತಿಸ್ಪಂದಿಗಳ ಘಟಕಗಳಲ್ಲಿರುವ ಮಾರಾಟದ ಮಾಹಿತಿಯನ್ನು ಸಂಗ್ರಹಿಸಿ, **ಕೋಷ್ಟಕ ೬.೨೪**ರಲ್ಲಿ ತೋರಿಸಿದೆ.

ಚಿಕ್ಕ ಉದ್ದಿಮೆಗಳ ಲಕ್ಷಣಗಳಿಗೆ ಅನುಗುಣವಾಗಿ ಅತ್ಯಧಿಕ ಸಂಖ್ಯೆಯ ಸರಾಸರಿ ಶೇ. ೩೭ ರಷ್ಟು ಪ್ರತಿಸ್ಪಂದಿಗಳಲ್ಲಿ ಮಾರಾಟದ ಮೊತ್ತವು ರೂ. ೧ ಲಕ್ಷದವರೆಗೆ ಇರುತ್ತದೆ. ಅದರಂತೆ ಇದ್ದಕ್ಕಿಂತ ಅಲ್ಪ ಕಡಿಮೆ ಸಂಖ್ಯೆಯ ಶೇ. ೩೦ ರಷ್ಟು ಪ್ರತಿಸ್ಪಂದಿಗಳ ಮಾರಾಟ ರೂ. ೫ ಲಕ್ಷದವರೆಗೆ ಇದೆ. ರೂ. ೧೦ ಲಕ್ಷಗಳವರೆಗೆ ಮತ್ತು ಒಂದು ಕೋಟಿವರೆಗೆ ತಲಾ ಶೇ. ೧೦ ರಷ್ಟು ಪ್ರತಿಸ್ಪಂದಿಗಳಲ್ಲಿ ಇದೆ. ಇನ್ನು ಶೇ. ೯ ರಷ್ಟು ಪ್ರತಿಸ್ಪಂದಿಗಳಿಗೆ ರೂ. ೨೦ ಲಕ್ಷದವರೆಗೆ ಮಾರಾಟದ ಮೊತ್ತವಿದೆ. ಕಡಿಮೆ ಎನ್ನಬಹುದಾದ ಶೇ.೪ ರಷ್ಟು ಪ್ರತಿಸ್ಪಂದಿಗಳಲ್ಲಿ ರೂ. ೫೦ ಲಕ್ಷದವರೆಗೆ ಮಾರಾಟವಿದೆಯೆಂದು ತಿಳಿಯುತ್ತದೆ.

ರೂಪಾಯಿ ಒಂದು ಕೋಟಿಯವರೆಗೆ ಮಾರಾಟವಿರುವ ಘಟಕಗಳು ಕೇವಲ ನಾಲ್ಕು ತಾಲೂಕು ಗಳು, ಅಂದರೆ ಅಥಣಿ - ಬೆಳಗಾವಿ - ರಾಯಬಾಗ ಮತ್ತು ರಾಮದುರ್ಗದಲ್ಲಿ ಕಂಡು ಬರುತ್ತವೆ.

೬.೨೮ : ಉತ್ಪನ್ನಗಳ ರಫ್ತು ಮತ್ತು ರಫ್ತು ವಿಧಾನಗಳು :

ಚಿಕ್ಕ ಉದ್ದಿಮೆಗಳು ದೇಶದ ವಿದೇಶಿ ವಿನಿಮಯ ಗಳಿಕೆಯಲ್ಲಿ ತಮ್ಮದೆಯಾದ ಕೊಡುಗೆ ನೀಡುತ್ತಿರುವುದು ಸರ್ವವಿಹಿತ. ಬೃಹತ್ ಉದ್ದಿಮೆಗಳೊಂದಿಗೆ ಪ್ರೈಪೋಟಿಗಿಳಿಯದೇ ತಮ್ಮದೇ ಉತ್ಪಾದನೆ, ತಂತ್ರ, ನಿರ್ವಹಣೆಯಿಂದ ರಫ್ತು ಕಾರ್ಯದಲ್ಲಿ ತೊಡಗಿಕೊಂಡಿವೆ.

ಪ್ರತಿಸ್ಪಂದಿಗಳಿಗೆ ಈ ಕುರಿತು ಪ್ರಶ್ನಿಸಿದಾಗ ಕೇವಲ ಶೇ. ೩ ರಷ್ಟು ಮಾತ್ರ ಚಿಕ್ಕ ಘಟಕಗಳು ರಫ್ತು ವ್ಯವಹಾರ ಮಾಡಿದ್ದು ಕಂಡುಬರುತ್ತದೆ. ಗರಿಷ್ಠ ಸಂಖ್ಯೆಯ ಶೇ. ೯೭ ರಷ್ಟು ಪ್ರತಿಸ್ಪಂದಿಗಳ ಸರಕುಗಳು ರಫ್ತಾಗುವದಿಲ್ಲ. ಅವುಗಳೆಲ್ಲ ಆಂತರಿಕ ಮಾರುಕಟ್ಟೆಗೆ ಸೀಮಿತಗೊಂಡಿವೆ.

ಕೋಷ್ಟಕ : ೬.೨೪ ವಾರ್ಷಿಕ ಮಾರಾಟದ ಸರಾಸರಿ ಮೊತ್ತ

ಅ.ಸಂ.	ವಿವರಗಳು	ಅಥಣಿ	ಬೈಲಹೊಂಗಲ	ಬೆಳಗಾವಿ	ಚಿಕ್ಕೋಡಿ	ಗೋಕಾಕ	ಹುಕ್ಕೇರಿ	ಖಾನಾಪೂರ	ರಾಯಬಾಗ	ರಾಮದುರ್ಗ	ಸವದತ್ತಿ
೧	ರು ೧ ಲಕ್ಷ	೦೩ (೧೧)	೧೨ (೩೩)	-	೧೨ (೩೬)	೫೦ (೪೬)	೧೨ (೩೧)	೧೫ (೪೨)	೧೫ (೫೦)	೧೨ (೩೨)	೩೦ (೮೪)
೨	೧ ಲಕ್ಷ - ೫ ಲಕ್ಷ	೧೫ (೫೬)	೧೮ (೫೦)	೧೨ (೧೭)	೦೯ (೨೮)	೧೨ (೩೬)	೧೨ (೩೧)	೧೫ (೪೨)	೦೩ (೧೦)	೦೬ (೧೬)	೦೬ (೧೬)
೩	೫ ಲಕ್ಷ - ೧೦ ಲಕ್ಷ	೦೩ (೧೧)	೦೬ (೧೭)	-	೦೬ (೧೮)	೦೩ (೦೯)	೦೯ (೨೨)	-	೦೩ (೧೦)	೦೩ (೦೮)	-
೪	೧೦ ಲಕ್ಷ - ೨೦ ಲಕ್ಷ	೦೩ (೧೧)	-	೨೪ (೩೩)	೦೩ (೦೯)	೦೩ (೦೯)	೦೩ (೦೮)	೦೩ (೦೮)	-	೦೩ (೦೮)	-
೫	೨೦ ಲಕ್ಷ - ೫೦ ಲಕ್ಷ	-	-	೧೨ (೧೭)	೦೩ (೦೯)	-	೦೩ (೦೮)	೦೩ (೦೮)	-	೦೩ (೦೮)	-
೬	೫೦ ಲಕ್ಷ - ೧ ಕೋಟಿ	೦೩ (೧೧)	-	೨೪ (೩೩)	-	-	-	-	೦೯ (೩೦)	೦೯ (೨೫)	-

(*ಆವರಣದಲ್ಲಿರುವ ಸಂಖ್ಯೆಗಳು ಪ್ರತಿಶತ ಪ್ರಮಾಣವನ್ನು ಸೂಚಿಸುತ್ತವೆ)

ಇದೇ ವಿಷಯ ಸಂಬಂಧಿಸಿ, ಪ್ರತಿಸ್ಪಂದಿಗಳಿಗೆ ರಫ್ತುಗೊಳಿಸುವ ವಿಧಾನದ ಬಗ್ಗೆ ವಿಚಾರಿಸಿದಾಗ ಅವರಲ್ಲಿಯೂ ಸಹ ಕೇವಲ ಶೇ. ೫ರಷ್ಟು ಮಾತ್ರ ತಾವೇ ಅದನ್ನು ನಿರ್ವಹಿಸುವದಾಗಿ ಹೇಳಿದ್ದಾರೆ. ಆದರೆ ಇನ್ನುಳಿದ ಶೇ. ೯೫ರಷ್ಟು ಪ್ರತಿಸ್ಪಂದಿಗಳು ರಫ್ತಿಗಾಗಿ ದಲ್ಲಾಳಿಗಳನ್ನೇ ಅವಲಂಬಿಸಿ ಅವರ ಮೂಲಕವೇ ರಫ್ತುಗೊಳಿಸುವದೆಂದು ಅಭಿಪ್ರಾಯಿಸಿದ್ದಾರೆ. ಬಹುಶ: ರಫ್ತಿನಲ್ಲಿ ಅಡಕಗೊಂಡಿರುವ ದಾಖಲು ಪತ್ರ, ವಿಧಿ - ವಿಧಾನದ ಪ್ರಕ್ರಿಯೆ ಕಾರಣವಾಗಿರಬಹುದು.

೬.೨೯ : ಲಾಭ ಗಳಿಕೆ ಪ್ರಮಾಣ (ಇತರೆ ವಿಷಯಗಳು) :

ಉದ್ದಿಮೆಯ ಸರ್ವಾಂಗೀಣ ಪ್ರಗತಿಗೆ ಉತ್ಪಾದನೆ, ಮಾರುಕಟ್ಟೆ, ಮಾನವ ಸಂಪನ್ಮೂಲ, ಬಂಡವಾಳ - ಹಣಕಾಸು ನಿರ್ವಹಣೆಯಂತಹ ನಿರ್ದಿಷ್ಟ ಕ್ಷೇತ್ರಗಳ ನಿರ್ವಹಣೆಯು ಅತ್ಯಂತ ಮಹತ್ವದ್ದಾಗಿವೆ. ಇವುಗಳಲ್ಲದೆ ಇನ್ನಿತರ ವಿಷಯಗಳು ಮುಖ್ಯವಾಗುತ್ತವೆ. ಲಾಭಗಳಿಕೆ, ಉದ್ದಿಮೆದಾರ ವೃತ್ತಿ ಗೌರವ - ಅನುಭವ - ಅಭಿಮಾನ - ತೃಪ್ತಿ, ಜಾಗತೀಕರಣದ ಬೆಳವಣಿಗೆಗೆ ಸಿದ್ಧತೆ, ಸವಾಲುಗಳು, ಉದ್ದಿಮೆಯ ಚಟುವಟಿಕೆಗಳ ವಿಸ್ತರಣೆ, ಅದಕ್ಕಾಗಿ ಯೋಜನೆ ರೂಪಿಸುವ ಅಂಶಗಳು ಅಷ್ಟೇ ಮಹತ್ವದ್ದಾಗಿವೆ. ಈ ಕುರಿತು ಪ್ರತಿಸ್ಪಂದಿಗಳಿಂದ ಸೂಕ್ತ ಮಾಹಿತಿಯನ್ನು ಸಂಗ್ರಹಿಸಲಾಗಿದ್ದು, ಅದರ ವಿಶ್ಲೇಷಣೆ ಉತ್ತಮ ಸಲಹೆಗಳನ್ನು ನೀಡಲು ಸಹಕಾರಿಯಾಗುತ್ತದೆ.

ಘಟಕಗಳು ಗಳಿಸುವ ಲಾಭ ಗಳಿಕೆಯ ಪ್ರಮಾಣ ಯಶಸ್ಸು ನಿರ್ಧರಿಸುವ ಹಲವಾರು ಅಂಶಗಳಲ್ಲಿ ಒಂದು. ಲಾಭ ಗಳಿಕೆಯು ಸಮಂಜಸ ಗತಿಯಲ್ಲಿ ನಿರಂತರವಾಗಿದ್ದರೆ ವ್ಯವಹಾರಕ್ಕೆ ನಗದು ಒಳಹರಿವನ್ನು ಹೆಚ್ಚಿಸುವದು. ಆದರಿಂದ ಕಾಲಕಾಲಕ್ಕೆ ಉದ್ಭವಿಸುವ ಹೊಣೆಗಾರಿಕೆಗಳನ್ನು ಪಾವತಿಸುವ ಸಾಮರ್ಥ್ಯ ಹೆಚ್ಚುತ್ತದೆ. ಘಟಕವು ಹಣಕಾಸು ನಿರ್ವಹಣೆಯನ್ನು ವ್ಯವಸ್ಥಿತಗೊಳಿಸುವದು ಸರಳವಾಗುತ್ತದೆ.

ಪ್ರಸ್ತುತ ಪ್ರತಿಸ್ಪಂದಿಗಳ ಲಾಭ ಗಳಿಕೆಯ ಪ್ರಮಾಣವನ್ನು **ಕೋಷ್ಟಕ ೬.೨೫**ರಲ್ಲಿ ನೀಡಿದೆ.

ಈ ಅಭಿಪ್ರಾಯಗಳನ್ನು ವಿಶ್ಲೇಷಿಸಿದಾಗ ಅತ್ಯಧಿಕ ಸಂಖ್ಯೆಯ ಶೇ. ೭೪ ರಷ್ಟು ಪ್ರತಿಸ್ಪಂದಿಗಳು ಅಷ್ಟೇನು ಪ್ರೇರಣಾತ್ಮಕ ಎನ್ನಲಾರದ ಶೇ. ೧೦ ರಿಂದ ಶೇ. ೨೦ ರಷ್ಟು ಲಾಭ ಗಳಿಸುತ್ತಿದ್ದಾರೆ. ಆದರೆ ಉತ್ತಮ ಪ್ರಮಾಣವೆನ್ನಬಹುದಾದ ಶೇ. ೨೦ ರಿಂದ ಶೇ. ೩೦ ರಷ್ಟು ಲಾಭ ಗಳಿಸುತ್ತಾರೆ. ಕೆಲವು (ಶೇ ೪ ರಷ್ಟು) ಪ್ರತಿಸ್ಪಂದಿಗಳು ಶೇ ೩೦ ರಿಂದ ೪೦ ಕ್ಕಿಂತ ಹೆಚ್ಚಿಗೆ ಲಾಭಗಳಿಸುವ ಸಾಧ್ಯತೆಯನ್ನು ಹಂಚಿಕೊಂಡಿದ್ದಾರೆ.

ಇದೇ ಅಭಿಪ್ರಾಯಕ್ಕೆ ಸಂಬಂಧಿಸಿ, ಲಾಭ ಗಳಿಕೆಯ ಪ್ರಮಾಣವು ಉದ್ದಿಮೆದಾರರಿಗೆ ಯಾವ ತರಹದ ತೃಪ್ತಿ ನೀಡಿದೆಯೆಂಬ ಬಗ್ಗೆ ಪ್ರಶ್ನಿಸಲಾಗಿತ್ತು. ಅದಕ್ಕೆ ಪ್ರತಿಸ್ಪಂದಿಗಳು ನೀಡಿದ ಅಭಿಪ್ರಾಯ-ಗಳನ್ನು **ಕೋಷ್ಟಕ ೬.೨೬** ರಲ್ಲಿ ನೀಡಲಾಗಿದೆ.

ಕೋಷ್ಟಕ : ೬.೨೫ ಲಾಭ ಗಳಿಕೆಯ ಪ್ರಮಾಣ

ಅ.ಸಂ.	ವಿವರಗಳು	ಅಥಣಿ	ಬೈಲಹೊಂಗಲ	ಬೆಳಗಾವಿ	ಚಿಕ್ಕೋಡಿ	ಗೋಕಾಕ	ಹುಕ್ಕೇರಿ	ಖಾನಾಪೂರ	ರಾಯಬಾಗ	ರಾಮದುರ್ಗ	ಸವದತ್ತಿ
೧	ಶೇ. ೧೦ ರಿಂದ ಶೇ. ೨೦	೨೧ (೭೦)	೩೬ (೧೦೦)	೬೩ (೮೮)	೧೨ (೩೬)	೩೩ (೧೦೦)	೧೮ (೪೬)	೨೧ (೫೮)	೨೧ (೭೦)	೩೩ (೧೦೦)	(೨೭೭೫)
೨	ಶೇ. ೨೧ ರಿಂದ ಶೇ. ೩೦	೦೯ (೩೦)	-	೦೩ (೦೪)	೧೮ (೫೫)	-	೧೮ (೪೬)	೧೫ (೪೨)	೦೬ (೨೦)	-	೦೯ (೨೫)
೩	ಶೇ. ೩೧ ರಿಂದ ಶೇ. ೪೦	-	-	೦೩ (೦೪)	೦೩ (೦೯)	-	೦೩ (೦೮)	-	೦೩ (೧೦)	-	-
೪	ಶೇ. ೪೧ಕ್ಕಿಂತ ಅಧಿಕ	-	-	೦೩ (೦೪)	-	-	-	-	-	-	-

(*ಆವರಣದಲ್ಲಿರುವ ಸಂಖ್ಯೆಗಳು ಪ್ರತಿಶತ ಪ್ರಮಾಣವನ್ನು ಸೂಚಿಸುತ್ತವೆ)

ಕೋಷ್ಟಕ : ೬.೨೬ ಲಾಭ ಗಳಿಕೆ ಕುರಿತು ಉದ್ದಿಮೆದಾರರ ಅಭಿಪ್ರಾಯ

ಅ.ಸಂ.	ವಿವರಗಳು	ಅಥಣಿ	ಬೈಲಹೊಂಗಲ	ಬೆಳಗಾವಿ	ಚಿಕ್ಕೋಡಿ	ಗೋಕಾಕ	ಹುಕ್ಕೇರಿ	ಖಾನಾಪೂರ	ರಾಯಬಾಗ	ರಾಮದುರ್ಗ	ಸವದತ್ತಿ
೧	ಸಮಾಧಾನಕರವಾಗಿದೆ	೨೭ (೯೦)	೨೭ (೭೫)	೪೫ (೬೪)	೩೦ (೮೩)	೩೦ (೯೧)	೩೬ (೯೨)	೨೭ (೭೫)	೩೦ (೧೦೦)	೨೧ (೬೪)	೦೩ (೦೮)
೨	ಸಂಪೂರ್ಣ ತೃಪ್ತಿಕರವಾಗಿದೆ	೦೩ (೧೦)	-	೦೩ (೦೪)	-	-	-	-	-	-	-
೩	ತೃಪ್ತಿಯಾಗಿಲ್ಲ; ಇನ್ನೂ ಹೆಚ್ಚಾಗಬೇಕು	-	೦೯ (೨೫)	೨೪ (೩೨)	೦೬ (೧೭)	೦೩ (೦೯)	೦೩ (೦೮)	೦೯ (೨೫)	-	೧೨ (೩೬)	೩೩ (೯೨)

(*ಆವರಣದಲ್ಲಿರುವ ಸಂಖ್ಯೆಗಳು ಪ್ರತಿಶತ ಪ್ರಮಾಣವನ್ನು ಸೂಚಿಸುತ್ತವೆ)

ಇದನ್ನು ಅವಲೋಕಿಸಿದಾಗ ಸ್ಪಷ್ಟಗೊಳ್ಳುವದೇನೆಂದರೆ ಬಹುಪಾಲು (ಶೇ. ೭೪) ಪ್ರತಿಸ್ಪಂದಿಗಳು ಶೇ.೨೦ ರವರೆಗಿನ ಲಾಭ ಗಳಿಕೆಯ ಪ್ರಮಾಣವು ಸಮಾಧಾನಕರವಾಗಿದೆಯೆಂದು ಅಭಿಪ್ರಾಯಿಸುತ್ತಾರೆ. ಕೇವಲ ಒಂದು ಪ್ರತಿಶತದಷ್ಟು ಪ್ರತಿಸ್ಪಂದಿಗಳು ಸಂಪೂರ್ಣ ತೃಪ್ತಿಕರವಾಗಿದೆಯೆಂದು ಹೇಳುತ್ತಾರೆ. ಅಷ್ಟೇ ಮಹತ್ವದ ಅಂಶವೆಂದರೆ ಶೇ. ೨೫ ರಷ್ಟು ಪ್ರತಿಸ್ಪಂದಿಗಳಿಗೆ ಈ ಲಾಭದ ಪ್ರಮಾಣ ತೃಪ್ತಿಯಾಗಿಲ್ಲವೆಂದು ಮತ್ತು ಅದು ಇನ್ನು ಹೆಚ್ಚಬೇಕೆಂದು ಹೇಳುತ್ತಾರೆ.

ಒಟ್ಟಿನಲ್ಲಿ ಲಾಭದ ಪ್ರಮಾಣವು ಶೇ.೨೦ ರಿಂದ ಶೇ. ೩೦ ರಷ್ಟು ಸಮಂಜಸ ಗಳಿಕೆ ಎನ್ನಬಹುದಾಗಿದೆ.

೬.೩೦ : ಉದ್ದಿಮೆದಾರರಾಗಿ ಅನುಭವ :

ವೃತ್ತಿ ಸಂತೃಪ್ತಿಯು ಜೀವನದಲ್ಲಿ ಬಹಳ ಮುಖ್ಯ. ಆಯ್ದುಕೊಂಡ ವೃತ್ತಿಯಲ್ಲಿ ತೃಪ್ತರಾಗಿದ್ದಾರೆ ಏನೆಲ್ಲ ಸಾಧಿಸುವದು ಸಾಧ್ಯವಾಗುತ್ತದೆ. ಈ ಕುರಿತು ಪ್ರತಿಸ್ಪಂದಿಗಳ ನಿಜವಾದ ಅಭಿಪ್ರಾಯ-ಅನುಭವದ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಆದ್ದರಿಂದ ಉದ್ಯಮಶೀಲರಾಗಬಯಸುವ ಮುಂದಿನ ಪೀಳಿಗೆಗೆ ಮಾರ್ಗದರ್ಶನ ಮತ್ತು ಪ್ರೇರಣೆ ಲಭ್ಯವಾಗುತ್ತದೆ.

ಈ ಕುರಿತು ಒಟ್ಟಾರೆ ಪ್ರತಿಸ್ಪಂದಿಗಳಲ್ಲಿ ಶೇ. ೬೫ ರಷ್ಟು ಪ್ರತಿಸ್ಪಂದಿಗಳು ತೃಪ್ತರಾದ ಭಾವನೆ ಹೊಂದಿದ್ದಾರೆ. ಅವರು ಆಯ್ದುಕೊಂಡ ಜೀವನದ ಈ ಮಾರ್ಗವು ಅವರಿಗೆ ಸಮಾಧಾನ ನೀಡಿದೆಯೆಂದು ಧನ್ಯತಾ ಭಾವನೆ ವ್ಯಕ್ತಪಡಿಸುತ್ತಾರೆ. ಆದರೆ ಇನ್ನುಳಿದ ಶೇ. ೩೫ ರಷ್ಟು ಪ್ರತಿಸ್ಪಂದಿಗಳಲ್ಲಿ ಅತೃಪ್ತದ ಛಾಯೆಯು ಕಾಣಬರುತ್ತದೆ. ಅವರಿಗೆ ಕೆಲವು ಕಹಿ ಪ್ರಸಂಗಗಳು ಎದುರಾಗಿರಬಹುದು.

೬. ೩೧ : ಉದ್ದಿಮೆದಾರರ ತೃಪ್ತಿ :

ಉದ್ದಿಮೆ ರಂಗದಲ್ಲಿ ತೊಡಗಿಕೊಂಡು, ಅಪ್ರತಿಮ ಸಾಧನೆ ಮಾಡುವ ಮತ್ತು ಸ್ವತಂತ್ರ ಜೀವನದ ದಾರಿಯನ್ನಾಗಿಸಿಕೊಂಡು ಮುಂದುವರೆಯುವ ಜನರು ಕಡಿಮೆಯೇನಿಲ್ಲ. ಪ್ರತಿಸ್ಪಂದಿಗಳಲ್ಲಿ ಬಹಳಷ್ಟು ಸಂಖ್ಯೆಯವರು ತಾವು ತೃಪ್ತರಾಗಿದ್ದನ್ನು ಹಂಚಿಕೊಂಡಿದ್ದಾರೆ. ಅವರು ಈ ರಂಗದಲ್ಲಿ ಯಾವ ತರಹದ ತೃಪ್ತಿಯನ್ನು ಕಂಡುಕೊಂಡಿದ್ದಾರೆಂಬುದಕ್ಕೆ ನೀಡಿದ ಪ್ರತಿಕ್ರಿಯೆಗಳನ್ನು **ಕೋಷ್ಟಕ ೬.೨೭** ರಲ್ಲಿ ಪ್ರಕಟಗೊಳಿಸಿದೆ.

ಕೋಷ್ಟಕ ೬.೨೭ : ತೃಪ್ತಿಯ ರೂಪಗಳು :

ಈ ಕೋಷ್ಟಕದಿಂದ ಸ್ಪಷ್ಟಗೊಳ್ಳುವುದೇನೆಂದರೆ ಅಧಿಕ ಸಂಖ್ಯೆಯ, ಅಂದರೆ ಶೇ. ೨೭ ರಷ್ಟು ಪ್ರತಿಸ್ಪಂದಿಗಳು ತಾವು ಉದ್ದಿಮೆದಾರರಾಗಿ ತಮ್ಮ ಘಟಕಗಳಿಂದ ಸಮಾಜದಲ್ಲಿಯ ಕೆಲವು ಜನರಿಗೆ ಉದ್ಯೋಗ ನೀಡಿದ್ದೇವೆಂಬ ಭಾವನೆ ತೃಪ್ತಿಗೆ ಕಾರಣವಾಗಿದೆ.

ಕೋಷ್ಟಕ : ೬.೨೭ ತೃಪ್ತ ಉದ್ದಿಮೆದಾರರ ಪ್ರತಿಕ್ರಿಯೆ

ಅ.ಸಂ.	ವಿವರಗಳು	ಅಥಣಿ	ಬೈಲಹೊಂಗಲ	ಬೆಳಗಾವಿ	ಚಿಕ್ಕೋಡಿ	ಗೋಕಾಕ	ಹುಕ್ಕೇರಿ	ಖಾನಾಪೂರ	ರಾಯಬಾಗ	ರಾಮದುರ್ಗ	ಸವದತ್ತಿ
೧	ರಾಜ್ಯಕ್ಕೆ+ರಾಷ್ಟ್ರಕ್ಕೆ ಕೊಡುಗೆಯಾಗಿದೆ	೦೬ (೦೯)	-	೨೧ (೧೩)	೦೬ (೧೨)	-	-	೦೩ (೧೪)	೦೯ (೦೯)	೦೯ (೨೩)	-
೨	ಕೆಲವು ಜನರಿಗೆ ಉದ್ಯೋಗ ನೀಡಿದ್ದೇನೆ	೧೮ (೨೮)	೨೪ (೨೨)	೩೯ (೨೪)	೧೫ (೨೮)	೨೧ (೨೬)	೨೪ (೩೩)	೦೯ (೪೪)	೧೨ (೧೩)	೧೫ (೩೮)	-
೩	ಉದ್ದಿಮೆರಂಗದ ಅಭಿವೃದ್ಧಿಗೆ ಸಹಕಾರಿ	೦೬ (೦೯)	೧೮ (೧೬)	೨೭ (೧೭)	೦೬ (೧೨)	೧೨ (೧೫)	೦೩ (೦೪)	-	೧೫ (೧೭)	-	-
೪	ಸ್ವಯಂ ಕನಸುಗಳು ಸಾಕಾರವಾಗಿವೆ	೧೨ (೦೯)	೨೧ (೧೯)	೨೧ (೧೩)	೦೩ (೦೫)	೨೧ (೨೬)	೨೪ (೩೩)	೦೩ (೧೪)	೨೪ (೨೫)	೦೬ (೧೬)	-
೫	ಸ್ವಾಭಿಮಾನ ಹೆಚ್ಚಿದೆ	೦೬ (೦೯)	೧೫ (೧೪)	೨೧ (೧೩)	೦೯ (೧೫)	೦೯ (೧೧)	೦೬ (೦೮)	೦೩ (೧೪)	೦೯ (೦೯)	೦೯ (೨೩)	-
೬	ಸ್ವತಂತ್ರ ಜೀವನದಿಂದ ಸಮಾಧಾನ	೦೯ (೧೭)	೨೧ (೧೯)	೨೭ (೧೭)	೧೨ (೨೩)	೧೫ (೧೯)	೦೯ (೧೪)	೦೩ (೧೪)	೧೮ (೧೮)	-	-
೭	ಸಮಾಜದಲ್ಲಿ ಗಣ್ಯರಾಗಿದ್ದೇನ	೦೬ (೦೯)	೧೨ (೧೦)	೦೬ (೦೩)	೦೩ (೦೫)	೦೩ (೦೩)	೦೯ (೦೮)	-	೦೯ (೦೯)	-	-
೮	ಇತರೆ ಕಾರಣಗಳಿದ್ದರೆ	-	-	-	-	-	-	-	-	-	-

(*ಆವರಣದಲ್ಲಿರುವ ಸಂಖ್ಯೆಗಳು ಪ್ರತಿಶತ ಪ್ರಮಾಣವನ್ನು ಸೂಚಿಸುತ್ತವೆ)

ಹಲವಾರು ಜನರು ತಮ್ಮದೆಯಾದ ಕನಸುಗಳನ್ನು ತಮ್ಮದೆ ರೀತಿಯಲ್ಲಿ ಸಾಕಾರಗೊಳಿಸಲು ಉದ್ದಿಮೆದಾರರಾಗುವ ಆಯ್ಕೆ ಮಾಡಿರುತ್ತಾರೆ. ಶೇ. ೧೭ರಷ್ಟು ಪ್ರತಿಸ್ಪಂದಿಗಳು ತಮ್ಮ ಕನಸುಗಳು ಸಾಕಾರಗೊಂಡಿವೆಯೆಂದು ಅಭಿಪ್ರಾಯಿಸುತ್ತಾರೆ. ಅದರಂತೆಯೇ ತಮ್ಮ ಜೀವನದಲ್ಲಿ ಸ್ವತಂತ್ರತೆ ಹೊಂದಿರುವದು (ಶೇ. ೧೫) ಸಮಾಧಾನ ತಂದಿದೆಯೆಂದು, ಇನ್ನು ಕೆಲವರ ಸ್ವಾಭಿಮಾನ ಹೆಚ್ಚಿದೆಯೆಂದು (ಶೇ. ೧೩), ದೇಶದ ಆರ್ಥಿಕತೆಯ ಮುಖ್ಯವಾದ ಉದ್ದಿಮೆ ರಂಗದ ಅಭಿವೃದ್ಧಿಗೆ ಕೈಜೋಡಿಸಿದ ಧನ್ಯತೆ (ಶೇ. ೧೦), ತಮ್ಮ ರಾಜ್ಯ ಮತ್ತು ದೇಶಕ್ಕೆ ಅಲ್ಪವಾದರೂ ಕೊಡುಗೆ ನೀಡಿದ ಸಮಾಧಾನ (ಶೇ. ೯) ಮತ್ತು ಉದ್ದಿಮೆಶೀಲರಾಗಿದ್ದಕ್ಕೆ ಸಮಾಜದಲ್ಲಿ ಗಣ್ಯರಾಗಿ ಕಾಣಿಸಿಕೊಳ್ಳುವದು (ಶೇ. ೮) ನೆಮ್ಮದಿಯನ್ನು ನೀಡಿದೆಯೆಂದು ಅಭಿಪ್ರಾಯಿಸುತ್ತಾರೆ.

ಒಟ್ಟಿನಲ್ಲಿ ಉದ್ದಿಮೆದಾರರಾಗಿದ್ದಕ್ಕೆ ಸ್ವಂತಕ್ಕೆ ಸಮಾಧಾನ ಹೊಂದಿರುವದು ಪ್ರಮುಖ ಅಂಶವಾಗಿದೆ. ತಮ್ಮ ದೇಶಕ್ಕೆ ಅಲ್ಪ ಕಾಣಿಕೆಯನ್ನು ನೀಡಿ, ತಮ್ಮ ಋಣ ತೀರಿಸುವಂತಹ ಸಮಾಧಾನ ಭಾವನೆ ಮೆಚ್ಚುವಂತಹದ್ದು. ಇದು ಉದ್ದಿಮೆದಾರರಾಗುವದಲ್ಲಿ ಸಾಧ್ಯವಿದೆ.

೬.೩೨ : ಅತೃಪ್ತಿಯ ಕಾರಣಗಳು :

ಇನ್ನು ಕೆಲವು (ಶೇ. ೩೫) ಪ್ರತಿಸ್ಪಂದಿಗಳಿಗೆ ನಕಾರಾತ್ಮಕ ಭಾವನೆಗಳಿವೆ. ಅವರಲ್ಲಿ ಅತೃಪ್ತಿಗೆ ಅನೇಕ ಕಾರಣಗಳಾಗಿವೆ. ಈ ಕುರಿತು ಅವರು ಹಂಚಿಕೊಂಡ ಕಾರಣಗಳನ್ನು **ಕೋಷ್ಟಕ ೬.೨೮**ರಲ್ಲಿ ನೀಡಿದೆ.

ಉದ್ದಿಮೆದಾರರಾಗಿದ್ದಕ್ಕೆ ಗರಿಷ್ಠ ಅತೃಪ್ತಿಗೆ ತಮ್ಮ ಪ್ರಸಕ್ತ ಉದ್ದಿಮೆಯಲ್ಲಿ ಕಡಿಮೆ ಗಳಿಕೆಯು ಒಂದು ಪ್ರಮುಖ ಕಾರಣವಾಗಿ ಕಂಡು ಬರುತ್ತದೆ. ಏಕೆಂದರೆ ಶೇ. ೪೮ ರಷ್ಟು ಪ್ರತಿಸ್ಪಂದಿಗಳಿಗೆ ಬೇರೆ ಉದ್ಯೋಗದಲ್ಲಿ ಹೆಚ್ಚಿನ ಗಳಿಕೆ ಇದೆ ಎಂಬ ಭಾವನೆ ಮೂಡಿದೆ. ಅದರ ನಂತರ ಅನಿಶ್ಚಿತತೆಯ ಹೆದರಿಕೆ ತೂಗುಕತ್ತಿಯಂತೆ ಸದಾಕಾಲ ಅಧೈರ್ಯಗೊಳಿಸುತ್ತದೆಯೆಂದು ಶೇ. ೨೦ರಷ್ಟು ಪ್ರತಿಸ್ಪಂದಿಗಳ ಅಭಿಪ್ರಾಯ. ಯಾವಾಗಲೂ ಬದಲಾಗುತ್ತಿರುವ ರಾಜಕೀಯ ಮತ್ತು ಆರ್ಥಿಕ ಸ್ಥಿತಿಗಳು ಒಂದೊಂದು ತರಹದ ಸಮಸ್ಯೆಗಳನ್ನು ತಂದೊಡ್ಡುವದು ಶೇ. ೧೬ ರಷ್ಟು ಪ್ರತಿಸ್ಪಂದಿಗಳಲ್ಲಿ ಅತೃಪ್ತಿ ಹುಟ್ಟಿಸಿದೆ. ಇದರಿಂದ ಒತ್ತಡ ರಹಿತ ಜೀವನ ಸಾಧ್ಯವಾಗುತ್ತಿಲ್ಲವೆಂದು ಅವರ ಅಭಿಪ್ರಾಯ. ಅದರಂತೆಯೇ ಶೇ. ೪ರಷ್ಟು ಪ್ರತಿಸ್ಪಂದಿಗಳು ರಾಜಕಾರಣಿಗಳ ಮತ್ತು ಕಷ್ಟದಾಯಕ ಕಾನೂನುಗಳ ಕಠಿಣತೆಗಳು ಅತೃಪ್ತಿಯನ್ನು ತಂದಿವೆ. ಉದ್ದಿಮೆಯಲ್ಲಿ ನಿರಂತರವಾಗಿ ಮೂಲ ಸೌಕರ್ಯಗಳು ಲಭ್ಯವಿದ್ದರೆ ನಿಶ್ಚಿಂತೆಯಿಂದ ಚಟುವಟಿಕೆಗಳು ನಿರಾಯಾಸವಾಗಿ ನಡೆಯುತ್ತವೆ. ಇವುಗಳ ಅಲಭ್ಯತೆ ಅಥವಾ ವ್ಯವಸ್ಥಿತತೆ ಇರದಿದ್ದರೆ ತೊಂದರೆಗಳು ಉದ್ಭವಿಸುತ್ತವೆ. ಇದು ಸಹಿತ ಶೇ. ೩ ರಷ್ಟು ಪ್ರತಿಸ್ಪಂದಿಗಳಿಗೆ ಅತೃಪ್ತಿ ತಂದಿದೆ.

ಈ ಕಾರಣಗಳನ್ನು ಸಹ ಗಂಭೀರವಾಗಿ ಚರ್ಚಿಸುವ ಮತ್ತು ಪರಿಹಾರ ನೀಡುವ ಅವಶ್ಯಕತೆ ಕಂಡು ಬರುತ್ತದೆ.

ಕೋಷ್ಟಕ : ೬.೨೮ ಅತೃಪ್ತ ಉದ್ದಿಮೆದಾರರ ಪ್ರತಿಕ್ರಿಯೆ

ಅ.ಸಂ.	ವಿವರಗಳು	ಅಥಣಿ	ಬೈಲಹೊಂಗಲ	ಬೆಳಗಾವಿ	ಚಿಕ್ಕೋಡಿ	ಗೋಕಾಕ	ಹುಕ್ಕೇರಿ	ಖಾನಾಪೂರ	ರಾಯಬಾಗ	ರಾಮದುರ್ಗ	ಸವದತ್ತಿ
೧	ಬೇರೆ ಉದ್ಯೋಗದಲ್ಲಿ ಗಳಿಕೆ ಹೆಚ್ಚು	೦೬ (೪೦)	೦೯ (೫೦)	೦೬ (೧೭)	೧೨ (೫೦)	೦೬ (೬೭)	೧೫ (೬೩)	೧೮ (೨೫)	-	೨೧ (೫೭)	೩೬ (೪೬)
೨	ಸದಾಕಾಲ ಅನಿಶ್ಚಿತತೆ ಕಾಡುತ್ತದೆ	೦೩ (೨೦)	೦೯ (೫೦)	೦೯ (೨೫)	೦೬ (೨೫)	-	೦೩ (೧೨)	-	-	೦೯ (೨೫)	೩೬ (೪೬)
೩	ಸಮಸ್ಯೆಗಳು ದಿನೆ-ದಿನೆ ಹೆಚ್ಚುತ್ತಿವೆ	೦೩ (೨೦)	-	೦೩ (೦೮)	೦೬ (೨೫)	೦೩ (೩೩)	೦೬ (೨೫)	೦೬ (೨೫)	-	೦೩ (೦೯)	೦೬ (೦೮)
೪	ಕಾನೂನು ಪೀಡನೆ ಹೆಚ್ಚುತ್ತಿವೆ	-	-	೧೨ (೨೨)	-	-	-	-	-	-	-
೫	ರಾಜಕಾರಣದ ನೀತಿಗಳ ತೊಂದರೆ	೦೩ (೨೦)	-	೦೩ (೧೬)	-		-	-	- -	-	- -
೬	ಮೂಲಭೂತ ಸೌಕರ್ಯಗಳ ಕೊರತೆ	-	-	೦೩ (೧೯)	-	-	-	-	-	೦೩ (೦೯)	-

(*ಆವರಣದಲ್ಲಿರುವ ಸಂಖ್ಯೆಗಳು ಪ್ರತಿಶತ ಪ್ರಮಾಣವನ್ನು ಸೂಚಿಸುತ್ತವೆ)

೬.೩೩ : ಉದ್ದಿಮೆದಾರರಾಗಿ ಕೊಡುಗೆ :

ಸಮಾಜದ ಮತ್ತು ಆರ್ಥಿಕ ಬೆಳವಣಿಗೆಗೆ ಉದ್ದಿಮೆದಾರರ ಕೊಡುಗೆ ಅಪಾರ. ಅದನ್ನು ಅಲ್ಲಗಳೆಯಲಾಗದು. ಕೃಷಿ ಮತ್ತು ಉದ್ದಿಮೆ ರಂಗಗಳೆರಡು ಆರ್ಥಿಕತೆಯ ಎರಡು ಚಕ್ರಗಳಿದಂತೆ. ಇತ್ತೀಚಿಗೆ ಸೇವಾಕ್ಷೇತ್ರ ಇವೆರಡನ್ನು ಹಿಂದಿಕ್ಕುವಂತೆ ಬೆಳೆಯುತ್ತಿದೆ. ಇದರಲ್ಲಿಯೂ ಸಾಕಷ್ಟು ಸಂಖ್ಯೆಯ ಪ್ರತಿಸ್ಪಂದಿಗಳು ತೊಡಗಿಕೊಂಡಿದ್ದಾರೆ.

ಪ್ರಸ್ತುತ ಜಿಲ್ಲೆಯ ಆಯ್ದುಕೊಂಡ ಪ್ರತಿಸ್ಪಂದಿಗಳು ತಾವು ತಮ್ಮ ಜಿಲ್ಲೆಗೆ ಯಾವ ತರಹದ ಕೊಡುಗೆ ನೀಡಿದ್ದಾರೆಂದು ನೀಡಿದ ಅಭಿಪ್ರಾಯಗಳನ್ನು **ಕೋಷ್ಟಕ ೬.೨೯** ರಲ್ಲಿ ನೋಡಬಹುದಾಗಿದೆ.

ಯಾರೊಬ್ಬರು ಉದ್ದಿಮೆದಾರರಾಗಿ ಹೊರಹೊಮ್ಮಿದರೆ, ಅವರಲ್ಲಿರುವ ಉದ್ಯಮಶೀಲತಾ ಗುಣಗಳು ಅವರೊಂದಿಗೆ ಹುದುಗಿ ಹೋಗಬಾರದು. ತಮ್ಮ ಅಪ್ರತಿಮ ಗುಣಗಳು ಇನ್ನಿತರರಲ್ಲಿ ಬೆಳೆದು, ಹೊಸ ಪೀಳಿಗೆಯ ಉದ್ಯಮಶೀಲರಿಗೆ ಚಾಲನೆ ನೀಡುವಂತಾಗಬೇಕು. ಹೀಗಾಗಿ ಈ ಕೋಷ್ಟಕ ಸ್ಪಷ್ಟಗೊಳಿಸುವುದೇನೆಂದರೆ, ಶೇ. ೫೯ ರಷ್ಟು ಪ್ರತಿಸ್ಪಂದಿಗಳು ತಾವು ಯುವ ಉದ್ದಿಮೆದಾರರಿಗೆ ಪ್ರೇರಣೆ ಮತ್ತು ತರಬೇತಿಯ ಕೊಡುಗೆಗಳನ್ನು ನೀಡುತ್ತಿರುವದು ಮಹತ್ವದ್ದೆನಿಸಿದೆ.

ಅದರಂತೆಯೇ ತಮ್ಮ ಯಶಸ್ಸು ಇನ್ನಿತರ ತರುಣ ಉದ್ದಿಮೆದಾರರಿಗೆ ದಾರಿಯನ್ನು ಮುಕ್ತಗೊಳಿಸಿದ್ದು ಕೊಡುಗೆಯಾಗಿದೆಯೆಂದು ಶೇ. ೨೬ ರಷ್ಟು ಪ್ರತಿಸ್ಪಂದಿಗಳು ಹೇಳುತ್ತಾರೆ. ಇನ್ನು ಕೆಲವರು ಉದ್ದಿಮೆದಾರರಾಗಿ (ಶೇ. ೧೨) ಸಮಾಜಕ್ಕೆ ಹೊಸ ಸರಕು ಮತ್ತು ಸೇವೆಗಳನ್ನು ಪರಿಚಯಿಸುವ ಸದಾವಕಾಶ ದೊರೆತ್ತಿದ್ದು, ಅವುಗಳನ್ನು ಸಮಾಜಕ್ಕೆ ನೀಡಿದ ಕೊಡುಗೆ ಗಣನೀಯವಾಗಿದೆ. ಇದು ರಚನಾತ್ಮಕತೆಗೆ ಮತ್ತು ಹೊಸದನ್ನು ಸೃಷ್ಟಿಸುವ ಕೌಶಲಗಳನ್ನು ಬೆಳೆಸಲು ಸಹಕಾರಿಯಾಗುತ್ತದೆಂದು ಹೇಳುತ್ತಾರೆ.

ಇನ್ನು ಕೆಲವರು ತಮ್ಮ ಯಶಸ್ಸಿನಿಂದ ಇನ್ನಿತರ ಉದ್ದಿಮೆಯ ತರಬೇತಿಯ ಸಂಸ್ಥೆಗಳಿಗೆ ಸಂಪನ್ಮೂಲ ವ್ಯಕ್ತಿಗಳಾಗಿ, ತರಬೇತಿ ನಿರತರಿಗೆ ಮಾರ್ಗದರ್ಶನ ನೀಡುವದು ಇನ್ನೊಂದು ಕೊಡುಗೆಯೆಂದು (ಶೇ. ೨) ಅಭಿಪ್ರಾಯಿಸುತ್ತಾರೆ. ಕೊನೆಗೆ ಮತ್ತೊಂದು ಕೊಡುಗೆಯೆಂದರೆ ವಿದೇಶಿ ವ್ಯವಹಾರ ಕೈಕೊಂಡು, ತಮ್ಮ ಉದ್ದಿಮೆಯಿಂದ ವಿದೇಶಿ ವಿನಿಮಯ ಸಂಗ್ರಹಣೆಯಲ್ಲಿ ತಾವು ಭಾಗಿಗಳಾದ ಕೊಡುಗೆ ಶೇ. ೧ ರಷ್ಟು ಪ್ರತಿಸ್ಪಂದಿಗಳದ್ದಾಗಿದೆ. ಈ ತರಹದ ಭಾವನೆಯು ಹೆಚ್ಚು ಹೆಚ್ಚು ಉದ್ದಿಮೆದಾರರಲ್ಲಿ ಬೆಳೆಯಬೇಕು. ಜಾಗತಿಕವಾಗಿ ಚಿಂತನೆಗೊಂಡು ಸ್ಥಳೀಯವಾಗಿ ಕಾರ್ಯೋನ್ಮುಖರಾಗಬೇಕು ಎಂಬುವದು ಉದ್ದಿಮೆ ರಂಗಕ್ಕೆ ಭೂಷಣ.

ಕೋಷ್ಟಕ : ೬.೨೯ ತೃಪ್ತ ಉದ್ದಿಮೆದಾರರ ಕೊಡುಗೆಗಳು

ಅ.ಸಂ.	ವಿವರಗಳು	ಅಥಣಿ	ಬೈಲಹೊಂಗಲ	ಬೆಳಗಾವಿ	ಚಿಕ್ಕೋಡಿ	ಗೋಕಾಕ	ಹುಕ್ಕೇರಿ	ಖಾನಾಪೂರ	ರಾಯಬಾಗ	ರಾಮದುರ್ಗ	ಸವದತ್ತಿ
೧	ಯುವ ಉದ್ದಿಮೆದಾರರಿಗೆ ಆಹ್ವಾನ	೧೫ (೩೬)	೨೭ (೩೫)	೨೭ (೨೮)	೧೨ (೩೩)	೦೬ (೧೫)	೨೧ (೪೪)	೦೩ (೧೩)	೦೯ (೨೩)	೦೬ (೩೩)	-
೨	ಯುವ ಉದ್ದಿಮೆದಾರರಿಗೆ ಪ್ರೇರಣೆ ಮತ್ತು ತರಬೇತಿ	೨೭ (೬೪)	೨೭ (೩೫)	೪೨ (೪೪)	೧೫ (೪೨)	೨೪ (೬೨)	೧೮ (೩೮)	೨೧ (೮೭)	೧೮ (೪೬)	೧೨ (೬೭)	೦೩ (೧೦೦)
೩	ಉದ್ದಿಮೆ ತರಬೇತಿ ಸಂಸ್ಥೆಗಳಿಗೆ ಮಾರ್ಗದರ್ಶನ	-	-	೧೨ (೧೨)	-	-	೦೩ (೦೬)	-	-	-	-
೪	ಹೊಸ ಸರಕು + ಸೇವೆಗಳ ಪೂರೈಕೆ	-	೨೧ (೨೭)	೧೨ (೧೨)	೦೯ (೨೫)	೦೯ (೨೩)	೦೬ (೧೨)	-	೧೨ (೩೧)	-	-
೫	ಸರಕು ರಫ್ತುಗೊಳಿಸಿ, ವಿದೇಶಿ ವಿನಿಮಯ ಹೆಚ್ಚಿಸಿದ್ದರೆ ಸಂತೃಪ್ತಿ	-	೦೩ (೦೩)	೦೩ (೦೪)	-	-	-	-	-	-	-

(*ಆವರಣದಲ್ಲಿರುವ ಸಂಖ್ಯೆಗಳು ಪ್ರತಿಶತ ಪ್ರಮಾಣವನ್ನು ಸೂಚಿಸುತ್ತವೆ)

೬.೩೪ : ಜಾಗತೀಕರಣದ ಗಾಳಿ :

ಕಳೆದ ಮೂರು ದಶಕಗಳಿಂದ ದೇಶದಲ್ಲಿ ಜಾಗತೀಕರಣದ ಗಾಳಿ ಬೀಸುತ್ತಿದೆ. ಇದು ಹಲವಾರು ತರಹದ ಸುಗಂಧ ಬೀರುವದರೊಂದಿಗೆ ಕೆಲವು ರಂಗಗಳಲ್ಲಿ ಬಿರುಗಾಳಿಯನ್ನು ಎಬ್ಬಿಸಿದೆ. ಈ ಕುರಿತಾದ ಬದಲಾವಣೆಗಳನ್ನು ತಡೆಯುವುದು ಸಾಧ್ಯವಿಲ್ಲ. ಏಕೆಂದರೆ ಅದು ಇಡಿಯಾಗಿ ದೇಶದ ಆರ್ಥಿಕ ದೃಷ್ಟಿಯಿಂದ ಅಚಲ ನಿರ್ಧಾರವಾಗಿದೆ. ಜಾಗತೀಕರಣದ ಪ್ರವೇಶ, ಅದರಿಂದಾಗುವ ಪ್ರತಿಕೂಲ ಅಥವಾ ಅನುಕೂಲ ಪರಿಣಾಮಗಳಿಗೆ ಎದುರು ನಿಲ್ಲುವದು ಅನಿವಾರ್ಯವಾಗುತ್ತದೆ. ಇದನ್ನು ಸಕಾರಾತ್ಮಕವಾಗಿ ಸ್ವೀಕರಿಸಿ, ಅದರಲ್ಲಿಯೇ ಪ್ರಯೋಜನಗಳನ್ನು ಹುಟ್ಟಿಸಿಕೊಳ್ಳುವಂತಾದರೆ ಉದ್ದಿಮೆಯನ್ನು ಇನ್ನೂ ಎತ್ತರದ ಮಟ್ಟಕ್ಕೇರಿಸಬಹುದು. ಅದರಲ್ಲಿಯ ಅವಗುಣಗಳನ್ನು ಕಂಡು ಹಿಡಿಯುತ್ತಾ ನಕಾರಾತ್ಮಕ ಭಾವನೆ ಹೊಂದಿದರೆ, ಸಮಸ್ಯೆಗಳ ಸರಮಾಲೆ ಸೃಷ್ಟಿಗೊಳ್ಳುತ್ತದೆ.

ಪ್ರತಿಸ್ಪಂದಿಗಳು ಜಾಗತೀಕರಣವನ್ನು ಹೇಗೆ ಸ್ವೀಕರಿಸಿದ್ದಾರೆಂದು ವಿಚಾರಿಸಿದ್ದಕ್ಕೆ ಶೇ. ೮೭ ರಷ್ಟು ಸಕಾರಾತ್ಮಕವಾಗಿ ಸ್ವೀಕರಿಸಿದ್ದು ಹೆಮ್ಮೆಯ ಸಂಗತಿ. ಅದು ಉದ್ಯಮಶೀಲರ ಅತ್ಯುತ್ತಮ ಗುಣ. ಇದನ್ನು ನವಪೀಳಿಗೆಗೆ ಮಾದರಿಗೊಳಿಸಬಹುದು. ಅಲ್ಲದೆ ಈ ಗುಣವನ್ನು ಬಲಿಷ್ಠಗೊಳಿಸಬೇಕು.

ಕೆಲವೇ ಕೆಲವು (ಶೇ. ೧೩) ಪ್ರತಿಸ್ಪಂದಿಗಳು ಅದನ್ನು ನಕಾರಾತ್ಮಕವಾಗಿ ಕಂಡಿದ್ದಾರೆ. ಅವರ ಅನುಭವಗಳು ಬೇರೆಯಾಗಿರುವ ಸಾಧ್ಯತೆಯಿದೆ. ಅವುಗಳನ್ನು ತಿಳಿದುಕೊಂಡು, ಪರಿಹರಿಸುವ ಕ್ರಮದಿಂದ ಸಕಾರಾತ್ಮಕತೆಗೆ ಸಾಗಿಸುವದು ಉತ್ತಮ ಮಾರ್ಗವಾಗುತ್ತದೆ.

೬.೩೫ : ಜಾಗತೀಕರಣದ ಸಕಾರಾತ್ಮಕದ ಅವಕಾಶಗಳು :

ಜಾಗತೀಕರಣದ ಪ್ರವೇಶವಾಗಿದೆ. ಅದನ್ನು ತಡೆಯಲಾಗದು, ಬದಲಾಯಿಸುವುದು ವ್ಯಕ್ತಿಗಳ ಅಥವಾ ಉದ್ದಿಮೆದಾರರ ಸಾಮರ್ಥ್ಯವು ಅಲ್ಲ. ಆದ್ದರಿಂದ ಅದನ್ನು ಸಕಾರಾತ್ಮಕವಾಗಿ ಸ್ವೀಕರಿಸಿ, ಅದರಲ್ಲಿಯೇ ಯೋಜನೆಗಳನ್ನು ಹುಡುಕಿಕೊಂಡು ಅದರ ಸೆಳುವಿನಲ್ಲಿ ತೇಲುವುದು ಜಾಣತನ. ಜಾಗತೀಕರಣವು ನೀಡಿದ ಅವಕಾಶಗಳನ್ನು **ಕೋಷ್ಟಕ ೬.೩೦**ರಲ್ಲಿ ಪ್ರಕಟಗೊಳಿಸಿದೆ.

ಒಟ್ಟಿನಲ್ಲಿ ಬದಲಾವಣೆಯನ್ನು ಪ್ರಗತಿಗೆ ಸಾಧನವೆಂದು ಸ್ವೀಕರಿಸಿ, ಮುನ್ನುಗುವ ಭಾವನೆ ಮಹತ್ವದ್ದಾಗಿದೆ. ಪ್ರಸ್ತುತ ಬದಲಾವಣೆಯನ್ನು ಹೀಗೆಯೇ ಸ್ವೀಕರಿಸಿದವರಲ್ಲಿ ಬಹುಮತದ ಶೇ. ೪೦ ರಷ್ಟು ಪ್ರತಿಸ್ಪಂದಿಗಳು ಸೇರಿದ್ದಾರೆ. ಧೈರ್ಯದಿಂದ ಜಾಗತೀಕರಣವನ್ನು ಎದುರಿಸಿದರೆ ಸ್ಪರ್ಧೆಯಲ್ಲಿ ಗೆಲುವು ಸಾಧ್ಯವೆಂದು ಅವರ ಅಭಿಪ್ರಾಯ.

ಜಾಗತೀಕರಣದಿಂದ ವಿದೇಶಿ ಉದ್ದಿಮೆದಾರರ ಸರಕು - ಸೇವೆಗಳೊಂದಿಗೆ ಅವರ ನೈಪುಣ್ಯತೆ - ಗುಣಮಟ್ಟದ ತಿಳುವಳಿಕೆ ಸಾಧ್ಯವಾಗುತ್ತದೆ. ಅದೇ ನಿಟ್ಟಿನಲ್ಲಿ ತಮ್ಮ ಉತ್ಪನ್ನಗಳನ್ನು ಉನ್ನತೀಕರಣಗೊಳಿಸಿ, ಗುಣಮಟ್ಟ ಅಧಾರಿತ ಸ್ಪರ್ಧೆ ಮಾಡಬಹುದೆಂದು ಶೇ. ೧೫ ರಷ್ಟು ಪ್ರತಿಸ್ಪಂದಿಗಳ ಅಭಿಪ್ರಾಯ. ಸಮರ್ಥರಾದವರು ಬದುಕುತ್ತಾರೆಂಬುವುದು ನಿಜ.

ಕೋಷ್ಟಕ : ೬.೩೦ ಜಾಗತೀಕರಣದ ಬಗ್ಗೆ ಪ್ರತಿಸ್ಪಂದಿಗಳ ಸಕಾರಾತ್ಮಕ ಪ್ರತಿಕ್ರಿಯೆ

ಅ.ಸಂ.	ವಿವರಗಳು	ಅಥಣಿ	ಬೈಲಹೊಂಗಲ	ಬೆಳಗಾವಿ	ಚಿಕ್ಕೋಡಿ	ಗೋಕಾಕ	ಹುಕ್ಕೇರಿ	ಖಾನಾಪೂರ	ರಾಯಬಾಗ	ರಾಮದುರ್ಗ	ಸವದತ್ತಿ
೧	ಸ್ಪರ್ಧೆಯಿಂದ ಪ್ರಗತಿ ಸಾಧ್ಯ	೧೫ (೨೯)	೨೭ (೪೫)	೪೫ (೩೭)	೩೦ (೪೫)	೩೦ (೩೮)	೩೯ (೩೯)	೧೫ (೩೮)	೨೪ (೨೭)	೩೦ (೬೩)	೩೦ (೪೩)
೨	ಸಂಸ್ಥೆಯ ಕಾರ್ಯಾತ್ಮಕ ಮಟ್ಟ ಹೆಚ್ಚುವುದು	೦೯ (೧೭)	೦೬ (೧೦)	೨೧ (೧೭)	೦೩ (೦೫)	೧೨ (೧೫)	೦೬ (೦೬)	೦೩ (೦೮)	೦೯ (೧೦)	-	೦೩ (೦೪)
೩	ದೊಡ್ಡ ಉದ್ದಿಮೆ ಜೊತೆಗೆ ಬೆಳೆಯುವುದು	೦೬ (೧೨)	೦೬ (೧೦)	೧೫ (೧೨)	೧೨ (೧೮)	೦೯ (೧೨)	೦೯ (೦೯)	೦೩ (೦೮)	೦೬ (೦೭)	೧೫ (೩೧)	-
೪	ಗುಣಮಟ್ಟ ಆಧಾರಿತ ಸ್ಪರ್ಧೆ	೦೯ (೧೮)	೧೮ (೩೦)	೨೧ (೧೭)	೦೩ (೦೫)	೦೬ (೦೮)	೨೧ (೨೨)	೦೩ (೦೮)	೨೧ (೨೩)	-	೧೫ (೨೨)
೫	ಹೊಸ ಪೀಳಿಗೆಗೆ ಆಹ್ವಾನ	೦೬ (೦೬)	-	೦೯ (೦೭)	೦೬ (೦೯)	೧೨ (೧೫)	೧೨ (೧೨)	೦೯ (೨೩)	೦೯ (೧೦)	೦೩ (೦೬)	೧೮ (೨೬)
೬	ಉದ್ದಿಮೆರಂಗ ಅಭಿವೃದ್ಧಿ	೦೬ (೧೨)	-	೦೯ (೦೭)	೦೬ (೦೯)	೦೬ (೦೮)	೦೩ (೦೩)	೦೬ (೧೫)	೦೯ (೧೦)	-	-
೭	ಸೇವಾಕ್ಷೇತ್ರದ ವಿಸ್ತಾರ	೦೩ (೦೬)	೦೩ (೦೫)	೦೩ (೦೩)	೦೬ (೦೯)	೦೩ (೦೪)	೦೯ (೦೯)	-	೧೨ (೧೩)	-	೦೩ (೦೫)

(*ಆವರಣದಲ್ಲಿರುವ ಸಂಖ್ಯೆಗಳು ಪ್ರತಿಶತ ಪ್ರಮಾಣವನ್ನು ಸೂಚಿಸುತ್ತವೆ)

ಜಾಗತೀಕರಣವು ಹೊಸ ಕ್ಷೇತ್ರಗಳನ್ನು ಪರಿಚಯಿಸುತ್ತದೆ. ಹೊಸ ಸರಕು - ಸೇವೆಗಳು ನವ ಪೀಳಿಗೆಯವರನ್ನು ಆಕರ್ಷಿಸುತ್ತವೆ. ಅವರಲ್ಲಿಯ ಸವಾಲು ಎದುರಿಸುವ ಶಕ್ತಿಗೆ ಸಹಾಯಕವಾಗುತ್ತದೆಯೆಂದು ಶೇ. ೧೨ರಷ್ಟು ಪ್ರತಿಸ್ಪಂದಿಗಳು ಹೇಳುತ್ತಾರೆ. ಇನ್ನು ಜಾಗತೀಕರಣವು ಬಹು ರಾಷ್ಟ್ರೀಯ ಕಂಪನಿಗಳಿಗೆ ಅವಕಾಶ ನೀಡುತ್ತದೆ. ಅದು ಬೃಹತ್ ಉದ್ದಿಮೆಗೆ ಮಣೆಹಾಕುತ್ತದೆ. ಇದು ಚಿಕ್ಕ ಉದ್ದಿಮೆ ರಂಗಕ್ಕೆ ಅವಕಾಶಗಳನ್ನು ಸೃಷ್ಟಿಸುತ್ತದೆ. ತಾವು ಅವುಗಳೊಂದಿಗೆ ಬೆಳೆಯಬೇಕೆಂದು ಶೇ. ೧೦ ರಷ್ಟು ಪ್ರತಿಸ್ಪಂದಿಗಳ ಅಭಿಪ್ರಾಯ.

ಅದರಂತೆ ತಮ್ಮ ಘಟಕದ ಕಾರ್ಯಗೈಯ್ಯುವ ದಕ್ಷತೆ - ಚಟುವಟಿಕೆಯ ಮಟ್ಟ ಹೆಚ್ಚುತ್ತದೆ ಮತ್ತು ತನ್ಮೂಲಕ ಉದ್ದಿಮೆ ರಂಗ ಅಭಿವೃದ್ಧಿಯಾಗುತ್ತದೆಯೆಂದು ಇನ್ನು ಕೆಲವು (ತಲಾ ಶೇ. ೮ ರಷ್ಟು) ಪ್ರತಿಸ್ಪಂದಿಗಳು ಸೂಚಿಸುತ್ತಾರೆ.

ಇನ್ನೊಂದು ಮಹತ್ವದ ಬೆಳವಣಿಗೆಯನ್ನು ಪ್ರತಿಸ್ಪಂದಿಗಳು ಗುರುತಿಸಿದ್ದಾರೆ. ಜಾಗತೀಕರಣದಿಂದ ಹತ್ತಾರು ಹೊಸ ಸೇವೆಗಳು ಪರಿಚಯಗೊಂಡಿವೆ. ಜನಸಾಮಾನ್ಯರು ಸಹ ಅವುಗಳಿಂದ ಆಕರ್ಷಿತರಾಗುತ್ತಿದ್ದಾರೆ. ಹಿಂದೆಂದಿಗಿಂತಲೂ ಅಧಿಕವಾಗಿ-ತೀವ್ರ ಗತಿಯಲ್ಲಿ ಸೇವಾ ಕ್ಷೇತ್ರ ಬೆಳೆಯುತ್ತದೆ. ಅದರಿಂದಾಗಿ ದೇಶದ ಆಂತರಿಕ ಉತ್ಪನ್ನದಲ್ಲಿ ಹೆಚ್ಚಿನ ವಂತಿಗೆ ಸಾಧ್ಯವಾಗುತ್ತದೆ. ಇದನ್ನು ಶೇ. ೭ ರಷ್ಟು ಪ್ರತಿಸ್ಪಂದಿಗಳು ಪುಷ್ಟಿಗೊಳಿಸುತ್ತಾರೆ.

ಈ ಅಭಿಪ್ರಾಯಗಳನ್ನು ಸಾಮಾನ್ಯೀಕರಣಗೊಳಿಸುವ ಪ್ರಯತ್ನವಾಗಬೇಕು ಅದರಿಂದಾಗಿ ಜಾಗತೀಕರಣದ ಲಾಭಗಳು ಇನ್ನು ಹೆಚ್ಚಾಗುವದರಲ್ಲಿ ಸಂಶಯವಿಲ್ಲ.

೬.೩೬ : ಜಾಗತೀಕರಣದ ನಕಾರಾತ್ಮಕ ಪರಿಣಾಮಗಳು :

ಇದಕ್ಕೆ ಸಂಬಂಧಿಸಿದ ಮುಂಚಿನ ಪ್ರಶ್ನೆಗೆ ಶೇ. ೧೩ ರಷ್ಟು ಪ್ರತಿಸ್ಪಂದಿಗಳು ಜಾಗತೀಕರಣವು ನಕಾರಾತ್ಮಕ ಅಂಶಗಳನ್ನು ಒಳಗೊಂಡಿದೆಯೆಂದು ಹಂಚಿಕೊಂಡಿದ್ದಾರೆ. ಈ ಕುರಿತು ನೀಡಿದ ಕಾರಣಗಳನ್ನು **ಕೋಷ್ಟಕ ೬.೩೧** ರಲ್ಲಿ ತೋರ್ಪಡಿಸಲಾಗಿದೆ.

ಜಾಗತೀಕರಣದಿಂದ ಆತಂಕದಲ್ಲಿದ್ದೇವೆಂಬ ಅಭಿಪ್ರಾಯ ಶೇ. ೧೦ ರಷ್ಟು ಪ್ರತಿಸ್ಪಂದಿಗಳದ್ದಾಗಿದೆ. ದೊಡ್ಡ ಉದ್ದಿಮೆದಾರರೊಂದಿಗೆ ಪೈಪೋಟಿಗಿಳಿಯಲು ತಮ್ಮ ಬಂಡವಾಳದ ಕೊರತೆಯು ಶೇ. ೧೬ ರಷ್ಟು ಪ್ರತಿಸ್ಪಂದಿಗಳನ್ನು ಕಾಡುತ್ತಿದೆ. ಇನ್ನು ಶೇ. ೧೫ ರಷ್ಟು ಪ್ರತಿಸ್ಪಂದಿಗಳು ತಾವು ಬೃಹತ್ ಉದ್ದಿಮೆಗಳ ಹಿಡಿತದಲ್ಲಿ ಮುಂದುವರಿಯಬೇಕಾಗುತ್ತದೆ ಮತ್ತು ತಮ್ಮತನ ಉಳಿಸಿಕೊಳ್ಳುವ ಸಾಧ್ಯತೆಯ ಬಗ್ಗೆ ಹೆದರಿಕೆಯಾಗುತ್ತದೆಯೆನ್ನುತ್ತಾರೆ.

ಕೋಷ್ಟಕ : ೬.೩೧ ಜಾಗತೀಕರಣದ ಬಗ್ಗೆ ಪ್ರತಿಸ್ಪಂದಿಗಳ ನಕಾರಾತ್ಮಕ ಪ್ರತಿಕ್ರಿಯೆ

ಅ.ಸಂ.	ವಿವರಗಳು	ಅಥಣಿ	ಬೈಲಹೊಂಗಲ	ಬೆಳಗಾವಿ	ಚಿಕ್ಕೋಡಿ	ಗೋಕಾಕ	ಹುಕ್ಕೇರಿ	ಖಾನಾಪೂರ	ರಾಯಬಾಗ	ರಾಮದುರ್ಗ	ಸವದತ್ತಿ
೧	ತೀವ್ರ ಆಂತಕದಲ್ಲಿವೆ	-	೦೬ (೨೦)	೦೩ (೧೬)	-	-	-	-	-	೦೬ (೬೭)	-
೨	ಬಂಡವಾಳದ ಕೊರತೆ	-	೦೯ (೩೦)	೦೩ (೧೬)	-	-	-	೦೩ (೧೧)	-	-	೦೩ (೧೦೦)
೩	ಕಾರ್ಮಿಕರ ಹೊರಹೋಗುವಿಕೆ	-	೦೬ (೨೦)	-	-	-	-	೦೬ (೨೨)	೦೩ (೩೩)	೦೩ (೩೩)	-
೪	ಗುಣಮಟ್ಟ ಕಾಯ್ದುಕೊಳ್ಳುವ ಭಯ	-	-	೦೩ (೧೬)	-	-	-	-	-	-	-
೫	ಸರ್ಕಾರಗಳ ಸಹಾಯದ ಅಭದ್ರತೆ	-	೦೬ (೨೦)	೦೬ (೩೬)	-	-	-	೦೩ (೧೧)	-	-	-
೬	ಕಚ್ಚಾ ಸಾಮಗ್ರಿಗಳ ಕೊರತೆ	-	-	೦೩ (೧೬)	-	-	-	-	-	-	-
೭	ದೊಡ್ಡ ಉದ್ದಿಮೆಗಳ ಬಿಗಿ ಹಿಡಿತ	-	೦೩ (೧೦)	-	-	-	-	೧೫ (೫೬)	೦೬ (೬೭)	-	-

(*ಆವರಣದಲ್ಲಿರುವ ಸಂಖ್ಯೆಗಳು ಪ್ರತಿಶತ ಪ್ರಮಾಣವನ್ನು ಸೂಚಿಸುತ್ತವೆ)

ಆರ್ಥಿಕತೆಯಲ್ಲಿ ಸಾಕಷ್ಟು ಆಕರ್ಷಣೆಗಳೊಂದಿಗೆ ಪ್ರವೇಶಿಸುವ ಘಟಕಗಳು ತಮ್ಮ ಮಾನವ ಸಂಪನ್ಮೂಲವನ್ನು ಸೆಳೆದುಕೊಳ್ಳುತ್ತವೆ ಎಂಬ ಭಯವು ಶೇ. ೧೧ ರಷ್ಟು ಪ್ರತಿಸ್ಪಂದಿಗಳನ್ನು ಎದೆಗುಂದಿಸುತ್ತದೆ. ಇನ್ನು ಸರ್ಕಾರವು ಅಭಯಹಸ್ತ ನೀಡದಿರುವದು, ಗುಣಮಟ್ಟ ಕಾಯ್ದುಕೊಳ್ಳುವ ಅಸಾಮಾರ್ಥ್ಯ, ಕಚ್ಚಾ ಸಾಮಗ್ರಿಗಳ ಕೊರತೆ ಮುಂತಾದವುಗಳು ಅಸಾಮಾರ್ಥ್ಯವನ್ನು ಹುಟ್ಟಿಸುತ್ತಿದೆಯೆಂದು ಪ್ರತಿಸ್ಪಂದಿಗಳ ಅಭಿಪ್ರಾಯ.

೬.೩೭ : ವಿಸ್ತಾರಗೊಳ್ಳುವ ಯೋಜನೆಗಳು :

ಉದ್ದಿಮೆಯ ಘಟಕಗಳಲ್ಲಿ ಪ್ರಗತಿ ನಿರಂತರ. ಒಂದು ಮಟ್ಟದಲ್ಲಿ ಯಶಸ್ವಿಯಾಗಿ ನೆಲೆಯೂರಿದ ಮೇಲೆ ಇನ್ನು ಹೆಚ್ಚಿಗೆ ವಿಸ್ತಾರಗೊಳ್ಳುವ ಯೋಜನೆಗಳನ್ನು ರೂಪಿಸುವುದು ಉದ್ದಿಮೆದಾರರಲ್ಲಿ ಸಾಮಾನ್ಯ. ಈ ಕುರಿತು ಪ್ರತಿಸ್ಪಂದಿಗಳನ್ನು ಕೇಳಿದಾಗ ಶೇ. ೫೭ ರಷ್ಟು ಪ್ರತಿಸ್ಪಂದಿಗಳು ಯೋಜನೆ ಹೊಂದಿದ್ದಾರೆಂದು ಮತ್ತು ಉಳಿದ ಶೇ. ೪೩ರಷ್ಟು ಪ್ರತಿಸ್ಪಂದಿಗಳು ಯಾವ ಯೋಜನೆ ಹೊಂದಿಲ್ಲವೆಂದು ಅಭಿಪ್ರಾಯ ನೀಡಿದ್ದಾರೆ.

ವಿಸ್ತರಣೆಯ ಯೋಜನೆ ಹೊಂದಿದ ಬಹುಮತದ ಪ್ರತಿಸ್ಪಂದಿಗಳು ತಮ್ಮ ಉದ್ದಿಮೆಯನ್ನು ಮಧ್ಯಮ ಕೈಗಾರಿಕೆಯನ್ನಾಗಿ ಪರಿವರ್ತಿಸುವ ವಿಚಾರ ಹೊಂದಿದ್ದಾಗಿ ಹೇಳಿದ್ದಾರೆ. ಇನ್ನುಳಿದ ಶೇ. ೨೦ ರಷ್ಟು ಉದ್ದಿಮೆದಾರರು ಮಾತ್ರ ದೊಡ್ಡ ಕೈಗಾರಿಕಾ ಘಟಕವನ್ನಾಗಿ ಅಭಿವೃದ್ಧಿಗೊಳಿಸುವ ಯೋಜನೆ ಹೊಂದಿದ್ದಾಗಿ ಅಭಿಪ್ರಾಯಿಸಿದ್ದಾರೆ.

೬.೩೮ : ಚಟುವಟಿಕೆಗಳ ಸಾಮರ್ಥ್ಯ ವೃದ್ಧಿಸುವ ಬಗೆ :

ಘಟಕದ ಕಾರ್ಯ ಚಟುವಟಿಕೆ ಸಾಮರ್ಥ್ಯವನ್ನು ಹೆಚ್ಚಿಸಲು ಹಲವಾರು ತರಹದ ಸಂಪನ್ಮೂಲ ಸಂಗ್ರಹಿಸಬೇಕಾಗುತ್ತದೆ. ಅದಕ್ಕಾಗಿ ಸಾಕಷ್ಟು ಬಂಡವಾಳ ಸೇರಿಸಬೇಕಾಗುತ್ತದೆ. ಹೆಚ್ಚುವರಿ ಬಂಡವಾಳ ಸಂಗ್ರಹಿಸಲು ಹಲವಾರು ಆಯ್ಕೆಗಳಲ್ಲಿ ಘಟಕಗಳನ್ನು ಪರಿವರ್ತನೆಗೊಳಿಸುವದು ಒಂದು ದಾರಿಯಾಗಿದೆ. ಅಂದರೆ ಏಕವ್ಯಕ್ತಿ ಒಡೆತನದ ಘಟಕಗಳನ್ನು ಪಾಲುಗಾರಿಕೆ ಸಂಸ್ಥೆಯಾಗಿ, ಇಲ್ಲವೆ ಪಾಲುಗಾರಿಕೆಯನ್ನು ಖಾಸಗಿ ಅಥವಾ ಸಾರ್ವಜನಿಕ ಕಂಪನಿಯನ್ನಾಗಿ, ಇಲ್ಲವೆ ಖಾಸಗಿ ಕಂಪನಿಯನ್ನು ಸಾರ್ವಜನಿಕ ಕಂಪನಿಯಾಗಿ ಪರಿವರ್ತನೆಗೊಳಿಸಿ ಬಂಡವಾಳ ಸಂಗ್ರಹಿಸುವ ಸಾಧ್ಯತೆಗಳಿರುತ್ತವೆ. ಈ ಪ್ರಸ್ತುತ ಪ್ರತಿಸ್ಪಂದಿಗಳ ವಿಚಾರ ತಿಳಿದು **ಕೋಷ್ಟಕ ೬.೩೯** ರಲ್ಲಿ ನೀಡಲಾಗಿದೆ.

ಕೋಷ್ಟಕ : ೬.೩೨ ಘಟಕ ಪರಿವರ್ತನೆ ಕುರಿತು ಪ್ರತಿಸ್ಪಂದಿಗಳ ಪ್ರತಿಕ್ರಿಯೆ

ಅ.ಸಂ.	ವಿವರಗಳು	ಅಥಣಿ	ಬೈಲಹೊಂಗಲ	ಬೆಳಗಾವಿ	ಚಿಕ್ಕೋಡಿ	ಗೋಕಾಕ	ಹುಕ್ಕೇರಿ	ಖಾನಾಪೂರ	ರಾಯಬಾಗ	ರಾಮದುರ್ಗ	ಸವದತ್ತಿ
೧	ಖಾಸಗಿ ಕಂಪನಿಯನ್ನಾಗಿಸುವದು	೧೫ (೬೩)	-	೨೭ (೫೦)	೧೫ (೧೦೦)	೧೨ (೮೦)	೦೩ (೧೭)	೧೫ (೭೧)	೧೨ (೫೭)	೧೨ (೧೦೦)	೦೩ (೧೦೦)
೨	ಸಾರ್ವಜನಿಕ ಕಂಪನಿಯನ್ನಾಗಿಸುವದು	-	-	೦೯ (೧೭)	-	೦೩ (೨೦)	-	-	-	-	-
೩	ಪಾಲುಗಾರಿಕೆ ಕಂಪನಿಯನ್ನಾಗಿಸುವದು	೦೯ (೩೭)	-	೧೮ (೩೩)	-	-	೧೫ (೮೩)	೦೬ (೨೯)	೦೯ (೪೩)	-	-

(*ಆವರಣದಲ್ಲಿರುವ ಸಂಖ್ಯೆಗಳು ಪ್ರತಿಶತ ಪ್ರಮಾಣವನ್ನು ಸೂಚಿಸುತ್ತವೆ)

ಹೆಚ್ಚಿನ ಪ್ರತಿಸ್ಪಂದಿಗಳು (ಶೇ. ೮೦) ತಮ್ಮ ಘಟಕಗಳನ್ನು ಮಧ್ಯಮ ಕೈಗಾರಿಕೆಯನ್ನಾಗಿ ಅಭಿವೃದ್ಧಿಸುವುದಾಗಿ ಹೇಳಿಕೊಂಡಿದ್ದಾರೆ. ಆದ್ದರಿಂದ ಇದಕ್ಕೆ ಪೂರಕವಾಗಿ ತಮ್ಮ ಘಟಕಗಳನ್ನು ಖಾಸಗಿ ಕಂಪನಿಯಾಗಿ ಪರಿವರ್ತಿಸುವ ಹೊಂದಿದ್ದೇವೆಂದು ಶೇ. ೬೪ರಷ್ಟು ಪ್ರತಿಸ್ಪಂದಿಗಳು ಹೇಳಿದ್ದಾರೆ. ಬಹುಶ: ಅವರ ಘಟಕಗಳು ಸದ್ಯ ಪಾಲುಗಾರಿಕೆ ಸಂಸ್ಥೆಯದ್ದಾಗಿರಬೇಕೆಂದು ಭಾವಿಸಬಹುದು. ಅದರಂತೆ, ಶೇ. ೩೨ ರಷ್ಟು ಪ್ರತಿಸ್ಪಂದಿಗಳು ಪಾಲುಗಾರಿಕೆ ಸಂಸ್ಥೆಯನ್ನಾಗಿಸುತ್ತೇವೆಂದು ಹೇಳಿದ್ದನ್ನು ಗಮನಿಸಿದರೆ ಸದ್ಯ ಅವರದು ಏಕವ್ಯಕ್ತಿ ಒಡೆತನದ್ದಾಗಿರಬಹುದೆಂದು ತಿಳಿಯಬಹುದು. ಇನ್ನೂ ಕೇವಲ ಶೇ. ೪ ರಷ್ಟು ಮಾತ್ರ ಸಾರ್ವಜನಿಕ ಕಂಪನಿಯಾಗಿಸುವದೆಂದು ಹೇಳಿದ್ದಾರೆ. ಬಹುಶ: ಅವರ ಘಟಕಗಳು ಸದ್ಯ ಪಾಲುಗಾರಿಕೆಯ ಅಥವಾ ಖಾಸಗಿ ಕಂಪನಿಯ ರೂಪದ್ದು ಆಗಿರಬಹುದು. ಇನ್ನೊಂದು ಸಾಧ್ಯತೆಯೆಂದರೆ ಏಕವ್ಯಕ್ತಿ ಒಡೆತನದ ವ್ಯಕ್ತಿಯು ಸಹ ಸಾರ್ವಜನಿಕ ಕಂಪನಿ ಪ್ರಾರಂಭಿಸಬಹುದು.

ಒಟ್ಟಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಖಾಸಗಿ ಕಂಪನಿಗಳನ್ನು ಪ್ರಾರಂಭಿಸುವ ಚಿಂತನೆ ಕಂಡು ಬರುತ್ತದೆ.

೬.೩೯ : ಘಟಕ ಪರಿವರ್ತನೆಯ ಯೋಜನೆ :

ಯಾವುದೇ ತರಹದ ಉದ್ದಿಮೆ ಸ್ಥಾಪನೆಗೆ ಅಥವಾ ಇದ್ದಂತಹ ಘಟಕಗಳ ಪರಿವರ್ತನೆಗೆ ವ್ಯವಸ್ಥಿತವಾದ ಯೋಜನೆ ಹೊಂದಿರಬೇಕಾಗುತ್ತದೆ. ಅದರ ಯಶಸ್ಸು ಯೋಜನಾ ಬದ್ಧತೆ - ಸಿದ್ಧತೆಯ ಮೇಲೆ ಅವಲಂಬಿಸಿದೆ. ಪ್ರಸ್ತುತ ಪ್ರತಿಸ್ಪಂದಿಗಳು ಘಟಕ ವಿಸ್ತರಿಸುವ/ಪರಿವರ್ತಿಸುವ ವಿಚಾರ ಹೊಂದಿರುವದಾಗಿ ಹೇಳಿದ್ದಾರೆ. ಈ ಕುರಿತಾಗಿ ಅವರ ಯೋಜನೆ ಸಿದ್ಧತೆಯ ಬಗ್ಗೆ ಪ್ರಶ್ನಿಸಿದಾಗ ನೀಡಿದ ಅಭಿಪ್ರಾಯಗಳನ್ನು **ಕೋಷ್ಟಕ ೬.೩೩** ರಲ್ಲಿ ಪ್ರಕಟಗೊಳಿಸಿದೆ.

ಇದನ್ನು ಅಭ್ಯಸಿಸಿದಾಗ ಕಂಡು ಬರುವದೇನೆಂದರೆ ಬಹಳಷ್ಟು ಪ್ರತಿಸ್ಪಂದಿಗಳಲ್ಲಿ ಘಟಕ ಪರಿವರ್ತಿಸುವ ಕನಸು. ಅವರಲ್ಲಿ ಯಾವುದೊಂದು ನಿಶ್ಚಿತ ಯೋಜನೆಯು ಇರುವುದಿಲ್ಲ. ಕೇವಲ ಶೇ. ೧ ರಷ್ಟು ಪ್ರತಿಸ್ಪಂದಿಗಳ ಮಾತ್ರ ಯೋಜನೆ ಸಿದ್ಧಪಡಿಸಿದುದಾಗಿ ಹೇಳಿದ್ದಾರೆ. ಇನ್ನುಳಿದ ಶೇ. ೧೧ರಷ್ಟು ಪ್ರತಿಸ್ಪಂದಿಗಳಲ್ಲಿ ಪರಿವರ್ತನೆಗಾಗಿ ಯೋಜನೆ ಇನ್ನು ತಯಾರಿ ಹಂತದಲ್ಲಿದೆಯೆಂದು, ಇನ್ನು ಪೂರ್ಣ ಸ್ವರೂಪ ಪಡೆದಿಲ್ಲವೆಂದು ತಿಳಿಸಿರುತ್ತಾರೆ.

ಅಂದರೆ ಬಹುತೇಕ ಪ್ರತಿಸ್ಪಂದಿಗಳ ಕನಸು ಸಾಕಾರಗೊಳ್ಳಲು ಸಾಕಷ್ಟು ಪ್ರೇರಣೆ, ಮಾರ್ಗದರ್ಶನ ಮತ್ತು ಪ್ರೋತ್ಸಾಹದ ಅವಶ್ಯಕತೆಯಿದೆ.

೬.೪೦ : ಯೋಜನಾವಧಿ :

ಸಿದ್ಧವಾದ ಯೋಜನೆಯು ಕಾರ್ಯಗತಗೊಳ್ಳುವುದು ಅವಶ್ಯ. ಏಕೆಂದರೆ ಸಿದ್ಧಗೊಂಡ ಯೋಜನೆಯ ಅಂದಾಜು ಮೊತ್ತಗಳು ಕಾಲಮಿತಿಯನ್ನು ಹೊಂದಿರುತ್ತವೆ. ವಿಳಂಬವಾದರೆ ಮತ್ತೇ ದೀರ್ಘ ವಿಧಿ - ವಿಧಾನಗಳನ್ನು ಅಳವಡಿಸಬೇಕಾಗುತ್ತದೆ. ಈ ಕುರಿತು ಪ್ರತಿಸ್ಪಂದಿಗಳು ಸಿದ್ಧಗೊಳಿಸಿದ ತಮ್ಮ ಯೋಜನೆ ಕಾರ್ಯರೂಪಕ್ಕೆ ಬರುವದಕ್ಕೆ ಬೇಕಾಗುವ ಅವಧಿಯ ಬಗ್ಗೆ ವಿಚಾರಿಸಲಾಯಿತು. ಅವರ ಅಭಿಪ್ರಾಯಗಳು **ಕೋಷ್ಟಕ ೬.೩೪**ರಲ್ಲಿ ನೀಡಿರುವುದು ಕಂಡು ಬರುತ್ತವೆ.

ಕೋಷ್ಟಕ : ೬.೩೩ ಹೊಸ ಘಟಕ ಸ್ಥಾಪನೆಯ ಕುರಿತು ಉದ್ದಿಮೆದಾರರ ಯೋಜನೆಗಳು

ಅ.ಸಂ.	ವಿವರಗಳು	ಅಥಣಿ	ಬೈಲಹೊಂಗಲ	ಬೆಳಗಾವಿ	ಚಿಕ್ಕೋಡಿ	ಗೋಕಾಕ	ಹುಕ್ಕೇರಿ	ಖಾನಾಪೂರ	ರಾಯಬಾಗ	ರಾಮದುರ್ಗ	ಸವದತ್ತಿ
೧	ಸಿದ್ಧವಾಗಿದೆ	-	-	೦೬ (೧೩)	-	-	-	-	-	-	-
೨	ತಯಾರಿ ಹಂತದಲ್ಲಿದೆ	-	-	೨೭ (೫೬)	-	೦೩ (೨೦)	-	-	೦೬ (೨೯)	-	-
೩	ಕನಸಾಗಿದೆ	೨೪ (೧೦೦)	-	೧೫ (೩೧)	೧೮ (೧೦೦)	೧೨ (೮೦)	೧೮ (೧೦೦)	೨೧ (೧೦೦)	೧೫ (೭೧)	೧೨ (೧೦೦)	೦೩ (೧೦೦)

(*ಆವರಣದಲ್ಲಿರುವ ಸಂಖ್ಯೆಗಳು ಪ್ರತಿಶತ ಪ್ರಮಾಣವನ್ನು ಸೂಚಿಸುತ್ತವೆ)

ಕೋಷ್ಟಕ : ೬.೩೪ ಹೊಸ ಘಟಕ ಸ್ಥಾಪನೆಗೆ ಉದ್ದಿಮೆದಾರರಿಗೆ ಬೇಕಿರುವ ಅವಧಿಯ ಸಮೀಕ್ಷೆ

ಅ.ಸಂ.	ವಿವರಗಳು	ಅಥಣಿ	ಬೈಲಹೊಂಗಲ	ಬೆಳಗಾವಿ	ಚಿಕ್ಕೋಡಿ	ಗೋಕಾಕ	ಹುಕ್ಕೇರಿ	ಖಾನಾಪೂರ	ರಾಯಬಾಗ	ರಾಮದುರ್ಗ	ಸವದತ್ತಿ
೧	ಒಂದು ವರ್ಷ	-	-	೧೫ (೬೩)	-	೦೩ (೧೦೦)	-	-	-	-	-
೨	ಎರಡು ವರ್ಷ	-	-	೦೩ (೧೩)	-	-	-	೦೩ (೧೦೦)	-	-	-
೩	ಮೂರು ವರ್ಷ	-	-	೦೬ (೨೪)	-	-	-	-	-	-	-
೪	ಅದಕ್ಕಿಂತ ಹೆಚ್ಚು ವರ್ಷ	-	-	-	-	-	-	-	೦೩ (೧೦೦)	೦೩ (೧೦೦)	-

(*ಆವರಣದಲ್ಲಿರುವ ಸಂಖ್ಯೆಗಳು ಪ್ರತಿಶತ ಪ್ರಮಾಣವನ್ನು ಸೂಚಿಸುತ್ತವೆ)

ಇದರಿಂದ ಕಂಡು ಬರುವ ಅಂಶವೆಂದರೆ ತಮ್ಮ ಯೋಜನೆಯು ಒಂದು ವರ್ಷದ ಅವಧಿಯಲ್ಲಿ ಸಾಕಾರಗೊಳ್ಳುತ್ತವೆಂದು ಬಹುಮತದ ಪ್ರತಿಸ್ಪಂದಿಗಳು ಹೇಳುತ್ತಾರೆ. ಈ ತರಹದ ಅಭಿಪ್ರಾಯಗಳು ಕೇವಲ ಎರಡು ತಾಲೂಕಿನ (ಬೆಳಗಾವಿ ಮತ್ತು ಗೋಕಾಕ) ಪ್ರತಿಸ್ಪಂದಿಗಳಿಂದ ಬಂದಿದ್ದು ಗಮನಾರ್ಹ. ಎರಡು ಮತ್ತು ಮೂರು ವರ್ಷಕ್ಕಿಂತ ಹೆಚ್ಚಿನ ಅವಧಿ ತಗಲುವದೆಂದು ಸಮನಾದ ಪ್ರತಿಸ್ಪಂದಿಗಳ ಅಭಿಪ್ರಾಯಗಳಾಗಿವೆ. ಇದು ಸಹ ಕೇವಲ ಬೆಳಗಾವಿ, ಖಾನಾಪೂರ, ರಾಯಬಾಗ ಮತ್ತು ರಾಮದುರ್ಗ ತಾಲೂಕಿನ ಪ್ರತಿಸ್ಪಂದಿಗಳಿಂದ ಬಂದಂತಹ ಅಭಿಪ್ರಾಯಗಳಾಗಿವೆ.

ಇನ್ನು ಮೂರು ವರ್ಷಗಳ ಅವಧಿ ತಗಲುವದೆಂದು ಅತೀ ಕಡಿಮೆಯ ಪ್ರತಿಸ್ಪಂದಿಗಳಿಂದ ಬಂದಂತಹ ಅಬಿಪ್ರಾಯವಾಗಿದೆ. ಆದ್ದರಿಂದ ತಮ್ಮ ಘಟಕಗಳನ್ನು ಪರಿವರ್ತಿಸುವ ಯೋಜನೆಯನ್ನು ತೀವ್ರವಾಗಿ ಕಾರ್ಯಗತಗೊಳಿಸಬೇಕೆಂಬ ತಿಳುವಳಿಕೆ ಪ್ರತಿಸ್ಪಂದಿಗಳಲ್ಲಿ ಇರುವದು ಕಂಡು ಬರುತ್ತದೆ.

೬.೪೧ : ಹೊಸ ಉದ್ದಿಮೆ ಹುಟ್ಟು ಹಾಕುವದು :

ಸಾಮಾನ್ಯವಾಗಿ ಯಶಸ್ವಿಯಾದ ಉದ್ದಿಮೆದಾರರು ಮತ್ತೊಂದು ಹೊಸ ಘಟಕ ಅಥವಾ ಉದ್ದಿಮೆಯನ್ನು ಪ್ರಾರಂಭಿಸಲು ಉತ್ಸುಕರಾಗಿರುತ್ತಾರೆ. ಈ ಕುರಿತು ಪ್ರತಿಸ್ಪಂದಿಗಳನ್ನು ಪ್ರಶ್ನಿಸಲಾಗಿ, ಶೇ. ೭೮ ರಷ್ಟು ಪ್ರತಿಸ್ಪಂದಿಗಳು ಸಾರಾಸಗಟಾಗಿ ನಕಾರಾತ್ಮಕ ಉತ್ತರವನ್ನು ನೀಡಿದ್ದು, ಅಂತಹ ಹೊಸ ಘಟಕ/ಉದ್ದಿಮೆ ಸ್ಥಾಪನೆಯ ವಿಚಾರವಿಲ್ಲವೆಂದು ತಳ್ಳಿ ಹಾಕಿದ್ದಾರೆ. ಇನ್ನುಳಿದ ಕೇವಲ ಶೇ. ೨೨ರಷ್ಟು ಪ್ರತಿಸ್ಪಂದಿಗಳು ಅಂತಹ ಯೋಜನೆಯಲ್ಲಿದ್ದಾರೆ.

ಇದೇ ವಿಚಾರಕ್ಕೆ ಸಂಬಂಧಿಸಿದಂತೆ ಹೊಸ ಘಟಕ ಸ್ಥಾಪನೆಯ ಯೋಚನೆ ಹೊಂದಿದ ಶೇ. ೨೨ ರಷ್ಟು ಪ್ರತಿಸ್ಪಂದಿಗಳಿಗೆ ಅದನ್ನು ಹೇಗೆ ಪ್ರಾರಂಭಿಸುವ ವಿಚಾರವಿದ್ದ ಬಗ್ಗೆ ವಿಚಾರಿಸಲಾಯಿತು. ಶೇ. ೬೫ ರಷ್ಟು ಪ್ರತಿಸ್ಪಂದಿಗಳು ತಮ್ಮದೇಯಾದ ಹೊಸ ಘಟಕ ಸ್ಥಾಪಿಸುವ ವಿಚಾರ ಹೊಂದಿದ್ದನ್ನು ಹೇಳಿದ್ದಾರೆ. ಇನ್ನುಳಿದ ಶೇ. ೩೫ರಷ್ಟು ಪ್ರತಿಸ್ಪಂದಿಗಳಲ್ಲಿ ಬೇರೆ ತೆರನಾದ ವಿಚಾರವಿದೆಯೆಂದು ತಿಳಿಯುತ್ತದೆ.

ಹೀಗೆಯೇ, ತಮ್ಮದೆಯಾದ ಹೊಸ ಘಟಕ ಅಥವಾ ಉದ್ದಿಮೆ ಸ್ಥಾಪಿಸುವ ಯೋಜನೆ ಇಲ್ಲವೆನ್ನುವ ಪ್ರತಿಸ್ಪಂದಿಗಳು ಬೇರಾವ ಯೋಜನೆ ಹೊಂದಿದ್ದಾರೆಂದು ಪ್ರಶ್ನಿಸಲಾಯಿತು. ಅಭಿಪ್ರಾಯಗಳನ್ನು **ಕೋಷ್ಟಕ ೬.೩೫** ರಲ್ಲಿ ಪ್ರಕಟಗೊಳಿಸಲಾಗಿದೆ.

ಇದರಿಂದ ಸ್ಪಷ್ಟವಾಗಿ ತಿಳಿದು ಬರುವದೇನೆಂದರೆ ಬೇರೆ ಸಂಸ್ಥೆಗಳಿಗೆ ಆಹ್ವಾನ ನೀಡುವದಾಗಲಿ ಅಥವಾ ಸರ್ಕಾರದ ಸಹಯೋಗ ಹೊಂದುವ ಯೋಚನೆಗಳಿಲ್ಲವೆಂದು ಎಲ್ಲ ಪ್ರತಿಸ್ಪಂದಿಗಳು ಹೇಳಿದ್ದಾರೆ. ಇನ್ನುಳಿದ ಎರಡು ಪರ್ಯಾಯಗಳಲ್ಲಿ, ಶೇ. ೮೧ ರಷ್ಟು ಪ್ರತಿಸ್ಪಂದಿಗಳು ತಮ್ಮ ಕುಟುಂಬದ ಇತರ ಸದಸ್ಯರಿಗೆ ತರಬೇತಿ ನೀಡಿ, ಪ್ರೇರಣಗೊಳಿಸಿ ಉದ್ದಿಮೆ ಸ್ಥಾಪಿಸುವ ನಿಟ್ಟಿನಲ್ಲಿ ಯೋಚಿಸುತ್ತಿದ್ದಾರೆ. ಉಳಿದ ಶೇ. ೧೯ ರಷ್ಟು ಪ್ರತಿಸ್ಪಂದಿಗಳು ತಮ್ಮ ಕಟುಂಬದ ಸದಸ್ಯರಲ್ಲದ, ಹೊಸ ಉದ್ಯಮಶೀಲರಿಗೆ ಅವಕಾಶ ನೀಡುವ ವಿಚಾರ ಹೊಂದಿದ್ದಾರೆ. ಇದು ಅವರ ನಿಸ್ವಾರ್ಥ ಗುಣ.

ಕೋಷ್ಟಕ : ೬.೩೫ ಹೊಸ ಯೋಜನೆ ಹೊಂದಿಲ್ಲದ ಪ್ರತಿಸ್ಪಂದಿಗಳ ಪ್ರತಿಕ್ರಿಯೆ

ಅ.ಸಂ.	ವಿವರಗಳು	ಅಥಣಿ	ಬೈಲಹೊಂಗಲ	ಬೆಳಗಾವಿ	ಚಿಕ್ಕೋಡಿ	ಗೋಕಾಕ	ಹುಕ್ಕೇರಿ	ಖಾನಾಪೂರ	ರಾಯಬಾಗ	ರಾಮದುರ್ಗ	ಸವದತ್ತಿ
೧	ಕುಟುಂಬದ ಇತರ ಸದಸ್ಯರಿಗೆ ನೀಡುವುದು	೨೪ (೮೦)	೩೬ (೬೦)	೩೯ (೮೧)	೨೪ (೮೯)	೧೨ (೪೦)	೩೦ (೮೩)	೨೭ (೯೦)	೦೯ (೧೦೦)	೩೦ (೯೧)	೩೬ (೧೦೦)
೨	ಹೊಸ ಉದ್ದುಮಶೀಲರಿಗೆ ಆಹ್ವಾನಿಸುವುದು	೦೬ (೨೦)	೨೪ (೪೦)	೦೯ (೧೯)	೦೩ (೧೧)	೧೮ (೬೦)	೦೬ (೧೭)	೦೩ (೧೦)	-	೦೩ (೦೯)	-
೩	ಸರ್ಕಾರ/ಬೇರೆ ಸಂಸ್ಥೆಗಳಿಗೆ ನೀಡುವುದು	-	-	-	-	-	-	-	-	-	-

(*ಆವರಣದಲ್ಲಿರುವ ಸಂಖ್ಯೆಗಳು ಪ್ರತಿಶತ ಪ್ರಮಾಣವನ್ನು ಸೂಚಿಸುತ್ತವೆ)

೬.೪೨ : ಚಿಕ್ಕ - ಅತೀ ಚಿಕ್ಕ ಉದ್ದಿಮೆಗಳ - ಬೆಳವಣಿಗಾಗಿ ಪ್ರತಿಸ್ಪಂದಿಗಳು ನೀಡಿದ ಸಲಹೆಗಳು:

ಈ ಉದ್ದಿಮೆಯ ರಂಗದಲ್ಲಿ ಬಹಳಷ್ಟು ಅವಧಿವರೆಗೆ ತಾವು ಅವುಗಳ ಒಂದು ಭಾಗವಾಗಿ ತೊಡಗಿಸಿಕೊಂಡು, ಒಳ- ಹೊರಗುಗಳನ್ನು ಚೆನ್ನಾಗಿ ಅರಿತುಕೊಂಡು, ಕಷ್ಟಗಳನ್ನು ಎದುರಿಸುತ್ತಾ, ಸವಾಲುಗಳಿಗೆ ಎದೆಯೊಡ್ಡಿ, ತಮ್ಮ ಅನುಭವಗಳನ್ನು ಆಧರಿಸಿ ಉದ್ದಿಮೆದಾರರು ಉದ್ದಿಮೆಯ ಪ್ರಗತಿಗಾಗಿ ಸಲಹೆ - ಸೂಚನೆಗಳನ್ನು ನೀಡಿದ್ದಾರೆ. ಅವುಗಳನ್ನು ಈ ಕೆಳಗಿನಂತೆ ಸಾರಾಂಶಗೊಳಿಸಲಾಗಿದೆ.

೧) ಸಂಕಟದಲ್ಲಿರುವ ಉದ್ದಿಮೆ ಘಟಕಗಳಿಗೆ ಸರ್ಕಾರವು ಸಹಾಯ ಧನ ನೀಡುವ ಯೋಜನೆ ರೂಪಿಸಬೇಕು.

೨) ಜಿಲ್ಲೆಯ ಔದ್ಯೋಗಿಕ ಕೇಂದ್ರದಲ್ಲಿರುವ ಸರ್ಕಾರದ ಪರಿಣಿತರು, ಮಾರ್ಗದರ್ಶಕರು ತಾಲೂಕುಗಳಲ್ಲಿ ಲಭ್ಯವಿರಬೇಕು. ಅವರು ತಳಮಟ್ಟದ ಉದ್ಯಮಶೀಲರನ್ನು ಗುರುತಿಸಿ, ಮಾರ್ಗದರ್ಶನ ನೀಡಿ, ಉದ್ದಿಮೆದಾರರನ್ನು ರೂಪಿಸುವಲ್ಲಿ ಪ್ರಯತ್ನಿಸಬೇಕು.

೩) ಉದ್ದಿಮೆಗಳು ನಿರಂತರ ಕಾರ್ಯಗೈಯ್ಯುವದಕ್ಕಾಗಿ ವಿದ್ಯುತ್ ಪೂರೈಕೆ ಅಖಂಡಿತವಾಗಿರಬೇಕು. ಕಚ್ಚಾ ಸಾಮಗ್ರಿಗಳ ಬೆಲೆಯಲ್ಲಿಯ ಸ್ಥಿರತೆ ಕಾಪಾಡಬೇಕು. ಕಾರ್ಮಿಕರ ಸಮಸ್ಯೆಗಳಿಗೆ ಪರಿಹಾರ ಒದಗಿಸುವುದು ಮತ್ತು ಏಕರೂಪದ ಸ್ಥಿರ ತೆರಿಗೆಗಳು ಜಾರಿಯಾಗಬೇಕು. ಉದ್ಯಮಶೀಲತಾ ತರಬೇತಿ ಕೇಂದ್ರಗಳನ್ನು ಸ್ಥಾಪಿಸಿ, ನಿರಂತರ ತರಬೇತಿ ನೀಡುತ್ತಿರಬೇಕು. ಇದರಂತೆ ಕಾರ್ಯಕೌಶಲ ಹೆಚ್ಚಿಸುವುದಕ್ಕೆ ಕಾರ್ಮಿಕರನ್ನು ತರಬೇತಿಗೊಳಿಸುತ್ತಿರಬೇಕು.

೪) ಸರ್ಕಾರದ ಇಲಾಖೆಗಳು ಮತ್ತು ಅಧಿಕಾರಿಗಳು ಉದ್ಯಮ ಸ್ನೇಹಿಗಳಾಗಿ ನೈಜ ಪ್ರೋತ್ಸಾಹ ನೀಡುವಂತಾಗಬೇಕು.

೫) ಕಡಿಮೆ ವಿಧಿ - ವಿಧಾನಗಳ ಮೂಲಕ ಸಮಯಾನುಸಾರ ಬ್ಯಾಂಕಿನ ಹಣಕಾಸು ಸೌಲಭ್ಯವು ಲಭ್ಯವಾಗುವಂತಾಗಬೇಕು.

೬) ಉದ್ದಿಮೆಯ ಮೇಲಾಧಿಕಾರಿಗಳು ಮತ್ತು ಮೇಲ್ವಿಚಾರಕರ ಕಿರುಕುಳ ತಪ್ಪಬೇಕು.

೭) ಸಣ್ಣ ಉದ್ದಿಮೆಗಳು ಉತ್ಪಾದಿಸುವ ಸರಕುಗಳನ್ನು ದೊಡ್ಡ ಘಟಕಗಳು ಉತ್ಪಾದಿಸದಂತೆ ಸರ್ಕಾರ ಕಟ್ಟುನಿಟ್ಟಿನ ನೀತಿ ರೂಪಿಸಬೇಕು.

೮) ಈ ಉದ್ದಿಮೆಗಳೆಡೆಗೆ ಸರ್ಕಾರ ಮತ್ತು ಉದ್ದಿಮೆದಾರರು ಸಕಾರಾತ್ಮಕ ಚಿಂತನ ಹೊಂದಿರಬೇಕು. ಉದ್ದಿಮೆದಾರರು ಮಾರುಕಟ್ಟೆಯ ಸ್ಪರ್ಧೆ ಎದುರಿಸಿ, ಬೆಳೆಯಲು ಯೋಚಿಸುತ್ತಿರಬೇಕು.

೯) ಸರ್ಕಾರವು ಹಣಕಾಸು ಸಹಾಯ - ನೀಡುವದರೊಂದಿಗೆ ತೆರಿಗೆ ಕಡಿತಗೊಳಿಸುವ ಕ್ರಮ ಕೈಕೊಳ್ಳಬೇಕು.

೧೦) ಸರ್ಕಾರದ ಸಹಾಯ ಪ್ರೇರಣಾತ್ಮಕವಾಗಿಲ್ಲ. ಅದು ಇನ್ನೂ ಅಧಿಕವಾಗಬೇಕು. ಸರ್ಕಾರವು ಬಂಡವಾಳ ಹೂಡಿಕೆದಾರರನ್ನು ಆಕರ್ಷಿಸುವ ರೀತಿಯಲ್ಲಿ ಸಣ್ಣ ಉದ್ದಿಮೆಗಳ ರಕ್ಷಣೆಗೆ ಯೋಜನೆ ರೂಪಿಸಿದರೆ, ಸಾಕಷ್ಟು ಪ್ರಮಾಣದಲ್ಲಿ ರಫ್ತು ನಿರೀಕ್ಷಿಸಬಹುದೆಂದು ಹಲವು ಉದ್ದಿಮೆದಾರರು ಹೇಳಿರುವುದು ಸರಿಯೆನಿಸುತ್ತದೆ.

೧೧) ಈ ಉದ್ದಿಮೆಯಲ್ಲಿ ಯಶಸ್ಸು ಹೊಂದಲು ಉದ್ದಿಮೆದಾರರು ಕಷ್ಟಪಟ್ಟು ದುಡಿಯುವ ಪ್ರವೃತ್ತಿ ಹೊಂದಿರಬೇಕು; ಪ್ರಾಮಾಣಿಕತೆಯೇ ಜೀವಾಳವಾಗಬೇಕು ಮತ್ತು ಕಾಲಕಾಲಕ್ಕೆ ಉದ್ದಿಮೆಗಳ ಆಧುನೀಕರಣ ನಡೆಯಬೇಕು.

೧೨) ಸರ್ಕಾರದ ಮೂಲ ಸೌಕರ್ಯಗಳು ವೃದ್ಧಿಗೊಂಡು, ಸರ್ಕಾರದ ಮಾರಾಟ ನೀತಿ ಬದಲಾಗಬೇಕು.

೧೩) ಉದ್ದಿಮೆದಾರರು ಗ್ರಾಹಕ ಪ್ರಧಾನ ಸೇವೆಯ ಧೋರಣೆ ಪಾಲಿಸಬೇಕು.

೧೪) ಕಾಲಕಾಲಕ್ಕೆ ಸರ್ಕಾರವು ಸಹಾಯಗಳನ್ನು ಪ್ರಕಟಿಸುತ್ತಾ, ಅವು ಕಾರ್ಯ ರೂಪಕ್ಕೆ ಬರುವ ಮತ್ತು ನಿರಂತರಗೊಳ್ಳುವ ವಿಚಾರ ಹೊಂದಿರಬೇಕು.

೧೫) ಈ ಉದ್ದಿಮೆಗಳಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡುವ ಮತ್ತು ಜಿಲ್ಲಾ ಔದ್ಯೋಗಿಕ ಕೇಂದ್ರದಿಂದ ಅವುಗಳ ಅವಲೋಕನ ಕಾರ್ಯ ನಡೆಯಬೇಕು.

೧೬) ಕೆಲವು ಉದ್ದಿಮೆದಾರರು ತಾತ್ಪೂರ್ತಿಕವಾಗಿ ಸರ್ಕಾರದ ಸಬ್ಸಿಡಿಗಾಗಿ ಉದ್ದಿಮೆ ಪ್ರಾರಂಭಿಸುವ ಪ್ರವೃತ್ತಿ ಹೊಂದಿರುತ್ತಾರೆ. ಅಂಥವರನ್ನು ಗುರುತಿಸಿ, ದಂಡ ವಿಧಿಸಬೇಕು. ಅದಕ್ಕೆ ತಡೆ ಹಾಕಬೇಕು.

೧೭) ಕರ್ನಾಟಕ ರಾಜ್ಯ ಉದ್ದಿಮೆ ಅಭಿವೃದ್ಧಿ ಕೇಂದ್ರವನ್ನು ಸ್ಥಳಾಂತರಿಸುವ ಅವಶ್ಯಕತೆಯಿದ್ದು, ಅದರ ಅಸ್ತಿತ್ವಕ್ಕೆ ಸೂಕ್ತ ಕ್ರಮಗಳನ್ನು ಸರ್ಕಾರ ಕೈಕೊಳ್ಳಬೇಕು.

೧೮) ಪೀಠೋಪಕರಣಗಳ ಉದ್ದಿಮೆಗೆ ಸರ್ಕಾರವೇ ಕಚ್ಚಾ ಸಾಮಗ್ರಿ ಪೂರೈಸುವಂತಾಗಬೇಕು.

೧೯) ಈ ಉದ್ದಿಮೆಗಳಲ್ಲಿ ಸತತವಾಗಿ ತೊಡಗಿ, ನಿರಂತರವಾಗಿ ೧೫ ವರ್ಷಕ್ಕಿಂತ ಅಧಿಕ ಸೇವೆ ಸಲ್ಲಿಸಿದ ಕಾರ್ಮಿಕರಿಗೆ ಪಿಂಚಣಿ ವ್ಯವಸ್ಥೆಯಾಗಬೇಕು. ಏಕೆಂದರೆ ಎಷ್ಟೋ ಕಾರ್ಯಗಳನ್ನು ಯಂತ್ರಗಳ ಸಹಾಯವಿಲ್ಲದೆ ದುಡಿಯುವ ಕಾರ್ಮಿಕರಿಗೆ ಅಸ್ತಮಾದಂತಹ ಕಾಯಿಲೆಗಳು ಸಾಮಾನ್ಯ. ಅವರಿಗೆ ರಕ್ಷಣೆ ನೀಡಬೇಕು.

೨೦) ಈ ಉದ್ದಿಮೆಯಲ್ಲಿ ಸತತವಾಗಿ ೫೦ - ೬೦ ವರ್ಷಗಳ ದೀರ್ಘ ಪರಿಣಿತಿ ಹೊಂದಿದ ಉದ್ದಿಮೆದಾರರು, ಹೊಸ ಉದ್ಯಮಶೀಲರಿಗೆ ತರಬೇತಿ ನೀಡಬೇಕು. ಇಂಥವರನ್ನು ಗುರುತಿಸಿ, ಅವರಿಂದ ಮಾರ್ಗದರ್ಶನಗೊಳಿಸುವ ವ್ಯವಸ್ಥೆಯಾಗಬೇಕು.

೨೧) ಎಲ್ಲ ಉದ್ದಿಮೆಗಳು ಕಡ್ಡಾಯವಾಗಿ ನೋಂದಣಿಗೊಳ್ಳಬೇಕು. ಅವುಗಳ ಸಂಪೂರ್ಣ ದತ್ತಾಂಶ ಸದಾಕಾಲ ಲಭ್ಯವಿರಬೇಕು.

೨೨) ಉದ್ದಿಮೆಯ ನಿರಂತರತೆಗೆ ಹೊಸ ಉದ್ದಿಮೆದಾರರನ್ನು ಗುರುತಿಸುವ ಕಾರ್ಯ ನಡೆಯಬೇಕು.

****

ಅಧ್ಯಾಯ : ಏಳು

ಸಮಾರೋಪ

ಅಧ್ಯಾಯ : ಏಳು

ಸಮಾರೋಪ

ಇದು ಜಿಲ್ಲೆಯ ಕೈಗಾರಿಕೆಗಳ ಅಭಿವೃದ್ಧಿಯ ಅಧ್ಯಯನ. ಇದರಲ್ಲಿ ಮುಖ್ಯವಾಗಿ ದೊಡ್ಡ, ಮಧ್ಯಮ ಮತ್ತು ಚಿಕ್ಕ ಪ್ರಮಾಣದ ಉದ್ದಿಮೆಗಳ ಪ್ರಗತಿಯನ್ನು ವಿಶ್ಲೇಷಿಸಲಾಗಿದೆ. ಅದಕ್ಕಾಗಿ ಅವಶ್ಯವಾಗಿರುವ ಒಂದು ದಶಕದ ಅಂಕಿ-ಅಂಶಗಳನ್ನು ಸರ್ಕಾರದ ಇಲಾಖೆಗಳಿಂದ ಸಂಗ್ರಹಿಸಿ, ಕ್ರೋಢೀಕರಿಸಲಾಗಿದೆ. ಅಲ್ಲದೆ, ಜಿಲ್ಲೆಯ ಪ್ರತಿಯೊಂದು ವಿಧದ ಉದ್ದಿಮೆಗಳ ಸಾಧನೆಗಳನ್ನು ಸ್ಪಷ್ಟಗೊಳಿಸಲು ರಾಜ್ಯ ಮತ್ತು ಇತರ ಜಿಲ್ಲೆಗಳೊಂದಿಗೆ ಹೋಲಿಕೆ ನೀಡಿ ನೈಜತೆಯನ್ನು ತಿಳಿದುಕೊಳ್ಳಲಾಗಿದೆ.

ಇದರ ಜೊತೆಗೆ ಜಿಲ್ಲೆಯಲ್ಲಿನ ಖನಿಜ, ಅರಣ್ಯ, ಜಲ, ಸಾರಿಗೆ, ಸಂಪರ್ಕ, ಶೈಕ್ಷಣಿಕ, ಪಶು ಮತ್ತು ಮಾನವ ಸಂಪನ್ಮೂಲಗಳ ಲಭ್ಯತೆ-ಕೊರತೆಗಳ ಬಗ್ಗೆಯೂ ಅಂಕಿ-ಸಂಖ್ಯೆಗಳನ್ನು ಕ್ರೋಢೀಕರಿಸಲಾಗಿದೆ. ಜಿಲ್ಲೆಯಲ್ಲಿನ ಮೂಲ ಸೌಕರ್ಯಗಳು ಯಾವ ಕೈಗಾರಿಕೆಗಳಿಗೆ ಪೂರಕವಾಗಿವೆಯೆಂಬುದನ್ನು ಕಂಡುಕೊಳ್ಳಲಾಗಿದೆ.

ಕೈಗಾರಿಕೆಗಳ ಸ್ಥಾಪನೆ - ಬೆಳವಣಿಗೆ - ಮುಂದುವರಿಕೆ - ವಿಸ್ತರಣೆ - ವೈವಿಧ್ಯೀಕರಣಗಳು ಉದ್ದಿಮೆದಾರರ ಅಭಿಪ್ರಾಯಗಳ ಮೇಲೆಯೂ ಅವಲಂಬನವಾಗಿರುತ್ತವೆ. ಘಟಕಗಳ ಪ್ರಾರಂಭದಿಂದ ಯಶಸ್ವಿಯಾಗಿ ನೆಲೆಯೂರಲು ಸಾಕಷ್ಟು ಸಮಸ್ಯೆಗಳು ಎದುರಾಗುತ್ತವೆ. ಅವುಗಳನ್ನು ಎದುರಿಸಿದ ರೀತಿ ಇನ್ನೊಬ್ಬರಿಗೆ ಮಾದರಿಯಾಗುತ್ತದೆ. ಆದ್ದರಿಂದ ಜಿಲ್ಲೆಯಲ್ಲಿ ಕಾರ್ಯನಿರತವಾಗಿರುವ ದೊಡ್ಡ ಮತ್ತು ಮಧ್ಯಮ ಗಾತ್ರದ ಉದ್ದಿಮೆದಾರರಿಗೆ ಮತ್ತು ಚಿಕ್ಕ ಹಾಗೂ ಅತೀ ಚಿಕ್ಕ ಘಟಕಗಳ ನಿರ್ವಹಣೆದಾರರಿಗೆ ಪ್ರತ್ಯೇಕವಾಗಿ ಪ್ರಶ್ನಾವಳಿಗಳನ್ನು ಸಿದ್ಧಪಡಿಸಿ, ಅವರಿಂದ ಅಭಿಪ್ರಾಯ ಸಂಗ್ರಹಿಸಲಾಗಿದೆ. ಈ ಸಮೀಕ್ಷೆಗಳನ್ನಾಧರಿಸಿ ಅವಶ್ಯಕ ಕೋಷ್ಟಕಗಳನ್ನು ರೂಪಿಸಲಾಗಿದೆ.

ಇವೆಲ್ಲವುಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಕೆಲವು ಪ್ರಮುಖವಾದ ಸಂಗತಿಗಳನ್ನು ಕಂಡುಕೊಳ್ಳಲಾಗಿದೆ. ಇವು ಈ ಅಧ್ಯಯನದ ಫಲಿತಗಳು. ಇದರಿಂದ ಕಂಡುಬಂದ ಅಂಶಗಳಿಂದ ಕೈಗಾರಿಕೆಗಳು ಇನ್ನೂ ಯಾವ ಕ್ಷೇತ್ರದಲ್ಲಿ ಉದ್ದಿಮೆಗಳ ಸ್ಥಾಪನೆಯ ಸಾಧ್ಯತೆಗಳ ಬಗ್ಗೆ ಸಲಹೆಗಳನ್ನು ನೀಡಲಾಗಿದೆ. ಈ ಸಲಹೆಗಳು ಜಿಲ್ಲೆಯ ಪ್ರಾದೇಶಿಕ ಅಸಮಾನತೆಯನ್ನು ಕಡಿಮೆಗೊಳಿಸುವ ನಿಟ್ಟಿನಲ್ಲಿ ಮುಖ್ಯವೆನಿಸುತ್ತವೆ.

ಈ ಅಧ್ಯಾಯವು ಮೂರು ಪ್ರಮುಖ ಘಟಕಗಳನ್ನೊಳಗೊಂಡಿದೆ. ಮೊದಲ ಘಟಕದಲ್ಲಿ ಅಧ್ಯಯನದ ಸಂದರ್ಭದಲ್ಲಿ ಗಮನಕ್ಕೆ ಬಂದ ವಿಶೇಷ ಅಂಶಗಳನ್ನು ಪಟ್ಟಿ ಮಾಡಲಾಗಿದೆ. ಎರಡನೆಯ ಘಟಕದಲ್ಲಿ ಅಧ್ಯಯನದ ಫಲಿತಗಳನ್ನು ಕ್ರೋಢೀಕರಿಸಲಾಗಿದೆ. ಮೂರರಲ್ಲಿ ಜಿಲ್ಲೆಯ ಕೈಗಾರಿಕೆಗಳ ಅಧ್ಯಯನಕ್ಕೆ ಪೂರಕವಾಗುವ ಕೆಲವು ಮಹತ್ವದ ಸಲಹೆಗಳನ್ನು ನೀಡಲಾಗಿದೆ.

ಕಂಡು ಬಂದ ಸಂಗತಿಗಳು :

೧. ಬೆಳಗಾವಿ ಜಿಲ್ಲೆಯಲ್ಲಿ ರಾಜ್ಯದಲ್ಲಿ ಅತಿ ಹೆಚ್ಚಿನ ಸಂಖ್ಯೆಯ ಸಕ್ಕರೆ ಕಾರ್ಖಾನೆಗಳಿದ್ದು ಅವುಗಳ ಪಟ್ಟಿಯನ್ನು ಅನುಬಂಧ ನಾಲ್ಕರಲ್ಲಿ ನೀಡಲಾಗಿದೆ.

ಸಕ್ಕರೆ ಉದ್ದಿಮೆಯಲ್ಲಿ ಬೆಳಗಾವಿ ಜಿಲ್ಲೆಯ ಕೊಡುಗೆ ಅನುಪಮವಾಗಿದೆ. ಕರ್ನಾಟಕದ ಒಟ್ಟು ೬೬ ಕಾರ್ಖಾನೆಗಳಲ್ಲಿ ೨೨ (ಶೇ. ೩೪.೮೪) ಕಾರ್ಖಾನೆಗಳು ಬೆಳಗಾವಿ ಜಿಲ್ಲೆಯಲ್ಲಿ ಸ್ಥಾಪನೆಗೊಂಡಿವೆ; ಮತ್ತು ೫ ಕಾರ್ಖಾನೆಗಳು ಸ್ಥಾಪನೆಯ ಹಂತದಲ್ಲಿವೆ. ಇದಕ್ಕೆ ಪ್ರಮುಖ ಕಾರಣ ಇಲ್ಲಿನ ವಾಣಿಜ್ಯ ಬೆಳೆಯಾದ ಕಬ್ಬು. ಕಬ್ಬು ಬೆಳೆಯಲು ಪೂರಕವಾದ ನೀರಾವರಿ ಹಾಗೂ ಹವಾಮಾನವಿದೆ. ಉತ್ತರ ಕರ್ನಾಟಕ ಪ್ರದೇಶವು ದಕ್ಷಿಣ ಕರ್ನಾಟಕಕ್ಕಿಂತ ಅಧಿಕ ಪ್ರಮಾಣದಲ್ಲಿ ಕಬ್ಬು ಬೆಳೆಯುತ್ತಿದ್ದು, ಇದರಿಂದ ಇಲ್ಲಿ ಸಕ್ಕರೆ ಉದ್ದಿಮೆ ಕೇಂದ್ರೀಕರಣವಾಗಿದೆ. ಶೇ. ೭೫.೪೪ರಷ್ಟು ಕಾರ್ಖಾನೆಗಳು ಉತ್ತರ ಭಾಗದಲ್ಲಿಯೇ ಸ್ಥಾಪನೆಗೊಂಡಿವೆ. ತಾಲೂಕುವಾರು ಕಾರ್ಖಾನೆಗಳನ್ನು ಗಮನಿಸಿದಾಗ ಅಥಣಿ ಮತ್ತು ಚಿಕ್ಕೋಡಿ ತಾಲೂಕುಗಳು ಕ್ರಮವಾಗಿ ಪ್ರಥಮ ಮತ್ತು ದ್ವಿತೀಯ ಸ್ಥಾನದಲ್ಲಿವೆ.

ಬಹುತೇಕ ಘಟಕಗಳು ಕೃಷಿಯ ಸರಕನ್ನು ಆಧರಿಸಿದ್ದಾಗಿವೆ. ಅದಕ್ಕೆ ಅನುಗುಣವಾಗಿ ಪ್ರಸ್ತುತ ಆಯ್ದ ಉದ್ಯಮಗಳಲ್ಲಿ ಶೇ. ೯೦ರಷ್ಟು ಘಟಕಗಳು ಕಚ್ಚಾ ಸಾಮಗ್ರಿಯ ಲಭ್ಯವಿರುವಲ್ಲಿ ಸ್ಥಾಪನೆಗೊಂಡಿದ್ದು ಕಂಡುಬರುತ್ತದೆ. ಅದರಂತೆಯೇ, ಇನ್ನುಳಿದ ಶೇ. ೧೦ರಷ್ಟು ಘಟಕಗಳು ಮಾನವ ಸಂಪನ್ಮೂಲ ಕೇಂದ್ರೀಕೃತವಾಗಿರುವ ಸ್ಥಳದಲ್ಲಿ ಸ್ಥಾಪನೆಯಾಗಿವೆ. ಮಾರುಕಟ್ಟೆಯನ್ನರಸಿ ತಮ್ಮ ಘಟಕವನ್ನು ಸ್ಥಾಪನೆ ಮಾಡಿದ ಉದಾಹರಣೆ ಪ್ರತಿಸ್ಪಂದಿಗಳಲ್ಲಿ ಕಂಡುಬರುವುದಿಲ್ಲ. (ಕೋಷ್ಟಕ ೫.೧೫)

೨. ಮಲೆನಾಡಿನಲ್ಲಿ ಅರಣ್ಯ ಉತ್ಪನ್ನಗಳಿಗೆ ಸಂಬಂಧಿಸಿದ ಚಿಕ್ಕ ಕೈಗಾರಿಕೆಗಳು ಹೆಚ್ಚಾಗಿದ್ದು ಇದನ್ನು ಖಾನಾಪೂರ ಮತ್ತು ಬೆಳಗಾವಿ ತಾಲೂಕುಗಳಲ್ಲಿ ಕಾಣುತ್ತೇವೆ. ಅರೆ-ಮಲೆನಾಡು, ಬೈಲು-ನಾಡಿನಲ್ಲಿ ಸಕ್ಕರೆ, ಸಿದ್ಧ ಉಡುಪು, ಇಂಜಿನಿಯರಿಂಗ್ ವಸ್ತುಗಳು, ರಸಾಯನಿಕ ಘಟಕಗಳು, ಕೈ-ಮಗ್ಗ ಮೊದಲಾದ ಉದ್ದಿಮೆಗಳಿವೆ.

ಉತ್ತರ ಕರ್ನಾಟಕ ಹೈನುಗಾರಿಕೆ, ಚರ್ಮೋದ್ಯಮ ಹಾಗೂ ಮಾಂಸಾಹಾರದ ಕೇಂದ್ರಗಳ ಸ್ಥಾಪನೆಗೆ ಪೂರಕವಾಗಿದೆ. ಅಲ್ಲದೆ ಬೆಳಗಾವಿ ಜಿಲ್ಲೆಯ ಮಲೆನಾಡು, ಅರೆಮಲೆನಾಡು ಪ್ರದೇಶ ಹೈನುಗಾರಿಕೆಗೆ ಮೂಲವಾದ ಹಸಿರು ಆಹಾರ ಪೂರೈಕೆಗೆ ಪ್ರಸಿದ್ಧವಾಗಿದ್ದು ಕಂಡುಬರುತ್ತದೆ.

೩. ಪುಣೆ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿ-೪, ಬೆಂಗಳೂರು-ಪುಣೆ, ಬೆಳಗಾವಿ-ಗೋವಾ ರೈಲು ಮಾರ್ಗ ಹಾಗೂ ವಾಯುಯಾಣ ಸಂಪರ್ಕ-ಜಾಲ ಇರುವುದರಿಂದ ಕೈಗಾರಿಕೆಗಳ ಬೆಳವಣಿಗೆಗೆ ಸಹಾಯಕವಾಗಿದೆ.

೪. ಜಿಲ್ಲೆಯ ಮಾನವ ಸಂಪನ್ಮೂಲ ಸಮೃದ್ಧಿಯಾಗಿದೆ. ಏಕೆಂದರೆ ತಾಂತ್ರಿಕ ವಿಶ್ವವಿದ್ಯಾಲಯ, ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ, ಕೆ.ಎಲ್.ಇ. ವಿಶ್ವವಿದ್ಯಾಲಯ ಮತ್ತು ಜಿಲ್ಲೆಯಾದ್ಯಂತ ಕಳೆದ ದಶಕದುದ್ದಕ್ಕೂ ಶೈಕ್ಷಣಿಕ ಸಂಸ್ಥೆಗಳು ಸಾಕಷ್ಟು ಪ್ರಮಾಣದಲ್ಲಿ ಹೆಚ್ಚಾಗಿದ್ದು ಶೈಕ್ಷಣಿಕ ಅಭಿವೃದ್ಧಿಗೆ ಕಾರಣವಾಗಿವೆ.

ಆದ್ದರಿಂದ ಇಲ್ಲಿ ಮಾನವ ಸಂಪನ್ಮೂಲದ ಕೊರತೆ ಇರುವುದಿಲ್ಲ. ಇದರಿಂದ ನೈಪುಣ್ಯತೆ ಹೊಂದಿದ ಕಾರ್ಮಿಕ ಶಕ್ತಿ ಲಭ್ಯವಾಗುತ್ತಿರುವುದು ಕಂಡುಬರುತ್ತದೆ.

೫. ಸರ್ಕಾರ ಜಾರಿಗೆ ತಂದ ಏಕ-ಗವಾಕ್ಷಿ ಯೋಜನೆ ನೋಂದಣಿ ಕಾರ್ಯವನ್ನು ಸರಳೀಕರಿಸಿದೆ. ಘಟಕಗಳ ನೋಂದಣಿ ಕಾರ್ಯವನ್ನು ಸರ್ಕಾರ ಸುಲಭಗೊಳಿಸಿದ್ದರಿಂದ ಬಹಳಷ್ಟು ಘಟಕಗಳು ನೋಂದಾವಣೆಗೆ ಒಳಪಟ್ಟಿವೆ. ಇದು ಜಿಲ್ಲೆಯ ಕೈಗಾರಿಕಾ ಅಭಿವೃದ್ಧಿಗೆ ಹಾಗೂ ಅಭಿವೃದ್ಧಿ ಮೌಲಮಾಪನಕ್ಕೆ ಸಹಾಯಕವಾಗಿದೆ.

೬. ಜಾಗತೀಕರಣದ ಪರಿಣಾಮಗಳನ್ನು ಸಕಾರಾತ್ಮಕವಾಗಿ ಸ್ವೀಕರಿಸಿದ ಉದ್ಯಮದಾರರ ಸಂಖ್ಯೆ ಹೆಚ್ಚಿದೆ. ಜಿಲ್ಲೆಯ ಬಹಳಷ್ಟು ಉದ್ದಿಮೆದಾರರು ಜಾಗತೀಕರಣದ ಸವಾಲುಗಳನ್ನು ಸಕಾರಾತ್ಮಕವಾಗಿ ಸ್ವೀಕರಿಸಿರುವುದು ಕಂಡುಬರುತ್ತದೆ.

೭. ಜಿಲ್ಲೆಯ ಕೈಗಾರಿಕೆಗಳು ಹಲವು ಸಾಮಾನ್ಯ ಸಮಸ್ಯೆಗಳನ್ನು ಎದುರಿಸುತ್ತಿವೆ. ಅವುಗಳಲ್ಲಿ ವಿದ್ಯುತ್ ಕೊರತೆ ಬಹುದೊಡ್ಡ ಸಮಸ್ಯೆ. ಇದು ಕೈಗಾರಿಕೆಗಳ ಬೆಳವಣಿಗೆಗೆ ಹಿನ್ನಡೆಯನ್ನುಂಟು ಮಾಡಿದೆ.

ಉದ್ಯಮಶೀಲತೆಯನ್ನು ಅಭಿವೃದ್ಧಿಪಡಿಸುವ ತರಬೇತಿ ಕೇಂದ್ರಗಳು ಜಿಲ್ಲೆಯಲ್ಲಿ ಸಾಕಷ್ಟು ಪ್ರಮಾಣದಲ್ಲಿ ಲಭ್ಯವಿಲ್ಲ. ಬಂಡವಾಳ ಕೊರತೆ, ಸರ್ಕಾರದ ಸಹಾಯ-ಪ್ರೋತ್ಸಾಹಗಳ ಕೊರತೆ, ಜಿಲ್ಲೆಯ ಕೈಗಾರಿಕೆಗಳ ಬೆಳವಣಿಗೆಯ ವೇಗಕ್ಕೆ ತಡೆಯೊಡ್ಡಿವೆ.

೮. ಉದ್ಯಮ ಘಟಕಗಳ ಬೆಳವಣಿಗೆಗೆ ಪೂರಕ ಸೇವೆಗಳು ಅತ್ಯವಶ್ಯಕ. ಆದರೆ ಉದ್ಯಮದಾರರನ್ನು ಸಂದರ್ಶಿಸಿದಾಗ ಪ್ರತಿಶತ ೫೦ರಷ್ಟು ಉದ್ದಿಮೆದಾರರಿಗೆ ಪೂರಕ ಸೇವೆಗಳು ದೊರೆಯದೆ ಇರುವುದು ಕಂಡುಬರುತ್ತದೆ. (ಕೋಷ್ಟಕ ೫.೪)

೯. ಫ್ಯಾಕ್ಟರಿಂಗ್ ಸೇವೆಯು ಉದ್ಯಮ ಪ್ರಗತಿಗೆ ಹೊಸ ಆಯಾಮವನ್ನು ತಂದು ಕೊಡುತ್ತದೆ. ಜಿಲ್ಲೆಯಲ್ಲಿನ ಉದ್ದಿಮೆದಾರರನ್ನು ಸಂಪರ್ಕಿಸಿದಾಗ ಸೇವೆಯನ್ನು ಪಡೆಯದೇ ಇರುವುದು ಕಂಡುಬರುತ್ತದೆ.

೧೦. ಚಿಕ್ಕ ಘಟಕಗಳ ಉದ್ದಿಮೆದಾರರ ಹೂಡಿಕೆ ಮೇಲಿನ ಗಳಿಕೆ ತೃಪ್ತಿದಾಯಕವಿಲ್ಲವೆಂದು ಕಂಡುಬರುತ್ತದೆ. ಶೇ. ೩೨ರಷ್ಟು ಪ್ರತಿಸ್ಪಂದಿಗಳು ಸಾಲದ ಮೇಲಿನ ಬಡ್ಡಿ, ಉತ್ಪಾದನಾ ವೆಚ್ಚ, ವಸೂಲಾತಿಯಲ್ಲಿ ವಿಳಂಬತೆಯೇ ಪ್ರಮುಖ ಕಾರಣವೆಂದು ಅಭಿಪ್ರಾಯ ಪಟ್ಟಿದ್ದಾರೆ. (ಕೋಷ್ಟಕ ೬.೧೨)

೧೧. ಉದ್ಯಮ ಸಂಸ್ಥೆಗಳಲ್ಲಿ ದುಡಿಯುವ ಉದ್ಯೋಗಿಗಳನ್ನು ವರ್ಗೀಕರಿಸಿದಾಗ ಹೆಚ್ಚಿನ ಸಂಖ್ಯೆಯ ಅಂದರೆ ಶೇ. ೫೮ರಷ್ಟು ಪ್ರತಿಸ್ಪಂದಿಗಳು ತಮ್ಮ ಉದ್ಯಮದಲ್ಲಿ ನಿಪುಣ ಸಿಬ್ಬಂದಿಯನ್ನು ಹೊಂದಿರುವುದು ಕಂಡುಬರುತ್ತದೆ. (ಕೋಷ್ಟಕ ೬.೧೬)

ಫಲಿತಗಳು :

ಬೆಳಗಾವಿ ಜಿಲ್ಲೆಯಲ್ಲಿ ಕೈಗಾರಿಕೆಗಳ ಅಭಿವೃದ್ಧಿಗೆ ಪೂರಕ ವಾತಾವರಣವಿದೆ. ಜಿಲ್ಲೆಯ ಭೌಗೋಳಿಕ ಅಂಶಗಳು ಅಭಿವೃದ್ಧಿಗೆ ತುಂಬ ಸಹಾಯವಾಗಿದ್ದರೂ, ಸಾರಿಗೆ - ಸಂಪರ್ಕ ವ್ಯವಸ್ಥೆ – ಮಾನವ ಸಂಪನ್ಮೂಲದ ಲಭ್ಯತೆ, ಮಾರುಕಟ್ಟೆ ಸೌಲಭ್ಯಗಳಿದ್ದರೂ ಕೈಗಾರಿಕೆಗಳ ವೃದ್ಧಿ ದರ ಮಾತ್ರ ಕುಂಠಿತವಾಗಿರುವುದು ಚಿಂತನೀಯ. ಇತ್ತೀಚಿಗೆ ಬೆಳಗಾವಿ ರಾಜಕೀಯ ಕಾರಣಗಳಿಂದಾಗಿ ಸುದ್ದಿಯಲ್ಲಿದೆ. ಇದೀಗ ನಿರ್ಮಾಣಗೊಂಡ ಸುವರ್ಣ ವಿಧಾನ ಸೌಧ ಬೆಳಗಾವಿಗೆ ಎರಡನೇ ರಾಜಧಾನಿಯ ಗೌರವ ತಂದುಕೊಡುವಲ್ಲಿ ಅನುಕೂಲ ವಾತಾವರಣ ನಿರ್ಮಿಸಿದೆ. ಆದರೆ ಕೈಗಾರಿಕೆಗಳ ಅಭಿವೃದ್ಧಿ ಈ ಗತಿಯಲ್ಲಿಲ್ಲ. ಕೆಲವು ಕ್ಷೇತ್ರಗಳಲ್ಲಿ ತೀವ್ರ ಹಿನ್ನಡೆ ಅನುಭವಿಸುತ್ತಿದೆ. ಇಲ್ಲಿಯ ಬೃಹತ್ ಉದ್ದಿಮೆಗಳ ಸಂಖ್ಯೆ ಕೇವಲ ಐದು. ಸಕ್ಕರೆ ಉತ್ಪಾದನಾ ಕ್ಷೇತ್ರವನ್ನು ಹೊರತುಪಡಿಸಿ ಉಳಿದೆಲ್ಲ ಕ್ಷೇತ್ರಗಳಲ್ಲಿಯೂ ಹಿಂದಿದೆ.

ಕಳೆದ ಒಂದು ದಶಕದಲ್ಲಿ ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳು ಒಂದುವರೆ ಪಟ್ಟು ಹೆಚ್ಚಾಗಿವೆ. ಆ ಪ್ರಮಾಣದಲ್ಲಿ ಜಿಲ್ಲೆಯಲ್ಲಿ ಅಭಿವೃದ್ಧಿ ಸಾಧ್ಯವಾಗಿಲ್ಲ. ಬಿಜಾಪೂರ, ಬಾಗಲಕೋಟ, ಗುಲ್ಬರ್ಗಾ, ಬೀದರದಂಥ ಜಿಲ್ಲೆಗಳು ಪ್ರಗತಿ ಸಾಧಿಸಿವೆ. ಬೆಳಗಾವಿ ಅವುಗಳಷ್ಟು ಪ್ರಗತಿ ಸಾಧಿಸಿಲ್ಲ.

೧. ಸಕ್ಕರೆ ಉದ್ದಿಮೆಯಲ್ಲಿ ಜಿಲ್ಲೆ ರಾಜ್ಯದಲ್ಲಿಯೇ ಮುಂಚೂಣಿಯಲ್ಲಿದೆ. ೧೯೯೬ರಲ್ಲಿ ರಾಜ್ಯದಲ್ಲಿಯೇ ೨೭ ಸಕ್ಕರೆ ಕಾರ್ಖಾನೆಗಳಿದ್ದವು. ಈಗ ಬೆಳಗಾವಿಯಲ್ಲಿಯೇ ೨೭ ಸಕ್ಕರೆ ಕಾರ್ಖಾನೆಗಳಿರುವುದು ಗಮನೀಯ ಸಂಗತಿ. ಫಲವತ್ತಾದ ನೆಲ, ತುಂಬಿ ಹರಿಯುವ ನದಿಗಳು, ನೀರಾವರಿ ಸೌಲಭ್ಯ, ಅನುಕೂಲ ಹವಾಮಾನ ಮೊದಲಾದ ಕಾರಣಗಳಿಂದ ಕಬ್ಬು ಪ್ರಮುಖ ಬೆಳೆಯಾಗಿದೆ. ಹೀಗಾಗಿ ಜಿಲ್ಲೆಯಲ್ಲಿ ಒಟ್ಟು ೨೨ ಸಕ್ಕರೆ ಕಾರ್ಖಾನೆಗಳು ಕಾರ್ಯನಿರ್ವಹಿಸುತ್ತಿವೆ. ೫ ಕಾರ್ಖಾನೆಗಳು ಸ್ಥಾಪನೆಯ ಹಂತದಲ್ಲಿವೆ. ಇವುಗಳಿಗೆ ಮಹಾರಾಷ್ಟ್ರದ ಸಹಕಾರಿ ರಂಗ ಮತ್ತು ಔದ್ಯಮಿಕ ರಂಗ ಪ್ರೇರಣೆಯಾಗಿದೆ.

೨. ೨೦೦೧ರಲ್ಲಿ ಸಿದ್ಧ ಉಡುಪುಗಳ ಉತ್ಪಾದನಾ ಕ್ಷೇತ್ರದಲ್ಲಿ ಬೆಳಗಾವಿ ರಾಜ್ಯದಲ್ಲಿಯೇ ಮೂರನೇ ಸ್ಥಾನದಲ್ಲಿತ್ತು. ೧೧೩ ಘಟಕಗಳು ಉತ್ಪಾದನೆಯಲ್ಲಿ ನಿರತವಾಗಿದ್ದವು. ಆದರೆ ಈಗ ಅಂದರೆ ೨೦೧೧ರಲ್ಲಿ ಇವುಗಳ ಸಂಖ್ಯೆ ಕೇವಲ ೭೬.

೩. ರಸಾಯನಿಕ ವಸ್ತುಗಳ ಉತ್ಪಾದನ ಘಟಕಗಳಲ್ಲಿಯೂ ಇದೇ ರೀತಿಯ ಹಿನ್ನಡೆ ಕಾಣುತ್ತದೆ. ೨೦೦೧ರಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ೧೧೩ ಘಟಕಗಳಿದ್ದವು. ೨೦೧೧ರಲ್ಲಿ ಇವುಗಳ ಸಂಖ್ಯೆ ಕೇವಲ ೨೦. ಅಂದರೆ ಪ್ರತಿಶತ ೧೭.೬೯ರಷ್ಟು ಹಿನ್ನಡೆ ಅನುಭವಿಸಿವೆ.

೪. ಇಂಜಿನೀಯರಿಂಗ್ ಉದ್ದಿಮೆ ಈ ಪ್ರಮಾಣದಲ್ಲಿ ಕುಸಿತ ಕಾಣದಿದ್ದರೂ ವೃದ್ಧಿಯೂ ಇಲ್ಲ. ೨೦೦೧ರಲ್ಲಿ ಜಿಲ್ಲೆಯ ೧೯೪ ಇಂಜಿನೀಯರಿಂಗ್ ಘಟಕಗಳಿದ್ದವು. ಈಗ (೨೦೧೧) ಅವುಗಳಲ್ಲಿ ನಾಲ್ಕು ಘಟಕಗಳು ಮುಚ್ಚಿವೆ.

೫. ಬೆಳಗಾವಿ ತಾಲೂಕು ಅತ್ಯಧಿಕ ಪ್ರಮಾಣದಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳನ್ನು ಹೊಂದಿದೆ. ವಿಸ್ತೀರ್ಣದಲ್ಲಿ ಅತೀ ದೊಡ್ಡ ತಾಲ್ಲೂಕಾದ ಅಥಣಿ ಕೇವಲ ಹತ್ತು ಬ್ಯಾಂಕುಗಳನ್ನು ಹೊಂದಿದ್ದನ್ನೂ ಅರಿತಾಗ, ಚಟುವಟಿಕೆಗಳು ಕಡಿಮೆ ಇರುವುದನ್ನು ಸೂಚಿಸುತ್ತದೆ. ಗ್ರಾಮೀಣ ಬ್ಯಾಂಕುಗಳು ಗ್ರಾಮೀಣ ಪ್ರದೇಶಗಳಿಗಿಂತಲೂ ಹೆಚ್ಚಾಗಿ ಪಟ್ಟಣ ಪ್ರದೇಶಗಳಲ್ಲಿವೆ.

ಉತ್ತರ ಕರ್ನಾಟಕದಲ್ಲಿ ಬ್ಯಾಂಕುಗಳ ಸಂಖ್ಯೆ ದಕ್ಷಿಣ ಕರ್ನಾಟಕಕ್ಕಿಂತ ಕಡಿಮೆ ಇದೆ. ಅಲ್ಲದೆ ಸಾಲದ ಪ್ರಮಾಣವು ಅತಿ ಕಡಿಮೆ ಇದೆ. ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿಯೇ ಬೆಳಗಾವಿ ಅಧಿಕ ಬ್ಯಾಂಕುಗಳ ಸಂಖ್ಯೆಯನ್ನು ಹೊಂದಿದ್ದು ವಿಶೇಷವಾಗಿದೆ.

೬. ಸಕ್ಕರೆ, ಸಿದ್ಧ ಉಡುಪು, ಇಂಜೀನಿಯರಿಂಗ್, ಫೌಂಡ್ರಿ ಮುಂತಾದವುಗಳನ್ನು ಹೊರತುಪಡಿಸಿ ಇತರೆ ಉದ್ದಿಮೆಗಳು ಕರ್ನಾಟಕದಲ್ಲಿ ಕಳೆದ ದಶಕದಲ್ಲಿ ಹೆಚ್ಚಳದ ಗತಿಯನ್ನು ತೋರಿವೆ. ಉತ್ತರ ಕರ್ನಾಟಕದಲ್ಲಿನ ಏರಿಕೆ ದರವು ದಕ್ಷಿಣ ಕರ್ನಾಟಕ್ಕಿಂತ ಹೆಚ್ಚಾಗಿದೆ. ಆದರೆ ದಕ್ಷಿಣ ಕರ್ನಾಟಕದಲ್ಲಿ ಹೆಚ್ಚು ಕೇಂದ್ರೀಕೃತವಾಗಿವೆ. ಒಂದು ದಶಕದಲ್ಲಿ ಬೆಳಗಾವಿಯಲ್ಲಿ (೨೦೦೧-೨೦೧೧) ಸುಮಾರು ಮೂರರಷ್ಟು ಹೆಚ್ಚಳವಾಗಿದೆ. ಇಲ್ಲಿ ಒಟ್ಟು ಕರ್ನಾಟಕದ ಶೇ. ೫.೬೮ ಹಾಗೂ ಉತ್ತರ ಕರ್ನಾಟಕದ ಶೇ. ೨೧.೩೬ ಉದ್ದಿಮೆಗಳು ಕಾರ್ಯನಿರತವಾಗಿದೆ.

೭. ಕೈಗಾರಿಕಾ ಪ್ರದೇಶಗಳಲ್ಲಿನ ಪ್ರಗತಿ ಹೆಚ್ಚು ಕಡಿಮೆ ಸ್ಥಿರವಾಗಿದೆ. ೨೦೦೧ರಲ್ಲಿ ೧೫೫ ಪ್ರದೇಶಗಳನ್ನು ಹೊಂದಿದ್ದು, ಕರ್ನಾಟಕ ಕೇವಲ ೧೨ ಪ್ರದೇಶಗಳನ್ನು ಕಳೆದ ದಶಕದಲ್ಲಿ ಹೆಚ್ಚು ಮಾಡಿ ೨೦೧೧ರಲ್ಲಿ ಒಟ್ಟು ೧೬೭ ಘಟಕ ಪ್ರದೇಶಗಳನ್ನು ಹೊಂದಿದೆ. ದಕ್ಷಿಣ ಕರ್ನಾಟಕವು ಉತ್ತರ ಕರ್ನಾಟಕಕ್ಕಿಂತ ಹೆಚ್ಚಿನ ಕೈಗಾರಿಕಾ ಪ್ರದೇಶಗಳನ್ನು ಹೊಂದಿದ್ದು, ಬೆಂಗಳೂರು ಕರ್ನಾಟಕದಲ್ಲಿ ಪ್ರಥಮ ಸ್ಥಾನ ಹೊಂದಿದ್ದು, ಬೆಳಗಾವಿ ದ್ವಿತೀಯ ಸ್ಥಾನ ಹೊಂದಿದೆ. ಬೆಳಗಾವಿಯಲ್ಲಿ ಕಳೆದ ಒಂದು ದಶಕದಲ್ಲಿ ಕೇವಲ ಒಂದು ಕೈಗಾರಿಕಾ ಪ್ರದೇಶ ಹೆಚ್ಚಾಗಿದೆ. ಜನಸಂಖ್ಯೆಯಲ್ಲಿನ ಹೆಚ್ಚಳವನ್ನು ಗಮನಿಸಿದಾಗ ಈ ಪ್ರಗತಿಯು ಅಲ್ಪ

ಪ್ರಮಾಣದ್ದಾಗಿದೆ. ಹಾಗೂ ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿಪಡಿಸುವಾಗಿನ ಸಮಸ್ಯೆಗಳಿಗೆ ಕೈಗನ್ನಡಿಯಾಗಿದೆ.

೮. ಕಂಪನಿಗಳ ಸ್ಥಾಪನೆಯಲ್ಲಿ ವರ್ತಕ ಬ್ಯಾಂಕುಗಳ ಸೇವೆ ಎಷ್ಟು ಸರಳ ಮತ್ತು ಸಾಕಷ್ಟು ಚಲನಶೀಲವಾಗಿ ಲಭ್ಯವಿರುವುದೋ, ಅಷ್ಟು ಹೆಚ್ಚು ಸಂಖ್ಯೆಯ ಕಂಪನಿಗಳು ಸ್ಥಾಪನೆಗೊಳ್ಳುವ ಸಾಧ್ಯತೆಗಳಿರುತ್ತವೆ. ಇದರ ಕೊರತೆಯು ಉದ್ದಿಮೆ ಅಭಿವೃದ್ಧಿಗೆ ಅಡೆ-ತಡೆಯಾಗಿರುವ ವಿಷಯ ಸ್ಪಷ್ಟವಾಗಿ ಗೋಚರಿಸುತ್ತದೆ.

೯. ಪ್ರತಿಶತ ೫೦ರಷ್ಟು ಪ್ರತಿಸ್ಪಂದಿಗಳು ಪೂರಕ ಸೇವೆಗಳು ಸಮರ್ಪಕವಾಗಿಲ್ಲವೆಂದು ಅಭಿಪ್ರಾಯಪಟ್ಟಿದ್ದಾರೆ. ಸಲಹೆಗಾರರು, ವೃತ್ತಿಪರಿಣಿತರು ನಗರದಲ್ಲಿ ಕೇಂದ್ರೀಕೃತರಾಗಿದ್ದಾರೆ. ಅದು ಕೈಗಾರಿಕಾ ಬೆಳವಣಿಗೆಗೆ ಅಡ್ಡಿಯನ್ನುಂಟು ಮಾಡುತ್ತದೆ. (ಕೋಷ್ಟಕ ೫.೪)

೧೦. ಬಂಡವಾಳ ಸಂಗ್ರಹಣೆಗೆ ಆಯ್ದ ಪ್ರತಿಸ್ಪಂದಿಗಳಲ್ಲಿ ಯಾರೂ ಪ್ರಾಶಸ್ತ್ಯದ ಶೇರುಗಳನ್ನಾಗಲಿ, ಸಾಲಪತ್ರಗಳನ್ನಾಗಲಿ ಬಳಸಿದ್ದು ಕಂಡು ಬರುತ್ತಿಲ್ಲ. ಹೆಚ್ಚಿನ ಪ್ರತಿಸ್ಪಂದಿಗಳು ಈಕ್ವಿಟಿ ಮತ್ತು ಸಾಂಸ್ಥಿಕ ಸಾಲಗಳನ್ನು ಬಳಸಿದ್ದು ಕಂಡು ಬರುತ್ತದೆ. ಆದ್ದರಿಂದ, ಹಣಕಾಸು ಸಂಸ್ಥೆಗಳು ಉದ್ದಿಮೆಯ ಬೆಳವಣಿಗೆಯಲ್ಲಿ ಮಹತ್ವದ ಪಾತ್ರವಹಿಸುತ್ತಿವೆಯೆಂದು ತಿಳಿದು ಬರುತ್ತದೆ. (ಕೋಷ್ಟಕ ೫.೧೧)

೧೧. ಕೋಷ್ಠಕ ೬.೪ನ್ನು ವಿಶ್ಲೇಷಿಸಿದಾಗ ಕಂಡು ಬರುವ ಮಹತ್ವದ ಸಂಗತಿಯೆನೆಂದರೆ, ಶೇ ೭೬ರಷ್ಟು ಪ್ರತಿಸ್ಪಂದಿಗಳ ಅಭಿಪ್ರಾಯದಲ್ಲಿ ಚಿಕ್ಕ ಉದ್ದಿಮೆಗಳ ಸ್ಥಾಪನೆಯಲ್ಲಿ ಮತ್ತು ಅವುಗಳ ಪೋಷಣೆಯಲ್ಲಿ ಸರ್ಕಾರದ ನಿಜವಾದ ಕಳಕಳಿಯಿಲ್ಲ ಎಂಬ ತಮ್ಮ ಮನದಾಳದ ಮಾತುಗಳನ್ನು ಹೇಳಿದ್ದಾರೆ.

೧೨. ಹೂಡಿಕೆ ಮೇಲಿನ ಗಳಿಕೆಯು ಸಮಾಧಾನಕರ ಆಗಿಲ್ಲವೆಂಬುದು ಬಹುತೇಕ ಉದ್ದಿಮದಾರರ ಅಭಿಪ್ರಾಯ. ಅದರ ಕಾರಣ ತಿಳಿಯಲು ೭ ಅಂಶಗಳನ್ನು ನೀಡಲಾಗಿತ್ತು. ನೀಡಿದ ಒಟ್ಟು ಏಳು ಕಾರಣಗಳಲ್ಲಿ, ಪ್ರತಿಸ್ಪಂದಿಗಳು ಕೇವಲ ಮೂರು ಕಾರಣಗಳನ್ನು ಆಯ್ಕೆ ಮಾಡಿದ್ದಾರೆ. ಅದರಲ್ಲಿ ಹೆಚ್ಚುತ್ತಿರುವ ಉತ್ಪಾದನಾ ವೆಚ್ಚವು ಪ್ರಮುಖವಾಗಿದೆ. ನಂತರ ಸಮ ಪ್ರಮಾಣದಲ್ಲಿ ಸ್ಥಿರ ಬಂಡವಾಳ ವೆಚ್ಚಗಳ ಭಾರ ಮತ್ತು ಸಾಲ ಮರುಪಾವತಿಯ ಒತ್ತಡಗಳು ಕಾರಣವಾಗಿದೆ, ಇನ್ನುಳಿದ ನಾಲ್ಕು ಕಾರಣಗಳನ್ನು ಪ್ರತಿಸ್ಪಂದಿಗಳು ನೀಡಲಾರದ್ದನ್ನು ಗಮನಿಸಿದರೆ, ಅವರು ಮಾರಾಟದ ವೆಚ್ಚವನ್ನು ನಿರ್ವಹಿಸುವಲ್ಲಿ, ಸಾಲಗಾರರಿಂದ ಸಮಯಾನುಸಾರ ವಸೂಲಿಯಾಗಿಸುವಲ್ಲಿ, ಮಿತವಾದ ಮೇಲುಸ್ತುವಾರಿ ವೆಚ್ಚ ಮತ್ತು ಬಂಡವಾಳದ ದಕ್ಷ ರೀತಿಯ ಬಳಕೆಗಳಲ್ಲಿ ಯಶಸ್ವಿಯಾಗಿದ್ದಾರೆಂದು ಕಂಡು ಬರುತ್ತದೆ. (೬.೧೧ರ ಕೋಷ್ಠಕ)

೧೩. ಉದ್ಯಮ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರು ಮೇಲಿಂದ ಮೇಲೆ ಸಂಬಳವನ್ನು ಹೆಚ್ಚಿಸುವಂತೆ ಆಗ್ರಹಿಸುವದು ಮತ್ತು ಅವರ ಗೈರು ಹಾಜರಿ ಉಳಿಯುವುದು ಸಾಮಾನ್ಯ ಅಂಶವಾಗಿದೆ.

೧೪. ಅತೀ ಹೆಚ್ಚು (ಶೇ. ೪೧ರಷ್ಟು) ಪ್ರತಿಸ್ಪಂದಿಗಳು ತಮ್ಮ ಉತ್ಪನ್ನಗಳನ್ನು ಜಿಲ್ಲಾ ಮಟ್ಟಕ್ಕೆ ಸೀಮಿತಗೊಳಿಸಿದ್ದಾರೆ. ಶೇ. ೩೬ರಷ್ಟು ಪ್ರತಿಸ್ಪಂದಿಗಳು ಸ್ಥಳೀಯ ಮಾರುಕಟ್ಟೆಗೆ ಮಾತ್ರ ಸೀಮಿತಗೊಂಡಿದ್ದಾರೆ. ಆದರೆ ರಾಷ್ಟ್ರಮಟ್ಟದ ಮಾರಾಟವನ್ನು ಶೇ. ೧೩ರಷ್ಟು ಪ್ರತಿಸ್ಪಂದಿಗಳು ಹೊಂದಿದ್ದರೆ, ಶೇ. ೯ ರಷ್ಟು ಪ್ರತಿಸ್ಪಂದಿಗಳು

ರಾಜ್ಯ ಮಟ್ಟದವರೆಗೆ ವಿಸ್ತಾರ ಹೊಂದಿದ್ದಾರೆ. ವಿಶೇಷವೆಂದರೆ, ಶೇ. ೧ರಷ್ಟು ಪ್ರತಿಸ್ಪಂದಿಗಳು ಅಂತರಾಷ್ಟ್ರೀಯ ಮಾರುಕಟ್ಟೆ ಪ್ರವೇಶಿಸಿದ್ದು, ವಿದೇಶಿ ವಿನಿಮಯ ಗಳಿಸುವಲ್ಲಿ ಯಶಸ್ವಿಯಾಗಿದ್ದಾರೆ.

೧೫. ಜಿಲ್ಲೆಯ ಪ್ರತಿಸ್ಪಂದಿಗಳಲ್ಲಿ ಪ್ರಸಕ್ತ ಕೇವಲ ಶೇ. ೩ರಷ್ಟು ಮಾತ್ರ ಚಿಕ್ಕ ಘಟಕಗಳು ರಫ್ತು ವ್ಯವಹಾರ ಮಾಡಿದ್ದು ಕಂಡುಬರುತ್ತದೆ. ಗರಿಷ್ಠ ಸಂಖ್ಯೆಯ ಶೇ. ೯೭ರಷ್ಟು ಪ್ರತಿಸ್ಪಂದಿಗಳ ಸರಕುಗಳು ರಫ್ತಾಗುವುದಿಲ್ಲ. ಅವುಗಳೆಲ್ಲ ಆಂತರಿಕ ಮಾರುಕಟ್ಟೆಗೆ ಸೀಮಿತಗೊಂಡಿವೆ.

೧೬. ಉದ್ದಿಮೆದಾರರಾಗಿದ್ದಕ್ಕೆ ಗರಿಷ್ಠ ಅತೃಪ್ತಿಗೆ ತಮ್ಮ ಪ್ರಸಕ್ತ ಉದ್ದಿಮೆಯಲ್ಲಿ ಕಡಿಮೆ ಗಳಿಕೆಯು ಒಂದು ಪ್ರಮುಖ ಕಾರಣವಾಗಿದ್ದುದು ಕಂಡು ಬರುತ್ತದೆ. ಏಕೆಂದರೆ, ಪ್ರತಿಸ್ಪಂದಿಗಳಿಗೆ ಬೇರೆ ಉದ್ಯೋಗದಲ್ಲಿ ಹೆಚ್ಚಿನ ಗಳಿಕೆ ಇದೇ ಎಂಬ ಭಾವನೆ ಮೂಡಿದೆ. ಅದರ ನಂತರ ಅನಿಶ್ಚಿತತೆಯ ಹೆದರಿಕೆ ತೂಗುಕತ್ತಿಯಂತೆ ಸದಾಕಾಲ ಅಧೈರ್ಯಗೊಳಿಸುತ್ತದೆಯೆಂದು ಪ್ರತಿಸ್ಪಂದಿಗಳ ಅಭಿಪ್ರಾಯ. ಯಾವಾಗಲೂ ಬದಲಾಗುತ್ತಿರುವ ರಾಜಕೀಯ ಮತ್ತು ಆರ್ಥಿಕ ಸ್ಥಿತಿಗಳು ಒಂದೊಂದು ತರಹದ ಸಮಸ್ಯೆಗಳನ್ನು ತಂದೊಡ್ಡುವುದು ಪ್ರತಿಸ್ಪಂದಿಗಳಲ್ಲಿ ಅತೃಪ್ತಿ ಹುಟ್ಟಿಸಿದೆ. ಇದರಿಂದ ಒತ್ತಡ ರಹಿತ ಜೀವನ ಸಾಧ್ಯವಾಗುತ್ತಿಲ್ಲವೆಂದು ಅವರ ಅಭಿಪ್ರಾಯ. ಅದರಂತೆಯೇ ಪ್ರತಿಸ್ಪಂದಿಗಳಿಗೆ ಕಷ್ಟದಾಯಕ ಕಾನೂನು ಕಟ್ಟಳೆಗಳು ಅತೃಪ್ತಿಯನ್ನು ತಂದಿವೆ. ಉದ್ದಿಮೆಯಲ್ಲಿ ನಿರಂತರವಾಗಿ ಮೂಲ ಸೌಕರ್ಯಗಳು ಲಭ್ಯವಿದ್ದರೆ ನಿಶ್ಚಿಂತೆಯಿಂದ ಚಟುವಟಿಕೆಗಳು ನಿರಾಯಾಸವಾಗಿ ನಡೆಯುತ್ತವೆ. ಇವುಗಳ ಲಭ್ಯತೆ ಅಥವಾ ವ್ಯವಸ್ಥಿತ ಪೂರೈಕೆ ಇರದಿದ್ದರೆ ತೊಂದರೆಗಳು ಉದ್ಭವಿಸುತ್ತವೆ. ಇದು ಸಹಿತ ಪ್ರತಿಸ್ಪಂದಿಗಳಿಗೆ ಅತೃಪ್ತಿ ತಂದಿದ್ದು ಕಂಡುಬರುತ್ತದೆ.

ಸಲಹೆಗಳು :

೧. ಜಿಲ್ಲೆಯಲ್ಲಿ ಕೃಷಿ ಆಧಾರಿತ ಕೈಗಾರಿಕೆಗಳ ಸಂಖ್ಯೆ ಇನ್ನಷ್ಟು ಹೆಚ್ಚಾಗಬೇಕು. ಅದಕ್ಕೆ ಸರ್ಕಾರ ಹೆಚ್ಚಿನ ಗಮನಹರಿಸಬೇಕು. ಕೇವಲ ಸಕ್ಕರೆ ಕಾರ್ಖಾನೆಗಳ ಸಂಖ್ಯೆ ಹೆಚ್ಚಿದೆ. ೨೦೧೧ರ ಅಂತ್ಯದವರೆಗೆ ಜಿಲ್ಲೆಯಲ್ಲಿ ೨೨ ಸಕ್ಕರೆ ಕಾರ್ಖಾನೆಗಳು ಕಾರ್ಯನಿರ್ವಹಿಸುತ್ತಿವೆ ಮತ್ತು ೫ ಸಕ್ಕರೆ ಕಾರ್ಖಾನೆಗಳು ಕಾರ್ಯಾರಂಭ ಮಾಡುವ ಹಂತದಲ್ಲಿವೆ. ಆದರೆ ಎಣ್ಣೆಕಾಳು, ಹತ್ತಿ, ದ್ರಾಕ್ಷಿ, ಗೋವಿನಜೋಳ, ಹೈನುಗಾರಿಕೆ ಮೊದಲಾದ ಕೃಷಿ ಆಧಾರಿತ ಕೈಗಾರಿಕೆಗಳ ಸಂಖ್ಯೆ ಅಷ್ಟಕ್ಕಷ್ಟೆ. ಅವು ಜಿಲ್ಲೆಯಾದ್ಯಂತ ಸ್ಥಾಪನೆಗೊಳಬೇಕು.

೨. ಬೆಳಗಾವಿ ಜಿಲ್ಲೆಗೆ ಸೂಕ್ತವಾದ ಕೈಗಾರಿಕಾ ಯೋಜನೆ ರೂಪಿಸುವ ಅಗತ್ಯವಿದೆ. ಏಕೆಂದರೆ ಜಿಲ್ಲೆಯಾದ್ಯಂತ ಕೈಗಾರಿಕೆಗಳ ಬೆಳವಣಿಗೆ ಅಸಮಾನವಾಗಿದೆ. ಅಲ್ಲದೆ ತಾಲೂಕುವಾರು ಅವುಗಳ ಬೆಳವಣಿಗೆಯಲ್ಲಿ ಅಗಾಧವಾದ ಅಸಮಾನತೆ ಇದೆ. ಇಂತಹ ಯೋಜನೆ ರೂಪಿಸುವಾಗ ಎಲ್ಲ ತಾಲೂಕುಗಳ ಕ್ಷೇತ್ರ ಹಾಗೂ

ಸಂಪನ್ಮೂಲಗಳ ವಿವರಗಳನ್ನು ಪರಿಗಣಿಸಬೇಕು. ಕೆಲವು ಕೈಗಾರಿಕೆಗಳು ಅತಿಯಾಗಿ ಒಂದೇ ಸ್ಥಳದಲ್ಲಿ ಕೇಂದ್ರೀಕರಣಗೊಂಡಿವೆ. ಇದರಿಂದ ಮೂಲಸೌಕರ್ಯಗಳಲ್ಲಿ ಕೊರತೆ ಉಂಟಾಗುತ್ತದೆ. ಕಾರಣ ಸೂಕ್ತವಾದ ಕೈಗಾರಿಕಾ ವಿಸ್ತರಣೆಯ ಮೂಲಕ ಜಿಲ್ಲೆಯ ಎಲ್ಲ ತಾಲೂಕುಗಳು ಬೆಳೆಯುವಂತಿರಬೇಕು.

೩. ಸಣ್ಣ ಕೈಗಾರಿಕೆಗಳು ಪ್ರಗತಿಯನ್ನು ಸಾಧಿಸಿವೆ. ಆದರೆ ಅವುಗಳ ಗತಿ ಮತ್ತು ಗಾತ್ರದ ಲೆಕ್ಕದಲ್ಲಿ ಬೆಳವಣಿಗೆಯನ್ನು ಸಾಧಿಸಿಲ್ಲ. ಅದಕ್ಕೆ ಉದ್ಯಮಶೀಲತೆಯ ತರಬೇತಿಯ ಕೊರತೆ ಎದ್ದು ಕಾಣುತ್ತದೆ. ಅದಕ್ಕಾಗಿ ಸರ್ಕಾರವು ಜಿಲ್ಲಾ ಕೈಗಾರಿಕಾ ಕೇಂದ್ರದ ಮೂಲಕ ಸೂಕ್ತ ತರಬೇತಿ ಮತ್ತು ಮೂಲ ಸೌಕರ್ಯಗಳನ್ನು ಒದಗಿಸುವ ಅವಶ್ಯಕತೆ ಇದೆ. ಜಿಲ್ಲೆಯ ಹತ್ತು ತಾಲೂಕುಗಳಲ್ಲಿ ಸಮೀಕ್ಷೆ ಕೈಗೊಂಡು ಉದ್ಯಮಶೀಲರನ್ನು ಗುರುತಿಸುವ ಮತ್ತು ತರಬೇತಿ ನೀಡುವ ಕಾರ್ಯಗಳನ್ನು ಕೈಗೊಳ್ಳಬೇಕು.

೪. ಸಿದ್ಧ ಉಡುಪುಗಳ ಉದ್ದಿಮೆಗೆ ಪ್ರೋತ್ಸಾಹ ನೀಡುವುದು. ಇಲ್ಲಿನ ಉದ್ಯಮಶೀಲರಿಗೆ ಸಿದ್ಧ ಉಡುಪುಗಳನ್ನು ಉತ್ಪಾದಿಸಿ ಸ್ಪರ್ಧಾತ್ಮಕ ಬೆಲೆಗೆ ಮಾರಲು ಮಾರುಕಟ್ಟೆಯನ್ನು ಶೋಧಿಸುವುದರ ಬಗ್ಗೆ ಸಮರ್ಪಕ ತರಬೇತಿ ಮತ್ತು ವಿದೇಶಿ ರಫ್ತನ್ನು ಪ್ರೋತ್ಸಾಹಿಸುವ ಅವಶ್ಯಕತೆ ಇದೆ.

೫. ರಸಾಯನಿಕ ಉತ್ಪನ್ನಗಳು, ಇಂಜಿನೀಯರಿಂಗ್ ಉದ್ಯಮಗಳನ್ನು ಬೆಳೆಸುವ ಅಗತ್ಯವಿದೆ. ಬಟ್ಟೆ ತಯಾರಿಕಾ ಘಟಕಗಳಿಗೆ ಉತ್ತೇಜನ ದೊರೆಯುತ್ತದೆ ಮತ್ತು ಇಂಜಿನಿಯರಿಂಗ್ ಉದ್ಯಮದಿಂದ ರಫ್ತು ಪ್ರಮಾಣ ಹೆಚ್ಚಳವಾಗುತ್ತದೆ.

೬. ಸರ್ಕಾರವು ಉದ್ದಿಮೆ ಘಟಕಗಳಿಗೆ ನಿರಂತರ ವಿದ್ಯುತ್ ಪೂರೈಸುವ ಸೂಕ್ತ ವ್ಯವಸ್ಥೆಯನ್ನು ಮಾಡಬೇಕು. ಕೈಗಾರಿಕೆಗಳಿಗೆ ವಿದ್ಯುತ್‌ಶಕ್ತಿಯೇ ಮೂಲ ಇಂಧನ. ಅದು ಇಲ್ಲದೆ ಹೋದಲ್ಲಿ ಉತ್ಪಾದನೆ ಸಾಧ್ಯವಿಲ್ಲ.

ದೊಡ್ಡ ಕೈಗಾರಿಕೆಗಳು ತಮ್ಮ ಕೋ-ಜನರೇಶನ್ ಮೂಲಕ ತಮಗೆ ಬೇಕಾದ ವಿದ್ಯುತ್‌ಶಕ್ತಿಯನ್ನು ತಾವೇ ಉತ್ಪಾದಿಸಿ ಬಳಸಿಕೊಳ್ಳುತ್ತವೆ. ಹೆಚ್ಚಿನದನ್ನು ಸರ್ಕಾರಕ್ಕೆ ಮಾರಾಟ ಮಾಡುತ್ತವೆ. ಆದರೆ ಸಣ್ಣ ಕೈಗಾರಿಕೆಗಳಿಗೆ ಆರ್ಥಿಕ ಸಾಮರ್ಥ್ಯದ ಕೊರತೆಯಿಂದಾಗಿ ಅದು ಸಾಧ್ಯವಾಗುವುದಿಲ್ಲ. ಅದಕ್ಕೆ ಸರ್ಕಾರವೇ ಸೂಕ್ತ ವ್ಯವಸ್ಥೆ ಕಲ್ಪಿಸಬೇಕು.

೭. ಸರ್ಕಾರವು ಜಿಲ್ಲೆಯ ಮಾನವ ಸಂಪನ್ಮೂಲವನ್ನು ಗರಿಷ್ಠ ಪ್ರಮಾಣದಲ್ಲಿ ಜಿಲ್ಲೆಯಲ್ಲಿಯೇ ಉಪಯೋಗಿಸುವಂಥ ಕ್ರಮಗಳನ್ನು ಕೈಗೊಳ್ಳಬೇಕು. ಏಕೆಂದರೆ ಮಹಾರಾಷ್ಟ್ರ ರಾಜ್ಯದ ಗಡಿಗೆ ಹೊಂದಿಕೊಂಡ ಪ್ರದೇಶಗಳ ಜನರು ಮಹಾರಾಷ್ಟ್ರದ ಕೈಗಾರಿಕೆಗಳಲ್ಲಿ ದುಡಿಯಲು ವಲಸೆ ಹೋಗುತ್ತಿದ್ದಾರೆ. ಅದನ್ನು ತಪ್ಪಿಸಲು ಮಹಾರಾಷ್ಟ್ರ ರಾಜ್ಯವು ಗಡಿಪ್ರದೇಶಗಳಲ್ಲಿ ಕೈಗಾರಿಕಾ ವಸಾಹತುಗಳನ್ನು ಸ್ಥಾಪಿಸಿರುವ ಹಾಗೆ ಜಿಲ್ಲೆಯ ಗಡಿಪ್ರದೇಶಗಳಲ್ಲಿ ಕೈಗಾರಿಕಾ ವಸಾಹತುಗಳನ್ನು ಸ್ಥಾಪಿಸಲು ಸರ್ಕಾರವು ಸಕಲ ರೀತಿಯ ಏರ್ಪಾಟುಗಳನ್ನು ಮಾಡಬೇಕು. ಅದರಿಂದ ಜನರ ವಲಸೆ ತಪ್ಪಿ ಮಾನವ ಸಂಪನ್ಮೂಲದ ಸದ್ವಿನಿಯೋಗವಾಗುತ್ತದೆ.

೮. ಉದ್ಯಮಗಳ ಸ್ಥಾಪನೆಯಲ್ಲಿ ಮತ್ತು ಕಾರ್ಯನಿರ್ವಹಣೆಯಲ್ಲಿ ವರ್ತಕ ಬ್ಯಾಂಕುಗಳ ಪಾತ್ರ ಪ್ರಮುಖವಾಗಿದೆ. ೧೯೯೧ರಲ್ಲಿ ಜಾರಿಯಾದ ದೇಶದ ಹೊಸ ಆರ್ಥಿಕ ನೀತಿಯ ಪರಿಣಾಮದಿಂದಾಗಿ

ದೇಶಿಯ ಮತ್ತು ವಿದೇಶಿ ಹಾಗೂ ಖಾಸಗಿ ರಂಗದ ವರ್ತಕ ಬ್ಯಾಂಕುಗಳು ಅಸ್ತಿತ್ವದಲ್ಲಿ ಬಂದಿವೆ. ಜಿಲ್ಲೆಯಲ್ಲಿ ಅವುಗಳ ಸೇವೆಯು ಯುವ ಪ್ರವರ್ತಕರಿಗೆ ಲಭ್ಯಗೊಳಿಸುವುದರ ಮೂಲಕ ಕೈಗಾರಿಕೆಗಳ ಸ್ಥಾಪನೆಗೆ ಪೂರಕ ವಾತಾವರಣವನ್ನು ನಿರ್ಮಿಸಬೇಕು.

೯. ಫ್ಯಾಕ್ಟರಿಂಗ್ ಮತ್ತು ಫಾರಪೇಟಿಂಗ್ ಇವು ಹಣಕಾಸು ವ್ಯವಹಾರದ ಹೊಸ ಆಯಾಮಗಳಾಗಿವೆ. ಕೈಗಾರಿಕೆಗಳ ಸಧೃಡತೆಗೆ ಇವುಗಳ ಬಳಕೆ ಅತ್ಯವಶ್ಯ. ಅದಕ್ಕಾಗಿ ಜಿಲ್ಲೆಯಲ್ಲಿನ ಕೈಗಾರಿಕೆಗಳ ಆಧುನಿಕ ಹಣಕಾಸಿನ ಸೇವೆಗಳು ಲಭ್ಯವಾಗಿ ಕೈಗಾರಿಕೆಗಳ ಸಧೃಡತೆಗೆ ಸಹಾಯಕವಾಗಬೇಕು.

೧೦. ಜಿಲ್ಲಾ ಕೈಗಾರಿಕಾ ಕೇಂದ್ರದ ಪರಿಣಿತರ ಮತ್ತು ಮಾರ್ಗದರ್ಶಕರ ಸೇವೆ ಎಲ್ಲ ತಾಲೂಕುಗಳಲ್ಲಿ ಲಭ್ಯವಾಗಬೇಕು. ಅವರು ತಳಮಟ್ಟದ ಉದ್ಯಮಶೀಲರನ್ನು ಗುರುತಿಸಿ, ಮಾರ್ಗದರ್ಶನ ನೀಡಿ, ಯಶಸ್ವಿ ಉದ್ದಿಮೆದಾರರನ್ನು ರೂಪಿಸುವಲ್ಲಿ ನೆರವಾಗಬೇಕು.

೧೧. ತಾಲ್ಲೂಕು ಮಟ್ಟದಲ್ಲಿ ಕಚ್ಚಾಸಾಮಗ್ರಿಗಳ ಬೆಲೆ ಏಕರೂಪವಾಗಿಲ್ಲ. ಅದಕ್ಕಾಗಿ ಸರಕಾರವು ತಾಲೂಕು ಮಟ್ಟದಲ್ಲಿ ದಾಸ್ತಾನು ಮಳಿಗೆಗಳನ್ನು ಸ್ಥಾಪಿಸಿ, ಉದ್ದಿಮೆದಾರರಿಗೆ ಸ್ಪರ್ಧಾತ್ಮಕ ಬೆಲೆಗೆ ಕಚ್ಚಾ ಸಾಮಗ್ರಿಗಳು ದೊರೆಯುವ ವ್ಯವಸ್ಥೆ ಮಾಡಬೇಕು.

೧೨. ಮಾರುಕಟ್ಟೆಯಲ್ಲಿ ಕಳಪೆ ಗುಣಮಟ್ಟದ ವಸ್ತುಗಳು ಲಭ್ಯವಾಗುತ್ತಿರುವುದು ವಿಷಾದನೀಯ. ಉದ್ದಿಮೆದಾರರು ಉತ್ಪಾದಿಸುವ ಉತ್ಪನ್ನಗಳ ಗುಣಮಟ್ಟವನ್ನು ಪರೀಕ್ಷಿಸಲು ಸರ್ಕಾರವು ತಜ್ಞರಿಂದ ಗುಣಮಟ್ಟ ನಿರ್ಧಾರದ ಸಮಿತಿಗಳನ್ನು ರಚಿಸಿ ಮಾದರಿಗಳನ್ನು ಲಭ್ಯಗೊಳಿಸಬೇಕು.

೧೩. ಚಿಕ್ಕ ಉದ್ದಿಮೆದಾರರ ಹೂಡಿಕೆಯ ಮೇಲಿನ ಗಳಿಕೆ ತೃಪ್ತಿಕರವಾಗಿಲ್ಲ. ಅದಕ್ಕೆ ಪ್ರಮುಖ ಕಾರಣ ಉತ್ಪಾದಿಸಿ ಮಾರಾಟ ಮಾಡಿದ ಕಚ್ಚಾ ಸರಕುಗಳ ಖರೀದಿ ಬೆಲೆಯನ್ನು ನೀಡುವಲ್ಲಿ ಖರೀದಿದಾರರ ವಿಳಂಬ ನೀತಿ. ಅದಕ್ಕಾಗಿ ಸರ್ಕಾರವು ಅಂತಹ ಖರೀದಿದಾರರ ವಿರುದ್ಧ ಕಠಿಣಕ್ರಮ ಜರುಗಿಸುವ ಕಟ್ಟು ನಿಟ್ಟಿನ ಕಾನೂನು ಜಾರಿಗೊಳಿಸಬೇಕು.

೧೪. ಪ್ರತಿಶತ ೧೩ರಷ್ಟು ಉದ್ದಿಮೆದಾರರು ನಿಪುಣರಲ್ಲದ ಸಿಬ್ಬಂದಿಯನ್ನು ಬಳಸಿಕೊಂಡು ತಮ್ಮ ಉತ್ಪಾದನೆಯನ್ನು ಸ್ಥಳೀಯ ಮಾರುಕಟ್ಟೆಗೆ ಸೀಮಿತಗೊಳಿಸಿದ್ದಾರೆ. ಅವರು ತಜ್ಞ ಸಿಬ್ಬಂದಿಯನ್ನು ನೇಮಿಸಿ ಹೆಚ್ಚಿನ ಉತ್ಪಾದನೆಯಲ್ಲಿ ತೊಡಗಿ ಜಾಗತೀಕರಣದ ಮುಖ್ಯವಾಹಿನಿಯಲ್ಲಿ ಬರಬೇಕು. (ಕೋಷ್ಠಕ ೬.೧೬)

